ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

ಸದಾಶಿವ.ಎಸ್.ಶೆಟ್ಟರ್

ನಾರಾಯಣ ಫಾಳಗಿ

ಪ್ರಕಟಣೆ
ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ
ವಿಧಾನಸೌಧ, ಬೆಂಗಳೂರು

SADASHIVA.S.SHETTAR

Eminent Parlimentarian Series

Written by **NARAYANA GHALAGI,**

Senior Joura1ist. Plot 3, Sreekrupa,

Journalist Colony. Nrupatunga Betta West,

Hubli - 580 032

Published by

Karnataka Legislature Library Committee

Vidhana Soudha, Bangalore-560001.

Page: 197 + x Price: 20-00 Rs.

First Edition: 2008 Copies: 2000

Printed & Designed by

Government Press, Bangalore.

ಸದಾಶಿವ.ಎಸ್.ಶೆಟ್ಟರ್

ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

ಲೇಖಕರು: ನಾರಾಯಣ ಘಳಗಿ

ಹಿರಿಯ ಪತ್ರಕರ್ತ. ನಂ.3 ಶ್ರೀಕೃಷ್ಣಾ ಪತ್ರಕರ್ತ ನಗರ,

ನೃಪತುಂಗ ಬೆಟ್ಟ, ಪಶ್ಚಿಮ. ಹುಬ್ಬಳ್ಳಿ-580 032

ಪ್ರಕಾಶನ

ಗ್ರಂಥಾಲಯ ಸಮಿತಿ

ಕರ್ನಾಟಕ ವಿಧಾನ ಮಂಡಲ

ವಿಧಾನಸೌಧ, ಬೆಂಗಳೂರು-560 001.

ಪುಟ: 197 + x ಬೆಲೆ: 20/- ರೂ.

ಮೊದಲ ಮುದ್ರಣ: 2008 ಪ್ರತಿಗಳು: 2,000

ಮುದ್ರಣ ಮತ್ತು ವಿನ್ಯಾಸ

ಸರ್ಕಾರಿ ಮುದ್ರಣಾಲಯ, ಬೆಂಗಳೂರು.

ವಿಧಾನ ಮಂಡಲ ಗ್ರಂಥಾಲಯ ಸಮಿತಿ
2008–2009

ಅಧ್ಯಕ್ಷರು

ಶ್ರೀ ವೀರಣ್ಣ ಮತ್ತಿಕಟ್ಟಿ

ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರು

ಶ್ರೀ ಜಗದೀಶ ಶೆಟ್ಟರ್

ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ

ಶ್ರೀ ಎಂ. ನಾರಾಯಣಸ್ವಾಮಿ

ವಿಧಾನಸಭಾ ಸದಸ್ಯರು ಹಾಗೂ ಉಪ ಸಮಿತಿಯ ಅಧ್ಯಕ್ಷರು

ಶ್ರೀ ಕೆ. ಲಕ್ಷ್ಮೀನಾರಾಯಣ

ವಿಧಾನಸಭಾ ಸದಸ್ಯರು

ಶ್ರೀ ಎಸ್.ವಿ. ರಾಮಚಂದ್ರ

ವಿಧಾನಸಭಾ ಸದಸ್ಯರು

ಶ್ರೀ ಎನ್.ಎ. ಹ್ಯಾರೀಸ್

ವಿಧಾನಸಭಾ ಸದಸ್ಯರು

ಶ್ರೀ ಹೆಚ್.ಎಸ್. ಪ್ರಕಾಶ್

ವಿಧಾನಸಭಾ ಸದಸ್ಯರು

ಡಾ|| ಚಂದ್ರಶೇಖರ ಬಿ.ಕಂಬಾರ

ವಿಧಾನ ಪರಿಷತ್ ಸದಸ್ಯರು

ಶ್ರೀ ಮುಖ್ಯಮಂತ್ರಿ ಚಂದ್ರು

ವಿಧಾನ ಪರಿಷತ್ ಸದಸ್ಯರು

ಡಾ|| ಶ್ರೀನಾಥ್

ವಿಧಾನ ಪರಿಷತ್ ಸದಸ್ಯರು

ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

ಅಧಿಕಾರಿ – ಸಂಪಾದಕ ವರ್ಗ

ಕರ್ನಾಟಕ ವಿಧಾನ ಮಂಡಲ

ಡಿ'ಸೋಜ ರಾಬಿನ್‌ಸನ್	ಪ್ರಧಾನ ಕಾರ್ಯದರ್ಶಿ

ಕರ್ನಾಟಕ ವಿಧಾನಸಭೆ ಸಚಿವಾಲಯ

ಎಸ್.ಬಿ. ಪಾಟೀಲ್	ಕಾರ್ಯದರ್ಶಿ
ಟಿ.ಎನ್. ಧ್ರುವಕುಮಾರ್	ಅಪರ ಕಾರ್ಯದರ್ಶಿ (ಪ್ರ)
ಎಂ. ಗುರುರಾಜ	ಉಪ ಕಾರ್ಯದರ್ಶಿ
ಮುನೀರುನ್ನಿಸಾ	ಅಧೀನ ಕಾರ್ಯದರ್ಶಿ (ಪ್ರ)
ಅನಸೂಯ ಎನ್.ದೇವಗಿರಿ	ಸಹಾಯಕ ಗ್ರಂಥಪಾಲಕಿ

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

ವಿ. ಶ್ರೀಶ್	ಕಾರ್ಯದರ್ಶಿ
ಟಿ. ಕೃಷ್ಣೆಗೌಡ	ಅಪರ ಕಾರ್ಯದರ್ಶಿ

ಮುನ್ನುಡಿ

31 ಡಿಸೆಂಬರ್ 2008

ಸುವರ್ಣ ಮಹೋತ್ಸವದ ಆಚರಣೆಯ ಅಂಗವಾಗಿ ಈ ದೇಶಕ್ಕಾಗಿ ದುಡಿದ, ಅಗ್ರಮಾನ್ಯ ಸಂಸದೀಯ ಪಟುಗಳಾಗಿ ಕೊಡುಗೆಯನ್ನು ನೀಡಿದ ಮಹನೀಯರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈಗಾಗಲೇ ಲೋಕಸಭಾ ಕಾರ್ಯಾಲಯದವರು ಇಂತಹ ಪ್ರತಿಭಾವಂತ ಸಂಸದೀಯ ಪಟುಗಳ ಬಗ್ಗೆ ಅನೇಕ ಹೊತ್ತಿಗೆಗಳನ್ನು ಹಿಂದಿ ಹಾಗೂ ಆಂಗ್ಲ ಭಾಷೆಯಲ್ಲಿ ಹೊರತಂದಿರುತ್ತಾರೆ. ಅವುಗಳಲ್ಲಿ ಡಾ॥ ರಾಮಮನೋಹರ ಲೋಹಿಯಾ, ಡಾ॥ ಬಿ.ಆರ್. ಅಂಬೇಡ್ಕರ್, ಡಾ॥ ಶಾಂಪ್ರಸಾದ್ ಮುಖರ್ಜಿ, ಡಾ॥ ರಾಜೇಂದ್ರ ಪ್ರಸಾದ್ ಮೊದಲಾದ ಗಣ್ಯರ ಪುಸ್ತಕಗಳನ್ನು ನಾವು ಕನ್ನಡದಲ್ಲಿ ಭಾಷಾಂತರಿಸಿ ಹೊರತಂದಿರುವ ಸಂತೋಷಕರ ವಿಷಯವನ್ನು ಉಲ್ಲೇಖಿಸಬಯಸುತ್ತೇವೆ.

ರಾಜ್ಯದ ಸಂಸದೀಯ ಪಟುಗಳಾದ ಅನೇಕ ಮಹನೀಯರನ್ನು ಕುರಿತು ಹೊತ್ತಿಗೆಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಯೋಜನೆಯನ್ನು ಕರ್ನಾಟಕ ವಿಧಾನ ಮಂಡಲವು ಹಮ್ಮಿಕೊಂಡಿದ್ದು, ವಿಧಾನ ಮಂಡಲದ ಗ್ರಂಥಾಲಯ ಸಮಿತಿಯು ಈಗಾಗಲೇ ಪ್ರಕಟಿಸುತ್ತಿದೆ. ಈ ಉಪ ಸಮಿತಿಯು ಕಾರ್ಯಪ್ರವೃತ್ತವಾಗಿ ರಾಜ್ಯದ ಲೇಖಕರ, ವಿದ್ವಾಂಸರ ಸಹಕಾರದಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ. ನಮ್ಮ ನಾಡಿನ ಪ್ರಗತಿಪರ ಚಿಂತಕರು, ರಾಜಕೀಯ ಮುತ್ಸದ್ದಿಗಳ ಆಶಯಗಳನ್ನು ದಾಖಲಿಸಿ ಈ ಮೂಲಕ ಅವರ ಜೀವನ ಚಿತ್ರಣವನ್ನು ಪುಸ್ತಕ ರೂಪದಲ್ಲಿ ತರುತ್ತಿದೆ.

ಪ್ರತಿಭಾವಂತ ಸಂಸದೀಯ ಪಟುಗಳ ಮಾಲಿಕೆಯಲ್ಲಿ ಈಗಾಗಲೇ ಶ್ರೀ ಕೆಂಗಲ್ ಹನುಮಂತಯ್ಯ, ಶ್ರೀ ಶಾಂತವೇರಿ ಗೋಪಾಲಗೌಡ, ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ಕೆ.ಸಿ. ರೆಡ್ಡಿ, ಶ್ರೀ ಡಿ. ದೇವರಾಜ ಅರಸು, ಶ್ರೀ ಜೆ.ಹೆಚ್. ಪಟೇಲ್, ಶ್ರೀ ಟಿ.ಆರ್. ಶಾಮಣ್ಣ, ಶ್ರೀ ಎಸ್.ಡಿ. ಗಾಂವಕರ್, ಶ್ರೀಮತಿ ಬಿ.ಎಲ್. ಸುಬ್ಬಮ್ಮ, ಡಾ॥ ಲಂಕಾ ಸುಂದರಂ, ಸರದಾರ ಶರಣಗೌಡ ಇನಾಂದಾರ್, ಕೆ.ಹೆಚ್. ರಂಗನಾಥ್ ಮತ್ತಿತರ ಹಲವು ಗಣ್ಯರ ಬಗೆಗಿನ ಪುಸ್ತಕಗಳನ್ನು ಹೊರತರಲಾಗಿದೆ.

ನಾರಾಯಣ ಘಳಗಿ ಅವರು ರಚಿಸಿರುವ ರಾಜ್ಯದ ಹಿರಿಯ ಸಂಸದೀಯ ಪಟುವಾಗಿದ್ದ ಶ್ರೀ **ಸದಾಶಿವ.ಎಸ್.ಶೆಟ್ಟರ್** ಅವರ ಬಗೆಗಿನ ಈ ಪುಸ್ತಕವನ್ನು ತಮ್ಮ ಮುಂದಿಡಲು ಹೆಮ್ಮೆಯೆನಿಸುತ್ತದೆ. ಇವರ ಸದನದ ಭಾಷಣಗಳು ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಈ ನಾಡಿನ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಶಯಗಳನ್ನು ಬಿಂಬಿಸುತ್ತವೆ.

ಈ ಪುಸ್ತಕವನ್ನು ರಚಿಸಿದ ಲೇಖಕರಿಗೆ ಹಾಗೂ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಿಗೆ ಹಾಗೂ ಉಪ ಸಮಿತಿಯ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ರಾಜ್ಯದ ಪ್ರತಿಭಾವಂತ ಸಂಸದೀಯ ಪಟುಗಳ ಬಗೆಗಿನ ಈ ಪುಸ್ತಕವು ಮಾನ್ಯ ಸದಸ್ಯರುಗಳಿಗೆ, ಸಂಶೋಧಕರಿಗೆ ಹಾಗೂ ಸಾಮಾನ್ಯ ಓದುಗರಿಗೆ ಸಂಸದೀಯ ವಿಷಯಗಳಲ್ಲಿ ಹೆಚ್ಚಿನ ಅನುಭವ ನೀಡುತ್ತದೆ ಮತ್ತು ಉಪಯುಕ್ತವಾಗುತ್ತದೆಂದು ಭಾವಿಸುತ್ತೇವೆ.

ವೀರಣ್ಣ ಮತ್ತಿಕಟ್ಟಿ
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು

ಜಗದೀಶ್ ಶೆಟ್ಟರ್
ಸಭಾಧ್ಯಕ್ಷರು
ಕರ್ನಾಟಕ ವಿಧಾನ ಸಭೆ

ಮನದಾಳದ ಮಾತು

ದಿವಂಗತ ಸದಾಶಿವ ಶಂಕರಪ್ಪ ಶೆಟ್ಟರ ಅವರು ನನ್ನ ಚಿಕ್ಕಪ್ಪನಾಗಿ ಕೌಟಂಬಿಕವಾಗಿ ನಾನು ಅವರಿಗೆ ತೀರಾ ಹತ್ತಿರದವನಾದುದು ನನ್ನ ಭಾಗ್ಯ ವಿಶೇಷವೆಂದೇ ನನಗನಿಸುತ್ತದೆ. ಬಾಲ್ಯದಿಂದಲೇ ಅವರನ್ನು ನನ್ನ ರೋಲ್ ಮಾಡೆಲ್ ಎಂದು ಸ್ವೀಕರಿಸಿ ಅವರ ನಿತ್ಯ ಮಾರ್ಗದರ್ಶನ ಪಡೆಯುತ್ತಾ ಜೀವನ ರೂಪಿಸಿಕೊಂಡ ನನಗೆ ಮುಕ್ತ ಮನಸ್ಸಿನ ಸಂಭಾಷಣ ಪ್ರಸಂಗಗಳಲ್ಲಿ ಸೈದ್ಧಾಂತಿಕವಾಗಿಯೂ ತಮ್ಮನ್ನು ಅನುಸರಿಸುವಂತೆ ಅವರು ಪ್ರಭಾವ ಬೀರಿದರು. ಸಾಮಾಜಿಕವಾಗಿ, ರಾಜಕೀಯವಾಗಿ ನಾನು ಬೆಳೆಯುದಕ್ಕೆ ಧುರೀಣತ್ವ ರೂಪಿಸಿಕೊಳ್ಳಲು ಅವರು ತಮ್ಮ ಜೀವಿತಾವಧಿಯಲ್ಲಿ ನನಗೆ ಕೈಹಿಡಿದು ಹೇಗೆ ನಡೆಸಿದರೋ ಹಾಗೆಯೇ ಈಗಲೂ ಸ್ಮರಣೀಯ ದೀವಿಗೆಯ ಬೆಳಕಿನಲ್ಲಿ ನನ್ನನ್ನು ಮುನ್ನಡೆಸುವವರಾಗಿದ್ದಾರೆಂದು ಪ್ರಾಂಜಲವಾಗಿ ಹೇಳಬಯಸುತ್ತೇನೆ.

ಸದಾಶಿವ ಶೆಟ್ಟರ ಅವರದು ಸತತ ಹೋರಾಟದ ಬದುಕು. ಜನಸಾಮಾನ್ಯರ, ಬಡವರ ಕಷ್ಟಕಾರ್ಪಣ್ಯಗಳಿಗೆ ತತ್‌ಕ್ಷಣ ಸ್ಪಂದಿಸುವ ಗುಣ ಅವರದು. ಪ್ರಪ್ರಥಮವಾಗಿ ಶಾಸಕರಾಗಿ ಆಯ್ಕೆಯಾದ ದಿನದಿಂದ ಕೆಲವೇ ಕೆಲವು ತಿಂಗಳುಗಳಲ್ಲಿಯೇ ಬಡವರ ಕಷ್ಟಕಾರ್ಣ್ಯಗಳಿಗಾಗಿ ಹೋರಾಟ ಮಾಡಿದ್ದರಿಂದಲೇ ಅಲ್ಪ ಸಮಯದಲ್ಲಿಯೇ ಅತ್ಯಂತ ಜನಾನುರಾಗಿ ನಾಯಕರಾಗಿ ಬೆಳೆದವರು. ಒಬ್ಬ ಒಳ್ಳೆಯ ಸಂಸದೀಯ ಪಟುವಾಗಿ ವಿಧಾನಸಭೆಯಲ್ಲಿ ಮಿಂಚಿದವರು. ಅವರು ಎಷ್ಟೊಂದು ಜನಪ್ರಿಯರಾಗಿದ್ದರೆಂದರೆ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ ಲಕ್ಷಾಂತರ ಜನರ ಜನಸಾಗರವೇ ಒಂದು ಸಾಕ್ಷಿ.

ಸಂಸದೀಯ ಪಟುಗಳ ಬರಹ ಮಾಲಿಕೆಯಲ್ಲಿಯ ಗ್ರಂಥದ ಲೇಖಕ ಶ್ರೀ ನಾರಾಯಣ ಘಳಗಿಯವರು ದಿ. ಸದಾಶಿವ ಶೆಟ್ಟರರ ಅತ್ಯಂತ ಆತ್ಮೀಯ ಒಡನಾಟ ಹೊಂದಿದ್ದ ಹಿರಿಯ ಪತ್ರಕರ್ತರು. ಅವರಿಂದ ಈ ಗ್ರಂಥ ರಚಿತವಾದುದು ವಿಶೇಷವೆನಿಸಿದೆ. ಗ್ರಂಥ ಭಾವಪೂರ್ಣವಾಗಿ, ವಸ್ತುನಿಷ್ಠವಾಗಿ ಮೂಡಿಬಂದಿದೆ. ಅದಕ್ಕಾಗಿ ಗ್ರಂಥಕರ್ತರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಿಗೆ ಹಾಗೂ ಉಪ ಸಮಿತಿಯ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಜಗದೀಶ್ ಶೆಟ್ಟರ್
ಸಭಾಧ್ಯಕ್ಷರು
ಕರ್ನಾಟಕ ವಿಧಾನ ಸಭೆ

ಲೇಖಕರ ಮಾತು

ದಿವಂಗತ ಸದಾಶಿವ ಶೆಟ್ಟರು ರಾಜಕೀಯ ರಂಗ ಪ್ರವೇಶಿಸಿದರು. ಹಾಗೂ ನಾನು ಕಾಲೇಜ್ ವಿದ್ಯಾರ್ಥಿಯಾಗಿದ್ದಾಗಲೇ ಪತ್ರಿಕೋದ್ಯಮ ಸೇರಿದುದು ಏಕಕಾಲಕ್ಕೆಯೇ ಆದುದರಿಂದ ಅವರೊಂದಿಗಿನ ನನ್ನ ಸಂಬಂಧ ಅತ್ಯಂತ ನಿಕಟವಿದ್ದುದರಿಂದ ನಾನು ಕರ್ನಾಟಕ ಸರ್ಕಾರದ ಕೋರಿಕೆಯಂತೆ ಸಂಸದೀಯ ಪಟುಗಳು ಈ ಮಾಲಿಕೆಯಲ್ಲಿ ಅವರ ಬಗ್ಗೆ ಪುಸ್ತಕ ಬರೆದುಕೊಡಲು ಸಂತಸದಿಂದಲೇ ಒಪ್ಪಿಕೊಂಡೆ.

ದಿವಂಗತ ಶೆಟ್ಟರ ಮಿತ್ರರಲ್ಲಿ ಮಾಜಿ ಸಚಿವ ದಿ. ಗೋಪಿನಾಥ ಸಾಂಡ್ರಾ ಮುಖ್ಯರು. ಅವರ ಅನೇಕ ಮಿತ್ರರು, ಸಹಪಾಠಿಗಳು ಸಹ ಈಗ ಇಲ್ಲ. ಅವರು ನೇತಾರರಾಗಿದ್ದ ಭಾರತೀಯ ಜನಸಂಘ ಸಹ ಈಗಿಲ್ಲ. ಹೊಸ ರೂಪು ತಳೆದಿದೆ. ಶ್ರೀ ಜಗನ್ನಾಥರಾವ್ ಜೋಶಿ ಶಾಸಕರಾಗಿದ್ದ ಭಾವುರಾವ್ ದೇಶಪಾಂಡೆ, ಮಹಾದೇವಸಾ ಜರತಾರಘರ ಹೀಗೆ ಅನೇಕ ಮಿತ್ರರು ಸ್ವರ್ಗಸ್ಥರಾದುದರಿಂದ ಶೆಟ್ಟರ್ ಬಗ್ಗೆ ವಿವರಗಳನ್ನು ಸಂಗ್ರಹಿಸಲು ತುಂಬಾ ಕಠಿಣವಾಯಿತು. ಆದರೂ ಅವರಣ್ಣ ಮಾಜಿ ಮೇಯರ್ ಶಿವಪ್ಪ ಶೆಟ್ಟರ್, ವಿಧಾನ ಪರಿಷತ್ ಸದಸ್ಯರಾಗಿದ್ದ ಡಾ. ವಾಯ್.ಎಸ್. ಪಾಟೀಲರು, ತರುಣ ವಕೀಲರಾಗಿ ಅವರಿಂದ ಪ್ರೋತ್ಸಾಹ ಪಡೆದ ಶ್ರೀ ಎಂ. ಎಂ. ಹೂಲಿ, ಶ್ರೀ ಟಿ.ಎ. ಚವ್ಹಾಣ, ವಕೀಲ ಶ್ರೀ ಎನ್.ವಿ. ಹಿರೇಮಠ, ಚಂದ್ರಹಾಸ ನಿರಂಜನ, ಹನುಮಂತಸಾ ಪೂಜಾರಿ, ಡಾ. ಈಶ್ವರ ಕರಾಳೆ, ಡಾ. ಕಲ್ಲಪ್ಪ ತಲವಾಯಿ ಮೊದಲಾದವರು ವಿಶೇಷವಾಗಿ ಗದುಗಿನ ಡಾ. ರಾಮಚಂದ್ರ ಜಾಲಿಹಾಳ ಇವರು ನನ್ನ ನೆರವಿಗೆ ಬಂದುದರಿಂದ ಬಹಳಷ್ಟು ಘಟನೆಗಳನ್ನು ನನ್ನ ನೆನಪುಗಳನ್ನೇ ಆಧರಿಸಿ ಬರೆಯಬೇಕಾದುದರಿಂದ ಪುಸ್ತಕವು ಸಿದ್ಧವಾಗಲು ಸರ್ಕಾರ ನನಗೆ ನೀಡಿದ ವೇಳೆಗಿಂತ ಹೆಚ್ಚು ಸಮಯ ಹಿಡಿಯಿತು. ಇವರೆಲ್ಲರಿಗೂ, ಡಿ.ಟಿ.ಪಿ. ಟೈಪ್ ಮಾಡಿದ 'ಸಂಜೆದರ್ಪಣ' ದೈನಿಕ ಸಿಬ್ಬಂದಿ ಹಾಗೂ ಕಾಮಧೇನು ಝೆರಾಕ್ಸ್ ಸೆಂಟರ್‌ನವರಿಗೂ ನನ್ನ ಧನ್ಯವಾದಗಳು.

ನನಗೆ ಈ ಪುಸ್ತಕ ಬರಯುವ ಕಾರ್ಯ ವಹಿಸಿದ ಕರ್ನಾಟಕ ವಿಧಾನಸಭೆ ಗ್ರಂಥಾಲಯ ಉಪ ಸಮಿತಿ ಹಾಗೂ ವಿಧಾನ ಸಭೆ ಕಲಾಪಗಳಲ್ಲಿ ದಿವಂಗತ ಸದಾಶಿವ ಶೆಟ್ಟರು ಭಾಗವಹಿಸಿ ಮಾತಾಡಿದ್ದರ ಕಲಾಪಗಳ ಭಾಗಗಳ ಪ್ರತಿ ಒದಗಿಸಿದ ವಿಧಾನಸಭೆ ಸಚಿವಾಲಯದವರಿಗೆ ನಾನು ತುಂಬಾ ಉಪಕೃತನಾಗಿದ್ದೇನೆ.

ದಿನಾಂಕ:15-10-2008 **ನಾರಾಯಣ ಫಳಗಿ**

ಪರಿವಿಡಿ

ಭಾಗ - 3
ನೆನಪುಗಳು ಮರುಕಳಿಸಿದಾಗ

ಭಾಗ–4

ಭಾಗ–೧

ಸದಾಶಿವ ಎಸ್. ಶೆಟ್ಟರ್
ವ್ಯಕ್ತಿ–ವ್ಯಕ್ತಿತ್ವ

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ
ಸತ್ಯದ ಬಲದಿಂಧ ಅಸತ್ಯದ ಕೇಡು ನೋಡಯ್ಯಾ
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ
ಕೂಡಲಸಂಗನ ಶರಣರ ಅನುಭವದಿಂದ ಎನ್ನ ಭವದ ಕೇಡು.

– ಬಸವಣ್ಣ

ಯಾರವನು ?

''ಯಾರವನು ? ಹಿರಿಯ ವಕೀಲರ ಹೆಗಲಿಗೆ ಹೆಗಲು ಹಚ್ಚಿ ಕುಳಿತಿರುವ ಆ ಯುವಕನಾರು? ಎಂದು ನ್ಯಾಯಾಲಯದೊಳಗೆ ಅಂದಿನ ಕಲಾಪಗಳು ಮುಗಿಯುತ್ತಿದ್ದಂತೆಯೇ ನ್ಯಾಯಾಧೀಶರು ಹಿರಿಯ ವಕೀಲರಿಗೆ ಪ್ರಶ್ನಿಸಿದರು.

ತಮಗೆಯೇ ಪ್ರಶ್ನಿಸಲಾಗಿದೆಂದು ನ್ಯಾಯಾಧೀಶರ ಮುಖಭಾವ, ಕೈ ನೋಟದಿಂದ ತಿಳಿದುಕೊಂಡ ಹಿರಿಯ ವಕೀಲ ಶ್ರೀ ಭೀಮರಾವ್ ಭಂಡಿವಾಡರು ತಮ್ಮ ಪಕ್ಕದಲ್ಲಿ ಕುಳಿತ '' ತರುಣನ ಪರಿಚಯ ತಮಗಿಲ್ಲ, ಅವನಾರೆಂಬುದು ತಮಗೆ ತಿಳಿಯದು ಎಂದು ಕೂಡಲೇ ಗೌರವಯುತವಾಗಿ ಉತ್ತರಿಸಿದರು.

ಕರಿಕೋಟು ಧರಿಸಿಯೇ ನ್ಯಾಯಾಲಯದಲ್ಲಿ ವಕಾಲತ್ತು ನಡೆಸಬೇಕೆಂಬ ''ಡ್ರೆಸ್‌ಕೋಡ್ ಆಗಿನ್ನೂ ಕಡ್ಡಾಯವಾಗಿ ಚಾಲ್ತಿಯಲ್ಲಿರಲಿಲ್ಲವಾದ್ದರಿಂದ ಹಿರಿಯ ವಕೀಲರ ಸಾಲಿನಲ್ಲಿ ಕುಳಿತಿದ್ದ'' ಸಾದಾ ಉಡುಪಿನ ವಾಮನ ಮೂರ್ತಿ ತರುಣನಾರು? ಈತನೂ ವಕೀಲನೇ ಹೇಗೆ ಎಂಬುದನ್ನು ತಿಳಿದುಕೊಳ್ಳಲು ನ್ಯಾಯಾಧೀಶರು ಹೀಗೆ ಪ್ರಶ್ನಿಸಿದ್ದರು.

ಮರುದಿನ ನ್ಯಾಯಾಲಯದ ಕಲಾಪಗಳ ಆರಂಭಕ್ಕೆ ಮೊದಲು ನ್ಯಾಯಾಧೀಶರು ತಮ್ಮ ಚೇಂಬರಿನೊಳಗೆ ಪ್ರವೇಶಿಸಿದಾಗ ತಮ್ಮನ್ನುದ್ದೇಶಿಸಿ ಬರೆಯಲಾದ ಪತ್ರವೊಂದನ್ನು ಗಮನಿಸಿ ಕೈಗೆತ್ತಿಕೊಂಡು ಓದತೊಡಗಿದರು, ಹಿಂದಿನ ದಿನ ತಾವು ''ಯಾರವನು ?'' ಎಂದು ಪ್ರಶ್ನಿಸಿ ತಿಳಿದುಕೊಳ್ಳಬಯಸಿದ ಅಪರಿಚಿತ ತರುಣನು ಬರೆದಿದ್ದ ಪತ್ರವೇ ಅದಾಗಿತ್ತು. ಪತ್ರವನ್ನು ಓದತೊಡಗಿದರು.

ನ್ಯಾಯಾಲಯದೊಳಗೆ ಬಂದು ಕುಳಿತು ಕಲಾಪಗಳನ್ನು ವೀಕ್ಷಿಸಲು, ವಾದ ಪ್ರತಿವಾದಗಳನ್ನು ಕೇಳಲು ಪ್ರತಿಯೊಬ್ಬರಿಗೂ ಹಕ್ಕಿದೆ, ಅಧಿಕಾರವಿದೆ. ತರುಣ ವಕೀಲರು. ಹೊಸದಾಗಿ ವಕೀಲಿ ವೃತ್ತಿ ಆರಂಭಿಸುವವರು ನ್ಯಾಯಾಲಯದಲ್ಲಿ ಕಲಾಪಗಳನ್ನು ಪ್ರತ್ಯಕ್ಷವಾಗಿ ವೀಕ್ಷಿಸಿ, ವಿಭಿನ್ನ ವಾದಮಂಡನೆಗಳನ್ನು ಕೇಳಿ ಅನುಭವ ಹಾಗೂ ಮಾರ್ಗದರ್ಶನವನ್ನು ಪಡೆದುಕೊಳ್ಳಲೇಬೇಕಾಗುತ್ತದೆ. ಒಬ್ಬ ತರುಣ ವಕೀಲನಾದ ನಾನು ನ್ಯಾಯಾಲಯಗಳಲ್ಲಿ ವಕೀಲರ ಪಕ್ಕದಲ್ಲಿ ಕುಳಿತು ಕಲಾಪಗಳನ್ನು ವೀಕ್ಷಿಸಿ ನನ್ನ ಕರ್ತವ್ಯವನ್ನು ಮಾಡಿರುತ್ತೇನೆ. ನೇರವಾಗಿ ನನಗೆಯೇ ನೀವು ಪ್ರಶ್ನಿಸಿದ್ದಲ್ಲಿ ಸ್ವತಃ ನಾನೇ ನನ್ನ ಬಗ್ಗೆ ವಿವರಗಳನ್ನು ಸರಿಯಾಗಿ ಹೇಳಬಹುದಿತ್ತು. ಆದರೆ ನೀವು ನನಗೆ ಪ್ರಶ್ನಿಸಲೇ ಇಲ್ಲ. ನಾನು ಯಾರೆಂಬುದನ್ನು ತಿಳಿದುಕೊಳ್ಳಲು ನೀವು ಹಿರಿಯ ವಕೀಲರಿಗೆ ಪ್ರಶ್ನಿಸಿದಿರಿ, ಆದ್ದರಿಂದ ನಾನು ಏನನ್ನೂ ಮಾತನಾಡದೇ ಆಗ ಸುಮ್ಮನಿದ್ದೆ. ಬೇರೆಯವರಿಗೆ ಪ್ರಶ್ನೆ ಹಾಕಿ ನನ್ನ ಬಗ್ಗೆ ಉತ್ತರ ಪಡೆದು ತಿಳಿದುಕೊಳ್ಳುವ ನಿಮ್ಮ ವಿಧಾನ ವೈಯಕ್ತಿಕವಾಗಿ ನನಗೂ, ನಾನು ಕೈಕೊಳ್ಳಲಿರುವ ವಕೀಲಿ ವೃತ್ತಿಗೂ ಗೈದ ಅಪಮಾನವೆಂದು ಭಾವಿಸಿ ನನ್ನ ಅಸಮಾಧಾನ ಸೂಚಿಸುತ್ತಿದ್ದೇನೆ.

''ಪವಿತ್ರ ನ್ಯಾಯಾಲಯದಲ್ಲಿ ಹಿರಿಯ-ಕಿರಿಯ ವಕೀಲರುಗಳ ನಡುವೆ ಭೇದ ಮಾಡುವುದಿರುವುದಿಲ್ಲ. ಪಕ್ಷಕಾರರಿಗೆ ನ್ಯಾಯ. ಸತ್ಯಕ್ಕೆ ಜಯ ದೊರಕಿಸಿಕೊಡುವ ನ್ಯಾಯ ದೇಗುಲದಲ್ಲಿ ಎಲ್ಲರೂ ಸಮಾನರು. ಸತ್ಯದ ವಿಜಯ ಸಾಧ್ಯವಾಗಿಸುವಲ್ಲಿ ನ್ಯಾಯಾಧೀಶರದಷ್ಟೇ ಗುರುತರ ಪಾತ್ರ, ಹಾಗೂ ಹೊಣೆ ಎಲ್ಲ ವಕೀಲರದ್ದಿರುತ್ತದೆ. ಹೀಗಿರಬೇಕಾದರೆ ತರುಣ ವಕೀಲನಾದ ನನ್ನನ್ನು ಕುರಿತು ಬೇರೆಯವರಿಗೆ ಪ್ರಶ್ನಿಸಿ ಉತ್ತರ ಪಡೆದುದು, ನನ್ನನ್ನು ಅನಾಮಿಕನಂತೆ ಕಂಡುದು, ನನ್ನ ವ್ಯಕ್ತಿತ್ವ ಹಾಗೂ ನನ್ನ ವಕೀಲಿ ವೃತ್ತಿಯ ಆತ್ಮಗೌರವಕ್ಕೆ ಭಾರೀ ಧಕ್ಕೆಯುಂಟು ಮಾಡಿವೆ. ಹೀಗೆ ಮಾಡಲು ನಿಮಗೆಲ್ಲಿ ಅಧಿಕಾರವಿದೆ? ನೀವು ನಿಮ್ಮ ಈ ತಪ್ಪಿಗಾಗಿ ಕ್ಷಮೆ ಕೋರಿ ವಕೀಲಿ ವೃತ್ತಿಯ ಘನತೆಯನ್ನು ಎತ್ತಿ ಹಿಡಿಯಬೇಕು'' ಎಂಬ ವಿನಂತಿಯೊಂದಿಗೆ ಕೊನೆಗೊಂಡ ಪತ್ರಕ್ಕೆ ಸದಾಶಿವ ಶಂಕರಪ್ಪ ಶೆಟ್ಟರ ಎಲ್ಲೆಲ್‌ಬಿ ವಕೀಲರು ಎಂಬ ಅಂಕಿತವಿತ್ತು.

ನ್ಯಾಯಾಧೀಶರು ಪತ್ರವನ್ನೋದಿ ತಬ್ಬಿಬ್ಬಾದರಲ್ಲದೇ ಕಟು ಶಬ್ದಗಳುಳ್ಳ ಪತ್ರದಿಂದಾಗಿ ವಿಷಾದ ಕ್ರೋಧಮಿಶ್ರಿತ ಭಾವನೆಗಳಿಂದ ಚಿತ್ತ ವಿಚಲಿತರಾದರು. ''ಏನಿದು ? ಈ ತರುಣನು ಕ್ಷಮೆ ಕೋರುವಂತೆ ನನಗೆಯೇ ಆದೇಶಿಸುತ್ತಿದ್ದಾನಲ್ಲಾ! ಎಷ್ಟೊಂದು ಧೈರ್ಯ ಈತನಿಗೆ ಇಂಥ ಖಾರವಾದ ಪತ್ರ ಬರೆಯಲು!'' ಎಂದು ಸಿಡಿಮಿಡಿಗೊಂಡು ಉದ್ಗರಿಸುತ್ತ ಹಿರಿಯ ವಕೀಲರನ್ನು ಸಮಾಲೋಚನೆಗಾಗಿ ತಮ್ಮ ಚೇಂಬರಿನೊಳಗೆಯೇ ಕರೆಯಿಸಿ ತರುಣನ ಪತ್ರವನ್ನು ಅವರೆಲ್ಲರ ಮುಂದಿರಿಸಿದರು.

ನ್ಯಾಯಾಧೀಶರಿಗೆ ಅವರ ಸೇವಾವಧಿಯಲ್ಲಿ ಮೊದಲ ಅನುಭವವಿದಾಗಿರುವಂತೆಯೇ ವಕೀಲರ ವೃಂದಕ್ಕೂ ಮೊದಲ ಘಟನೆಯಿದು. ಎಲ್ಲರೂ ಗಂಭೀರವಾಗಿ ಯೋಚಿಸತೊಡಗಿದರು. ನ್ಯಾಯಾಲಯದ ಘನತೆ-ಪಾವಿತ್ರ್ಯ ಹಾಗೂ ವಕೀಲಿ ವೃತ್ತಿಯ ಹಿರಿಮೆ ಇವೆರಡಕ್ಕೂ ಧಕ್ಕೆಯಾಗದ ರೀತಿ ಪ್ರಶ್ನೆ ಬಗೆಹರಿಸುವ ಬಗೆ ಹೇಗೆ ಎಂಬುದರ ಯೋಚನೆಯಲ್ಲಿ ಎಲ್ಲರೂ ಮುಳುಗಿದರು.

''ಯಾರಿವನು? ಕ್ಷಮೆ ಕೋರುವಂತೆ ನ್ಯಾಯಾಧೀಶರನ್ನೇ ಒತ್ತಾಯಿಸುವ ಈ ದಿಟ್ಟನಾರು? ಯಾರು ಈ ಹೊಸ ವಕೀಲ?'' ಎಂಬ ಪ್ರಶ್ನೆ ಹಾಗೂ ಚರ್ಚೆ ವಕೀಲರಲ್ಲಿ ಪರಸ್ಪರ ಮಾತಿನಲ್ಲಿ ಶುರುವಾದಂತೆಯೇ ಐದಾರು ವರ್ಷಗಳಿಂದ ವಕೀಲಿ ಮಾಡುತ್ತಿರುವ ''ಶಿವಪ್ಪ ಶಿವಮೂರ್ತೆಪ್ಪ ಶೆಟ್ಟರ ಅವರಿಗೆ ಈತನ ಬಗ್ಗೆ ತಿಳಿದಿರಬಹುದು'' ಎಂದು ಒಬ್ಬರೆಂದರೆ'' ಶಿವಪ್ಪ ಶೆಟ್ಟರರ ತಮ್ಮನೇ ಈತನಂತಾರ್‍ರೀ ಎಂದು ಇನ್ನೊಬ್ಬರೆಂದರು. ಬೇರೆ ಬೇರೆ ಲಿಂಗಾಯತ ವಕೀಲರ ಹೆಸರಿನ ಸುತ್ತ ಈ ಪತ್ರ ಬರೆದಂಥ ತರುಣನ ಸಂಬಂಧ ಕಲ್ಪಿಸಿ ಮಾತುಗಳು ನಡೆದಂತೆಯೇ ಸಮಾಲೋಚನೆಯಲ್ಲಿ ಪಾಲುಗೊಳ್ಳಲು ನ್ಯಾಯಾಧೀಶರ ಚೇಂಬರಿನಲ್ಲಿ ಪ್ರವೇಶಿಸಿದ ಶಿವಪ್ಪ ಶೆಟ್ಟರು ಚರ್ಚಿಸಲ್ಪಡುತ್ತಿದ್ದ ವಿಷಯವನ್ನು ಗ್ರಹಿಸಿ, ''ಹೌದೌದು, ನನ್ನ ತಮ್ಮನೇ ಆತ, ತನ್ನ ಹಕ್ಕು ಹಾಗೂ ಅಧಿಕಾರ ರಕ್ಷಣೆಗಾಗಿ ಪತ್ರ ಬರೆದಿದ್ದಾನೆ, ತಪ್ಪೇನಿದೆ?'' ಎಂದು ಪ್ರಶ್ನಿಸಿ ಸದಾಶಿವ ಶೆಟ್ಟರನ್ನು ಸಮರ್ಥಿಸಿಕೊಂಡರು.

ಕೆಲ ಕ್ಷಣ ಗಂಭೀರ ಮೌನ ಪಸರಿಸಿದ ಹಾಗೆಯೇ ನ್ಯಾಯಾಧೀಶ ಚೌಗುಲಾ ಸಾಹೇಬರು ತಮ್ಮ ಹಿಂದಿನ ದಿನಗಳನ್ನೋ ಅಥವಾ ಇನ್ನೇನನ್ನೋ ನೆನಪಿಸಿಕೊಳ್ಳುವ ತರಹ ಕಣ್ಮುಚ್ಚಿ, ಧ್ಯಾನಸ್ಥರ ಹಾಗೆ ಕುಳಿತು ಒಮ್ಮೆಲೆ, ''ಹಾಂ,

ಹಾಂ ಕಾಲೇಜಿನಲ್ಲಿ ನನ್ನೊರ್ವ ಮಿತ್ರ ಸಹಪಾಠಿಯಿದ್ದರು. ಹುಬ್ಬಳ್ಳಿಯವರೇ ಆಗಿದ್ದ ಅವರ ಹೆಸರು ಶಂಕರಪ್ಪ ಶಿವಪ್ಪ ಶೆಟ್ಟರ. ಇದೇ ಊರಿನವರು. ಈಗವರು ಎಲ್ಲಿರುತ್ತಾರೆ? ಏನು ಮಾಡುತ್ತಿದ್ದಾರೆ? ಅವರೂ ವಕೀಲರೇ ಅಲ್ಲವೇ?'' ಎಂದು ಪ್ರಶ್ನಿಸಿದರು.

ಆಗ ಶಿವಪ್ಪ ಶೆಟ್ಟರು ''ಹೌದೌದು ಶಂಕರಪ್ಪ ಶೆಟ್ಟರು ಈಗಿಲ್ಲ, ಕೆಲ ವರ್ಷಗಳ ಹಿಂದೆ ಸ್ವರ್ಗಸ್ಥರಾದರು. ಅವರ ಮಗನೇ ಈ ಸದಾಶಿವ ಶೆಟ್ಟರು. ಇದೀಗ ಎಲ್ಎಲ್‌ಬಿ ಮುಗಿಸಿ ವಕೀಲಿ ಶುರು ಮಾಡುವುದರಲ್ಲಿದ್ದಾನೆ'' ಎಂದು ಉತ್ತರಿಸಿದರು.

ನ್ಯಾಯಾಧೀಶ ಚೌಗುಲಾ ಸಾಹೇಬರ ಮುಖಚರ್ಯೆ ಕೂಡಲೇ ಬದಲಾಯಿತು. ಹೂನಗೆ ಅರಳಿತ್ತು. ಸಂತಸದ ಸಂಭ್ರಮ, ಪ್ರಶ್ನೆ ಬಗೆಹರಿಯಲಿರುವುದರ ಸಂತೃಪ್ತಿ ಮಿನುಗತೊಡಗಿದುವು. ''ಓಹ್! ಹೀಗೋ , ನನ್ನ ಆತ್ಮೀಯ ಸ್ನೇಹಿತರಾಗಿದ್ದ ದಿವಂಗತ ಶಂಕರಪ್ಪ ಶೆಟ್ಟರ ಚಿರಂಜೀವಿ ಈ ಸದಾಶಿವ ಶೆಟ್ಟರೆ ! ಬಹಳೇ ಸಂತೋಷ'' ಎಂದು ಅವರು ಉದ್ಗರಿಸಿದರು.

ಕೂಡಲೇ ಸದಾಶಿವ ಶೆಟ್ಟರನ್ನು ತಮ್ಮ ಚೇಂಬರಿನೊಳಕ್ಕೆ ಎಲ್ಲರ ಸಮ್ಮುಖದಲ್ಲಿ ಕರೆಯಿಸಿಕೊಂಡು ''ಓಹ್ ! ಸದಾಶಿವ ಶೆಟ್ಟರು ನೀವೇಯೇ? ನನ್ನ ಸನ್ಮಿತ್ರ, ಶಂಕರಪ್ಪ ಶೆಟ್ಟರ ಮಗನು ತಾನೇ!'' ಎಂದು ತಾವೇ ಮುಂದಕ್ಕೆ ಸಾಗಿಬಂದು ಆತ್ಮೀಯವಾಗಿ ಬರಸೆಳೆದು ಬಿಗಿದಪ್ಪಿ ''ನನಗೆ ತುಂಬಾ ಸಂತೋಷವಾಗಿದೆ. ನನ್ನ ಆತ್ಮೀಯ ಸ್ನೇಹಿತನ ಮಗ ನೀವು, ಹಕ್ಕು ಅಧಿಕಾರಗಳ ರಕ್ಷಣೆಗೆ, ವಕೀಲ ವೃತ್ತಿಯ ಗೌರವದ ರಕ್ಷಣೆಗೆ ಧೈರ್ಯತೋರಿದ ನೀವು ಅಭಿನಂದನಾರ್ಹರೇ! ಕೀಪ್ ಇಟ್ ಅಪ್'' ಎಂದು ಆಶೀರ್ವದಿಸಿದರು.

ಸದಾಶಿವ ಶೆಟ್ಟರರಿಗೆ ಚೌಗುಲೆಯವರ ಆತ್ಮೀಯ ಅಪ್ಪುಗೆಯಲ್ಲಿ ಪಿತೃವಾತ್ಸಲ್ಯ ಸುಖ ದೊರೆತರೆ ಚೌಗುಲೆಯವರಿಗೆ ಸದಾಶಿವ ಶೆಟ್ಟರಲ್ಲಿ ತಮ್ಮ ಸ್ವರ್ಗಸ್ಥ ಮಿತ್ರನನ್ನು ಕಂಡಷ್ಟೇ ಸಂತಸವಾಯಿತು. ಗೊಂದಲಕ್ಕೆ ಕಾರಣವಾದ ಸದಾಶಿವ ಶೆಟ್ಟರ ಪತ್ರ ಪ್ರಕರಣ ಹೃದಯಸ್ಪರ್ಶಿ ಸುಖಾಂತ್ಯ ಕಂಡಿತ್ತು.

ಸದಾಶಿವನಿಗೆ ದೀನ-ದಲಿತರ, ಧ್ಯಾನ

ಸದಾಶಿವನಿಗೆ ಅದೇ ಧ್ಯಾನ ಎಂಬ ಒಂದು ನಾಣ್ಣುಡಿಯುಂಟು. ದೇವ -ದೈತ್ಯ ಬಂಧುಗಳು ನಡೆಸಿದ ಸಮುದ್ರ ಮಂಥನದಲ್ಲಿ ಮೊದಲಿಗೆ ರಭಸದಿಂದ ಉಕ್ಕಿ ಬಂದು ವಿಶ್ವವನ್ನೇ ಸುಡತೊಡಗಿದ ವಿಷವನ್ನು ಸ್ವಲ್ಪವೂ ಹಿಂಜರಿಯದೇ ತಾನೇ ಶೀಘ್ರವಾಗಿ ಮುಂಬಂದು ಗಟಗಟನೇ ಕುಡಿದು ವಿಶ್ವವನ್ನು ವಿಷಬಾಧೆಗೀಡಾಗದಂತೆ ರಕ್ಷಿಸಿ ವಿಷಬಾಧೆಯಿಂದ ತನ್ನ ಕೊರಳನ್ನು ಸುಟ್ಟುಕೊಂಡು ಗರಳಗೊರಳನಾ ದವನಿಗೆ, ಆ ಸದಾಶಿವನಿಗೆ ವಿಶ್ವಕಲ್ಯಾಣ ಸಾಧಿಸುವ ಧ್ಯಾನವಲ್ಲದೇ ಬೇರೆ ಯಾವ ಗುರಿ ಅಥವಾ ಧ್ಯಾನವಿರಲು ಸಾಧ್ಯ? ಎಂಬ ಪುರಾಣಕಾಲದ ಸದಾಶಿವ ಮಹಾದೇವನನ್ನು ಕುರಿತ ಚಿಂತನೆಯ ಫಲವಾಗಿ ಹೊರಹೊಮ್ಮಿದಂತಿದೆ ಈ ನಾಣ್ಣುಡಿ! ಪುರಾಣ ಪ್ರಪಂಚದ ಆ ಮಹಾದೇವ ಸದಾಶಿವನ ಹಾಗೇಯೇ ನಮ್ಮ ಶೆಟ್ಟರ ಸದಾಶಿವರೂ ಸಹ ಜನಕಲ್ಯಾಣ ದೀನ-ದಲಿತರ, ಬಡವರ, ಮಧ್ಯಮ ವರ್ಗೀಯವರ ಕಣ್ಣೀರೊರೆಸಿ ಸುಖ-ಸಮಾಧಾನ, ಸಮೃದ್ಧಿಗೆ ತಮ್ಮ ಇಡೀ ಜೀವನವನ್ನೇ ಸಮರ್ಪಿಸಿ ಸವೆಸಿದವರು. ದಿನದ ಇಪ್ಪತ್ನಾಲ್ಕು ಗಂಟೆ ಜನಸೇವೆಯಲ್ಲಿ ತತ್ಪರರಾಗಿ ತನು,ಮನ,ಧನ ಪ್ರಾಣವನ್ನು ಸಹ ಅರ್ಪಿಸಿದ ಸದಾಶಿವರು ಆ ಗರಳಗೊರಳನಿಗೆಯೇ ಸಮ, ಅವನೇ ಇವರು.

ಸದಾಶಿವ ಶೆಟ್ಟರು ಫೌಜದಾರಿ ಅಥವಾ ಕ್ರಿಮಿನಲ್ ಪ್ರಕರಣಗಳ ವಕೀಲರೆಂದು ಮಿಂಚತೊಡಗಿದರು. ಕೆಲವೇ ವರ್ಷಗಳಲ್ಲಿ ವಕೀಲಿ ವೃತ್ತಿಯಲ್ಲಿ ಭಾರೀ ಯಶಸ್ಸುಗಳಿಸಿ ಭರ್ಜರಿಯಾಗಿ ಇಡೀ ದಿನ ಬಿಡುವಿಲ್ಲದ ಹಾಗೆ ತಮ್ಮ ವಕಾಲತ್ತು ನಡೆಸಹತ್ತಿದರು. ಇವರು ಬಂಗಾರದ ಗಣಿಯನ್ನೇ ಅಗೆದು ಹೊನ್ನನ್ನು ಬಳಿದು ಕೊಳ್ಳುತ್ತಿದ್ದಾರೆಂದೆನಿಸುತ್ತಿತ್ತು. ಆದರೆ ಬಡವರ ಕಲ್ಯಾಣ, ಶೋಷಿತರ ಶೋಷಣೆ ಮುಕ್ತತೆ, ಸತ್ಯ-ನ್ಯಾಯಗಳ ವಿಜಯದ ಕಡೆಗೆಯೇ ಪೂರ್ಣ ಲಕ್ಷ್ಯವುಳ್ಳ ಸದಾಶಿವ ಶೆಟ್ಟರು ಬಡ ಪಕ್ಷಕಾರರಿಗೆ ತಾವೇ ಹಣ ಕೊಟ್ಟು ಅವರಿಗೆ ಊಟೋಪಚಾರಗಳನ್ನು ನೀಡಿ ಅವರನ್ನು ಗೆಲ್ಲಿಸಿದ ಸಂತಸದಲ್ಲಿ ಸಂತೃಪ್ತರಿರುತ್ತಿದ್ದರು. ಯಾವಾಗಲೂ ಬರಿಗೈ ಬಂಟರಾಗಿದ್ದು ಮನೆಗಳ ಭಾಡಿಗೆ, ಹೊಲಗಳ ಉತ್ಪನ್ನದ ಮೇಲೆ ಅಲ್ಪತೃಪ್ತಿಯಿಂದ ಸಮಾಧಾನವಾಗಿರುತ್ತಿದ್ದರು.

ಭರ್ಜರಿ ಚಟುವಟಿಕೆಯ ವಕಾಲತ್ತು ಇವರದಾದುದರಿಂದ ಹಲವಾರು ಪ್ರಕರಣಗಳಲ್ಲಿ ವಕೀಲಿ ಹೊಣೆಗಾರಿಕೆಯುಳ್ಳ ಇವರು ಏಕಕಾಲಕ್ಕೆ ಬೇರೆ ಬೇರೆ ನ್ಯಾಯಾಲಯಗಳಲ್ಲಿ ಹಾಜರಾಗ ಬೇಕಾಗುತ್ತಿದ್ದುದರಿಂದ ಸಮಯದಲ್ಲಿ ಹೊಂದಾಣಿಕೆ, ವಿಚಾರಣೆಗೆ ಮುದ್ದತು ಪಡೆದುಕೊಳ್ಳುವುದು ಅನಿವಾರ್ಯವೆನಿಸುತ್ತಿತ್ತು. ಒಂದೊಮ್ಮೆ ನ್ಯಾಯಾಧೀಶರೊಬ್ಬರ ಮುಂದೆ ಒಂದು ಪ್ರಕರಣದಲ್ಲಿ ಹಾಜರಾಗಲು ಗಡಿಬಿಡಿಯಿಂದ ಧಾವಿಸುತ್ತಿದ್ದ ಹಾಗೆಯೇ ಆ ನ್ಯಾಯಾಧೀಶರು ಸದಾಶಿವ ಶೆಟ್ಟರ ಅನುಪಸ್ಥಿತಿಯನ್ನು ದಾಖಲಿಸಿ ಎದುರು ಪಕ್ಷದ ಪರ ಹಾಗೂ ಶೆಟ್ಟರ ಪಕ್ಷಕಾರನಿಗೆ ಅನ್ಯಾಯವಾಗುವ ರೀತಿಯಲ್ಲಿ ಏಕಪಕ್ಷೀಯ ತೀರ್ಪು ಘೋಷಿಸಿಬಿಟ್ಟರು. ತೀರ್ಪಿನಿಂದ ಹಾನಿಗೊಳಗಾದ ಪಕ್ಷಕಾರನು ದುಃಖ ಹಾಗೂ ನಿರಾಶೆಯಲ್ಲಿ ಮುಳುಗಿ ಅಳುತ್ತ ಎದುರಾದಾಗ ಶೆಟ್ಟರು ಆತನಿಗೆ ಸಮಾಧಾನ ಹೇಳುತ್ತ ಧೈರ್ಯ ತುಂಬುತ್ತ ಆತನೊಡನೆಯೇ ಆ ನ್ಯಾಯಾಧೀಶರ ಛೇಂಬರಿನಲ್ಲಿ ನುಗ್ಗಿದರು.

"ನನಗೆ ಬೇರೆ ನ್ಯಾಯಾಲಯದೊಳಗೆ ಕೆಲಸವಿತ್ತು, ಅಲ್ಲಿ ಒಂದು ಮೊಕದ್ದಮೆಯಲ್ಲಿ ವಾದಮಂಡನೆ ಮಾಡಕೊಡಗಿದ್ದೆ, ಹೀಗಾಗಿ ನಿಮ್ಮಲ್ಲಿಗೆ ಬರಲು ಕೆಲ ನಿಮಿಷ ಮಾತ್ರ ವಿಳಂಬವಾಗಿದೆ. ನಮ್ಮ ಪಕ್ಷಕಾರನು ಇದನ್ನು ನಿಮ್ಮ ಲಕ್ಷ್ಯಕ್ಕೆ ತಂದು ಸಮಯ ವಿಸ್ತರಣೆಯನ್ನು ಸಹ ಕೋರಿದ್ದುಂಟು. ವಸ್ತುಸ್ಥಿತಿ ಹೀಗಿರುವಾಗ ನೀವು ಈ ಪ್ರಕರಣದಲ್ಲಿ ನನ್ನ ಪಕ್ಷಕಾರನಿಗೆ ಅನ್ಯಾಯವಾಗುವಂತೆ ಏಕಪಕ್ಷೀಯ ತೀರ್ಪು ನೀಡಿರುವಿರಿ. ಅವನ ಹಿತರಕ್ಷಣೆ ಮಾಡಲು ಹಾಗೂ ಸತ್ಯಪೂರ್ಣ ಹಾಗೂ ನ್ಯಾಯಯುತ ತೀರ್ಪು ಹೊರಬರಲು ಪ್ರಯತ್ನಿಸುವುದಕ್ಕೆ ನನಗೂ ಒಂದು ಅವಕಾಶ ನೀಡಲೇಬೇಕಿತ್ತು" ಎಂದು ವಿನೀತರಾಗಿ ಪ್ರಾರ್ಥಿಸಿದರು.

ತಿರುಗುಬಾಣ

"ವಕೀಲರೇ ನೀವು ನಿಮಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಗಾಗಿ ಸಕಾಲಕ್ಕೆ ಹಾಜರಾಗಿ ವಕಾಲತ್ತು ನಡೆಸುವುದಕ್ಕೆ ಒದರಾಗಿರುತ್ತೀರಿ. ನೀವು ವೇಳೆಗೆ ಸರಿಯಾಗಿ ಸಕಾಲಕ್ಕೆ ಬಂದು ವಕಾಲತ್ತು ನಡೆಸದೇ ಹೋದರೆ ನಾನೇನು ಮಾಡಲಿ, ನಿಮ್ಮ ಸಲುವಾಗಿ ಕಾಯುತ್ತ ಕೂಡಲಿಕ್ಕಾಗುತ್ತದೆಯೇ? ಎಂದು ನ್ಯಾಯಾಧೀಶರು ಅತ್ಯಂತ ಖಾರವಾಗಿ ಪ್ರಶ್ನಿಸಿದಾಗ ಸದಾಶಿವ ಶೆಟ್ಟರು ಹಾಗೇಯೇ ಸುಮ್ಮನೆ ಹೊರಬರಬೇಕಾಯಿತು.

ಮರುದಿನ ಸದಾಶಿವ ಶೆಟ್ಟರು ಆ ನ್ಯಾಯಾಲಯದಲ್ಲಿ ಕಲಾಪ ಆರಂಭವಾಗುವುದಕ್ಕೆ ಮೊದಲೇ ಹೋಗಿ ಕುಳಿತುಕೊಂಡರು. ಪ್ರತಿದಿನವೂ ಹತ್ತು ಹದಿನೈದು ನಿಮಿಷ ತಡವಾಗಿಯೇ ನ್ಯಾಯಾಲಯ ಪ್ರವೇಶಿಸುವುದನ್ನು ರೂಢಿಯಾಗಿಸಿಕೊಂಡಿದ್ದ ಆ ನ್ಯಾಯಾಧೀಶರು ಆ ದಿನವೂ ತಡವಾಗಿಯೇ ನ್ಯಾಯಾಲಯ ಪ್ರವೇಶಿಸಿದ ಹಾಗೆಯೇ ಎಲ್ಲ ಹಿರಿಯ-ಕಿರಿಯ ವಕೀಲರು, ಪಕ್ಷಕಾರರು ವಾಡಿಕೆಯಂತೆ ಎದ್ದು ನಿಂತು ನಮಸ್ಕರಿಸಿ ಗೌರವ ಸಲ್ಲಿಸುತ್ತಿದ್ದಾಗ ಎಲ್ಲರಿಗಿಂತ ಮೊದಲಿನ ಖುರ್ಚಿಯಲ್ಲಿ ನ್ಯಾಯಾಧೀಶರ ಸಮೀಪವೇ ಕುಳಿತ ಸದಾಶಿವ ಶೆಟ್ಟರು ಮಾತ್ರ ನ್ಯಾಯಾಧೀಶರ ಕಡೆಗೆ ಬೆನ್ನು ಮಾಡಿ ಸುಮ್ಮನೇ ನಿಂತುಕೊಂಡರು. ನ್ಯಾಯಾಧೀಶರಿಗೆ ಅವಮಾನವಾಗುವ ರೀತಿಯಲ್ಲಿ ಶೆಟ್ಟರು ಹೀಗೇಕೆ ನಿಂತಿದ್ದಾರೆಂಬುದು ಕೆಲ ಕ್ಷಣ ಯಾರಿಗೂ ತಿಳಿಯದೇ ಎಲ್ಲರೂ ದಿಗ್ಭ್ರಾಂತರಾಗಿದ್ದರು. ತಮಗಾದ ಅವಮಾನದಿಂದ ಬೆವರು ಬಿಟ್ಟ ನ್ಯಾಯಾಧೀಶರು ಕೂಡಲೇ ತಮ್ಮ ಛೇಂಬರಿಗೆ ಮರಳಬೇಕಾಯಿತು.

ಒಬ್ಬರೇ ವಕೀಲರು ಬೇರೆ ಬೇರೆ ಪ್ರಕರಣಗಳಲ್ಲಿ ಬೇರೆ ಬೇರೆ ನ್ಯಾಯಾಲಯಗಳಲ್ಲಿ ಹಾಜರಾಗುವುದಿರುತ್ತದೆ. ತಮ್ಮ ಮುಂದೆ ಹಾಜರಾಗಲು ಇದರಿಂದಾಗಿ ವಿಳಂಬವಾಗಿರಬಹುದು ಎಂಬ ಪ್ರಜ್ಞೆಯಿಲ್ಲದೇ ಸಕಾಲಕ್ಕೆ ವಕೀಲ ಹಾಜರಾಗಲಿಲ್ಲವೆಂಬ ಕಾರಣ ತೋರಿಸಿ ಏಕಪಾರ್ಟಿ ತೀರ್ಪು ನೀಡುವ ನ್ಯಾಯಾಧೀಶರೇ ತಮ್ಮ ನ್ಯಾಯಾಲಯಕ್ಕೆಯೇ ವೇಳೆಗೆ ಸರಿಯಾಗಿ ಬರುತ್ತಿಲ್ಲ, ಸಮಯ ಪಾಲನೆಯನ್ನು ಸ್ವತಃ ಉಲ್ಲಂಘಿಸುತ್ತಾರೆ ಎಂಬುದನ್ನು ಎತ್ತಿ ತೋರಿಸಿ ನ್ಯಾಯಾಧೀಶರ ಕರ್ತವ್ಯಚ್ಯುತಿಯ ವಿರುದ್ಧ ಮೌನ ಪ್ರತಿಭಟನೆ ಸೂಚಿಸಿದ ಸದಾಶಿವ ಶೆಟ್ಟರ ಪ್ರಹಾರವನ್ನು ತಡೆದುಕೊಳ್ಳಲಾರದೇ ಆ ನ್ಯಾಯಾಧೀಶರು ವರ್ಗ ಮಾಡಿಸಿಕೊಂಡು ಬೇರೆ ಊರಿಗೆ ಹೋಗಬೇಕಾಯಿತು.

ಶರಣ ಕ್ರಾಂತಿಯ ನಂಟು

ಸದಾಶಿವ ಶೆಟ್ಟರರು ಅನ್ಯಾಯಕ್ಕೆ ಹೀಗೆ ತೀವ್ರ ಪ್ರತಿಭಟಿಸಿದುದು ಅವರ ಆನುವಂಶಿಕ ಪರಂಪರೆಯೇ ಆಗಿದೆ. ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿಯ ನಂಟು ಇವರ ಮನೆತನಕ್ಕಿದ್ದುದು ಹಾಗೂ ಧರ್ಮಶ್ರದ್ಧೆಯು ಕಾರಣದಿಂದಲೇ ಇವರ ಮನೆತನದ ಪೂರ್ವಜ ಲಿಂಗೈಕ್ಯ ಬಸಪ್ಪ ಶೆಟ್ಟರು ಮಸಣದಲ್ಲಿ ಭೂಮಿ ಪಡೆದು ಅದರ ಮೇಲೆಯೇ ಹೊಸ ಹುಬ್ಬಳ್ಳಿ ನಗರ ನಿರ್ಮಿಸಿದ ಪ್ರಸಂಗ ಉಲ್ಲೇಖನೀಯ.

ಬಸವಣ್ಣನವರ ಕ್ರಾಂತಿಯ ಸಂದರ್ಭದಲ್ಲಿ ಬಸವ ಕಲ್ಯಾಣ ತ್ಯಜಿಸಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಧಾರ್ಮಿಕ, ಸಾಮಾಜಿಕ, ಆರ್ಥಿಕ ವಿಕಾಸಕ್ಕೆ ಗುರುತರವಾದ ಪಾತ್ರವಹಿಸಿದ ಪ್ರಾಚೀನ ಶೆಟ್ಟರ ಮನೆತನಗಳಲ್ಲಿ ಹೊಸ ಹುಬ್ಬಳ್ಳಿ ನಿರ್ಮಾಣವಾಗುವುದಕ್ಕೆ ಮೊದಲಿನ ಹಳೇ ಹುಬ್ಬಳ್ಳಿ ಅಥವಾ ರಾಯರ ಹುಬ್ಬಳ್ಳಿಯ ಕಲ್ಯಾಣ ಶೆಟ್ಟರ ಮನೆತನ ಹಾಗೂ ನಂತರ ಹೊಸ ಹುಬ್ಬಳ್ಳಿಯ ದೊಡ್ಡ ಶೆಟ್ಟರು ಪ್ಯಾಟಿ ಶೆಟ್ಟರು ಎಂದು ಪ್ರಸಿದರಾದ ಮೂಲತಃ ಗೋಕಾಕ ಶೆಟ್ಟರ ಮನೆತನಗಳೂ ಇದ್ದುವೆಂದು ನಿರಂಜನ ವಂಶರತ್ನಾಕರ ಎಂಬ ಗ್ರಂಥದಲ್ಲಿ ವಿವರಿಸಲಾಗಿದೆ.

ಹನ್ನೆರಡನೆಯ ಶತಮಾನದಲ್ಲಿ ಬಸವ ಕಲ್ಯಾಣನಗರದಲ್ಲಿ ಕ್ರಾಂತಿಕಾರಿ ಬಸವೇಶ್ವರರಾದಿಯಾಗಿ ಎಲ್ಲ ಶಿವಶರಣರಿಂದ ಸ್ಥಾಪಿಸಲಾದ ಶಿವಾನುಭವ ಮಂಟಪದಲ್ಲಿಯ ವೀರಶೈವ ಧರ್ಮದ ಶೂನ್ಯ ಸಿಂಹಾಸನವನ್ನು ಮೊದಲಿಗೆ ಅಲಂಕರಿಸಿದ ಶ್ರೀ ಅಲ್ಲಮ ಪ್ರಭುಗಳು ಮೊದಲ ಪೀಠಾಧಿಪತಿ. ಅವರು ಚೆನ್ನಬಸವಣ್ಣನವರಿಗೆ ಪೀಠಾಧಿಕಾರ ಒಪ್ಪಿಸಿ ಶ್ರೀ ಶೈಲ ಕದಳೀ ವನದಲ್ಲಿ ಲಿಂಗೈಕ್ಯರಾದರು. ಚೆನ್ನಬಸವಣ್ಣನವರು ಶ್ರೀ ಸಿದ್ಧರಾಮದೇವರಿಗೆ ಶಿವಾನುಭವ ಗ್ರಂಥಗಳನ್ನು ಪೀಠಾಧಿಕಾರವನ್ನು ನೀಡಿ ಮೂರನೆಯ ಜಗದ್ಗುರುವನ್ನಾಗಿಸಿ ಕ್ರಾಂತಿ ಸಮಯದಲ್ಲಿ ಸುರಕ್ಷಿತತೆ ದೃಷ್ಟಿಯಿಂದ ಸಿಂಹಾಸನ ಶಿಖಾ ಶೈಲಗಳನ್ನು ಮಲ್ಲೂಖಾನ್‌ನೊಡನೆ ದಿಲ್ಲಿ ಬಾದಶಾಹನಲ್ಲಿಗೆ ಕಳಿಸಿಬಿಟ್ಟು ತಮ್ಮ ಪೀಠದ ಗುರುಗಳು ಮುಂದೆ ತಮ್ಮ ಪ್ರಭಾವ-ಪವಾಡ ತೋರಿಸಿದಾಗ ಅವರಿಗೆ ಅವುಗಳನ್ನು ಮರಳಿಸಬೇಕೆಂಬ ಸೂಚನೆ ನೀಡಿದರು.

ಹೀಗೆ ಆರಂಭವಾದ ಶೂನ್ಯ ಸಿಂಹಾಸನ ಪರಂಪರೆ 24ನೇ ಯವರಾದ ಕಟ್ಟಿಗೆಹಳ್ಳಿ ಜಗದ್ಗುರು ಶ್ರೀಸಿದ್ಧವೀರ ಸ್ವಾಮಿಗಳ ತನಕ ಅವಿಚ್ಛಿನ್ನವಾಗಿ ನಡೆದು ಬಂದಿತು. ನಂತರ ಪೀಠಕ್ಕೆ ಬಂದ ಅವರ ಶಿಷ್ಯ ಈ ಸಿದ್ದಲಿಂಗಸ್ವಾಮಿಗಳು ಇಷ್ಟಲಿಂಗದಲ್ಲಿ ನೆಟ್ಟ ನೋಟವುಳ್ಳವರಾಗಿ ಶಿವಯೋಗ ಶಕ್ತಿ ಸಂಪನ್ನರೆಂಬ ಖ್ಯಾತಿ ಪಡೆದುದರಿಂದಾಗಿ ನೋಡಾ ಅಥವಾ ನೋಟದ ಸಿದ್ದಲಿಂಗ ಗುರು ಎಂದು ಹೆಸರಾದರು. ಅವರಿಂದಲೇ ಮುರುಘಶಾಂತವೀರರಿಗೆ ದೀಕ್ಷೆಯಾಗಿತ್ತು. ಉಭಯತರೂ ತಮ್ಮ ಗುರುಗಳ ಆದೇಶದಂತೆ ದಿಲ್ಲಿಗೆ ತೆರಳಿ ಅಲ್ಲಿಯ ಬಾದಶಹನ ಸತ್ತ ಆನೆಯನ್ನು ಬದುಕಿಸಿ ಚೆನ್ನಬಸವಣ್ಣನವರು ರಕ್ಷಣೆಗಾಗಿ ಎಂದು 12 ನೇ ಶತಮಾನದಲ್ಲಿ ಕಳಿಸಿ ಇರಿಸಲಾಗಿದ್ದ ಶಿಖಾ ಶೈಲ ಅವನಿಂದ ಸಿಂಹಾಸನಗಳನ್ನು ಪಡೆದುಕೊಂಡು ಮರಳಿದರು. ಆಗ ಇಬ್ಬರೂ, ತಮ್ಮ ಗುರುಗಳು ವಿಧಿಸಿದ ಪ್ರಕಾರ ಶ್ರೀ ನೋಡಾ

ಸಿದ್ದಲಿಂಗ ಸ್ವಾಮಿಗಳಿಗೆ ಶಿವಾನುಭವ ಪಟ್ಟ ಹಾಗೂ ಶ್ರೀಮುರುಘಶಾಂತವೀರ ಸ್ವಾಮಿಗಳಿಗೆ ಶಿಖಾ, ಶೈಲ ಸಿಂಹಾಸನಾದಿಗಳು ಎಂದು ಪೀಠಾಧಿಕಾರ ಹಂಚಿಕೊಂಡು ಪರಸ್ಪರ ಸಮಾನತೆ ಗೌರವದಿಂದಿದ್ದು ಸಮಾಜಕ್ಕೆ ಧರ್ಮದ ಮಾರ್ಗದರ್ಶನ ಮಾಡತೊಡಗಿದರು. ಹಳೇಬೀಡಿನ ಮಠದಯ್ಯ ಬಸವಪ್ಪಯ್ಯ ಎಂಬವನ ಮಗ ಕಲ್ಯಾಣಯ್ಯನೆಂಬವನು ಒಬ್ಬ ಸ್ತ್ರೀಯೊಂದಿಗೆ ಅಧರ್ಮಯುಕ್ತ ಸಂಬಂಧ ಹೊಂದಿರುವನೆಂಬ ವ್ಯಾಜ್ಯದಲ್ಲಿ ಹಿರಿಯ ಕಟ್ಟಿಗೆಹಳ್ಳಿ ಜಗದ್ಗುರು ಸಿದ್ಧವೀರಸ್ವಾಮಿಗಳು ಹಾಗೂ ಅವರ ಶಿಷ್ಯರಾಗಿದ್ದ ಶಿವಾನುಭವ ಪಟ್ಟದ ಜಗದ್ಗುರು ನೋಡಾ ಸಿದ್ದಲಿಂಗ ಸ್ವಾಮಿಗಳು ಅಧರ್ಮದ ಸಂಗ ಬಿಡಲೊಪ್ಪದ ಕಲ್ಯಾಣಯ್ಯನಿಗೆ ಬಹಿಷ್ಕಾರ ವಿಧಿಸಿದ್ದರು. ಈ ನೋಡಾ ಸಿದ್ದಲಿಂಗಸ್ವಾಮಿಗಳು ತಾವು ಲಿಂಗೈಕ್ಯರಾಗುವುದಕ್ಕೆ ಮೊದಲು ಕುಮಾರ ಸ್ವಾಮಿಗಳೆಂಬವರಿಗೆ ಶಿವಾನುಭವ ಪಟ್ಟಾಧಿಕಾರ ವರ್ಗಾಯಿಸಿದರು. ಈ ಕುಮಾರ ಸ್ವಾಮಿಗಳಿಂದ ಬಸಪ್ಪ ಶೆಟ್ಟರ ಜೊತೆ ಕಳಿಸಲ್ಪಟ್ಟವರೇ ಹುಬ್ಬಳ್ಳಿಯ ಜಗದ್ಗುರು ಮೂರುಸಾವಿರಮಠದ ನಿರ್ಮಾಣಕ್ಕೆ ಕಾರಣರಾದ ಗುರುಸಿದ್ದಸ್ವಾಮಿಗಳು. ಆದರಿಂದಾಗಿ ಶ್ರೀಮೂರುಸಾವಿರಮಠ ಕುಮಾರ ಸಮಯದ್ದು. ಆ ಕುಮಾರ ಸಮಯದ ಸ್ಥಾಪಕರೇ ಲಿಂಗೈಕ್ಯ ಬಸಪ್ಪ ಶೆಟ್ಟರು! ಹೊಸ ಹುಬ್ಬಳ್ಳಿ ಅಕ್ಕಿಹೊಂಡದ ಹೊಸಮಠ ಅಥವಾ ಶೆಟ್ಟರ ಮಠದಲ್ಲಿರುವ ಲಿಂಗೈಕ್ಯ ಬಸಪ್ಪ ಶೆಟ್ಟರ ಗದ್ದಿಗೆಯ ಮೇಲೆ ಹೀಗೆ ಉಲ್ಲೇಖವಿದೆ.

ಚಿತ್ರದುರ್ಗದಲ್ಲಿ ಮುರುಘಶಾಂತವೀರಸ್ವಾಮಿಗಳು ದಸರಾ ಉತ್ಸವಕ್ಕೆ ಶಿವಾನುಭವ ಪೀಠದ ಶ್ರೀಕುಮಾರಸ್ವಾಮಿಗಳನ್ನು ಆಮಂತ್ರಿಸಿ ಇಬ್ಬರೂ ಒಂದೇ ಸಿಂಹಾಸನದಲ್ಲಿ ಕುಳಿತು ಏಕತೆ ಪ್ರದರ್ಶಿಸಿದರಾದರೂ ಐವರು ಶಿಷ್ಯರು ಶ್ರೀಕುಮಾರಸ್ವಾಮಿಗಳಿಗಿಂತ ಮುರುಘ ಸ್ವಾಮಿ ಶ್ರೇಷ್ಠರೆಂದು ವಾದಿಸಿ ದಸರಾ ದರ್ಬಾರವನ್ನೇ ಬಹಿಷ್ಕರಿಸಿದ್ದರಿಂದ ಹೊರಗೆ ಹಾಕಲ್ಪಟ್ಟರು. ಈ ಐವರೂ ಬೇರೆ ಬೇರೆ ಕಡೆಗಳಲ್ಲಿ ತಮ್ಮದೇ ಮಠಗಳನ್ನು ಕಟ್ಟಿಕೊಂಡು ಗುರುಪರಂಪರೆ ಆರಂಭಿಸಿದರು.

ನಂತರ ಮುರುಘ ಶಾಂತ ವೀರಸ್ವಾಮಿಗಳು ರುದ್ರಪ್ಪ ಎಂಬವರಿಗೆ ಇಮ್ಮಡಿ ಗುರುಸಿದ್ದಸ್ವಾಮಿಗಳೆಂದು ಹೆಸರಿಸಿ ಶಿಖಾಪಟ್ಟ ನೀಡಿದಾಗ ಅವರ ಇನ್ನೊಬ್ಬ ಶಿಷ್ಯ ಚಿಲ್ಲಾಳಪ್ಪ ವಿರೋಧಿಸಿ ಹೊರಗೆ ಹಾಕಲ್ಪಟ್ಟು ಚಿಲ್ಲಾಳಪ್ಪನವರ ಶಿಷ್ಯ ತೋಟದಪ್ಪ ಬೇರೆ ಪೀಠ ಪರಂಪರೆ ಸ್ಥಾಪಿಸಿದ. ಹೀಗಾಗಿ ಮುರುಘ, ಕುಮಾರ ಹಾಗೂ ಚಿಲ್ಲಾಳ ಹೀಗೆ ಮೂರು ಸಮಯಭೇದಗಳುಂಟಾದವು.

ಮುರುಘ ಶಾಂತವೀರ ಸ್ವಾಮಿಗಳು ಲಿಂಗೈಕ್ಯರಾದ ಬಳಿಕ ಇಮ್ಮಡಿ ಗುರುಸಿದ್ದಸ್ವಾಮಿಗಳು ಹಳೇಬೀಡಿನ ಬಹಿಷ್ಕೃತ ಕಲ್ಯಾಣಯ್ಯನವರ ಮಗ ಚನ್ನವೀರಯ್ಯನವರಿಂದ ತಪ್ಪು ಕಾಣಿಕೆ ಪಡೆದು ತಮ್ಮ ಪರಮಗುರುಗಳಿಂದ ವಿಧಿಸಲ್ಪಟ್ಟ ಬಹಿಷ್ಕಾರವನ್ನು ತೆಗೆದುಹಾಕಿ ಮತ್ತೊಂದು ವಿವಾದಕ್ಕೆ ಜನ್ಮ ನೀಡಿದರು. ಇದರಿಂದಾಗಿ ಪ್ರಭಾವ ಕುಂದುತ್ತ ನಡೆದ ಮುರುಘಪೀಠದ ಗುರುಸಿದ್ದಸ್ವಾಮಿಗಳು ಅದೇ ಕಾಲಕ್ಕೆ ಪ್ರಭಾವ ಹೆಚ್ಚುತ್ತನಡೆದ ಶಿವಾನುಭವ ಪಟ್ಟದ ಶ್ರೀಕುಮಾರಸ್ವಾಮಿಗಳ ಬಗ್ಗೆ ಈರ್ಷೆ ಹೆಚ್ಚಿಸಿಕೊಂಡು ತಮ್ಮ ಪೀಠದ ವಿರುದ್ಧ ಅಪಪ್ರಚಾರ ಅವರಿಂದಲೇ ನಡೆದಿದೆಂದು ಆರೋಪಿಸಹತ್ತಿದರು.

ಇಳಸೂರಿನಲ್ಲಿರುತ್ತಿದ್ದ ಶ್ರೀಕುಮಾರಸ್ವಾಮಿಗಳು ತಮಗೆ ವಯಸ್ಸಾದುದರಿಂದ ಸಿದ್ರಾಮಪ್ಪ ಎಂಬವರಿಗೆ ಕೆಂಪಿನ ಸಿದ್ಧಬಸವ ಎಂದು ನಾಮಕರಣ ಮಾಡಿ ತಮ್ಮ ಶಿವಾನುಭವ ಪಟ್ಟದ ಪೀಠಾಧಿಕಾರ ವಹಿಸಿಕೊಟ್ಟರು. ಈ ಆಮಂತ್ರಣವೂ ತಮಗೆ ತಲುಪದಿದ್ದುದರಿಂದ ಮುರುಘಾಮಠ ಇಮ್ಮಡಿ ಗುರುಸಿದ್ದೇಶ್ವರರ ರೋಷವಿನ್ನೂ ಹೆಚ್ಚಿ ಉಭಯ ಪೀಠಗಳ ನಡುವಿನ ವಿರಸ ಹೆಚ್ಚುತ್ತಲೇ ನಡೆಯಿತು.

ಇಮ್ಮಡಿ ಗುರುಸಿದ್ಧಸ್ವಾಮಿಗಳು ಪರಸ್ಪರ ಚರ್ಚೆಗಾಗಿ ಚಿತ್ರದುರ್ಗ ಮುರುಘಮಠಕ್ಕೆ ಬರುವಂತೆ ಕೆಂಪಿನ ಸಿದ್ಧಬಸವ ಸ್ವಾಮಿಗಳಿಗೆ ಸಂದೇಶ ಕಳುಹಿಸಿದರೂ ಇಮ್ಮಡಿ ಗುರುಸಿದ್ಧಸ್ವಾಮಿಗಳು ನಮ್ಮೆಲ್ಲರ ಹಿಂದಿನ ಗುರುಗಳಾದ ನೋಡಾ ಸಿದ್ಧಲಿಂಗ ಸ್ವಾಮಿಗಳು ವಿಧಿಸಿದ್ದ ಕಲ್ಯಾಣಯ್ಯನವರ ಮೇಲಿನ ಬಹಿಷ್ಕಾರವನ್ನು ಯಾರನ್ನೂ ಕೇಳದೇ ತೆಗೆದುಹಾಕಿದ್ದರಿಂದ ತಾವು ಅಲ್ಲಿಗೆ ಸಂವಾದಕ್ಕೆ ಬರುವುದಿಲ್ಲವೆಂದು ಉತ್ತರಿಸಿದಾಗ ಇಮ್ಮಡಿ ಗುರುಸಿದ್ಧಸ್ವಾಮಿಗಳು ಮತ್ತಷ್ಟು ಕೆರಳಿದರು. ಆಗ ಕೆಂಪಿನ ಸಿದ್ಧ ಬಸವಸ್ವಾಮಿಗಳನ್ನು ಇಳಸೂರ ಮಠದಿಂದಲೇ ಬಿಡಿಸಬೇಕೆಂದು ಮುರುಘಮಠದ ಇಮ್ಮಡಿ ಗುರುಸಿದ ಸ್ವಾಮಿಗಳು ಹೊಂಚು ಹಾಕತೊಡಗಿದರು.

ಶ್ರೀಕೆಂಪಿನ ಸಿದ್ಧಬಸವಸ್ವಾಮಿಗಳು ಒಮ್ಮೆ ತಮ್ಮ ಇಳಸೂರಮಠದಲ್ಲಿ ಇಲ್ಲದಿರುವ ಸಮಯದಲ್ಲಿ ಮುರುಘ ಇಮ್ಮಡಿ ಗುರುಸಿದ್ಧಸ್ವಾಮಿಗಳು ತಮ್ಮ ಶಿಷ್ಯರನ್ನು ಮಠದಲ್ಲಿ ನುಗ್ಗಿಸಿ ತಮ್ಮ ಪ್ರಭುತ್ವ ಸ್ಥಾಪಿಸುವಲ್ಲಿ ಯಶಸ್ವಿಯಾದಾಗ ಶ್ರೀಕೆಂಪಿನ ಸಿದ್ಧಬಸವಸ್ವಾಮಿಗಳು ಮರುಮಾತನ್ನಾಡದೇ ತಮ್ಮ ಶಿವಾನುಭವ ಸಾಹಿತ್ಯ ಹಾಗೂ ಮಠದ ಎಲ್ಲ ಸಲಕರಣೆಗಳೊಂದಿಗೆ ಹುಬ್ಬಳ್ಳಿಯ ಗೋಪನಕೊಪ್ಪ ನಂತರ ಬೇರೆ ಬೇರೆ ಕಡೆ ನೆಲೆ ಹುಡುಕುತ್ತ ಕೆಳದಿ ಸಂಸ್ಥಾನಕ್ಕೆ ಸೇರಿದ ಜಡೆಯ ಕಬ್ಬಿಣಕಂತಿ ಮಠದಲ್ಲಿ ನೆಲೆಯೂರಿದರು.

ಕಲ್ಯಾಣ ಕ್ರಾಂತಿಯ ನಂತರ ಶರಣಧರ್ಮನಿಷ್ಠ ವಿವಿಧ ವ್ಯವಸಾಯಗಳ ಕಾಯಕ ಯೋಗಿಗಳು, ಅನೇಕ ಹರಗುರು ಚರಮೂರ್ತಿಗಳು, ಸ್ವಾಮಿಗಳು, ಶರಣರು ಮೊದಲಾದವರೊಂದಿಗೆ ಊರೂರು ತಿರುಗುತ್ತ ಹಳೇ ಹುಬ್ಬಳ್ಳಿಯಲ್ಲಿ ನೆಲೆಯೂರಿದ ಶೆಟ್ಟರ ಮನೆತನ ಕಲ್ಯಾಣಶೆಟ್ಟರ ಮನೆತನವೆಂದೇ ಗುರುತಿಸಲ್ಪಡಹತ್ತಿತ್ತು. ಕಲ್ಯಾಣ ಶೆಟ್ಟರ ಮನೆತನದ ಹಿರಿಯರು ವಿಜಾಪೂರ ಜಿಲ್ಲೆ ಇಂಡಿ ತಾಲೂಕ ಯಳಮಲಿಯಿಂದ ಹೊರಟು ಜಂಬಗಿ ನಂತರ ಗೋಕಾಕದಲ್ಲಿ ವರ್ತಕರಾಗಿ ಶ್ರೇಷ್ಠಿಗಳಾಗಿ ನೆಲೆಯೂರಿದ ಗೋಕಾಕದ ಶೆಟ್ಟರ ಮನೆತನದ ಕಾಡಪ್ಪಶೆಟ್ಟರು ಎಂಬ ಉತ್ಸಾಹಿ ಯುವ ವರ್ತಕನಿಗೆ ಮಗಳು ಗೌರಿಯನ್ನು ಧಾರೆಯರೆದು ಕೊಟ್ಟು ಸಂಬಂಧ ಬೆಳೆಸಿದರು. ನಂತರ ಮುದಿಯಪ್ಪ ಹಾಗೂ ಬಸಪ್ಪ ಎಂಬ ಇಬ್ಬರೂ ಮೊಮ್ಮಕ್ಕಳೊಂದಿಗೆ ಅಳಿಯ ಕಾಡಪ್ಪ ಶೆಟ್ಟರು ಮಗಳು ಗೌರಿಯನ್ನು ತಮ್ಮಲ್ಲಿಗೇಯೇ ಕರೆಯಿಸಿಕೊಂಡರು. ಬೇರೆ ಬೇರೆ ರಾಜಮನೆತನ. ಸಾಮಂತರ ಆಳಿಕೆಯಲ್ಲಿ ಆಶ್ರಿತರಾಗಿದ್ದು ಆಯಾ ಕಾಲದಲ್ಲಿ ಆಯಾ ರಾಜ್ಯಗಳ ಆರ್ಥಿಕ ಸಮೃದ್ದಿಗೆ ಧರ್ಮ ಜಾಗೃತಿ ಹಾಗೂ ಸಾಮಾಜಿಕ ವಿಕಾಸಕ್ಕೆ ತಮ್ಮ ಗುರುತರ ಕೊಡುಗೆ ಸಲ್ಲಿಸಿದ ಕಲ್ಯಾಣ ಶೆಟ್ಟರ ಮನೆತನದವರು ವಿಜಯನಗರ ಸಾಮ್ರಾಜ್ಯದಲ್ಲಿ ಹೆಚ್ಚಿನ ಅಧಿಕಾರ ಹೊಂದಿ ರಾಯರ ಅಂದರೆ ವಿಜಯನಗರದ ರಾಯರ ಹುಬ್ಬಳ್ಳಿಯ ಪ್ರಧಾನರಾಗಿಯೇ ಮೆರೆದಿದ್ದು ನಂತರದ ವಿಜಾಪೂರ ಆದಿಲ್‌ಶಾಹಿ, ಸವಣೂರು ಸಂಸ್ಥಾನದ ನವಾಬ, ಪೇಶವಾಯಿಗೆ ಸಂಬಂಧಿಸಿದ ಸಾಂಗ್ಲಿ ಸಂಸ್ಥಾನ ದೊರೆಗಳಿಗೆ

ಅಧೀನರಾಗಿ ಅನೇಕ ಅಧಿಕಾರಂಗಳನ್ನು ಹೊಂದಿದ್ದರು. ಈಸ್ಟ ಇಂಡಿಯಾ ಕಂಪನಿ ಆಡಳಿತದಲ್ಲಿಯೂ ಅವರೊಂದಿಗೆ ಸರಿದೊರೆಯಾಗಿ ಹೊಂದಿಕೊಂಡು ದೇಶಾದ್ಯಂತ. ಪರದೇಶದೊಡನೆ ವ್ಯಾಪಾರ ನಡೆಸುವವರಾದರು.

ಧರ್ಮನಿಷ್ಠರೂ, ಸರ್ವ ಜ್ಞಾನ ಪಾರಂಗತರೂ ಆದ ಸೋದರರಳಿಯ ಬಸಪ್ಪ ಶೆಟ್ಟರಿಗೆ ಕಲ್ಯಾಣ ಶೆಟ್ಟರು ಇತ್ತ ಹುಬ್ಬಳ್ಳಿಯಲ್ಲಿ ವ್ಯಾಪಾರ ವ್ಯವಹಾರದ ಸಂಪೂರ್ಣ ಹೊಣೆಗಾರಿಕೆಯ ಜೊತೆಗೆಯೇ ಊರಿನ ಶೆಟ್ಟತನ, ಧಾರ್ಮಿಕ ಹಾಗೂ ಸಾಮಾಜಿಕ ರಂಗದ ಧುರೀಣತ್ವವನ್ನು ವಹಿಸಿಕೊಟ್ಟು ತಮ್ಮ ಆತ್ಮೋನ್ನತಿಗಾಗಿ ಅಧಿಕ ಸಮಯವನ್ನು ಪೂಜೆ, ಪುನಸ್ಕಾರ, ಜಪತಪಾದಿ ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ವ್ಯಯಿಸತೊಡಗಿದರು.

ಆಗ ಕೆಂಪಿನ ಸಿದ್ದಬಸವ ಸ್ವಾಮಿಗಳ ಶಿಷ್ಯರು ಅನುಯಾಯಿಗಳು ತಮ್ಮ ಗುರುಗಳ ಮೇಲೆ ಪುಂಡಾಟಿಕೆ ನಡೆದು ಇಳಸೂರ ಮಠವನ್ನೇ ಬಿಡುವಂತಾದ ಬಗ್ಗೆ ಕ್ರೋಧತಪ್ತರಾಗಿ ತಮ್ಮ ಗುರುಗಳ ಸಮಾಧಾನ ಹಿತವಚನಗಳನ್ನೂ ಕಡೆಗಣಿಸಿ ಮಠದ ಗದ್ದುಗೆಯ ಮೇಲೆ ಇಮ್ಮಡಿ ಗುರುಸಿದ್ಧಸ್ವಾಮಿಗಳು ಕುಳಿತಿರುವಾಗಲೇ ಹಠಾತ್ತನೆ ದಾಳಿ ನಡೆಸಿದಾಗ ಒಬ್ಬ ಮಹಿಳೆ ಗರ್ಭಸ್ಥ ಶಿಶು ಇವರ ಕೊಲೆ, ಪಾದೋದಕ ಪ್ರಸಾದ ಸೂರೆಯಾಗಿ ಕೆಂಪಿನ ಸಿದ್ದಬಸವ ಸ್ವಾಮಿಗಳ ಚಿತಾವಣೆಯಿಂದ ಈ ಅನಾಹುತ ನಡೆದಿದೆ ಎಂಬ ಆರೋಪ ಹೊರುವಂತಾಯಿತು. ಇಡೀ ವೀರಶೈವ ಸಮಾಜ ಇದರಿಂದ ಅಲ್ಲೋಲ ಕಲ್ಲೋಲವಾಯಿತು. ಹಳೇಬೀಡಿನ ಕಲ್ಯಾಣಯ್ಯನ ಮೇಲಿನ ಬಹಿಷ್ಕಾರ ಹಿಂದೆಗೆತ ಮೊದಲಾಗಿ ಕೆಂಪಿನ ಸಿದ್ದಬಸವ ಸ್ವಾಮಿಗಳ ಇಳಸೂರ ಮಠದ ಮೇಲೆ ಹಲ್ಲೆ ನಂತರ ಕೆಂಪಿನ ಸಿದ್ದಬಸವ ಸ್ವಾಮಿಗಳ ಶಿಷ್ಯವೃಂದವು ಪ್ರತಿಕಾರ ಕ್ರಮ ನಡೆಸಿದುದು ಮೊದಲಾದ ಘಟನೆಗಳನ್ನು ಕುರಿತಂತೆಯೇ ಸಮಾಜದ ಎಲ್ಲರೂ ಒಟ್ಟಿಗೆ ಸೇರಿ ಸಮಾಜದ ಏಕತೆ ದೃಷ್ಟಿಯಿಂದ ಒಂದು ಸರ್ವಸಮ್ಮತ ನಿರ್ಣಯಕ್ಕೆ ಬರಲು ಉಭಯ ಪೀಠಗಳ ಗುರುಗಳಲ್ಲಿ ಒಮ್ಮತ ಏರ್ಪಡಿಸಲು ಬಸಪ್ಪ ಶೆಟ್ಟರು ಉಭಯ ಗುರುಗಳ ಸಮ್ಮತಿಯಿಂದ ಸಮಾಜದ ಮಹಾಸಭೆಯನ್ನು ಮೆಣಸಿನಹಳ್ಳದ ಮೇಲೆ ಭವ್ಯಮಂಟಪದಲ್ಲಿ ಸೇರಿಸಿದರು. ಅದರಲ್ಲಿ 50500 ಸಮಾಜ ಪ್ರತಿಷ್ಠಿತರು ಗುರುವೃಂದವೆಲ್ಲ ಭಾಗವಹಿಸಿದ್ದರು

ಕೆಂಪಿನ ಸಿದ್ದಬಸವ ಸ್ವಾಮಿಗಳು ತಮ್ಮ ಶಿಷ್ಯರಿಗೆ ಇಸಳೂರ ಮಠದ ಮೇಲೆ ದಾಳಿ ನಡೆಸಲು ಪ್ರೇರಕರಲ್ಲ, ಅವರು ಮಠಗಳ ಹಂಚಿಕೊಳ್ಳುವಿಕೆಯಲ್ಲಿ ಪಾಲನ್ನು ಬೇಡದೇ ಜಡೆಮಠದಲ್ಲಿ ನೆಲೆಸಿದುದನ್ನು ಭಕ್ತರು ಆಶ್ರಯ ಕೊಟ್ಟಲ್ಲಿ ಇರುವುದಾಗಿ ಹೇಳಿದುದನ್ನು ನಿರಂಜನ ಪೀಠಕ್ಕೆ ಅನುಗುಣವಾದ ವರ್ತನೆಯೆಂದು ಈ ಸಭೆಯಲ್ಲಿ ನಿರ್ಧರಿಸಲಾಯಿತು. ಮುರುಘದ ಇಮ್ಮಡಿ ಗುರುಸಿದ್ದಸ್ವಾಮಿಗಳಿಗೆ ಬಹಿಷ್ಕಾರ ಹಿಂದೆಗೆವ ಅಧಿಕಾರವಿದೆಯಾದರೂ ಇತರ ಪೀಠಸ್ಥ ಸ್ವಾಮಿಗಳನ್ನು ದೈವದವರನ್ನು ಕೇಳದೇ, ಸಲಹೆ ಪಡೆಯದೇ ಹಾಗೆ ಮಾಡುವ ನಿರಂಕುಶ ಅಧಿಕಾರವಿಲ್ಲವೆಂದು ಸಭೆ ನಿರ್ಧರಿಸಿತು. ಈ ನಿರ್ಣಯಕ್ಕೆ ಮುರುಘಾಮಠದ ಜಗದ್ಗುರುಗಳು ಸಮ್ಮತಿಸಲಿಲ್ಲ. ತಮ್ಮ ಕ್ರಮವನ್ನೇ ಸಮರ್ಥಿಸಿಕೊಂಡು ಅದಕ್ಕೆಯೇ ಅಂಟಿಕೊಳ್ಳುವುದಾಗಿ ಘೋಷಿಸಿದರು.

ಕೆಂಪಿನ ಸಿದ್ದಬಸವ ಸ್ವಾಮಿಗಳು ತಮ್ಮೊಂದಿಗೆ ಬಂದು ತಪ್ಪೊಪ್ಪಿಕೊಂಡು ಕ್ಷಮೆ ಬೇಡಿದ "ಇಸಳೂರು ಮಠದ ಮೇಲೆ ಇಮ್ಮಡಿ ಗುರುಸಿದ್ದಸ್ವಾಮಿಗಳಿರುವಾಗ ದಾಳಿ ನಡೆಸಿದ " ಶಿಷ್ಯವೃಂದಕ್ಕೆ ಕ್ಷಮೆ ನೀಡಲೊಪ್ಪದೇ ಪ್ರತ್ಯೇಕವಾಗಿ ಉಳಿಯಲು ಬೇರೆ ತಮ್ಮದೇ ಆದ ಮಠಗಳನ್ನು ಕಟ್ಟಿಕೊಳ್ಳಲು ಆದೇಶಿಸಿದರು. ಸಮಯ ಬಿಟ್ಟ ಶಂಕರ ದೇವರ

ಮಠಗಳೆಂದು ಅವುಗಳಿಗೆ ಕರೆಯುವುದಾಗಿ ಅವರು ಹೇಳಿದರು. ಹುಬ್ಬಳ್ಳಿ ಹಾಗೂ ಮಿಶ್ರಿಕೋಟೆಯನ್ನೊಳಗೊಂಡಂತೆಯೇ ಹದಿಮೂರು ಶಂಕರದೇವರಮಠಗಳು ಬಸಪ್ಪ ಶೆಟ್ಟರ ಪ್ರೋತ್ಸಾಹನೆಯಿಂದ ನೆಲೆಯುತ್ತಿ ಬೆಳೆಯತೊಡಗಿದುವು.

ತದನಂತರದಲ್ಲಿ ನಡೆದ ಮುಖಾಮುಖಿ ಸಂವಾದದಲ್ಲೇ ಮುರುಘದ ಇಮ್ಮಡಿ ಗುರುಸಿದ್ಧಸ್ವಾಮಿಗಳು ಬಸಪ್ಪ ಶೆಟ್ಟರಿಗೆ ಸ್ಮಶಾನದಲ್ಲಿ ಮನೆ ಕಟ್ಟಿಕೊಳ್ಳುವ ಎಂದು ಶಾಪವಿತ್ತು ಹೊಸ ಹುಬ್ಬಳ್ಳಿ ಪಟ್ಟಣ ಸ್ಥಾಪನೆಗೆ ಕಾರಣರಾದರು. ಬಸಪ್ಪ ಶೆಟ್ಟರು ನೀಡಿದ ಭವಿಗಳ ಕೈಯಲ್ಲಿ ಮರಣದ ಪ್ರತಿಶಾಪದಿಂದಾಗಿ ಪಲ್ಲಕ್ಕಿಯನ್ನು ಭವಿಗಳು ಹೊತ್ತೊಯ್ಯುವಾಗ ಅಲ್ಲೇ ಶ್ರೀಗಳು ಲಿಂಗೈಕ್ಯರಾದರು.

ಹೊಸ ಹುಬ್ಬಳ್ಳಿಯ ಸ್ಥಾಪನೆ

ಜಗದ್ಗುರುಗಳ ಶಾಪದ ಪರಿಣಾಮವಾಗಿಯೋ ಏನೋ ಬಸಪ್ಪ ಶೆಟ್ಟರು ಹಾಗೂ ಅವರ ಸೋದರಮಾವ ಕಲ್ಯಾಣ ಶೆಟ್ಟರ ನಡುವೆ ಭಿನ್ನಾಭಿಪ್ರಾಯ ಬೆಳೆದು ಘರ್ಷಣೆ ಶುರುವಾಯಿತು. ಹೀಗೆ ಘರ್ಷಣೆ ತಾರಕಕ್ಕೇರಿದಾಗ ಬಸಪ್ಪ ಶೆಟ್ಟರು ಮಾವನ ಮನೆ ತ್ಯಜಿಸಿ ಅಣ್ಣ ಮುದಿಯಪ್ಪನೊಂದಿಗೆ ಬೇರೆಡೆ ನೆಲೆಯೂರುವ ತೀರ್ಮಾನ ಕೈಕೊಂಡರು. ಗೋಪನಕೊಪ್ಪ ಎಂಬ ಹುಬ್ಬಳ್ಳಿ ಬಳಿಯ ಗ್ರಾಮಕ್ಕೆ ಬಂದರು.

ಗುರುಲಿಂಗಜಂಗಮರನ್ನು ಹೊರತುಪಡಿಸಿ ಬೇರೆ ಯಾರಿಗೂ ತಲೆಬಾಗದ ವ್ರತಕ್ಕೆ ಬದ್ಧರಾದ ಬಸಪ್ಪ ಶೆಟ್ಟರು ತಮಗೆ ನೆಲೆಗೊಳ್ಳುವುದಕ್ಕೆಂದು ಸವಣೂರ ಸಂಸ್ಥಾನದ ನವಾಬ ಅಬ್ದುಲ್ ಮಜೀದಖಾನ್ ಸಾಹೇಬರಿಂದ ಸ್ಥಳ ಪಡೆಯಲು ನಿರ್ಧರಿಸಿದರು. ಮಜೀದ ಸಾಹೇಬರು ಬಸಪ್ಪ ಶೆಟ್ಟರ ಧರ್ಮ ಪರಾಯಣತೆ ಹಾಗೂ ಯಾರಿಗೂ ತಲೆ ಬಾಗದಿರುವ ಛಲದ ಪರಿಚಯವಿದ್ದುದರಿಂದ ಹೇಗಾದರೂ ಮಾಡಿ ತಮಗೆ ಅವರನ್ನು ತಲೆಬಾಗುವಂತೆ ಮಾಡಲು ಗಿಡ್ಡನೆಯ ಪ್ರವೇಶದ್ವಾರ ನಿರ್ಮಿಸಿ ಬಾಗಿಲದಾಚೆ ಕುಳಿತುಕೊಂಡರು. ಬಸಪ್ಪ ಶೆಟ್ಟರು ಮಜೀದ ಸಾಹೇಬರನ್ನು ಕಾಣಲು ಬರುತ್ತಿದ್ದ ಹಾಗೆಯೇ ಗಟ್ಟಿಯಾಗಿ ನಿರ್ಮಿಸಲಾಗಿದ್ದ ಪ್ರವೇಶದ್ವಾರ ಗೋಡೆ ಇಟ್ಟಿಗೆಗಳು ತನ್ನಿಂತಾನೇ ಕುಸಿದುಬಿದ್ದು, ಬಸಪ್ಪ ಶೆಟ್ಟರು ತಮ್ಮ ಪದ್ಧತಿಯಂತೆ ತಲೆಬಾಗದೇ ಎದೆಯುಬ್ಬಿಸಿಕೊಂಡು ನವಾಬರ ಭೆಟ್ಟಿಗೆ ಬರುವುದಕ್ಕೆ ಹಾದಿಯುಂಟಾಯಿತು. ಈ ಘಟನೆಯಿಂದ ಮಜೀದ ಸಾಹೇಬರು ಆಶ್ಚರ್ಯಚಕಿತರಾಗಿ ಒಳಗೊಳಗೆಯೇ ಭಯಪಟ್ಟರೂ ಬಸಪ್ಪ ಶೆಟ್ಟರಿಗೆ ಮಾಂಸಮದ್ಯವುಳ್ಳ ಹರಿವಾಣದ ಮೇಲೆ ಆಕರ್ಷಕ ರೇಶಿಮೆ ವಸ್ತ್ರದ ಆಚ್ಛಾದನೆ ಮಾಡಿಸಿ ಸಮರ್ಪಿಸಿ ಇನ್ನೊಂದು ಪರೀಕ್ಷೆಯನ್ನೊಡ್ಡಿದರು. ಶೆಟ್ಟರು ಅವುಗಳ ಮೇಲೆ ತಮ್ಮ ದೃಷ್ಟಿಬೀರಿದನಂತರ ಆಚ್ಛಾದನೆ ತೆಗೆದು ನೋಡಿದಾಗ ಹರಿವಾಣದ ತುಂಬ ಫಲ, ಪುಷ್ಪಗಳಿದ್ದುದು ಕಂಡು ಬಂದಿತ್ತು. ಇನ್ನೂ ಹೆಚ್ಚು ಭಯಗ್ರಸ್ತರಾದ ನವಾಬ ಮಜೀದ ಸಾಹೇಬರು ಬಸಪ್ಪ ಶೆಟ್ಟರಿಗೆ ಹಳೇ ಹುಬ್ಬಳ್ಳಿಗೆ ಹೊಂದಿದ ಈಗಿನ ಹೊಸ ಹುಬ್ಬಳ್ಳಿ ಪ್ರದೇಶವನ್ನು ಅಂದರೆ ಮಸಣಗಟ್ಟಿಭಾಗವನ್ನು ನಗರ ನಿರ್ಮಾಣಕ್ಕೆಂದು ಕೊಡಮಾಡಿದರು. ಬಸಪ್ಪ ಶೆಟ್ಟರು ಅದೇ ಸ್ಥಳದಲ್ಲಿ ಮೊದಲಿಗೆ ತಮ್ಮ ಗುರುಗಳಿಗಾಗಿ ಒಂದು ಮಠ (ಹೊಸಹುಬ್ಬಳ್ಳಿ ಅಕ್ಕಿಹೊಂಡದ ಶೆಟ್ಟರ ಮಠ ಅಥವಾ ಈಗಿನ ಹೊಸಮಠ) ನಿರ್ಮಿಸಿ ತಮ್ಮ ನಿವಾಸ ಹಾಗೂ ಹಿರೇಪೇಟೆಯ ವ್ಯಾಪಾರದ ಮುಖ್ಯ ಮಾರುಕಟ್ಟೆ ನಿರ್ಮಿಸಿದರು. ವಿಶಾಲಭೂಮಿ ನೀಡಿದ ಸವಣೂರ ನವಾಬ ಮಜೀದಖಾನ ಸಾಹೇಬರಿಗೆ ಕೃತಜ್ಞತೆ ಸಲ್ಲಿಸಲು ಹೊಸಹುಬ್ಬಳ್ಳಿಯ ಮೊದಲ ನಿರ್ಮಾಣದ ಭಾಗಕ್ಕೆ ಮಜೀದಪುರವೆಂದೇ ಹೆಸರಿಸಿದರು. ಶ್ರೀಜಗದ್ಗುರು ಮೂರುಸಾವಿರಮಠದ ವಿಕಾಸಕ್ಕೂ ಕ್ರಮ ಕೈಕೊಂಡರು.

ಈ ಐತಿಹಾಸಿಕ ಮನೆತನದ ಶಂಕ್ರಪ್ಪ ಶೆಟ್ಟರ ನಿವಾಸದಲ್ಲೇ ಇದ್ದುಕೊಂಡು ಶಿಕ್ಷಣ ಮುಂದುವರೆಸಹತ್ತಿದ ಮಿಶ್ರಿಕೋಟೆಯ ಶಿವಪ್ಪ ಶಿವಮೂರ್ತೆಪ್ಪ ಶೆಟ್ಟರ ಈ ಯುವಕ ಮನೆಯ ಯಜಮಾನರಾಗಿದ್ದ ಶಂಕ್ರಪ್ಪ ಶಿವಪ್ಪ ಶೆಟ್ಟರ ವಕೀಲರ ಹಾಗೂ ಅವರ ಪತ್ನಿ ನೀಲಮ್ಮ ಹಾಗೂ ಮನೆಯಲ್ಲಿಯ ಹಿರಿ-ಕಿರಿಯರ ವಿಶ್ವಾಸಗಳಿಸಿದ್ದರು. ಜನರೆಲ್ಲರ ಹೃದಯದಲ್ಲಿ ಪ್ರೀತಿ ಅಂತಃಕರಣದ ವಸ್ತುವಾಗಿ ಶಾಶ್ವತ ಸ್ಥಾನ ಪಡೆದಿದ್ದ ಶಂಕ್ರಪ್ಪ ಶೆಟ್ಟರು ತಮ್ಮ ವಕೀಲಿ ಜೊತೆಯಲ್ಲೇ ಆನುವಂಶಿಕವಾಗಿ ಬಂದ ಶೆಟ್ಟಿತನ ಪೊಲೀಸ ಪಾಟೀಲಕೀ ಹೊಣೆಗಳನ್ನು ನಿರ್ವಹಿಸುತ್ತಿದ್ದರಲ್ಲದೇ ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಸದಾಶಿವರ ಜನನ - ಬಾಲ್ಯ- ಶಿಕ್ಷಣ

ಶಂಕ್ರಪ್ಪ ಶೆಟ್ಟರು ಹಾಗೂ ನೀಲಮ್ಮ ದಂಪತಿಯ ಜ್ಯೇಷ್ಠ ಪುತ್ರರಾಗಿ ಸದಾಶಿವ ಶೆಟ್ಟರು 1932 ಎಪ್ರಿಲ್ 4 ರಂದು ನೀಲಮ್ಮನವರ ತವರುಮನೆ ಹುಬ್ಬಳ್ಳಿ ತಾಲೂಕ ಶಿರಗುಪ್ಪಿ ಗ್ರಾಮದ ನಾಗರಹಳ್ಳಿಯವರ ನಿವಾಸದಲ್ಲಿ ಜನಿಸಿದರು. ಶಂಕ್ರಪ್ಪ ಶೆಟ್ಟರ -ನೀಲಮ್ಮ ದಂಪತಿ ಶ್ರೀಶಿವಪ್ಪ ಶೆಟ್ಟರನ್ನು ತಮ್ಮ ಒಡಹುಟ್ಟಿದ ಮಗನಂತೆಯೇ ತಿಳಿದು ಪ್ರೀತಿ ಮಾಡುತ್ತಿದ್ದರಲ್ಲದೇ ಅವನ ಓದಿಗೂ ಪ್ರೋತ್ಸಾಹಿಸುತ್ತಿದ್ದರು. ಹಾಗೆಯೇ ಆತನಲ್ಲಿ ಧಾರ್ಮಿಕ ಸಂಸ್ಕಾರ, ನೀತಿನಿಯತ್ತು, ಸತತೋದ್ಯೋಗ, ಸಮಾನತೆ ದೃಷ್ಟಿ ಇವುಗಳೆಲ್ಲ ಬೇರೂರುವಂತೆ ಮಾಡುತ್ತಿದ್ದರು.

ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ಸದಾಶಿವರು ಅಣ್ಣನೊಂದಿಗೆ ಹೀಗೆ ದೇವಸ್ಥಾನ, ಮಠಗಳ ಸಂದರ್ಶನ, ತಾಯಿ-ತಂದೆಯ ಮಾರ್ಗದರ್ಶನದಲ್ಲಿ ದೇವರನಾಮ, ಸಂಸ್ಕೃತ ಶ್ಲೋಕ ಹಾಗೂ ಶರಣರ ವಚನ, ದಾಸರ ಪದಗಳನ್ನು ಹಾಡಿಕೊಂಡಿರುವುದು. ಈ ರೀತಿಯ ದಿನಚರಿಯಿಂದಾಗಿ ಸದಾಶಿವನು ಶಾಲಾರಂಭಕ್ಕೆ ಮೊದಲೇ ಉತ್ತಮ ಸಂಸ್ಕಾರ ಹೊಂದುವಂತಾಗಿತ್ತು. ಶಾಲೆಯಲ್ಲಿ ಇದರಿಂದಾಗಿ ಸದಾಶಿವನು ಒಳ್ಳೆ ಪ್ರತಿಭಾವಂತನೆಂದು ಹೆಸರು ಪಡೆದು ಶಿಕ್ಷಕರ ಹಾಗೂ ಸಹಪಾಠಿಗಳ ಅಚ್ಚುಮೆಚ್ಚಿನವನಾದನು. ಆಗ ಅತ್ಯುತ್ತಮ ಸಾಂಪತ್ತಿಕ ಸ್ಥಿತಿಯುಳ್ಳ ಹಾಗೂ ಹೊಸ ಹುಬ್ಬಳ್ಳಿ ನಿರ್ಮಾಪಕ ಬಸಪ್ಪ ಶೆಟ್ಟರ ಮನೆತನದವನೆಂಬ ಹೆಗ್ಗಳಿಕೆಯ ಹಿನ್ನೆಲೆಯಿದ್ದರೂ ತಂದೆ ತಾಯಿಗಳೇ ಸ್ವತಃ ಯಾವಾಗಲೂ ಅಂಥ ದುರಭಿಮಾನವನ್ನು ಎಂದೂ ಹೊಂದಿರಲಿಲ್ಲವಾದ್ದರಿಂದ ಬಡವರ ಬಗ್ಗೆ ಕಳಕಳಿ ಅಂತಃಕರಣ, ಅವರ ನೆರವಿಗೆ ಧಾವಿಸುವ ಮನೋಭಾವ ಹಾಗೂ ಸಮಾನತೆಯ ನಡವಳಿಕೆ ಇವು ಶೆಟ್ಟರ ಮನೆತನದ ಪರಂಪರೆಯೇ ಆದುದರಿಂದ ಸದಾಶಿವನೂ ಶಾಲೆಯಲ್ಲಿ ಬಡ ಹುಡುಗರಿಗೆ ತನ್ನದೆಂಬುದೆಲ್ಲವನ್ನೂ ಉದಾರವಾಗಿ ಕೊಟ್ಟು ಅವರ ಸಮಸ್ಯೆಗಳನ್ನು ಬಗೆಹರಿಸುತ್ತ ಬೆಳೆಯ ಸಿರಿಯನ್ನು ಮೊಳಕೆಯಲ್ಲಿ ನೋಡು ಎಂಬ ಗಾದೆಯ ತರಹ ತನ್ನ ಮುಂದಿನ ಜನಸೇವಾನಿಷ್ಠ ಜೀವನದ ಮೊದಲ ಕಿರಣ ಬೀರುತ್ತಲಿದ್ದ. [illegible]ಕ್ಕೆ ಮೊದಲೇ [illegible] ಅನೇಕರಿಗೆ ಆಶ್ರಯ ತಾಣವಾದ ಶೆಟ್ಟರ ಮನೆಯಲ್ಲಿ ಅವನ ತಾಯಿ ಶರಣೆ ನೀಲಮ್ಮ ಸದಾಶಿವನೊಂದಿಗೆ ಮನೆಗೆ ಆಗಾಗ ಬರುತ್ತಿದ್ದ ಅವನ ದೊಡ್ಡ ಸ್ನೇಹಿತ ವರ್ಗಕ್ಕೆ ಉಪಯೋಗವಾಗುವ ಪಠ್ಯಪುಸ್ತಕ, ಬರೆಯುವ ಹಾಳೆ ಮೊದಲಾದವುಗಳನ್ನು ನೀಡಿ ಉತ್ತಮವಾದ ಸಾಂಸ್ಕೃತಿಕ ಹಿನ್ನೆಲೆ ಅವರೆಲ್ಲರಿಗೆ ಸಿಗುವಂತೆ ಉಪದೇಶಿಸುತ್ತಿದ್ದಳು. ಎಲ್ಲರೂ ತನ್ನ ಮಕ್ಕಳೇ. ಸದಾಶಿವನಿಗಿಂತ ಯಾರೂ ಭಿನ್ನರಲ್ಲ ಎನ್ನುವ ಹಾಗೆ ಆ ತಾಯಿ ತನ್ನ ಪ್ರೀತಿಯ ಅಮೃತಧಾರೆಯನ್ನು ಎಲ್ಲರ ಮೇಲೆ ಹರಿಯಿಸುತ್ತಿದ್ದಳು.

ಹೀಗೆ ಇವರ ಕುಟುಂಬ ಸುಖ ಸಂತೋಷದಲ್ಲಿ ವಿಹರಿಸುತ್ತಿದ್ದ ಹಾಗೆಯೇ ನೀಲಮ್ಮ ಎರಡನೇ ಮಗು ಬಸವರಾಜನಿಗೆ ಒಂಬತ್ತು ವರ್ಷಗಳ ನಂತರ ಜನ್ಮ ನೀಡಿದಳು. ಮನೆಯಲ್ಲಿ ಸಂಭ್ರಮ, ಔದಾರ್ಯ ಇನ್ನೂ ಹೆಚ್ಚಿದವು.

ಸಾತ್ವಿಕ ಪರಿಸರ

ಬೆಚ್ಚಗಿನ ಮನೆ, ವೆಚ್ಚಕ್ಕೆ ಹೊನ್ನು ಇಚ್ಛೆಯನರಿವ ಸತಿ ಎಂದು ಸರ್ವಜ್ಞ ಹೇಳುವ ಎಲ್ಲವೂ ಇದ್ದುದರಿಂದ ಶಂಕ್ರಪ್ಪನವರ ಜೀವನವೂ ಸ್ವರ್ಗಕ್ಕಿಂತ ಮಿಗಿಲೆಂಬ ರೀತಿ ಸುಖಮಯವಾಗಿತ್ತು. ಜ್ಯೇಷ್ಠ ಪುತ್ರ ಸದಾಶಿವನು ಆಟಪಾಠಗಳಲ್ಲಿ ಎಲ್ಲರಿಗಿಂತ ಮುಂದಾಗಿ ಪ್ರತಿಭಾನ್ವಿತನೆನಿಸಿ ಮುಂದುವರೆಯುತ್ತಿದ್ದ. ಎರಡನೆಯ ಮಗ ಶಿಶು ಬಸವರಾಜನೂ ಬೆಳೆಯತೊಡಗಿದ್ದ. ಶಿವಮೂರ್ತೆಪ್ಪ ಶೆಟ್ಟರರ ಹಿರಿಯ ಪುತ್ರ ಶಿವಪ್ಪನು (ಸದ್ಯದ ರಾಜ್ಯ ಸಂಪುಟದ ಸಚಿವ ಜಗದೀಶ ಶೆಟ್ಟರ ತಂದೆ) ಪ್ರಾರಂಭಿಕ ಪ್ರಾಥಮಿಕ ಶಿಕ್ಷಣವನ್ನು ತನ್ನೂರು ಮಿಶ್ರಿಕೋಟಿಯಲ್ಲಿ ಪೂರೈಸಿ ಹೊಸ ಹುಬ್ಬಳ್ಳಿ ಹಿರೇಪೇಟೆಯಲ್ಲಿ ತಮ್ಮ ತಾಯಿಯ ಸಂಬಂಧಿಕರಾದ ಶೆಟ್ಟರ ಮನೆತನದ ಚಂದ್ರಮ್ಮ ಎಂಬುವರಲ್ಲಿ ಇದ್ದುಕೊಂಡು ಮುಲ್ಕಿ ಪರೀಕ್ಷೆ ಪಾಸಾದರು. ನಂತರ ಹೈಸ್ಕೂಲ ಮೂರನೆಯ ಈಯತ್ತೆಯವರೆಗೆ ಶಿವಪ್ಪ ಶೆಟ್ಟರಿಗೆ ಆಶ್ರಯ ಮುಂದುವರೆಸಿದ ಚಂದ್ರಮ್ಮ ತನಗೆ ಮುಂದೆ ಈ ರೀತಿ ನೆರವಾಗಲು ಸಾಧ್ಯವಾಗುವುದಿಲ್ಲವೆಂದು ಕಷ್ಟ ತೊಂದರೆಗಳನ್ನು ವ್ಯಕ್ತಪಡಿಸಿದಳು. ಆಗ ಸದಾಶಿವ ಶೆಟ್ಟರ ಮಲ ಅಜ್ಜಿ ಈರಮ್ಮ ತನ್ನದೇ ಆದ ತಾಡಪತ್ರಿ ಗಲ್ಲಿಯ ತಮ್ಮ ಮನೆಯಲ್ಲಿದ್ದು ಶಿವಪ್ಪನು ಕಲಿಯಲೆಂದು ಆಹ್ವಾನಿಸಿದಳು. ಆವಳ ಮಧ್ಯಸ್ಥಿಕೆಯಿಂದಾಗಿ ಶಿವಪ್ಪನವರು ಶಂಕ್ರಪ್ಪ ಶೆಟ್ಟರ ಅವರ ಮನೆಯ ಆಶ್ರಿತರಾಗಿ ತಮ್ಮ ಮ್ಯಾಟ್ರಿಕ್ ಹಾಗೂ ನಂತರದ ಬಿ.ಎ ಪದವಿ ಶಿಕ್ಷಣ ಹಾಗೂ ಎಲ್‌ಎಲ್‌ಬಿ ವಕೀಲಿ ಶಿಕ್ಷಣ ಪಡೆಯುವಂತೆಯೂ ಶಂಕ್ರಪ್ಪ ಶೆಟ್ಟರ ಅವರ ಮನೆತನದ ಒಂದು ಅವಿಭಾಜ್ಯ ಅಂಗವಾಗಿ ಮನೆತನ ಎಲ್ಲ ವ್ಯವಹಾರಗಳನ್ನು ಸಂಭಾಳಿಸುವ ಹಿರಿಯ ಮೇಲ್ವಿಚಾರಕನಾಗಿರುವಂತಾಯಿತು.

ಶಂಕ್ರಪ್ಪ ಶೆಟ್ಟರ ವಕೀಲರು ನಿಧನಹೊಂದಿದಾಗ ಅವರ ಹಿರಿಯ ಮಗ ಸದಾಶಿವನಿಗೆ ಸುಮಾರು ಹತ್ತು ವರ್ಷ ವಯಸ್ಸಿದ್ದರೆ ಎರಡನೆಯ ಮಗ ಬಸವರಾಜ ಕೇವಲ ಎರಡು ವರ್ಷದ ಹಸುಳೆ. ತರುಣಿ ತಾಯಿ ನೀಲಮ್ಮನ ಮಾರ್ಗದರ್ಶನದಲ್ಲಿ ಇಬ್ಬರಿಗೂ ಅಜ್ಜ, ತಾಯಿ, ತಂದೆ ಎಲ್ಲವೂ ಆಗಿ ಲಾಲನೆ ಪಾಲನೆಗೈಯತೊಡಗಿದರು.

ಸದಾಶಿವ ಶೆಟ್ಟರನ್ನು ಅವರ ತಂದೆಯವರು ತಾಡಪತ್ರಿ ಗಲ್ಲಿಯಲ್ಲಿ ತಮ್ಮ ಮನೆಗೆ ಸನಿಹದಲ್ಲಿಯ ಶ್ರೀಮೂರುಸಾವಿರ ಮಠದ ಎದುರಿನ (ಈಗ ಮಠದ ಆವಾರದಲ್ಲಿದೆ) ಕನ್ನಡ ಮಾದರಿಯ ಶಾಲೆಗೆ ಸೇರಿಸಿದ್ದರು. ಆದರೆ ಶೆಟ್ಟರಿಗೆ ತಾಯಿಯೇ ಮೊದಲ ಗುರು. ಮನೆಯೆ ಮೊದಲ ಪಾಠಶಾಲೆಯಾಗಿತ್ತು. ತಾಯಿ ನೀಲಮ್ಮ ಹಾಗೂ ತಂದೆ ಶಂಕ್ರಪ್ಪನವರು ಶಿಶುವಿದ್ದಾಗಲೇ ಅವನಿಗೆ ಆಧ್ಯಾತ್ಮಿಕ ಸಾತ್ವಿಕ ವಾತಾವರಣದಲ್ಲಿ ಭಕ್ತಿಪೂರಿತ ಪರಿಸರ ನಿರ್ಮಿಸಿ ಮನವನ್ನು ಹದಗೊಳಿಸುತ್ತ ಬಂದಿದ್ದರಿಂದ ಸದಾಶಿವನು ಪ್ರತಿನಿತ್ಯ ಮನೆಯ ಮುಂದಿನ ಬಸವಣ್ಣದೇವರ ಗುಡಿ ಹಾಗೂ ಶ್ರೀಮೂರುಸಾವಿರಮಠಕ್ಕೆ ಹೋಗಿ ಕರ್ತೃ ಗುರುಸಿದ್ಧೇಶ್ವರ ಸಮಾಧಿ, ಗದ್ದುಗೆ ದರ್ಶನ ಪಡೆದು ಭಕ್ತಿ ಪುರಸ್ಸರ ಸೇವೆ ಸಲ್ಲಿಸಿ ತನ್ನ ದೈನಂದಿನ ಚಟುವಟಿಕೆ ಪಾಠ ಆಟಗಳಿಗೆ ತೊಡಗುವಂತೆ ತಂದೆ ತಾಯಿ ಕಲಿಸಿದ್ದರು.

ಸದಾಶಿವ ಶೆಟ್ಟರು ಪ್ರಾಥಮಿಕ ಶಿಕ್ಷಣ ಮುಗಿಸಿ ಆಗ ಹುಬ್ಬಳ್ಳಿ ಚಮರಿಪೇಟೆಯ ಬಳಿಯಿದ್ದ ತುಮಕೂರ ಗಲ್ಲಿಯ ಸಿಟಿ ಹೈಸ್ಕೂಲ ನಂತರ ಲ್ಯಾಮಿಂಗ್ಟನ್ ಹೈಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉನ್ನತ ಅಂಕಗಳೊಡನೆ ಉತ್ತೀರ್ಣರಾದರು. ಧಾರವಾಡ ಕರ್ನಾಟಕ ಕಾಲೇಜಿನಲ್ಲಿ

ಇಂಟರ್‌ಮಿಡಿಯೇಟ್ ಪರೀಕ್ಷೆ ಪಾಸಾಗುವ ತನಕ ಇದ್ದು, ನಂತರ ತಾಯಿ ನೀಲಮ್ಮನವರ ಇಚ್ಛೆಯಂತೆ ವಕೀಲರಾಗಿ ತಂದೆಯ ಸ್ಥಾನ ತುಂಬುವ ಸಲುವಾಗಿಯೇ ಬೆಳಗಾವಿ ಆರ್.ಎಲ್. ಲಾ ಕಾಲೇಜಿನಲ್ಲಿ ಎಲ್.ಎಲ್.ಬಿ ಪರೀಕ್ಷೆಗಾಗಿ ಸೇರಿ ಕಾನೂನು ಅಧ್ಯಯನ ಮಾಡತೊಡಗಿದರು. ಪ್ರತಿಭಾವಂತ ವಿದ್ಯಾರ್ಥಿಯಾಗಿ, ವಿದ್ಯಾರ್ಥಿ ಧುರೀಣನಾಗಿ ಅವರು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಎಲ್.ಎಲ್.ಬಿ ಪಾಸಾಗುವ ತನಕ ಹೋರಾಟಮಯ ಜೀವನ ನಡೆಸಿದರು. ಮಾಜಿ ಮುಖ್ಯಮಂತ್ರಿ ಶ್ರೀ ಎಸ್.ಆರ್.ಬೊಮ್ಮಾಯಿ ಹಿರಿಯ ಪತ್ರಕರ್ತ ಪ್ರೊ. ಬಾಬು (ಜಿ.ಬಿ.) ಬೆಂಡಿಗೇರಿಯವರು ಸದಾಶಿವ ಶೆಟ್ಟರ ಸಹಾಧ್ಯಾಯಿಗಳಲ್ಲಿದ್ದರು. ಸದಾಶಿವ ಶೆಟ್ಟರು ಅಧ್ಯಯನದಲ್ಲಿ ತಕ್ಕರಾಗಿರುವುದರ ಜೊತೆಗೆ ಆಗಿನ ಸಾಮಾಜಿಕ- ರಾಜಕೀಯ ಸ್ಥಿತಿ ಹಾಗೂ ಸಮಸ್ಯೆಗಳ ಬಗ್ಗೆ ಚಿಂತಿಸುತ್ತಿದ್ದುದನ್ನು ಹಾಗೂ ಅವರಲ್ಲಿ ಧುರೀಣತ್ವದ ಗುಣ ಆಗಲೇ ಕಾಣುತ್ತಿದ್ದುದನ್ನು ಪ್ರೊ.ಜಿ.ಬಿ. ಬೆಂಡಿಗೇರಿ ನೆನೆಯುತ್ತಾರೆ. ವಿದ್ಯಾರ್ಥಿಗಳ ಬೇಡಿಕೆ ಅವರಿಗೆ ಆಗುತ್ತಿದ್ದ ಅನ್ಯಾಯದ ವಿರುದ್ಧ ಯಾವಾಗಲೂ ಧ್ವನಿಯೆತ್ತುವವರಾಗಿದ್ದರು. ಪಠ್ಯದಲ್ಲಿ ಅಷ್ಟೇ ಅಲ್ಲದೇ ಪಠ್ಯೇತರ ಚಟುವಟಿಕೆಗಳಲ್ಲಿ, ಕ್ರೀಡೆ ಹಾಗೂ ಭಾಷಣ, ಕವನ-ಲೇಖನಗಳ ಬರೆಯುವಿಕೆ ಇವುಗಳಲ್ಲೂ ಮುಂದಿರುತ್ತಿದ್ದರು. ಆಗಿನ ಕಾಂಗ್ರೆಸ್ ಹಾಗೂ ಬ್ರಾಹ್ಮಣೇತರ ಸಂಘಟನೆಗಳ, ಕಮ್ಯುನಿಸ್ಟ, ಸಮಾಜವಾದಿ ಮತ್ತಿತರ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಲಿದ್ದ ಸದಾಶಿವರು ತಮ್ಮ ಪಠ್ಯೇತರ ಓದಿನ ಹಿನ್ನೆಲೆಯಲ್ಲಿ ಸಮತೋಲನದ ನಿರ್ಣಯ ತೆಗೆದುಕೊಂಡು ಇತರ ಮಿತ್ರರನ್ನೂ ತಮ್ಮ ಜೊತೆ ಮುಂದಕ್ಕೆ ತೆಗೆದುಕೊಂಡು ಕ್ರಿಯಾಶೀಲಗೊಳಿಸುತ್ತಿದ್ದುದರಿಂದ ಎಲ್ಲ ಪಕ್ಷ ಹಾಗೂ ಬೇರೆ ಬೇರೆ ವಿಚಾರಧಾರೆಯವರಿಗೆ ತಮ್ಮವ ಎಂಬ ಭಾವನೆ ಮೂಡುತ್ತಿತ್ತು. ಇದುವೇ ವಕೀಲರಾದ ಬಳಿಕ ಸಹ ಸಾಮಾಜಿಕ ಸೇವೆ, ಮುಂದುವರೆದು ರಾಜಕೀಯ ಕ್ಷೇತ್ರ ಅವರನ್ನು ಸೆಳೆದುಕೊಳ್ಳಲು ಕಾರಣವಾಯಿತು.

ಸದಾಶಿವ ಶೆಟ್ಟರು ವಕೀಲರಾಗಿ ಬಂದೊಡನೆ ಅವರ ತಂದೆಯವರು ವಕಾಲತ್ತು ಆರಂಭಿಸುವಾಗ ಹಾಕಿದ ಬೋರ್ಡಿಗೆ ಮತ್ತಷ್ಟು ಅರ್ಥ ಬಂದಿತೆಂದು ಅವರ ತಾಯಿ ನೀಲಮ್ಮ ಈ ಹಿಂದೆ ಶಿವಪ್ಪ ಶಿವಮೂರ್ತೆಪ್ಪ ಶೆಟ್ಟರ ಅವರ ಇಚ್ಛೆಯಂತೆ ವಕೀಲರಾಗಿ ಬಂದಾಗಿನ ಸಂದರ್ಭ ನೆನೆದು ತಮ್ಮ ಪತಿ ಹಾಕಿದ ಬೋರ್ಡಿಗೆ ಕುಂದಿಲ್ಲವೆಂದು ಇನ್ನೂ ಹೆಚ್ಚು ಆನಂದಪಟ್ಟರು.

ಸದಾಶಿವ ಶೆಟ್ಟರು ಕ್ರಿಮಿನಲ್ ಪ್ರಕರಣಗಳನ್ನು ಹಿಡಿದು ಅಪರಾಧಿಗಳಲ್ಲದವರಿಗೆ ಶಿಕ್ಷೆ ದಂಡಗಳಿಂದ ಬಚಾವ್ ಮಾಡುತ್ತಿದ್ದರು. ಸಿವಿಲ್ ಹಾಗೂ ಕೌಟುಂಬಿಕ ವ್ಯಾಜ್ಯಗಳಲ್ಲಿಯ ವಕಾಲತ್ತಿನಲ್ಲಿ ಹಾಗೂ ಉಭಯ ಪಕ್ಷಗಳವರಿಗೆ ಬುದ್ಧಿವಾದ ಹೇಳಿ ಕೌಟುಂಬಿಕ ಸಂಬಂಧಗಳು ಮುರಿದು ಹೋಗದಂತೆ ಉಭಯತರಿಗೂ ನ್ಯಾಯ ಸಿಗುವಂತೆ ಇತ್ಯರ್ಥಗೊಳಿಸುವಲ್ಲಿ ನಿಷ್ಣಾತರಾಗಿರುವವರು. ಅಣ್ಣ ತಮ್ಮಂದಿರಿಬ್ಬರದೂ ಭರ್ಜರಿ ವಕೀಲಿ. ಆದರೆ ಇಬ್ಬರೂ ಬರುವ ಆದಾಯಕ್ಕಿಂತ ಬಡ ಪಕ್ಷಕಾರರಿಗೆ ಕೊಡುವುದೇ ಹೆಚ್ಚು. ಯಾಕೆಂದರೆ ಶಿವಪ್ಪನವರಾಗಲೀ ಸದಾಶಿವಪ್ಪನವರಾಗಲೀ ಇಬ್ಬರೂ ಬೆಣ್ಣೆಮುದ್ದೆಯಂಥ ಹೃದಯದ ಮಹಾದೇವರೇ ಅಲ್ಲವೇ.

ಸದಾಶಿವ ಶೆಟ್ಟರ ಹುಟ್ಟಿದೂರು ಹುಬ್ಬಳ್ಳಿ ತಾಲೂಕ ಶಿರಗುಪ್ಪಿ. ಅವರ ತಾಯಿಯ ತವರುಮನೆ ಶಿರಗುಪ್ಪಿಯಲ್ಲಿ ನಾಗರಹಳ್ಳಿಯವರದು. ಅವರ ಮನೆಗೆ ಸಮೀಪದಲ್ಲೇ ಮೆಣಸಿನಕಾಯಿ ಗುರುಸಿದ್ದಪ್ಪವರ ಮನೆ. ಉಭಯ ಮನೆತನಗಳೂ ಶ್ರೀಮಂತಿಕೆಯುಳ್ಳವು. ಮೆಣಸಿನಕಾಯಿ ಗುರುಸಿದ್ದಪ್ಪನವರ ಪುತ್ರಿ ಪುರದವ್ವಳನ್ನು ಸದಾಶಿವರು ಒಲಿದು ಮದುವೆಯಾಗಬಯಸಿದರು. 1958ರಲ್ಲಿ ಸದಾಶಿವರ ಮದುವೆ ಜರುಗಿತು.

ಕಾಂಗ್ರೆಸ್ಸಿನಲ್ಲಿ

ಸದಾಶಿವ ಶೆಟ್ಟರ ಆತ್ಮೀಯ ಗೆಳೆಯ ಗೋಪಿನಾಥ ಸಾಂಡ್ರಾ (ಮಾಜಿ ಮಂತ್ರಿ) ಅವರು. ಇಬ್ಬರ ಮನೆಗಳು ಸಹ ತೀರ ಹತ್ತಿರ. ಸಾಂಡ್ರಾ ಅವರ ತಂದೆ ರಂಗಸ್ವಾಮಿಯವರು ಹರ್ಡೀಕರ-ದಿವಾಕರ-ಹುಕ್ಕೇರಿಕರರ ನಿಕಟ ಸಂಪರ್ಕವಿದ್ದ ಕಾಂಗ್ರೆಸ್ ಕಾರ್ಯಕರ್ತ. ತಂದೆ ಮಗ ಇಬ್ಬರೂ ಸೇವಾದಲದ ಸ್ವಯಂಸೇವಕರು. ಅಪ್ಪಟ ಕಾಂಗ್ರೆಸ್ಸಿಗರು, ಶೆಟ್ಟರ ಮನೆಗೆ ಸಮೀಪದಲ್ಲಿದ್ದ ಇನ್ನೊಬ್ಬ ತರುಣ ವೀರಯ್ಯಸ್ವಾಮಿ ಶಾಸ್ತ್ರಿಮಠನೂ ಕಾಂಗ್ರೆಸ್ ಕಾರ್ಯಕರ್ತ. ಮೇಲಾಗಿ ಶೆಟ್ಟರ ಮನೆತನದ ಬಗ್ಗೆ ಎಲ್ಲರಿಗೂ ಗೌರವ. ಶಂಕ್ರಪ್ಪ ಶೆಟ್ಟರ ಹಾಗೂ ಅವರ ತಂದೆ ಶಿವಪ್ಪ ಶೆಟ್ಟರಿದ್ದಾಗಿನಿಂದಲೂ ಸರ್ ಸಿದ್ದಪ್ಪ ಕಂಬಳಿ, ಹಳ್ಳಿಕೇರಿ ಗುದ್ಲೆಪ್ಪ, ವೆಂಕಟೇಶ ಮಾಗಡಿ, ಹುತಾತ್ಮ ಮಹಾದೇವ ಮೈಲಾರ, ಕ್ರಾಂತಿಕಾರಿ ಶಾಂತಿನಾಥ ಇಂಗಳೆ, ತಿ.ರು. ನೇಸ್ವಿ ಮೊದಲಾದವರು ಈ ಮನೆತನದ ನಿಕಟ ಸಂಪರ್ಕ ಹೊಂದಿದವರು. ಸದಾಶಿವ ಶೆಟ್ಟರು ಈ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನಲ್ಲಿ ಸೇರಿ ಸಮಾಜಸೇವೆ ಮಾಡಬಯಸಿದರು. ಕಾಂಗ್ರೆಸ್‌ನಲ್ಲಿ ಇದ್ದಷ್ಟು ಕಾಲ ಪ್ರಾಮಾಣಿಕತೆಯಿಂದ, ಶ್ರದ್ಧೆಯಿಂದ ಸತತ ಸೇವೆ ಸಲ್ಲಿಸಹತ್ತಿದ ಶೆಟ್ಟರಿಗೆ ತಮ್ಮ ಪಾದರಸ ಸದೃಶ ಕ್ರಿಯಾಶೀಲತೆಗೆ ಕಾಂಗ್ರೆಸ್ ಪಕ್ಷದಲ್ಲಿ ಸಾಕಷ್ಟು ಅವಕಾಶವಿಲ್ಲ, ಕಾಲು ಜಗ್ಗುವ ಪ್ರವೃತ್ತಿ ತರುಣರಿಗೆ ನೇತೃತ್ವವಹಿಸಿಕೊಡಲಾರದ ಹಿರಿಯ ಕಾಂಗ್ರೆಸ್ಸಿಗರನೇಕರ ಅಧಿಕಾರಕ್ಕೆ ಜೋತು ಬೀಳುವ ಸ್ವಭಾವ, ಜಾತೀಯತೆ, ಅಲ್ಪಸಂಖ್ಯಾತರನ್ನು ಮಾತ್ರ ಓಲೈಸುವ ರೀತಿ ಇವುಗಳಾವವೂ ಸದಾಶಿವರಿಗೆ ಸರಿಯೆನಿಸದೇ ಈ ಪಕ್ಷದಲ್ಲೇ ಉಳಿದರೆ ತಾವು ಸಹ ನಿಷ್ಕ್ರಿಯರಾಗಿ ಹತ್ತು ಜನ ಕಾಂಗ್ರೆಸ್ಸಿಗರಲ್ಲಿ ತಾನೊಬ್ಬನಾಗಿ ಮಾತ್ರ ಉಳಿದುಬಿಡಬಹುದೆಂಬ ವಿಚಾರಗಳು ಸುಳಿಯಹತ್ತಿದುವು.

ಮಿತ್ರರೊಡನೆ ಕಾಂಗ್ರೆಸ್ ಹಿರಿಯರೊಡನೆ ಮಾತುಕತೆ ನಡೆಸಿ ತಮ್ಮ ಸಂದೇಹಗಳಿಗೆ ಸಮಾಧಾನ ಪಡೆಯಲು ಸದಾಶಿವ ಶೆಟ್ಟರು ಬಹಳ ಪ್ರಯತ್ನಿಸಿದರಾದರೂ ಕಾಂಗ್ರೆಸ್ಸಿನಲ್ಲಿ ತಮಗೆ ಭವಿಷ್ಯವಿಲ್ಲವೆಂದು ತೀರ್ಮಾನಿಸಿದರು. ಕಾಂಗ್ರೆಸ್ ಪಕ್ಷದೊಳಗಿದ್ದುಕೊಂಡೇ ಬೇರೆ ಬೇರೆ ಕಾಂಗ್ರೆಸ್ಸೇತರ ವೇದಿಕೆಗಳಿಗೆ ಹೋಗಿ ಅವರ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಎಲ್ಲ ಪಕ್ಷಗಳ ಸಿದ್ಧಾಂತಗಳನ್ನು ಆಮೂಲಾಗ್ರವಾಗಿ ಅಧ್ಯಯನ ನಡೆಸಿದರು. ಪ್ರತಿಯೊಂದು ಕಾಂಗ್ರೆಸ್ಸೇತರ ವೇದಿಕೆಯಲ್ಲೂ ಇವರ ವಾಕ್ಚಟುತ್ವ, ಸಿದ್ಧಾಂತ ಪ್ರತಿಪಾದನೆಯ ಶೈಲಿ, ಸತ್ಯ ನಿಷ್ಠುರತೆ, ಬಡ ಹಾಗೂ ಮಧ್ಯಮ ವರ್ಗೀಯರ ಬಗ್ಗೆ, ಅಸ್ಪೃಶ್ಯ, ದೀನ ದಲಿತರನ್ನು ಕುರಿತು ಹೊಂದಿದ ಕಳಕಳಿ, ಪ್ರತಿಯೊಂದು ಜಟಿಲ ಸಮಸ್ಯೆಗೂ ನಿಖರವಾದ ಪರಿಹಾರದ ಸೂಚಿಸುವಿಕೆ ಈ ವೈಶಿಷ್ಟ್ಯಗಳನ್ನು ಕಂಡು ಇವ ನಮ್ಮವ ಇವ ನಮ್ಮವ ಎಂದು ಜನ ಆದರಿಸಹತ್ತಿತು.

ಕ್ರಿಮಿನಲ್ ಮೊಕದ್ದಮೆಗಳ ವಕೀಲರೇ ಆಗಿ ವಿಶೇಷವಾಗಿ ಕಾಣಿಸಿಕೊಂಡು ವಿದ್ವತ್ಪೂರ್ಣ ಪ್ರಭಾವಿ ವಾದಮಂಡನೆ ಮಾಡುವ ಸದಾಶಿವರ ಕಡೆಗೆ ಬಡವರು, ದೀನ ದಲಿತರು, ಅಸ್ಪೃಶ್ಯರು, ಮುಸ್ಲೀಂ, ಕ್ರೈಸ್ತರು ಬಡ ಕೂಲಿಕಾರರು, ರೈತರು ಅಧಿಕ ಸಂಖ್ಯೆಯಲ್ಲಿ ಬರತೊಡಗಿ ಸದಾಶಿವರ ಖ್ಯಾತಿ ಬೆಳೆಯತೊಡಗಿದಂತೆಯೇ ಕೇವಲ ಕಾಂಗ್ರೆಸ್ ಪಕ್ಷದವ ಎಂಬುದರಿಂದಲೇ ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಅಧಿಕ ಲಾಭ ಗಿಟ್ಟಿಸಬಯಸುವ ಉದ್ಯೋಗದ ರಾಜಕಾರಣಿಗಳ ಮನಸ್ಸಿನಲ್ಲಿ ಕಿರಿಕಿರಿ ಹೆಚ್ಚಿತು. ಕಣ್ಣು ಕೆಂಪಾದ ಕೆಲವರು ಶೆಟ್ಟರ ಪಕ್ಷವಿರೋಧಿ

ಚಟುವಟಿಕೆಗಳ ಬಗ್ಗೆ ಮೇಲಿನವರಿಗೆ ತಿಳಿಯುವ ಹತ್ತಿದರು. ಅವರು ಇಂತಹದ್ದೆಲ್ಲವನ್ನೂ ಪ್ರತ್ಯಕ್ಷ ಕಂಡರೂ ಕೇಳಿದರೂ ಯಾವುದೇ ಪ್ರತಿಕ್ರಿಯೆ ತೋರದೇ ತಮ್ಮ ಸೇವೆಯಲ್ಲಿ ತತ್ಪರರಾಗಿ ಚಟುವಟಿಕೆಗಳನ್ನು ಹೆಚ್ಚಿಸಿಕೊಂಡರು.

ಕರ್ನಾಟಕ, ಮಹಾರಾಷ್ಟ್ರ ಗಡಿ ವಿವಾದ ಕುರಿತಾಗಿ ಮಹಾರಾಷ್ಟ್ರ ಸರಕಾರ ಹಾಗೂ ಮಹಾರಾಷ್ಟ್ರದ ಧುರೀಣರ ಧೋರಣೆ ಖಂಡಿಸಲು ನಡೆಯುತ್ತಿದ್ದ ಕಾಂಗ್ರೆಸ್ಸಿಗರ [illegible] ಸಭೆಯೊಂದರಲ್ಲಿ ಕಾಂಗ್ರೆಸ್ ಧುರೀಣರನೇಕರು ಅನವಶ್ಯಕವಾಗಿ ಛತ್ರಪತಿ ಶಿವಾಜಿ ಮಹಾರಾಜರ ಹೆಸರನ್ನು ಎಳೆದು ತಂದು, "ಕರ್ನಾಟಕವನ್ನು ಶಿವಾಜಿ ಮಹಾರಾಜ ಅಂದು ಕೊಳ್ಳೆ ಹೊಡೆದಿದ್ದರು. ಸುಲ್ಲಿಗೆ ಮಾಡಿದ್ದರು. [illegible] ಈಗ ನಮ್ಮನ್ನು ಬಿಡಬಾರದು, ಶಿವಾಜಿಯ ಈಗಿನ ಶಿಷ್ಯ ಅನುಯಾಯಿಗಳಿಗೆ ಬೆಳಗಾಂವಿ, ಕಾರವಾರ, ನಿಪ್ಪಾಣಿ, ಬೀದರ ಮೊದಲಾದ ನಮ್ಮ ಭಾಗಗಳನ್ನು ಕಬಳಿಸಲು ಬಿಡದೆ ಸರಿಯಾಗಿ ಬುದ್ಧಿ ಕಲಿಸುತ್ತೇವೆ. ರಕ್ತದ ಹೊಳೆ ಹರಿದರೂ ಚಿಂತೆಯಿಲ್ಲ ಕನ್ನಡದ ನೆಲ-ಜಲ ರಕ್ಷಿಸಿಕೊಳ್ಳುತ್ತೇವೆ" ಎಂದು ಹೇಳುತ್ತ ಶಿವಾಜಿಯನ್ನೇ ದರೋಡೆಕೋರ [illegible] ಎಂಬರ್ಥ ಬರುವಂತೆ ಟೀಕಿಸತೊಡಗಿದರು. ಆಗ ಸಭೆಯಲ್ಲಿ ಕುಳಿತಿದ್ದ ಯುವ ಸಂಘಚಾಲಕರು (ಈ ಗ್ರಂಥದ ಲೇಖಕರು) ಪ್ರಚಂಡವಾಗಿ ಶಿವಾಜಿಯ ವಿರುದ್ಧ ಯಾವುದೇ ಅಪಶಬ್ದವನ್ನು ಬಳಸಬೇಡಿರೆಂದು ಗರ್ಜಿಸಿದರು. [illegible] ಆ ಯುವಕ ವಕ್ತೃತ್ವದಿಂದ ಶಿವಾಜಿಯನ್ನು ಸಮರ್ಥಿಸಿ ಕಾಂಗ್ರೆಸ್ಸಿನ ವಕ್ತಾರರಿಗೆ ಬಾಯಿ ಮುಚ್ಚಲು [illegible] ಹೇಳಿದರು.

ಹೀಗೆಯೇ ಒಂದು ಭಸ್ಮಾಸುರ ಪ್ರಸಂಗ

ಸದಾಶಿವ ಶೆಟ್ಟರ್‌ರು ಹಗಲು ಹನ್ನೆರಡು ತಾಸು ಅಲ್ಲದೇ ಒಮ್ಮೊಮ್ಮೆ ಮಧ್ಯರಾತ್ರಿ ಮೀರಿದರೂ ಜನತೆಯ ದುಃಖ ದುಮ್ಮಾನಗಳ ನಿವಾರಣೆಗೋಸ್ಕರ ಹೋರಾಟಗಾರರಾಗಿ ದುಡಿವ ಕರ್ಮಯೋಗಿಯೆನಿಸಿದರು. ವಕೀಲಿ ವೃತ್ತಿಯಲ್ಲೇ ಇರುತ್ತಿದ್ದ ಅವರ ಈ ಜೀವನದ ರೀತಿ ರಾಜಕೀಯದಲ್ಲಿ ಪ್ರವೇಶಿಸಿದ ಬಳಿಕ ಇನ್ನೂ ಹೆಚ್ಚಾಗಿಯೇ ನಡೆದಿತ್ತು. ಅಣ್ಣ ಶಿವಪ್ಪ ಶೆಟ್ಟರು ಸದಾಶಿವರಿಗೆ ಆಗಾಗ ಆರೋಗ್ಯದ ಕಡೆಗೆ, ಮನೆಯ ವ್ಯವಹಾರಗಳತ್ತ ಲಕ್ಷ್ಯ ಹರಿಸುವಂತೆ, ಸದಾ ಜನಸೇವೆಯಲ್ಲಿ ಶ್ರಮಿಸುತ್ತ ಸ್ವಂತದ ಬದುಕನ್ನು ನಿರ್ಲಕ್ಷ್ಯಿಸದಂತೆ, ಹಿತವಾದ ಹೇಳುವುದರ ಜೊತೆಗೆ ಸಹಾಯ ಯಾಚಿಸಿ ಬರುವಂಥವರ ನಿಜವಾದ ಹಿನ್ನೆಲೆ ಉದ್ದೇಶ ಎರಡನ್ನೂ ಗಮನಿಸಿ ಅವರ ನೆರವಿಗೆ ಧಾವಿಸಬೇಕೆಂದೂ, ಹೊತ್ತು ವೇಳೆಯ ಸಕಾಲಿಕತೆ, ಬಂದ ವ್ಯಕ್ತಿಗಳ ಪ್ರಾಮಾಣಿಕತೆ ಮುಂತಾದ ಇವುಗಳನ್ನು ಗಮನಿಸದೇ ಯಾವಾಗಾದರೂ ಅಂಥವರ ಬೆನ್ನು ಹತ್ತಿ ಹೋಗಿ ಅವರು ಹೇಳಿದಂತೆ ಕೆಲಸಕ್ಕೆ ತೊಡಗುವುದು ತರವಲ್ಲವೆಂದೂ ಬರುವ ಜನರಲ್ಲಿ ಅನೇಕರು ಮೋಸಗಾರರೂ ಸಹ ಇರುತ್ತಾರೆಂದೂ ಆಗಾಗ ಎಚ್ಚರಿಸುತ್ತಲೇ ಇದ್ದರು. ಆದರೂ ಸದಾಶಿವಶೆಟ್ಟರು ಅಣ್ಣನಿಗೆ ಸಲ್ಲಬೇಕಾದ ಗೌರವ ಸಲ್ಲಿಸಿ ಬಿಡುವರು. ದುಃಖಿತರು ನಮ್ಮ ನೆರವಿಗಾಗಿ ಧಾವಿಸಿ ಬರುತ್ತಾರೆ. ಅವರ ನೆರವಿಗೆ ತಕ್ಷಣ ನಾವು ಧಾವಿಸಿ ಕ್ರಿಯಾಶೀಲರಾಗದೇ ಹೋದರೆ ಅವರಿಗೆ ಸಹಿಸಲಸಾಧ್ಯವಾದ ಹಾನಿಯಾಗುವ ಸಂಭವವಿರುತ್ತದೆ. ಅಂಥವರ ನೆರವಿಗೆ ಕೂಡಲೇ ಹೋಗದಿದ್ದರೆ ರಾಜಕೀಯದಲ್ಲಿರುವ ನಾವು ಕರ್ತವ್ಯ ಚ್ಯುತರಾದಂತಾಗುತ್ತದೆ ಎಂದು ಉತ್ತರಿಸಿ ಅಂಥವರ ನೆರವಿಗೆ ಧಾವಿಸುವಲ್ಲಿ ಕ್ರಿಯಾಶೀಲರಾಗುತ್ತಿದ್ದರು.

ಕಾಂಗ್ರೆಸ್‌ನಿಂದ ದೂರ ಸರಿದ ಬಳಿಕ ಶೆಟ್ಟರು ಹೀಗೆ ಅತ್ಯಂತ ಜನಪ್ರಿಯರಾಗಿ ಬೆಳೆದುದನ್ನು ಕಾಂಗ್ರೆಸ್‌ನಲ್ಲಿಯ ಕೆಲವರು ಸಹಿಸಲಿಲ್ಲ. ಆದರೆ ಅವರಿಗೇನನ್ನೂ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಶೆಟ್ಟರನ್ನು ಯಾವುದಾದರೊಂದು ಪೇಚಿನಲ್ಲಿ ಸಿಕ್ಕಿಸಿ ಅವರ ಕ್ರಿಯಾಶೀಲ ಉತ್ಸಾಹಕ್ಕೆ ಕಡಿವಾಣ ಹಾಕಲು ಕೆಲವರು ಹೊಂಚು ಹಾಕುತ್ತಿದ್ದರು. ಅಂಥ ಒಂದು ಸಂದರ್ಭವನ್ನು ಅವರು ಎದುರು ನೋಡ ಹತ್ತಿದ್ದರು.

ಸದಾಶಿವ ಶೆಟ್ಟರು ಹೀಗೆ ತಮ್ಮ ಚಟುವಟಿಕೆಗಳಲ್ಲಿ ತೊಡಗಿದಂತೆಯೇ ಹುಬ್ಬಳ್ಳಿ ಸೆಟ್ಲಮೆಂಟ್‌ನಲ್ಲಿ ಕಳ್ಳಭಟ್ಟಿ ತಯಾರಿಕೆಯ ಎರಡು ಗುಂಪುಗಳಲ್ಲಿ ಆಗಾಗ ಆಗುತ್ತಿದ್ದ ಜಗಳವೇ ಒಮ್ಮೆ ವಿಕೋಪಕ್ಕೆ ಹೋಗಿ ಒಂದು ಗುಂಪಿನ ನಾಯಕನು ಇನ್ನೊಂದವರಿಂದ ಕೊಲ್ಲಲ್ಪಟ್ಟಿದ್ದನು. ಶೆಟ್ಟರನ್ನು ಪೇಚಿನಲ್ಲಿ ಸಿಕ್ಕಿಸಿ ಅವರ ಜನಪ್ರಿಯತೆಯನ್ನು ಕುಗ್ಗಿಸಿ ರಾಜಕೀಯ ರಂಗದಿಂದ ಅವರನ್ನು ದೂರ ಸರಿಸಲು ಈ ಪ್ರಸಂಗವನ್ನು ಉಪಯೋಗಿಸಿಕೊಳ್ಳಬೇಕೆಂದು ಅವರ ವಿರೋಧಿಗಳು ಬಯಸಿ ಹೊಂಚು ಹಾಕಿದರು.

ಕೊಲ್ಲಲ್ಪಟ್ಟ ಯುವಕನ ಕುಟುಂಬದವರಿಗೆ ಯುವಕನು ಪೊಲೀಸ್ ಠಾಣೆಯಲ್ಲಿ ಹತನಾಗಿದ್ದಾನೆಂದು ಬಿಂಬಿಸಿದ್ದಾದರೆ ಅದರಿಂದ ಮುಂದೆ ಒಳ್ಳೆಯ ಪರಿಹಾರವಾದರೂ ಸಿಗಬಹುದಾಗಿದೆ. ಆದ್ದರಿಂದ ನೀವು ಈಗಲೇ ಸದಾಶಿವ ಶೆಟ್ಟರ ಮನೆಗೆ ಹೋಗಿ ಅವರ ಬೆಂಬಲದಿಂದ ಇದನ್ನು ಸಾಧಿಸಿಕೊಳ್ಳಿ. ಶೆಟ್ಟರು ತುಂಬಾ ಪ್ರಭಾವಿ ನಾಯಕರು. ಅವರೇನಾದರೂ ನಿಮ್ಮ ನೆರವಿಗೆ ಬಂದಿದ್ದಾದರೆ ನಿಮ್ಮ ಉದ್ದೇಶ ಸಾಧಿಸಿದಂತೆಯೇ ಎಂದು ಅವರನ್ನು

ಶೆಟ್ಟರರ ವಿರೋಧಿಗಳು ಹುರಿದುಂಬಿಸಿದರು. ಯಾವುದೇ ತತ್ವ, ಸಿದ್ಧಾಂತ ಏನೊಂದನ್ನೂ ಅರಿಯದ ಆ ಮುಗ್ಧ ಕುಟುಂಬಗಳವರು ತಮ್ಮ ಅನೇಕ ಬೆಂಬಲಿಗರನ್ನು ಕೂಡಿಕೊಂಡು ಕೂಡಲೇ ಸದಾಶಿವ ಶೆಟ್ಟರ ಮನೆಗೆ ಹೋಗಿ ನೆರೆದು ತಮ್ಮ ಮನೆಯ ಒಬ್ಬನನ್ನು ಪೊಲೀಸರು ಆರೋಪಿಯನ್ನಾಗಿ ಹಿಡಿದುಕೊಂಡು ಬಂದು ಪೊಲೀಸ್ ಠಾಣೆ ಲಾಕಪ್‌ನಲ್ಲಿ ಹೊಡೆದು ಕೊಂದು ಹೆಣವನ್ನು ಹೊರಕ್ಕೆ ಎಸೆದಿದ್ದಾರೆ. ನೀವೇ ಬಂದು ನ್ಯಾಯ ದೊರಕಿಸಿಕೊಡಿ ಎಂದು ಆಗ್ರಹಪಡಿಸಿದರು. ತಮ್ಮ ಎಲ್ಲ ದುಃಖ ದುಮ್ಮಾನಗಳನ್ನು ಬಗೆಹರಿಸಲು ಹಗಲಿರುಳು ಶೆಟ್ಟರು ತನ್ನ ಜೀವನ ಹಂಗು ತೊರೆದು ಶ್ರಮಿಸುವುದಾಗಿ ಭರವಸೆ ತಳೆದಿದ್ದ ದೀನ ದಲಿತರು ತಮಗೆ ದೊರೆತ ಅಂಥ ವರವನ್ನೇ ಶೆಟ್ಟರ ಆಹುತಿ ತೆಗೆದುಕೊಳ್ಳುವುದಕ್ಕೆ, ಬಳಸುವುದಕ್ಕೆ ಭಸ್ಮಾಸುರನಂತೆ ಅಣಿಗೊಳಿಸಲ್ಪಟ್ಟ ಪ್ರಸಂಗವದಾಗಿತ್ತು.

ಮುಗ್ಧ ಸದಾಶಿವ ಶೆಟ್ಟರು ಆ ರಾತ್ರಿ ತಮ್ಮೆಡೆಗೆ ಬಂದ ದೀನ ದಲಿತರ ನೆರೆವಿನ ಹಿಂದಡಗಿದ ಮೋಸ ಹಾಗೂ ವಿರೋಧಿಗಳ ಕುತಂತ್ರವನ್ನು ಅರಿಯದೇ ಆ ಜನರೊಂದಿಗೆ ನಡೆದು ಸಾರ್ವತ್ರಿಕ ಪ್ರತಿಭಟನೆ ಸಂಘಟಿಸಿದರು. ಪ್ರತಿಭಟನೆ ತೀವ್ರ ಸ್ವರೂಪ ತಾಳಿದಂತೆಯೇ ಪೊಲೀಸ್ ಅಧಿಕಾರಿಗಳು ತಾವು ಆ ಮೃತ ಯುವಕನನ್ನು ಬಂಧಿಸಿ ತಂದಿರಲೇ ಇಲ್ಲ. ಮತ್ತು ಆತನು ಪೊಲೀಸ್ ಠಾಣೆ ಲಾಕಪ್‌ನಲ್ಲಿ ಸತ್ತವನಲ್ಲ. ಪರಸ್ಪರ ಗುಂಪು ಕದನದಲ್ಲಿ ಸತ್ತಿದ್ದಾನೆಂಬ ಸತ್ಯವನ್ನು ಹೊರಗೆಡವಿದರು. ಮತ್ತು ಶೆಟ್ಟರ್ ರಂಥ ನುರಿತ ರಾಜಕಾರಣಿ, ವಕೀಲರು ಹೀಗೆ ತಮ್ಮ ರಾಜಕೀಯ ಲಾಭಕ್ಕಾಗಿ ಪೊಲೀಸರ ವಿರುದ್ಧ ಜನರನ್ನು ಎತ್ತಿ ಕಟ್ಟಿದ್ದು ತಪ್ಪು ಎಂದು ಆರೋಪ ಹೊರಿಸಲು ಸನ್ನದ್ಧರಾದರು. ಆಗ ಶೆಟ್ಟರ್‌ರ ನೆರವು ಯಾಚಿಸಿ ಬಂದ ದಲಿತ ವರ್ಗ ಸಹ ಶೆಟ್ಟರ್ ಬೆಂಬಲಕ್ಕೆ ನಿಲ್ಲದೇ ಹಿಂದ ಸರಿದಿತ್ತು. ಹೀಗೆ ಶೆಟ್ಟರ್ ವಕೀಲರು ರಾಜಕೀಯ, ಸಾಮಾಜಿಕ ಚಟುವಟಿಕೆ, ವಕಾಲತ್ತಿಗೆ ಕೂಡ ವಿದಾಯ ಹೇಳಬೇಕಾದ ಗಂಭೀರ ಪರಿಸ್ಥಿತಿ ನಿರ್ಮಾಣಗೊಂಡಿತ್ತು.

ಆಗ ಸದಾಶಿವ ಶೆಟ್ಟರು ಅಲ್ಲಿಯವರೆಗೆ ಮಾಡುತ್ತ ಬಂದ ವಕಾಲತ್ತು, ನಿಸ್ವಾರ್ಥ ಸಮಾಜ ಸೇವೆ, ರಾಜಕೀಯ ತತ್ವ ನಿಷ್ಠೆ ಇವುಗಳನ್ನು ಕೆಲವು ಧುರೀಣರು, ಸರ್ಕಾರದ ವರಿಷ್ಠರು ಗಮನಿಸಿ ಬೆಂಬಲಕ್ಕೆ ಧಾವಿಸಿದ್ದರಿಂದ ಶೆಟ್ಟರ ಭವಿಷ್ಯ ನುಂಗಲೆತ್ನಿಸಿದ ಭಸ್ಮಾಸುರನು ತಾನೇ ಭಸ್ಮವಾಗಿ ಪ್ರಕರಣ ಅಷ್ಟಕ್ಕೇ ಕೊನೆಗೊಂಡಿತ್ತು.

ಮಿಂಚಾಗಿ ಹೊಳೆದು ಚಿಜ್ಜ್ಯೋತಿಯಾಗಿ ಬೆಳಗಿದರು

ಕಾರಿರುಳು ಕವಿದಿರಲು
ದಾರಿ ಕಾಣದೆ ಇರಲು
ಝುಗ್ಗೆಂಬ ಮಿಂಚೊಂದು ದಾರಿ ತೋರಿತ್ತು.
ಝುಗ್ಗೆಂದು ಮಿಂಚಿದರು
ಕ್ಷಣಿಕವಾಗದೆ ಅದುವೇ
ನೆನಹೆ ತೇಜೋರೂಪಿ ನಿತ್ಯ ಬೆಳಗಿತ್ತು.
ಈ ತೇಜ ಭಾರತಕೆ
'ಮುಖರ್ಜಿ ಆದಂತೆ
'ಶೆಟ್ಟರಾದರು' ನಮ್ಮ ಕಂನ್ನಾಡಿನಲ್ಲಿ
ಮಿಂಚಾಗಿ ಬಂದರೂ
ಸದಾಶಿವ ಶೆಟ್ಟರು
ನೆನಹಿನಲ್ಲಿ ಚಿಜ್ಜ್ಯೋತಿ ಎಂದೆಂದಿಗೂ

ಗೊಂಡಾರಣ್ಯದಲ್ಲಿ ಅಮವಾಸ್ಯೆಯ ಕಗ್ಗತ್ತಲಲ್ಲಿ ಹಿಂಸ್ರಪಶುಗಳ ಆಕ್ರಮಣದ ಗಂಡಾಂತರದ ನಡುವೆ ಟಾರ್ಚ ಅಥವಾ ಕೈದೀವಟಿಗೆಯಿಲ್ಲದೇ ದಾರಿ ಸಾಗಬೇಕಾಗಿರುವಾಗ ಆಗಾಗ ಮಿಂಚು ಆಗಸದಲ್ಲಿ ಝುಗ್ಗನೇ ಬೆಳಕು ಬೀರಿ ಅರೆಕ್ಷಣದಲ್ಲೇ ಮಾಯವಾದರೂ ಅದೇ ಬೆಳಕನ್ನೇ ಆಧರಿಸಿ ದಾರಿ ಕಂಡುಕೊಳ್ಳುವುದು ಸಾಮಾನ್ಯವಾಗಿ ಎಲ್ಲ ದಾರಿಕಾರರ ರೀತಿ. ಸ್ವಾತಂತ್ರ್ಯ ಬಂದ ಹೊಸತರಲ್ಲಿ ಸಾಮಾಜಿಕವಾಗಿ ರಾಜಕೀಯವಾಗಿ ಭಾರತೀಯರು ಸಾಗುತ್ತಿದ್ದ ದಾರಿ ಇದೇ ರೀತಿಯಿತ್ತು. ಡಾ. ಶ್ಯಾಮಪ್ರಸಾದ ಮುಖರ್ಜಿ ಭಾರತೀಯ ಜನಸಂಘದ ಸ್ಥಾಪನೆಯೊಂದಿಗೆ ಹೀಗೆ ಮಿಂಚಿ ಕೂಡಲೇ ಮರೆಯಾದರೂ ನೆನಹಿನ ರೂಪದಲ್ಲಿ ನಿತ್ಯ ಪ್ರಕಾಶ ಬೀರುವ ಚಿಜ್ಜ್ಯೋತಿಯಾಗಿ ರಾಜಕೀಯಕ್ಕೆ ತಮ್ಮದೇ ಆದ ಹೊಸ ದಾರಿ ತೋರಿದ್ದರು. ಸದಾಶಿವ ಶೆಟ್ಟರು ಕರ್ನಾಟಕದಲ್ಲಿ ಅದೇ ಕೆಲಸ ಮಾಡಿದರು.

ಭಾರತವು ಸ್ವತಂತ್ರ, ಸಾರ್ವಭೌಮ, ಪ್ರಜಾಸತ್ತಾತ್ಮಕ ರಾಷ್ಟ್ರವಾಗಿ ಚೈತನ್ಯಶಾಲಿ. ನವಜನ್ಮವನ್ನು ತಳೆಯುತ್ತಿದ್ದ ಹಾಗೆಯೇ ಮುಸ್ಲಿಂ ಜಾತಿ ಆಧಾರಿತ 'ಪಾಕಿಸ್ತಾನ' ಹೊಸ ದೇಶದ ನಿರ್ಮಾಣಕ್ಕೆ ಕೆಲವಷ್ಟು ಭೂಭಾಗವನ್ನು ಬಿಟ್ಟು ಕೊಟ್ಟು ತನ್ನ ನೆಲದ ಮೇಲೆ ಸರ್ವಧರ್ಮಸಮಭಾವದ, ಸರ್ವ ಸಂಸ್ಕೃತಿ ಸರ್ವ ಚಿಂತನೆಗಳ ಸಮಾನತೆಯ ಸೌಹಾರ್ದಯುತ ಸಹಬಾಳುವೆಯ ಸುದೀರ್ಘ ಹಿಂದೂ ಆರ್ಷ ಪರಂಪರೆಯನ್ನು ಸಹಜವಾಗಿಯೇ ಉಳಿಸಿಕೊಂಡಿತ್ತು. ರಾಷ್ಟ್ರ ವಿಭಜನೆಯ ಕಾರಣದಿಂದ ಕೆರಳಿದ ಮತೀಯ ಉನ್ಮಾದಕ್ಕೆ ಬೇಸತ್ತು, ಬೆಂದು ಬಸವಳಿದ ರಾಷ್ಟ್ರಪಿತ, ನಮ್ಮೆಲ್ಲರ ನೆಚ್ಚಿನ 'ಬಾಪೂ' ವಿಶ್ವಮಾನ್ಯ ಮಹಾತ್ಮಾ ಗಾಂಧೀಜೀ ಸ್ವಾತಂತ್ರ್ಯೋತ್ಸವದ ಒಂದೇ ಆಚರಣೆಯಲ್ಲಿಯೂ ಪಾಲ್ಗೊಳ್ಳದೇ ಮತೀಯ ಉನ್ಮಾದ ಪೀಡಿತರಿಗೆ ಸಾಂತ್ವನ ಹೇಳಿ ಅವರ ಕಣ್ಣೊರೆಸುವಲ್ಲಿ ತತ್ಪರರಾಗಿದ್ದರು. ಅಂಥವರ

ಅಸಹನೀಯ ತೋರಿಕೆಯ ಹಾಲಾಹಲ ಕುಡಿದು ನೀಲಕಂಠರಾಗಿ ಸೌಹಾರ್ದದ ಕಲ್ಪವೃಕ್ಷ ತೋರಿಸುತ್ತಿರುವಾಗಲೇ ಅವರು ಶಾಂತಿಗಾಗಿ ತಿಲುಬರೆಯದ ಕ್ರಿಸ್ತನಂತೆ ಗುಂಡಿಗಾಹುತಿಯಾಗಿದ್ದರು. ಪಕ್ಷ ವಿಸರ್ಜಿಸಬೇಕೆಂಬ 'ಬಾಪೂ'ನ ಆದೇಶವನ್ನು ಕಡೆಗಣಿಸಿದ ಕಾಂಗ್ರೆಸ್ಸಿಗರು ಸ್ವಾತಂತ್ರ್ಯ ಕೊಡಿಸಿದ ಪಕ್ಷ ತಮ್ಮದೆಂಬ ತುತ್ತೂರಿಯನ್ನು ಒಂದೆಡೆ ಮೊಳಗಿಸುತ್ತ ಇನ್ನೊಂದೆಡೆ 'ಗಾಂಧೀಜಿ ಹತ್ಯೆ'ಯನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಕ್ಷುದ್ರ ರಾಜಕೀಯ ತಂತ್ರೋಪದೇವಿಗಳಾಗ ತೊಡಗಿದ್ದರು.

ಸರ್ವ ಧರ್ಮಗಳನ್ನು ಸರ್ವ ವಿಚಾರ ಪ್ರಣಾಲಿಗಳನ್ನು ಸರ್ವ ರೀತಿಯ ಚಿಂತನೆಗಳನ್ನೂ ಸಮಾನ ಗೌರವದಿಂದ ಕಂಡು ಪ್ರೇಮಯುತ ಸಹಬಾಳ್ವೆಯ ಆದರ್ಶವನ್ನು ಸಹಸ್ರಾವಧಿ ವರುಷಗಳಷ್ಟು ಹಿಂದೆಯೇ ಜಗತ್ತಿಗೆ ತೋರಿ 'ಹಿಂದೂ ಪರಂಪರೆ-ಆರ್ಷ ಸಂಸ್ಕೃತಿ'ಯನ್ನು ವಿಶ್ವವೇ ಮಾನ್ಯ ಮಾಡಿದ್ದರ ಸ್ಪಷ್ಟ ದರ್ಶನ ಕಣ್ಮುಂದೆ ಇರುವುದನ್ನು ಕಡೆಗಣಿಸಿ ಭಾರತದ ಪರಂಪರೆಗೆ ಅಪರಿಚಿತವೇ ಆದಂಥ ಧರ್ಮಾಂಧತೆಯ ಅತಿರೇಕದಿಂದ ರೋಸಿ ಪಾಶ್ಚಾತ್ಯ ಜಗತ್ತು ಭಾರತದಿಂದಲೇ ಸ್ಫೂರ್ತಿ ಪಡೆದುಕೊಂಡ ಧರ್ಮ ನಿರಪೇಕ್ಷತೆ- ಜಾತ್ಯಾತೀತತೆ ಅಥವಾ ಸೆಕ್ಯುಲರ್ ವಾದವನ್ನು ಭಾರತವು ಹಿಂದು ಸಂಸ್ಕೃತಿಗೆ ಬದಲಿಯಾಗಿ ಸ್ವೀಕರಿಸಿ ಅದರಲ್ಲಿ ಅಲ್ಪಸಂಖ್ಯಾಕರ ಹೆಸರಿನಲ್ಲಿ ಕೆಲವರನ್ನು ಓಲೈಸಿ ಬೇರೆಯವರನ್ನು ಕಡೆಗಣಿಸುವ ಪದ್ಧತಿಯತ್ತ ತಿರುಗ ತೊಡಗಿದಾಗ ತಾರತಮ್ಯದ ಕಾರಣ ಹೊಸ ಸಮಸ್ಯೆಗಳು ಉದ್ಭವಿಸಿ ಸಾಮಾಜಿಕ ಸೇವೆ ರಾಜಕೀಯ ರಂಗಗಳು ಮತ್ತಷ್ಟು ಬಿಗಡಾಯಿಸಿ ಗಾಢಾಂಧಕಾರ ಕವಿದಂತಾಗಿತ್ತು. ಅಂಥ ಸಂದರ್ಭಗಳಲ್ಲಿ ಡಾ. ಶ್ಯಾಮಪ್ರಸಾದ ಮುಖರ್ಜಿ ಮಿಂಚಿನೋಪಾದಿಯಲ್ಲಿ ಝಗ್ಗೆಂದು ಬೆಳಕು ಬೀರಿ ಭಾರತೀಯ ಜನಸಂಘವನ್ನು ಹಿಂದೂ-ಸಾಂಸ್ಕೃತಿ- ಪರಂಪರೆಗಳ ಹಿಂದುತ್ವ ಆಧಾರಿತ ಸರ್ವ ಸಮಾನತೆಯ ಹಾಗೂ ರಾಷ್ಟ್ರಭಕ್ತಿಯ ರಾಜಕಾರಣದ ಸಾಧನವನ್ನಾಗಿ ಹುಟ್ಟು ಹಾಕಿದ್ದರು. ಕಾಶ್ಮೀರ ಸಂರಕ್ಷಣೆಯ ಹೋರಾಟದಲ್ಲಿ ಅಕಾಲ ಮೃತ್ಯುವಿಗೆ ಬಲಿಯಾದ ಅವರ ಜೀವನ ಮಿಂಚಿನೋಪಾದಿಯಲ್ಲಿ ಕ್ಷಣಿಕವೆನಿಸಿದರೂ ಅವರು ಸಾಮಾನ್ಯ ಮಿಂಚಾಗಿರದೇ ನಂದಾದೀಪವೆನ್ನುವುದಕ್ಕಿಂತ ಹೆಚ್ಚಾಗಿ ಚಿಜ್ಯೋತಿಯಾಗಿ ನಿತ್ಯ ಪ್ರಕಾಶವಾಗಿ ಬೆಳಗಿದ್ದರಿಂದ ಜನಸಂಘವು ಅವರ ನಂತರ ಹಂತ ಹಂತವಾಗಿ ಬೆಳೆಯ ತೊಡಗಿದುದು ಭಾರತ ಕಂಡ ತೇಜೋಮಯ ಇತಿಹಾಸ. ದಕ್ಷಿಣ ಭಾರತದತ್ತ ದೃಷ್ಟಿ ಹೊರಳಿಸಿದಾಗ ಕರ್ನಾಟಕದ ಹುಬ್ಬಳ್ಳಿಯ ದಿವಂಗತ ಸದಾಶಿವ ಶಂಕರಪ್ಪ ಶೆಟ್ಟರ ಈ ವಾಮನಮೂರ್ತಿ ರಾಜಕಾರಣಿಯು ಅಂಥದೇ ಮಿಂಚಾಗಿ ಬೆಳಗಿ ನಂತರ ಸ್ಮರಣೆ ರೂಪದಲ್ಲಿ ನಿತ್ಯಪ್ರಕಾಶವಾಗಿ ಜಾತ್ಯಾತೀತತೆಯ ತತ್ವಗಳಿಂದ ಬೇರಿಲ್ಲದ ಹಿಂದುತ್ವ ಆಧಾರಿತ ರಾಜಕೀಯದ ದಾರಿ ತೋರಿದುದನ್ನು ನೋಡಬಹುದಾಗಿದೆ.

ಬಡವರು, ದೀನದಲಿತರು, ದುಃಖಿತರ ಹಿತ ಸಂತೋಷಗಳಿಗಾಗಿ ಸಮರ್ಪಣ ಭಾವನೆಯಿಂದ ಶ್ರಮಿಸುವುದನ್ನು ಬಾಲ್ಯದಿಂದಲೇ ಅಳವಡಿಸಿಕೊಂಡ ಸದಾಶಿವ ಶೆಟ್ಟರು ಶಿಕ್ಷಣ ಮುಗಿಸಿ ವಕಾಲತ್ತು ಆರಂಭಿಸುವುದರೊಂದಿಗೆಯೇ ಸಮಾಜ ಸೇವೆಯನ್ನು ಕೈಗೆತ್ತಿಕೊಂಡು ರಾಜಕೀಯದಲ್ಲಿ ಧುಮುಕಿದ್ದರು. ತಮ್ಮ ಕಾರ್ಯೋತ್ಸಾಹಕ್ಕೆ ಕಾಂಗ್ರೆಸ್‌ನಲ್ಲಿ ಅವಕಾಶವಿಲ್ಲವೆಂಬುದನ್ನು ಶೀಘ್ರವೇ ಕಂಡುಕೊಂಡ ಅವರು ತಾವು ಬೆಳೆದುಬಂದ ಸಮರ್ಪಿತ ಸೇವಾ ಸಂಸ್ಕೃತಿಗೆ ಸರಿ ಹೊಂದುವಂತಹ ಜನಸಂಘವನ್ನು ಪ್ರವೇಶಿಸಿದರು. ಜನಸಂಘದಲ್ಲಿ ದಿವಂಗತ

ಜಗನ್ನಾಥರಾವ ಜೋಶಿ, ಭಾವುರಾವ ದೇಶಪಾಂಡೆ ಹಾಗೂ ಗದುಗಿನ ಡಾ. ರಾಮಚಂದ್ರ ಅನಂತರಾವ ಜಾಲಿಹಾಳ ಈ ಮೂವರ ಪ್ರೋತ್ಸಾಹ ಮಾರ್ಗದರ್ಶನದಿಂದ ಹಂತ ಹಂತವಾಗಿ ಕೂಡಲೇ ರಾಜ್ಯಮಟ್ಟದ ನಾಯಕರಾದರು.

ಕಾಂಗ್ರೆಸ್ಸಿನಲ್ಲಿರುವಾಗ ಅನೇಕ ಕಾಂಗ್ರೆಸ್ ಧುರೀಣರು ತಮಗೆ ಪ್ರಯೋಜನವಾಗುವ ತನಕ ಮಾತ್ರ ಬಡವರ, ದೀನದಲಿತರ, ಕಾರ್ಮಿಕರ ಹಿತವಂತರೆನ್ನುವಂತೆ ವರ್ತಿಸಿ ನಂತರ ಅವರಿಂದ ದೂರ ಸರಿಯುವುದನ್ನು ಸದಾಶಿವ ಶೆಟ್ಟರು ಕಂಡು ನೊಂದುಕೊಳ್ಳುತ್ತಿದ್ದರು. ಅವರಿಗೆ ಹಾಗೆಯೇ ನೊಂದುಕೊಂಡು ಅಸಹಾಯಕರಾಗಿ ಗುಂಪಿನೊಡನೆ ಗೋವಿಂದ ಎನ್ನುವ ರೀತಿ ಕಾಂಗ್ರೆಸ್‌ನೊಡನೆ ಉಳಿಯಲು ಮನಸ್ಸಾಗಲಿಲ್ಲ. ಹೀಗಾಗಿ ಸ್ವತಃ ಕಾಂಗ್ರೆಸ್ಸಿಗರಾದರೂ ಬೇರೆ ಪಕ್ಷಗಳ ಧುರೀಣರೊಂದಿಗೆ, ಕಾರ್ಯಕರ್ತರೊಂದಿಗೆ ಬೆರೆತು ಅವರ ವೇದಿಕೆಗಳಲ್ಲೂ ಭಾಗವಹಿಸಿ ಕಾರ್ಯ ಮಾಡ ತೊಡಗಿದರು. ಇದರಿಂದ ಬೇಸರ ಪಟ್ಟುಕೊಂಡ ಅನೇಕ ಸ್ವಾರ್ಥ ಪರ ಕಾಂಗ್ರೆಸ್ಸಿಗರು ಹಿರಿಯ ಧುರೀಣರ ಕಿವಿಯೂದಿ ಸದಾಶಿವ ಶೆಟ್ಟರ್ ವಿರುದ್ಧ ವಾತಾವರಣ ಉಂಟಾಗುವಂತೆ ಮಾಡ ತೊಡಗಿದರು. ಆಗ ಶೆಟ್ಟರು ತಮ್ಮ ಆತ್ಮೀಯ ಮಿತ್ರ ಯುವ ಕಾಂಗ್ರೆಸ್ ನೇತಾರ ಗೋಪಿನಾಥ ಸಾಂಡ್ರಾ ಅವರನ್ನೊಳಗೊಂಡು ಅನೇಕರೊಂದಿಗೆ ಚರ್ಚಿಸಿ ಹಿರಿಯ ಧುರೀಣರನ್ನೂ ಸಂಧಿಸಿ ತಮ್ಮ ಚಟುವಟಿಕೆಗಳನ್ನು ಸಮರ್ಥಿಸಿಕೊಂಡರಲ್ಲದೇ ಬಡವರ, ದೀನ ದಲಿತರ ಹಾಗೂ ಕಾರ್ಮಿಕರ ಹಿತಸಾಧನೆಗೆಯೇ ಮೊದಲಿನಿಂದ ಬದವಾದ ಕಾಂಗ್ರೆಸ್ ಪಕ್ಷ ತನ್ನ ಕಾರ್ಯ ಪದ್ಧತಿಯನ್ನು ಅದೇ ರೀತಿ ರೂಪಿಸಿಕೊಳ್ಳಬೇಕಾದುದರ ಅಗತ್ಯತೆಯನ್ನು ಪ್ರತಿಪಾದಿಸಿದರು. ವಯಸ್ಸಿನಲ್ಲಿ ಕಿರಿಯರೂ ಕಾರ್ಯೋತ್ಸಾಹದ ಪ್ರಚಂಡ ಪ್ರವಾಹವೂ ಆದ ಶೆಟ್ಟರ್‌ರನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳುವದು ಕಾಂಗ್ರೆಸ್‌ನ ಅಂದಿನ ನೇತಾರರಿಗೆ ಸಾಧ್ಯವಾಗಲಿಲ್ಲ.

ಕಾಂಗ್ರೆಸ್ ಪಕ್ಷದಲ್ಲಿ ಹೀಗೆ ವಿರೋಧ ಹೆಚ್ಚಿದಂತೆಯೇ ಶೆಟ್ಟರ್ ಬಾಹ್ಯ ಚಟುವಟಿಕೆಗಳು ಇನ್ನೂ ಹೆಚ್ಚ ತೊಡಗಿದವು. ಶೆಟ್ಟರು ತಮ್ಮ ಬಾಲ್ಯದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದೊಡನೆ ಸಂಪರ್ಕ ಹೊಂದಿದ್ದರೆಂಬುದನ್ನು ಸಂಘದ ಆಗಿನ ಕ್ರಿಯಾಶೀಲ ಸ್ವಯಂ ಸೇವಕರಾಗಿದ್ದ ಗಂ.ನಾ. ವಝೆ ಅಪ್ಪಾ ವಾಡದೇಕರ್, ಗೋಪಾಲರಾವ್ ಜೂಜಾರ, ರಾಮ ಉಣಕಲ್, ರಾಮಣ್ಣ ಕಾಪಸೆ, ಮಹಾದೇವಸಾ ಜರತಾರಘರ, ಚಂದ್ರಹಾಸ ನಿರಂಜನ, ಡಾ. ಗೋವಿಂದ ನರೇಗಲ್ ಮೊದಲಾದವರು ಸ್ಮರಿಸಿ ಶೆಟ್ಟರ್‌ರನ್ನು ಸಂಪರ್ಕಿಸಿ ಶ್ರೀ ಜಗನ್ನಾಥರಾವ್ ಜೋಶಿಯವರಾದಿಯಾಗಿ ಅನೇಕ ಸ್ವಯಂ ಸೇವಕರು ಜನಸಂಘ ರಾಜಕೀಯ ಪಕ್ಷದಲ್ಲಿ ಕೆಲಸ ಮಾಡುತ್ತಿರುವದನ್ನು ವಿವರಿಸಿ ಹೇಳಿದರು. ನಂತರ ಸದಾಶಿವ ಶೆಟ್ಟರು ಸ್ವಾಭಾವಿಕವಾಗಿಯೇ ಭಾರತೀಯ ಜನಸಂಘದತ್ತ ಆಕರ್ಷಿತರಾಗಿ ಹುಮ್ಮಸ್ಸಿನಿಂದ ಕಾರ್ಯ ಮಾಡತೊಡಗಿದರು.

ಶ್ರೀ ಜಗನ್ನಾಥರಾವ್ ಜೋಶಿ, ಶ್ರೀ ದೀನದಯಾಳ್ ಉಪಾಧ್ಯಾಯ, ಶ್ರೀ ಅಟಲ್ ಬಿಹಾರಿವಾಜಪೇಯಿಯಂಥವರ ನಿಕಟ ಸಂಪರ್ಕ, ಅವರೊಂದಿಗೆ ನಡೆಸಿದ ಬಿಚ್ಚು ಮನಸ್ಸಿನ ಚರ್ಚೆಯ ಫಲವಾಗಿ ಸದಾಶಿವಶೆಟ್ಟರು ಜನಸಂಘದ ಹಿಂದುತ್ವದ ಸಿದ್ಧಾಂತವನ್ನು ಅನೇಕರು ತಪ್ಪಾಗಿ ಅರ್ಥ ಮಾಡುವ ರೀತಿಯಲ್ಲಿ ಜಾತೀಯ ವಾದವಲ್ಲ, ಭಾರತದ ಸಾಂಸ್ಕೃತಿಕ, ರಾಷ್ಟ್ರೀಯತೆ ಎಂಬುದನ್ನು ಮತ್ತು ಇಂತಹ ಸಾಂಸ್ಕೃತಿಕ ರಾಷ್ಟ್ರೀಯತೆಯ ಭಾವನೆಯಿಂದಲೇ ರಾಷ್ಟ್ರೀಯ ಭಾವೈಕ್ಯ, ರಾಷ್ಟ್ರದ ಸರ್ವಾಂಗೀಣ ಉನ್ನತಿ ಸಾಧ್ಯವೆಂಬುದನ್ನೂ ಮನಗಂಡರು.

ಸದಾಶಿವ ಶೆಟ್ಟರು ನಂತರ ಕನ್ನಡ ನಾಡಿನುದ್ದಗಲಕ್ಕೂ ಸಂಚರಿಸಿ ಜನಸಂಘದ ಬಗ್ಗೆ ಜನತೆಯಲ್ಲಿ ಉಂಟಾದಂಥ ತಪ್ಪು ತಿಳುವಳಿಕೆಯನ್ನು ನಿವಾರಿಸಿ ಜನಸಂಘದತ್ತ ಎಲ್ಲರೂ ವಾಲುವಂತೆ ಮಾಡಿ ಸರ್ವ ಜನಾದರಣೀಯರೆನಿಸಿದರು. ಮುಸ್ಲೀಂ, ಕ್ರೈಸ್ತ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು, ಕಾರ್ಮಿಕ ಸಮುದಾಯ ಎಲ್ಲರೂ ಜನಸಂಘಕ್ಕೆ ಪ್ರವೇಶ ಪಡೆದು ಕಾರ್ಯ ಮಾಡುವಂತಾಗಿ ಜನಸಂಘವು ಶಹರ, ಪ್ರದೇಶಗಳಲ್ಲಿಯಂತೆಯೇ ಗ್ರಾಮೀಣ ಭಾಗಗಳಲ್ಲಿ ರೈತಾಪಿ ವರ್ಗಗಳವರಲ್ಲಿ ಜನಪ್ರಿಯತೆ ಪಡೆಯ ತೊಡಗಿತು.

ಸದಾಶಿವ ಶೆಟ್ಟರು ಅಲ್ಲಿಂದ ಹೆಚ್ಚು ಕ್ರಿಯಾಶೀಲರಾಗಿ ಸಾರ್ವತ್ರಿಕ ಆಂದೋಲನಗಳನ್ನು ತಮ್ಮ ಪಕ್ಷದ ಧ್ವಜದಡಿಯಲ್ಲಿ ಕಾರ್ಯಕರ್ತರೊಂದಿಗೆ ಹಮ್ಮಿಕೊಳ್ಳತೊಡಗಿದರು. ಬೆಲೆ ಏರಿಕೆ ವಿರುದ್ಧ, ಪಡಿತರದಲ್ಲಿಯ ತಾರತಮ್ಯ, ಕಳಪೆ ಆಹಾರ ಧಾನ್ಯಗಳ ವಿತರಣೆಯನ್ನು ಪ್ರತಿಭಟಿಸಿ, ಆಹಾರ ಧಾನ್ಯಗಳ ಅಭಾವ ವಿರೋಧಿಸಿ ಆಂದೋಲನ ಹಮ್ಮಿಕೊಳ್ಳ ತೊಡಗಿದರು. ರೈತರ ಪರ ಹೋರಾಟ ಸಂಘಟಿಸಿದರು. ಕಾರ್ಮಿಕ ಸಂಘಗಳನ್ನು ಕಟ್ಟಿದರು. ರಾಜ್ಯ ಸರ್ಕಾರ ಜಾರಿಗೆ ತರಲು ಯೋಚಿಸಿದ ಕಟ್ಟಡ ತೆರಿಗೆ ವಿರುದ್ಧ ಮತ್ತಿತರ ಹೋರಾಟಗಳಲ್ಲಿ ಇತರ ಪಕ್ಷಗಳೊಡನೆ ಜನಸಂಘದ ಕಾರ್ಯಕರ್ತರನ್ನು ತೊಡಗಿಸಿ ಯಶಸ್ವಿಗೊಳಿಸಿದರು. ವಿದ್ಯಾರ್ಥಿಗಳ ಆಂದೋಲನ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್, ರೇಲ್ವೆ, ಅಂಚೆ ತಂತಿ ಇಲಾಖೆ, ಕೆಪಿಟಿಸಿಎಲ್, ಕೆಸಿಟಿ ಮಿಲ್, ಕಿರ್ಲೋಸ್ಕರ್ ಮೊದಲಾದ ಉದ್ಯಮಗಳ ಕಾರ್ಮಿಕರ ಸಂಘಟನೆಗಳನ್ನು ಭಾರತೀಯ ಮಜ್ದೂರ್ ಸಂಘವನ್ನು ಬಲಪಡಿಸಿಕೊಳ್ಳಲು ಪ್ರೋತ್ಸಾಹಿಸಿ ಜನಸಂಘದ ಕಾರ್ಯಕರ್ತರಲ್ಲಿ ಧುರೀಣರ ಪಡೆಗಳನ್ನೇ ನಿರ್ಮಿಸ ತೊಡಗಿದರು. ಡಾ. ಅಬ್ದುಲ್ ಕರೀಂ ಬಾಶಿ ಮತ್ತಿತರರ ಮುಸ್ಲೀಂ ಬಾಂಧವರನ್ನು ಜನಸಂಘದತ್ತ ಸೆಳೆದು ಸಂಘದೊಂದಿಗೆ ಮುಸ್ಲಿಂ ಅಲ್ಪಸಂಖ್ಯಾತರು ಸಮರಸರಾಗಿರುವಂತೆ ಮಾಡಿದರು. ಜನಸಂಘ ಶೆಟ್ಟರ ಪ್ರಯತ್ನಗಳಿಂದಾಗಿ ಹೆಚ್ಚೆಚ್ಚು ಜನಪ್ರಿಯವಾಗ ತೊಡಗಿತು.

1962ರಲ್ಲಿ ಹುಬ್ಬಳ್ಳಿ ಶಹರ ವಿಧಾನಸಭಾ ಕ್ಷೇತ್ರದಿಂದ ಮೊದಲ ಬಾರಿಗೆ ವಿಧಾನ ಸಭೆಗೆ ಸ್ಪರ್ಧಿಸಿ ಸೋತರೂ ಮತ ಕ್ಷೇತ್ರದಲ್ಲಿ ಜನಸಂಘಕ್ಕೆ ಜನತೆಯ ಬೆಂಬಲ ಹಿಂದಿನ ಎಲ್ಲ ಚುನಾವಣೆಗಳಿಗಿಂತಲೂ ಹೆಚ್ಚಿರುವುದನ್ನು ಸಾಬೀತು ಪಡಿಸಿದರು. ಎರಡು ವರ್ಷಗಳಾದ ಬಳಿಕ ಧಾರವಾಡ ಶಹರ ಮತ ಕ್ಷೇತ್ರದಿಂದ ವಿಧಾನಸಭೆಗೆ ನಡೆದ ಉಪ ಚುನಾವಣೆಯಲ್ಲಿ ಮತ್ತೆ ಸ್ಪರ್ಧಿಸಿ ಜನಸಂಘದ ಲೋಕಪ್ರಿಯತೆ ಎಲ್ಲೆಡೆ ಹೆಚ್ಚುತ್ತಿರುವುದನ್ನು ತೋರಿಸಿದರು. ಹೀಗೆ ಎರಡು ಸಲ ಸೋತರೂ ಛಲ ಬಿಡದ ಶೆಟ್ಟರು 1967ರ ಸಾರ್ವತ್ರಿಕ ಚುನಾವಣೆಯಲ್ಲಿ ಹುಬ್ಬಳ್ಳಿ ಶಹರ ಕ್ಷೇತ್ರದಿಂದ ಮತ್ತೆ ಸ್ಪರ್ಧಿಸಿ ಜಯಭೇರಿ ಮೊಳಗಿಸಿ ವಿಧಾನಸಭೆಯಲ್ಲಿ ಜನಸಂಘದ ಪ್ರವೇಶಕ್ಕೆ ಶ್ರೀಕಾರ ಹಾಕಿದರು. ವಿಧಾನ ಪರಿಷತ್‌ನಲ್ಲಿ ಮೊದಲೇ ಶ್ರೀ ವಾಯ್.ಎಸ್. ಪಾಟೀಲರು ಜನಸಂಘದ ಧ್ವನಿಯಾಗಿ ಪ್ರವೇಶಿಸಿದ್ದರು. 1967ರ ಚುನಾವಣೆಯಲ್ಲಿ ಶ್ರೀ ಎಸ್.ಎಸ್. ಶೆಟ್ಟರರೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಶ್ರೀ ಬೋಳಾ ರಘುರಾಮಶೆಟ್ಟಿ, ಬೀದರ್‌ನಿಂದ ಜಿ. ಚಂದ್ರಕಾಂತ ಶಿಂದೋರೆ, ಕೊಡಗಿನಿಂದ ಶ್ರೀ ಲೋಕಯ್ಯ ನಾಯಕ ಅವರೂ ವಿಧಾನಸಭೆಯಲ್ಲಿ ಆಯ್ಕೆಯಾಗಿ ಜನಸಂಘದ ಸದಸ್ಯ ಬಲ ನಾಲ್ವರದಾಗಿ ಶ್ರೀ ಶೆಟ್ಟರು ಜನಸಂಘ ಗುಂಪಿನ ಧುರೀಣರೂ ಪಕ್ಷದ ರಾಜ್ಯ ಘಟಕದ ಓರ್ವ ಉಪಾಧ್ಯಕ್ಷರೂ ಆಗಿ ಕಾರ್ಯ ಮಾಡ ಹತ್ತಿದರು.

ದೀನ ದಯಾಳರ ಆತ್ಮೀಯತೆ

ಕೇರಳದಲ್ಲಿ ಅಖಿಲ ಭಾರತೀಯ ಜನಸಂಘದ ಅಧಿವೇಶನದಲ್ಲಿ ದೀನ ದಯಾಳ್ ಉಪಾಧ್ಯಾಯರು ತಮ್ಮ ಪಕ್ಷವು ಹೊಂದಿದ ಆರ್ಥಿಕ ನೀತಿಯನ್ನು ಏಕಾತ್ಮ ಮಾನವತಾವಾದದ ಸಿದ್ಧಾಂತವನ್ನಾಗಿ ಘೋಷಿಸಿದರು. ಅಲ್ಲಿ ಶ್ರೀ ಶೆಟ್ಟರು ಅವರಿಗೆ ನಿಕಟರಾದರು. ಶ್ರೀ ಶೆಟ್ಟರು ನದಿಯಲ್ಲಿ ಸ್ನಾನ ಮಾಡಿದ ನಂತರ ಇಷ್ಟಲಿಂಗ ಪೂಜೆಯನ್ನು ಮಾಡುತ್ತಿರುವುದನ್ನು ಆಸಕ್ತಿಯಿಂದ ಗಮನಿಸಿದ ದೀನ ದಯಾಳಜೀ ಲಿಂಗ ಪೂಜೆ ವಿವರ ತಿಳಿದು ಕರ್ನಾಟಕದ ಬಸವಣ್ಣನವರು ದೊಡ್ಡ ಮಹಾತ್ಮರು ಶಿವನನ್ನು ಇಷ್ಟಲಿಂಗದ ರೂಪದಲ್ಲಿ ಪ್ರತಿಯೊಬ್ಬನಿಗೂ ಅವನಿರುವಲ್ಲಿಯೇ ಅವನ ಅಂಗೈಯಲ್ಲಿಕೊಟ್ಟು ದೇವರು ಭಕ್ತರಿಂದ ದೂರವಿಲ್ಲವೆಂಬುದನ್ನು ತೋರಿಸಿಕೊಟ್ಟಿದ್ದಾರೆಂದು ಪ್ರಶಂಸಿಸಿ ಪ್ರತಿಯೊಬ್ಬರ ಹೃದಯದಲ್ಲಿ ಈಗ ಅದೇ ರೀತಿ ಉಜ್ವಲ ರಾಷ್ಟ್ರ ಭಕ್ತಿ ಬಿತ್ತುವ ಕೆಲಸ ನಡೆಯಬೇಕಾಗಿದೆ ಎಂದರು. ನಂತರ ಹುಬ್ಬಳ್ಳಿಯಲ್ಲಿ ಜನಸಂಘದ ಪ್ರಾಂತೀಯ ಅಧಿವೇಶನ ನಡೆದಾಗ ಸ್ವಾಗತಾಧ್ಯಕ್ಷರಾಗಿ ಭಾಷಣ ಮಾಡುತ್ತ ಶೆಟ್ಟರು ದೀನ ದಯಾಳಜೀ ಅವರ ಚಿಂತನೆಯನ್ನು ಮನಸಾರೆ ಪ್ರಶಂಸಿಸಿ ಜಗತ್ತಿನ ಎಲ್ಲ ಅರ್ಥ ನೀತಿಗಳಲ್ಲಿಯ ಸಿದ್ಧಾಂತಗಳಲ್ಲಿಯ ವಿಶೇಷವಾಗಿ ಸಾಮ್ಯವಾದ ಕಮ್ಯುನಿಜಂನಲ್ಲಿಯ ಸಮಾನತೆ ತತ್ವವನ್ನು ಭಾರತೀಯ ಸಂಸ್ಕೃತಿ ಪರಂಪರೆ ಅನುಸರಿಸಿಯೇ ಅನುಷ್ಠಾನಕ್ಕೆ ತರುವಂಥ ಅಪ್ಪಟ ಆರ್ಥಿಕ ರಾಷ್ಟ್ರೀಯ ಸಿದ್ಧಾಂತವನ್ನು ದೀನ ದಯಾಳಜೀ ನಮಗೆ ಕೊಟ್ಟಿದ್ದಾರೆಂದು ವಿವರಿಸಿದರು.

ದೀನ ದಯಾಳಜೀ ಅವರೊಡನೆ ಶೆಟ್ಟರು ಹುಬ್ಬಳ್ಳಿಯಲ್ಲಿ ರಿಕ್ಷಾದಲ್ಲಿ ಸುತ್ತಾಡುತ್ತಿದ್ದಾಗ ದೀನ ದಯಾಳಜೀ ಅವರು ಹುಬ್ಬಳ್ಳಿ ಕರ್ನಾಟಕದ್ದೋ ಅಥವಾ ಇಂಗ್ಲಂಡ್‌ನದೋ? ಯಾಕೆಂದರೆ ಇಲ್ಲಿ ಎಲ್ಲಾಕಡೆ ಇಂಗ್ಲೀಷ್ ಬೋರ್ಡ್‌ಗಳೇ ಕಾಣುತ್ತಿವೆ. ಎಲ್ಲಾಕಡೆ ಕರ್ನಾಟಕದ ಕನ್ನಡ ಭಾಷೆಗಳ ಬೋರ್ಡ್‌ಗಳೇ ಇರುವಂತೆ ಮಾಡಬೇಕೆಂದು ಶೆಟ್ಟರಿಗೆ ಸೂಚಿಸಿದರು. ಶೆಟ್ಟರಿಗೆ ನೀವು ಸಹಿಯನ್ನು ಯಾವ ಭಾಷೆಯಲ್ಲಿ ಮಾಡುವಿರಿ ಎಂದು ಕೇಳಿ ಪ್ರತಿಯೊಬ್ಬರೂ ತಮ್ಮ ಮಾತೃ ಭಾಷೆಯಲ್ಲೇ ಸಹಿ ಮಾಡಬೇಕೆಂದರು. ಅಂದಿನಿಂದ ಶೆಟ್ಟರು ಕನ್ನಡದಲ್ಲೇ ಸಹಿ ಮಾಡ ತೊಡಗಿದರು.

ಸಿದ್ಧಾರೂಢ ಮಠದ ಹೋರಾಟ

ಹುಬ್ಬಳ್ಳಿಗೆ ರಾಷ್ಟ್ರೀಯ ಹಾಗೂ ಜಾಗತಿಕ ಮಹತ್ವ ತಂದುಕೊಟ್ಟವರೆಂದರೆ ಸದ್ಗುರು ಶ್ರೀ ಸಿದ್ಧಾರೂಢ ಸ್ವಾಮಿಗಳು. ಶ್ರೀ ಸಿದ್ಧಾರೂಢ ಮಠ ಅವರಿಂದಾಗಿ ಮಹತ್ವದ ಯಾತ್ರಾ ಸ್ಥಳವಾಗಿ ಆಧ್ಯಾತ್ಮ ಸಾಧಕರ ನೆಲೆಯಾಗಿ ಶೋಭಿಸುತ್ತಿದೆ. ಈ ಮಠದ ವಿಶ್ವಸ್ಥ ಮಂಡಳಿಗೆ ಶೆಟ್ಟರ ಆತ್ಮೀಯ ಸ್ನೇಹಿತ ಶ್ರೀ ಗೋಪಿನಾಥ ಸಾಂಡ್ರಾ ಅವರ ತಂದೆ ಶ್ರೀ ರಂಗಸ್ವಾಮಿ ಸಾಂಡ್ರಾ ಅವರು ಅಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ಸದ್ಗುರು ಸಿದ್ಧಾರೂಢರ ಕೃಪಾಶೀರ್ವಾದ ಪಡೆದು ಭಕ್ತರನ್ನು ಅನುಗ್ರಹಿಸುತ್ತಿದ್ದ ಮೌನ ಯೋಗಿ ಶ್ರೀ ಸದ್ಗುರು ಗುರುನಾಥರೂಢ ಸ್ವಾಮಿಗಳು ದೇಹ ತ್ಯಾಗ ಮಾಡಿ ಬ್ರಹ್ಮಲೀನರಾದರು. ರಂಗಸ್ವಾಮಿ ಸಾಂಡ್ರಾ ಅವರು ಮಠದ ವಿಷಯದಲ್ಲಿ ನ್ಯಾಯಾಲಯದ ತೀರ್ಪಿಗೆ ಬದ್ಧರಾಗಿ ಶ್ರೀ ಗುರುನಾಥಾರೂಢರಿಗೆ ಸೂಕ್ತ ಗೌರವ ಹಾಗೂ ಮಹತ್ವ ನೀಡಲು ಅನುಮಾನಿಸ ತೊಡಗಿದಾಗ ಶ್ರೀ ಸದಾಶಿವ ಶೆಟ್ಟರು ಆಗ ಮಠದ ಕಾರ್ಯದರ್ಶಿಯಾಗಿದ್ದ ಡಾ. ಕಲ್ಲಪ್ಪ ತಲವಾಯಿ ಮೊದಲಾದವರನ್ನು ಹುರಿದುಂಬಿಸಿ ಪ್ರಚಂಡ ಜನಾಂದೋಲನ ಸಂಘಟಿಸಿದರು. ಅದರ ಫಲವಾಗಿ ಭಕ್ತರ ಇಚ್ಛೆಯಂತೆ ಶ್ರೀ ಸಿದ್ಧಾರೂಢರ ಸಮಾಧಿ ಮಂದಿರ ಹಾಗೂ ಅವರ ಪ್ರವಚನ ವೇದಿಕೆ ಕೈಲಾಸ ಮಂಟಪದ ನಡುವೆ ಶ್ರೀ ಗುರುನಾಥಾರೂಢರ ಸಮಾಧಿ ಮಂದಿರ ಸುಂದರವಾಗಿ ನಿಲ್ಲುವಂತಾಯಿತು.

1960ರಲ್ಲಿ ಶೆಟ್ಟರು ಭಾರತೀಯ ಜನಸಂಘದಲ್ಲಿ ಸೇರಿದ ಹೊಸತರಲ್ಲೇ ಹುಬ್ಬಳ್ಳಿಯಲ್ಲಿ ನಡೆದ ಜನಸಂಘದ ಪ್ರಾಂತೀಯ ಅಧಿವೇಶನದಲ್ಲಿ ದೀನ ದಯಾಳಜೀ ಭಾಗವಹಿಸಿದ್ದರು. ಆ ಸಮಾವೇಶದಲ್ಲಿ ಸ್ವಾಗತಾಧ್ಯಕ್ಷರಾಗಿ ಮಾತನಾಡಿದ ಶೆಟ್ಟರು 'ದೇಶದಲ್ಲಿ ಕಣ್ಣು ಮುಚ್ಚಾಲೆ ಆಟದಂತೆ ನಡೆದಿರುವ ಇಂದಿನ ರಾಜಕೀಯ ಜೀವನವನ್ನು ಉದರಿಸಿ ಉನ್ನತ ಮಟ್ಟದ ತಾತ್ವಿಕ ಪ್ರಜಾತಂತ್ರದ ಯಶಸ್ವಿಗಾಗಿ ಕಷ್ಟ-ನಷ್ಟಗಳನ್ನು ಸಹಿಸುವ ಆದರ್ಶಮಯ ವ್ಯಕ್ತಿಗಳಾಗಲು ಕಂಕಣ ಬದ್ಧರಾಗೋಣ' ಎಂದು ಹೇಳಿದ ಹಾಗೆಯೇ ತಮ್ಮ ಜೀವನವನ್ನು, ರಾಜಕೀಯವನ್ನು ರಾಷ್ಟ್ರದ ಹಿತರಕ್ಷಣೆಗಾಗಿ ಹೋರಾಡುವ ವೀರ ವ್ರತವೆಂದೇ ಭಾವಿಸಿ ತ್ರಿಕರಣ ಪೂರ್ವಕ ಸೇವೆಗೆ ಬದ್ಧರಾದರು.

ಅಂದಿನಿಂದ ಶೆಟ್ಟರ ಮನೆಯ ಮುಂದೆ ಸೂರ್ಯೋದಯಕ್ಕೆ ಮೊದಲೇ ಜನರು ತಮ್ಮ ದುಃಖ ದುಮ್ಮಾನಗಳ ಪರಿಹಾರಕ್ಕಾಗಿ, ಬೇಡಿಕೆಗಳ ಈಡೇರಿಕೆಗಾಗಿ ನೆರೆದಿರುತ್ತಿದ್ದರು. ಶೆಟ್ಟರು ಎಲ್ಲರಿಗೂ ಆತ್ಮೀಯರಾಗಿ ಮಾತಾಡಿಸಿ ಕೇಳಿಕೊಂಡು ಅವರ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿದ್ದರು. ಅಗತ್ಯದ ಸಂದರ್ಭಗಳಲ್ಲಿ ಸಾರ್ವಜನಿಕ ಆಂದೋಲನ ಸಂಘಟಿಸಲು ಕೂಡಲೇ ಅಣಿಯಾಗುತ್ತಿದ್ದರು. ಕರ್ನಾಟಕ ಮೆಡಿಕಲ್ ಕಾಲೇಜ್ ಕಟ್ಟಡ ನಿಲ್ಲುವದಕ್ಕೆ ಕಾರಣರಾದ ಕೂಲಿಗಳು ಕಟ್ಟಡ ನಿರ್ಮಾಣದ ನಂತರ ಅಲ್ಲಿಂದ ಬೇರೆ ಕಡೆಗೆ ನಿರ್ಗತಿಕರಾಗಿ ಹೊರಡಬೇಕಾದಾಗ ಶೆಟ್ಟರು ಅವರ ನೆರವಿಗೆ ಧಾವಿಸಿ ಹಳೇ ಹುಬ್ಬಳ್ಳಿಯಲ್ಲಿ ಅವರಿಗಾಗಿ ಮನೆ ಕಟ್ಟಿಕೊಳ್ಳಲು ಜಾಗ ಕೊಡಿಸಿದರು. ಮಹಾನಗರ ಪಾಲಿಕೆಯ ಕ್ರಮದಿಂದಾಗಿ ಅದೇ ರೀತಿ ವಸತಿ ಮನೆಗಳನ್ನು ಕಳೆದುಕೊಂಡ ಬೇರೊಂದು ಗುಂಪು ಶ್ರೀ ಹಳ್ಳಿ ಶೆಟ್ಟರ ನೇತೃತ್ವದಲ್ಲಿ ತನ್ನ ನೋವು ತೋಡಿಕೊಂಡಾಗ ಶೆಟ್ಟರು ಅವರಿಗೂ ಆಂದೋಲನ ಮೂಲಕ ಜಾಗ ಕೊಡಿಸಿದರು. ಅಲ್ಲಿಯ ಜನರು ಶೆಟ್ಟರ ನಿಧನಾನಂತರ ತಾವು ನೆಲೆಸಿದ ಆ ಭಾಗಕ್ಕೆ ಸದಾಶಿವ ನಗರವೆಂದೇ ಹೆಸರಿಸಿ ಶೆಟ್ಟರ ಸ್ಮರಣೆಯನ್ನು ಇನ್ನೂ ಚಿರಂತನವಾಗಿಸಿದ್ದಾರೆ.

ಸದಾಶಿವ ಶೆಟ್ಟರು ವಿಧಾನ ಸಭೆ ಸದಸ್ಯರಾದ ಬಳಿಕ ರಾಜ್ಯವ್ಯಾಪಿಯಾಗಿ ಅವರ ಚಟುವಟಿಕೆಗಳು ಹೆಚ್ಚಿದವು. ಅನಂತರ ನಡೆದ ಬೇರೆ ಬೇರೆ ಕಡೆಗಳಲ್ಲಿಯ ಚುನಾವಣೆಗಳಲ್ಲಿ ತಮ್ಮ ಪಕ್ಷದ ಹುರಿಯಾಳುಗಳನ್ನು ಗೆಲ್ಲಿಸುವುದಕ್ಕಾಗಿ ಸಂಚಾರ ಕೈಕೊಳ್ಳುತ್ತಿದ್ದರು. ಹುಬ್ಬಳ್ಳಿಯಲ್ಲಿಯ ಅವರ ಮನೆ, ಪಕ್ಷದ ಕಾರ್ಯಾಲಯ ಬೆಂಗಳೂರಲ್ಲಿ ಅವರ ಬಿಡಾರ ಹೊರತು ಬೇರೆ ಕಡೆ ಎಲ್ಲಿಯೋ ಹೋದರೂ ಜನ ಅವರ ಬೆನ್ನು ಹತ್ತಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಪಡೆಯುತ್ತಿದ್ದರು. ಶೆಟ್ಟರು ಎಷ್ಟೇ ದಣಿವಾದರೂ ತೋರಗೊಡದೇ ಅವರಿಗಾಗಿ ಸದಾ ಕೆಲಸ ಮಾಡುತ್ತಲೇ ಇರುತ್ತಿದ್ದರು. ನಗುಮೊಗದಿಂದ ಎಲ್ಲರನ್ನೂ ಸ್ವಾಗತಿಸಿ ತೃಪ್ತಿಪಡಿಸುತ್ತಿದ್ದರು. ಎಡೆಬಿಡದ ಕೆಲಸಗಳಲ್ಲಿ ವಿಶ್ರಾಂತಿಯಿರಲಿ, ಊಟಕ್ಕೆ ಸಹ ಪುರುಸೊತ್ತು ಸಿಗುತ್ತಿರಲಿಲ್ಲ. ಜನ ಜಾತ್ರೆ ಇರುತ್ತಿತ್ತು. 1988ರ ಮಾರ್ಚ್ ಅಧಿವೇಶನದಲ್ಲಿಯೇ ಮೊದಲ ಬಾರಿ ದಣಿವಿನಿಂದ ಕುಸಿದು ಬಿದ್ದರು. ವೈದ್ಯಕೀಯ ಚಿಕಿತ್ಸೆಯಿಂದ ಚೇತರಿಸಿಕೊಂಡರಾದರೂ ತಮ್ಮ ಆರೋಗ್ಯ ರಕ್ಷಣೆಗೆ ವಿಶೇಷ ಕಾಳಜಿ ವಹಿಸುವದನ್ನು ಬಿಟ್ಟು ಮತ್ತೆ ಸತತ ಕ್ರಿಯಾಶೀಲರಾದರು. "ಶೆಟ್ಟರಿಗೆ ಆಗ ನಿಯಮಿತ ಆಹಾರ ಸೇವನೆ, ವಿಶ್ರಾಂತಿ ಪಡೆಯಲು ಕೊಡದೇ ಸತತವಾಗಿ ದುಡಿಸಿಕೊಂಡ ಆಡಳಿತ ಹಾಗೂ ಚುನಾವಣಾ ಪ್ರಚಾರಕ್ಕೆ ಎಳೆಯುತ್ತಿದ್ದ ಕಾರ್ಯಕರ್ತರೇ ಅವರ ಸಾವಿಗೆ ಕಾರಣರಾದರು' ಎಂದು ಅವರ ಸಹಪಾಠಿ ಮಾಜಿಮಂತ್ರಿ ಕೆ.ಎಸ್. ಬೀಳಗಿ ಈಗಲೂ ಕಣ್ಣೀರು ಸುರಿಸುತ್ತಾರೆ. ಅನೇಕ ಹಿತೈಷಿಗಳು, ಕಾರ್ಯಕರ್ತರು ವಿಶ್ರಾಂತಿ ಪಡೆಯುವಂತೆ ಹೇಳಿ ನೋಡಿದರೂ ಶೆಟ್ಟರು ಅವರ ಮುಖ ನೋಡಿ 'ಒಳ್ಳೇದು ಹಾಗೆಯೇ ಮಾಡ್ತೀನಿ' ಎಂದು ನಗುಮೊಗದಿಂದ ಉತ್ತರಿಸಿ ಸಮಾಧಾನ ಹೇಳಿದರೂ ಜನರ ಕಡೆ ಹೊರಳಿದಾಗ ಮತ್ತೆ ಎಲ್ಲ ಮರೆತು ಅವರ ಸಮಸ್ಯೆಗಳತ್ತ ಲಕ್ಷ್ಯ ಕೇಂದ್ರೀಕರಿಸಿ ಅವರಿಗಾಗಿ ತಕ್ಕೈಯಿಸುತ್ತಿದ್ದರು.

ಹೀಗೆಯೇ ಅವರ ದಿನಚರಿ ಸಾಗಿರಬೇಕಾದರೆ 1988 ಡಿಸೆಂಬರ್ 9ರಂದು ಬೆಳಿಗ್ಗೆ ಹತ್ತರ ವರೆಗೆ ಕ್ರಿಯಾಶೀಲರಾಗಿದ್ದು ನಂತರ ಎದೆ ನೋವು ಕಾಣಿಸಿಕೊಂಡು ಒರಗಿಕೊಂಡರು. ಕೂಡಲೇ ಸುದ್ದಿ ತಿಳಿದ ಅವರ ಆಪ್ತಮಿತ್ರ, ಗೋಪಿನಾಥ ಸಾಂಡ್ರಾ, ದೀನಾನಾಥ ಸಾಂಡ್ರಾ, ಬಂಧುಗಳು ಧಾವಿಸಿ ಅವರನ್ನು ತಕ್ಷಣ ಕೆ.ಎಂ.ಸಿ. ಆಸ್ಪತ್ರೆಗೆ ಸಾಗಿಸಿದರು. ಶೆಟ್ಟರು ಅಲ್ಲಿ ಚಿಕಿತ್ಸೆ ಫಲಿಸದೇ ಮಧ್ಯಾಹ್ನ 2 ಗಂಟೆಗೆ ಕೊನೆಯುಸಿರೆಳೆದರು.

ಶೆಟ್ಟರ ನಿಧನದ ವಾರ್ತೆ ಕ್ಷಣಾರ್ಧದಲ್ಲೇ ಎಲ್ಲೆಡೆ ಬರಸಿಡಿಲಿನಂತೆರಗಿ ಇಡೀ ಕನ್ನಡ ನಾಡನ್ನೇ ಶೋಕ ಸಾಗರದಲ್ಲಿ ಮುಳುಗಿಸಿತು. ಹುಬ್ಬಳ್ಳಿ-ಧಾರವಾಡ ನಗರ ಸುತ್ತಮುತ್ತಲಿನ ಹಳ್ಳಿಗಳಂತೂ ದುಃಖದಿಂದ ಕಳೆಗೆಟ್ಟವು. ಎಲ್ಲೆಡೆ ಅಘೋಷಿತ ಹರತಾಳ ನಡೆಯುತ್ತಿರುವಂತೆ ಕಂಡು ಬಂದಿತು. ಆಬಾಲ ವೃದ್ಧರನ್ನೊಳಗೊಂಡಂತೆಯೇ ಸಹಸ್ರಾರು ಅಭಿಮಾನಿಗಳು ತಂಡೋಪತಂಡವಾಗಿ ಶೆಟ್ಟರ ಮನೆಗೆ ಧಾವಿಸಿ ಅಗಲಿದ ನಾಯಕನಿಗೆ ಅಶ್ರುತರ್ಪಣದ ಧಾರೆಯರೆಯ ತೊಡಗಿದರು.

ಅಪೂರ್ವ ಅಂತ್ಯಯಾತ್ರೆ

'ನೀವು ನಿಮ್ಮ ಪಯಣದ ಕೊನೆಯಲ್ಲಿ ಈ ಜಗವನ್ನೇ ಗೆಲಿದಿರಿ. ಇದೇನೂ ಪವಾಡವಲ್ಲ, ನೀವೇ ಹಿಂದೊಮ್ಮೆ ಹಿಂಡು ಹಿಂಡಾಗಿ ಬಂದು ಒಂದೇ ಸವನೇ ಕಿರುಕುಳ ನೀಡುತ್ತಿದ್ದ ಅಜ್ಞಾನ ತಮಸ್ಸುಗಳನ್ನು ಕೇವಲ ಕಿರಣಗಳ ಸ್ಪರ್ಶ ಮಾತ್ರದಿಂದ ಸುಟ್ಟು ಹಾಕುತ್ತಿದ್ದ ಸೂರ್ಯನ ದಿವ್ಯ ಪ್ರಕಾಶವನ್ನು ಪ್ರತ್ಯಕ್ಷ ಕಂಡು ಅನುಭವಿಸಿದ್ದಿರಿ. ಆ ಪ್ರಕಾಶ ಬೇರೇನೂ ಆಗಿರದೇ ದಿವ್ಯ ಪ್ರೇಮವಾಗಿತ್ತು. ಅಂತಹ ದಿವ್ಯ ಪ್ರೇಮದಿಂದಲೇ ತಾವು ಈಗ ನಿಮ್ಮ ಪಯಣದ ಕೊನೆಯಲ್ಲಿ ವಿಶ್ವ ವಿಜಯಿಯೇ ಸೈ' ಎಂದು ಮಹಾದಾರ್ಶನಿಕ, ಕವಿ, ಗಾಯಕ ದಿಲೀಪ್‌ಕುಮಾರ ರಾಯ್ ತನ್ನ ಗುರುಗಳಾಗಿದ್ದ ಮಹಾಯೋಗಿ ಮಹರ್ಷಿ ಅರವಿಂದರು ಬ್ರಹ್ಮಲೀನರಾದ ಸಂದರ್ಭದಲ್ಲಿ ಹಾಡಿದ್ದಾರೆ.

ಶಾಸಕ ಸದಾಶಿವ ಶೆಟ್ಟರು 1968 ಡಿಸೆಂಬರ್ 9ರಂದು ಹೃದಯಾಘಾತದಿಂದ ನಿಧನರಾದಾಗ ಆ ಸುದ್ದಿ ಹರಡಿದ ತಕ್ಷಣ ಅಭಿಮಾನಿಗಳು, ಆತ್ಮೀಯರು ತಂಡೋಪತಂಡಗಳಾಗಿ ಅವರ ನಿವಾಸಕ್ಕೆ ಬಿಕ್ಕಿ ಬಿಕ್ಕಿ ಅಳುತ್ತ ಶೆಟ್ಟರ ಸೇವೆಯನ್ನು ನೆನೆಯುತ್ತ ಧಾವಿಸುತ್ತಿದ್ದನ್ನು ಕಂಡಾಗ ಅರವಿಂದರ ಬಗೆಗಿನ ಈ ಉಕ್ತಿ ನೆನಪಿಗೆ ಬರುತ್ತಿತ್ತು.

ಹುಬ್ಬಳ್ಳಿಯ ಎಲ್ಲ ಬೀದಿಗಳೂ ಸಾಲು ಸಾಲಾಗಿ,ಗುಂಪು ಗುಂಪಾಗಿ ಶೋಕ ಸಂತಪ್ತ ಅಬಾಲ ವೃದರು, ಮಹಿಳೆಯರು, ಸಮಾಜದ ಎಲ್ಲ ಜಾತಿಮತ, ವರ್ಗಗಳ ಜನರು, ವಿವಿಧ ಪಕ್ಷಗಳ ಕಾರ್ಯಕರ್ತರು ವಿವಿಧ ಉದ್ಯೋಗಳವರುಗಳಿಂದ ತುಂಬಿ ಹೋಗಿದ್ದುವು. ಸಾಗರೋಪಾದಿಯಲ್ಲಿ ಜನಸ್ತೋಮ ಬರುತ್ತಿದ್ದರೂ ನೂಕು ನುಗ್ಗಲು, ಗೊಂದಲ ಮಾತ್ರವಿರಲಿಲ್ಲ. ದಿವಂಗತ ಶೆಟ್ಟರ ಗುಣಗಾನ, ಶಿವನಾಮ ಸಂಕೀರ್ತನೆಯ ಭಜನ ಇವುಗಳನ್ನು ಬಿಟ್ಟರೆ ಎಲ್ಲ ಬೀದಿಗಳು ಮೌನವನ್ನೇ ತಳೆದಿದ್ದವು.

ಶೆಟ್ಟರ ನಿವಾಸ ಸಮೀಪಿಸುತ್ತಿರುವ ಹಾಗೆಯೇ ಆತ್ಮೀಯರ, ಅಭಿಮಾನಿಗಳ ಶೋಕಾಕುಲರ ಆಕ್ರೋಶ, ಚೀತ್ಕಾರಗಳು ಗಗನ ಚುಂಬಿಯಾಗಿ ದುಮದುಮಿಸುತ್ತಿದ್ದವು. ದಿವಂಗತ ಶೆಟ್ಟರ ಪತ್ನಿ ಪುರದವ್ವ (ಗಂಗಮ್ಮ) ಸೋದರ ಬಸವರಾಜ ಅವರ ದುಃಖ ಮಿತಿ ಮೀರಿತ್ತು. ಏನನ್ನೂ ಅರಿಯದ ಹಸುಳೆ ಶಂಕ್ರಪ್ಪ, ಗಂಗಾಧರ, ಮನೋಹರ ಅವರು ದಿಗ್ಭ್ರಾಂತರಾಗಿ ಅಳುತ್ತ ಕುಳಿತಿದ್ದರು.

ನಿಧನ ವಾರ್ತೆ ತಿಳಿದ ತಕ್ಷಣ ಹುಬ್ಬಳ್ಳಿ ನಗರದ ಬೀದಿಗಳ ಎಲ್ಲ ಕೂಡು ರಸ್ತೆ ಕೂಟಗಳಲ್ಲಿ ದಿವಂಗತ ಶೆಟ್ಟರ ಭಾವಚಿತ್ರಗಳು ಪೂಜೆಗೊಳ್ಳ ತೊಡಗಿದ್ದವು. ಮರುದಿನ ಅಂತ್ಯ ಯಾತ್ರೆ ಸಾಗಿ ಅಂತ್ಯಕ್ರಿಯೆ ನಡೆಯುವ ತನಕ ಇಂಥ ಪೂಜೆ ನಡದೇ ಇತ್ತು. ದಿ. 9 ಹಾಗೂ ಮರುದಿನದಂದು ಹುಬ್ಬಳ್ಳಿ ಮಲಗಲೇ ಇಲ್ಲ. ಎಲ್ಲ ಬೀದಿಗಳೂ ಶೆಟ್ಟರ ಭಾವಚಿತ್ರಗಳ ಅಲಂಕಾರ ಪೂಜೆ ಹೊಂದಿ ಎಲ್ಲಿ ನೋಡಿದರೂ ಅಭಿಮಾನಿಗಳು ಬಿಕ್ಕಿ ಬಿಕ್ಕಿ ಅಳುತ್ತಿರುವದು ಕಂಡು ಬರುತ್ತಿತ್ತು.

ಶೆಟ್ಟರ ಮನೆತನದ ಮೂಲ ಪುರುಷ ಹೊಸ ಹುಬ್ಬಳ್ಳಿ ಸ್ಥಾಪಕ ಲಿಂಗೈಕ್ಯ ಬಸಪ್ಪ ಶೆಟ್ಟರ, ಹಿರೇಪೇಟ, ಸರಾಫ್ ಗಟ್ಟಿ ಚೌಕದಲ್ಲಿಯಲ್ಲಂತೂ ವಿಶೇಷ ಪೂಜೆಯಾಗಿತ್ತು. ಅಂತ್ಯಯಾತ್ರೆ ಮೆರವಣಗೆ ಶೆಟ್ಟರ ನಿವಾಸದಿಂದ ಹೊರಟಿತೇನೋ

ಸರಿ, ಆದರೆ ನಾಡಿನ ಎಲ್ಲ ಭಾಗಗಳಿಂದ ಬಂದ ಅಭಿಮಾನಿಗಳು ಆವಾಗಲೇ ಮನೆಯಿಂದ ಬೀಡ್ನಾಳ ಗ್ರಾಮದಲ್ಲಿ ಅವರ ಅಂತ್ಯಕ್ರಿಯೆಯ ಸ್ಥಳದ ವರೆಗೆ ಸಾಲು ಸಾಲಾಗಿ ನಡೆದೇ ಬಿಟ್ಟಿದ್ದರು. ಮೆರವಣಿಗೆ ಹೀಗೆ ಮೈಲುಗಟ್ಟಲೇ ಉದ್ದವಾಗಿದ್ದು ಜನರನ್ನು ದಾಟಿಕೊಂಡು ಅಂತ್ಯಕ್ರಿಯೆ ಸ್ಥಳ ತಲುಪಲು ಆರು ಗಂಟೆ ಹಿಡಿಯಿತು. ಈ ಅಂತ್ಯಯಾತ್ರೆಯನ್ನು ನೋಡುತ್ತಿದ್ದ ಹಾಗೆಯೇ ಊರಿಗೆ ಹಿರಿಯರಾಗಿದ್ದ ಹುಬ್ಬಳ್ಳಿ ನಗರಸಭೆಯ ಹಿಂದಿನ ಅಧ್ಯಕ್ಷ ಕೊರವಿ ಸಂಗಪ್ಪಣ್ಣನವರು 'ಹುಬ್ಬಳ್ಳಿಗೆ ವಿಶ್ವ ವಿಖ್ಯಾತಿಯನ್ನು ತಂದುಕೊಟ್ಟ ಸದ್ಗುರು ಸಿದ್ಧಾರೂಢ ಸ್ವಾಮಿಗಳ ಅಂತ್ಯಯಾತ್ರೆ ಮೆರವಣಿಗೆಯೊಂದನ್ನೇ ಇಷ್ಟು ದೊಡ್ಡದನ್ನಾಗಿ ನಾನು ನೋಡಿದ್ದೆ. ಆದಾದ ನಂತರ ಇಷ್ಟೊಂದು ಭಾರೀ ಪ್ರಮಾಣದ ಶೋಕ ಸಂತಪ್ತ ಅಂತ್ಯಯಾತ್ರೆಯನ್ನು ಇಂದೇ ನಾನು ನೋಡುತ್ತಿದ್ದೇನೆ' ಎಂದು ಉದ್ಗಾರ ತೆಗೆದಿದ್ದರು.

ಶೆಟ್ಟರ ಮಠವೆಂದೇ ಗುರುತಿಸಲ್ಪಡುವ ಶ್ರೀ ಜಗದ್ಗುರು ಮೂರುಸಾವಿರಮಠಕ್ಕೆ ಮೂಲವೆನಿಸಿದ ಹುಬ್ಬಳ್ಳಿಯ ಅಕ್ಕಿಹೊಂಡದ ಶ್ರೀ ಹೊಸಮಠದ ಶಿವಬಸವ ಸ್ವಾಮಿಗಳವರು ಭಕ್ತಿ ಎಂಬ ಪೃಥ್ವಿಯ ಮೇಲೆ ಬೀಜವಂಕುರಿಸಿ ಲಿಂಗವೆಂಬ ಎಲೆಯಾಯಿತ್ತು. ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು. ಆಚಾರವೆಂಬ ಕಾಯಾಯಿತ್ತು ನಿಷ್ಪತ್ತಿಯೆಂಬ ಹಣ್ಣಾಯಿತ್ತು. ನಿಷ್ಪತ್ತಿ ಎಂಬ ಹಣ್ಣು ತೊಟ್ಟು ಬಿಚ್ಚಿ ಕಳಚಿ ಬೀಳುವಲ್ಲಿ ಕೂಡಲ ಸಂಗಮ ದೇವ ತನಗೆ ಬೇಕು ಎಂದು ಎತ್ತಿಕೊಂಡ ಎಂದು ಬಸವಣ್ಣನವರ ವಚನವನ್ನು ಹೇಳುತ್ತ ಶೆಟ್ಟರು ಸಮಾಜ ಸೇವೆಯಲ್ಲಿ, ರಾಜಕಾರಣದಲ್ಲಿ ಪಳಗಿದ್ದರು. ಮಾಗಿದ ಸಿಹಿ ಹಣ್ಣೆ ಅವರಾಗಿದ್ದರು. ಸಮಾಜಕ್ಕೆ ಸಿಹಿಯುಣಿಸಲಿದ್ದರು. ಈಗ ಶಿವ ಅವರನ್ನು ತನಗೆ ಬೇಕೆಂದು ಮೇಲೆತ್ತಿ ಒಯ್ದಿದ್ದಾನೆ. ವಿರಕ್ತನಾದ ನನಗೆಯೇ ದುಃಖವಾಗುತ್ತದೆ. ಎಂದ ಮೇಲೆ ಈ ಜನಸಾಗರದ ಉಕ್ಕಿ ಬರುತ್ತಿರುವ ಶೋಕಸಾಗರ ಹೆಚ್ಚೇನಿಲ್ಲ ಎಂದು ದುಃಖಿಸಿದ್ದರು.

ಶ್ರೀ ಮೂರುಸಾವಿರಮಠದ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು 'ಶಿವಭಕ್ತಿಯ ಪರಂಪರೆಯನ್ನು ಬಳುವಳಿಯಾಗಿ ಪಡೆದ ಸದಾಶಿವ ಶೆಟ್ಟರು ಸಕಲರಿಗೂ ಶಿವವನ್ನೇ ಮಂಗಲವನ್ನೇ ಬಯಸಿ ಹೋರಾಡುತ್ತ ಶ್ರಮಿಸುವ ಆದರ್ಶ ರಾಜಕಾರಣಿಗಳಾಗಿದ್ದರು. ಅವರ ನಿಧನ ತುಂಬಿ ಬಾರದ ಹಾನಿ. ಶಿವನು ಅಂಥ ಚೇತನಗಳನ್ನು ಈ ಜಗತ್ತಿಗೇ ಎಷ್ಟು ನೀಡಿದರೂ ಕಡಿಮೆಯೇ' ಎಂದರು.

ಲೋಕಸಭೆಯಲ್ಲಿ ಕೈ ಬೆರಳಗಳಲ್ಲಿ ಎಣಿಸುವಷ್ಟೇ ಕಡಿಮೆ ಬಲವನ್ನು ಭಾರತೀಯ ಜನಸಂಘ ಹೊಂದಿ ಎಂದೆಂದೂ ಅಧಿಕಾರಕ್ಕೆ ಬರಲು ಸಾಧ್ಯವೇ ಇಲ್ಲ ಎಂಬ ಸ್ಥಿತಿಯಿದ್ದಾಗಲೇ ಆಗಿನ ಪ್ರಧಾನಿ ಪಂಡಿತ್ ಜವಾಹರಲಾಲ ನೆಹರು ಅವರು ಅಟಲ್ ಬಿಹಾರಿ ವಾಜಪೇಯಿ ಬಗ್ಗೆ ಇವರು ಮುಂದೆ ಎಂದಾದರೂ ಪ್ರಧಾನಿಯಾಗಿ ರಾಷ್ಟ್ರದ ಆಡಳಿತ ಸೂತ್ರವನ್ನು ಹಿಡಿದಾರು ಎಂದು ಉದ್ಗಾರ ತೆಗೆದಿದ್ದರು. ಅದು ನಂತರ ನಿಜವೂ ಆದುದ್ದನ್ನು ಕಂಡಿದ್ದೇವೆ.

1968ರಲ್ಲಿ ಶಾಸಕ ಸದಾಶಿವ ಶೆಟ್ಟರು ನಿಧನ ಹೊಂದುವದಕ್ಕೆ ಕೆಲ ದಿನಗಳ ಮುಂಚೆ ಮುಖ್ಯಮಂತ್ರಿ ಎಂದು ಕರ್ನಾಟಕ ಸರ್ಕಾರದ ಚುಕ್ಕಾಣಿ ಹಿಡಿದ ವೀರೇಂದ್ರ ಪಾಟೀಲರೂ ಶೆಟ್ಟರ ವಿಷಯದಲ್ಲಿ ವಿಧಾನಸಭೆಯಲ್ಲಿ ಭಾರತೀಯ ಜನಸಂಘವು ಕೇವಲ ನಾಲ್ವರ ಸದಸ್ಯರ ಬಲ ಹೊಂದಿದ್ದರೂ ಹೀಗೆಯೇ ಉದ್ಗರಿಸಿದ್ದರು. ಅವರ

ಮಾಡು ಪಕ್ಷದ ರೂಪ ತಳೆಯುವುದಕ್ಕೆ ಮುನ್ನವೇ ಶಿವನು ಶೆಟ್ಟರರನ್ನು ತನ್ನ ಬಳಿ ಕರೆಯಿಸಿಕೊಂಡ. ಶೆಟ್ಟರು ನಿಧನ ಹೊಂದಿದ ಒಂದು ವಾರದ ನಂತರ ಹುಬ್ಬಳ್ಳಿಗೆ ಆಗಮಿಸಿದ ವೀರೇಂದ್ರ ಪಾಟೀಲರು ತಮ್ಮ ಕಾರನ್ನು ಟ್ರಾಫಿಕ್ ಐಲೆಂಡ್ ಬಳಿಯೇ ನಿಲ್ಲಿಸಿ ಅಲ್ಲಿಂದ ಸ್ವತಃ ತಾಡಪತ್ರಿ ಗಲ್ಲಿಯ ಶೆಟ್ಟರ ನಿವಾಸದ ತನಕ ನಡೆದು ಬಂದು ಶೆಟ್ಟರ ಭಾವಚಿತ್ರಕ್ಕೆ ಹೂ ಮಾಲೆ ಅರ್ಪಿಸಿ ದುಃಖಿಸಿ ಅವರ ಕುಟುಂಬದ ಹಾಗೂ ಪಕ್ಷದ ಕಾರ್ಯಕರ್ತರ ದುಃಖದಲ್ಲಿ ಪಾಲ್ಗೊಂಡಿದ್ದರು. ಶೆಟ್ಟರು ಪಕ್ಷದ ಕಾರ್ಯಕರ್ತರಾಗಿ, ಕಾರ್ಮಿಕರ ನಾಯಕರಾಗಿ, ಯುವಜನರ ನೇತಾರರಾಗಿ, ಬಡಜನರ ಹಿತಕ್ಕಾಗಿ ಅವಿಶ್ರಾಂತ ದುಡಿದು ಜನಸೇವೆ ಮಾಡುತ್ತಲೇ ಕೊನೆಯುಸಿರೆಳೆದ ವೀರರು. ಎಲ್ಲ ಪಕ್ಷಗಳವರಿಗೂ ಅನುಕರಣೀಯ ಎಂದು ನುಡಿದಿದ್ದರು. ಅಖಿಲ ಭಾರತೀಯ ಜನಸಂಘದ ಕಾರ್ಯದರ್ಶಿಗಳಾಗಿದ್ದ ಶ್ರೀ ಜಗನ್ನಾಥರಾವ್ ಜೋಶಿ ಅವರು ಈ ಉತ್ಸಾಹಿ ತರುಣ ಶೆಟ್ಟರರನ್ನು ನಾವು ಇಲ್ಲಿಯೇ ಇರಗೊಡುವುದಿಲ್ಲ, ದಿಲ್ಲಿಗೆ ಒಯ್ಯುವರಿದ್ದೇವೆ. ಮುಂದಿನ ಸಲ ನೀವು ಪ್ರಚಂಡ ಬಹುಮತದಿಂದ ಲೋಕಸಭೆಗೆ ಇವರನ್ನು ಆರಿಸಿ ಕಳಿಸಬೇಕು. ಲೋಕಸಭೆಯಲ್ಲಿ ಶೆಟ್ಟರನ್ನು ಈ ಭಾಗದ ಪ್ರತಿನಿಧಿಯಾಗಿ ತಮ್ಮ ಧ್ವನಿಯಾಗಿಸಬೇಕೆಂದು ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದರು. ಅವರು ತಮ್ಮ ಬಯಕೆ ಕೈಗೂಡದಿರುವುದಕ್ಕೆ ದುಃಖಿಸಿದರು.

ಸದಾಶಿವ ಶೆಟ್ಟರ ವಂಶಾವಳಿ

ಗೋಕಾಕದ ಬಾಡಪ್ಪ ಶೆಟ್ಟರ (ಮೂಲ ಪುರುಷರು)

- ಮುದಿ ಮಲ್ಲ ಶೆಟ್ಟರ ಅಣ್ಣ
- ಸಣ್ಣ ಶೆಟ್ಟರ (ತಮ್ಮ) ಹೊಸ ಹುಬ್ಬಳ್ಳಿ ನಿರ್ಮಾಪಕ
  - ಮುದಿಯಪ್ಪ
    - ಚನ್ನಪ್ಪ
    - ಶಿವಪ್ಪ
    - ಗುರುಸಿದ್ದಪ್ಪ
      - ಶಿವಲಿಂಗಪ್ಪ
      - ಚನ್ನಬಸಪ್ಪ
      - ಮಲ್ಲಿಕಾರ್ಜುನಪ್ಪ
      - ಬಸಪ್ಪ
      - ಮುದಿಯಪ್ಪ
      - ಶಿವಪ್ಪ
        - ಗುರುಸಿದ್ದಪ್ಪ
        - ಚನ್ನಪ್ಪ
          - ವೀರಪ್ಪ
          - ಚಪ್ಪ
          - ಶಿವಪ್ಪ (ಸದಾಶಿವ ಶೆಟ್ಟರ ಅಜ್ಜ)
            - ಶಂಕ್ರಪ್ಪ (ಸದಾಶಿವ ಶೆಟ್ಟರ ತಂದೆ)
              - ಸದಾಶಿವ ಶೆಟ್ಟರು (ಮಾಜಿ ಎಂ.ಎಲ್.ಎ. ಮತ್ತು ಎಂ.ಪಿ.)
                - ರಂಗಪ್ಪ
                  - ಶಶಿಧರ
                - ಗಂಗಾಧರ
                - ಚಂದ್ರಶೇಖರ
              - ಬಸವರಾಜ (ಸದಾಶಿವ ಶೆಟ್ಟರ ತಮ್ಮ)
                - ಶಿವಶಂಕರ
                - ಪ್ರಕಾಶ
            - ಸಂಗಪ್ಪ
            - ಬಸಪ್ಪ
        - ಬಸವಣ್ಣೆಪ್ಪ
  - ಚನ್ನಬಸಪ್ಪ
  - ಗುರುಸಿದ್ದಪ್ಪ (ಜಗದ್ಗುರು ಮೂರು ಸಾವಿರ ಮಠದ ಜಗದ್ಗುರುಗಳು)

ಕೃತ್ಯ ಕಾಯಕವಿಲ್ಲದವರು ಭಕ್ತನಲ್ಲ;
ಸತ್ಯ ಶುದ್ಧವಿಲ್ಲದುದು ಕಾಯಕವಲ್ಲ;
ಆಸೆಯೆಂಬುದು ಭವದ ಬೀಜ;
ನಿರಾಸೆಯೆಂಬುದು ನಿತ್ಯಮುಕ್ತಿ.
ಉರಿಲಿಂಗ ಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ
– ವೀರಮ್ಮ

ಭಾಗ–೨

ಸದಾಶಿವ .ಎಸ್. ಶೆಟ್ಟರ್

ಸದಸದ ಮೌಲಿಕ ಚಿಂತನೆಗಳು

ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು
ಲಿಂಗ ಪೂಜೆಯಾದರೂ ಮರೆಯಬೇಕು.
ಜಂಗಮ ಮುಂದೆ ನಿಂತಿದ್ದರೂ ಹಂಗ ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ.
ಅಮಲೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು.
– ಬೊಂತಾದೇವಿಯ ವಚನ – ೧೯೨

ವಿಧಾನ ಸಭೆಯಲ್ಲಿ ಜನ ಸಂಘದ ಪ್ರವೇಶ

15ನೇ ಮಾರ್ಚ್ 1967

ಶ್ರೀಯುತ ಸದಾಶಿವ ಶಂಕರಪ್ಪ ಶೆಟ್ಟರ ಅವರು 1967 ರ ಮಾರ್ಚದಲ್ಲಿ ಹುಬ್ಬಳ್ಳಿ ನಗರ ಮತಕ್ಷೇತ್ರದಿಂದ ಮೈಸೂರ (ಕರ್ನಾಟಕ) ರಾಜ್ಯ ವಿಧಾನಸಭೆಗೆ ಭಾರತೀಯ ಜನಸಂಘದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಆಯ್ಕೆಯಾದರು. ಮರುವರ್ಷ 1968 ಡಿಸೆಂಬರ 9 ರಂದು ಸ್ವರ್ಗಸ್ಥರಾಗುವ ತನಕ ಶಾಸಕರಿದ್ದು ವಿಧಾನಸಭೆ ಕಾರ್ಯಕಲಾಪಗಳಲ್ಲಿ ಕೇವಲ ಒಂದೂವರೆ ವರ್ಷ ಮಾತ್ರ ಭಾಗವಹಿಸಿದ್ದರು. ವಿಧಾನಸಭೆಯಲ್ಲಿ ಸಮಸ್ತ ಕನ್ನಡ ಜನತೆಯ ವಿಶೇಷವಾಗಿ ಉತ್ತರ ಕರ್ನಾಟಕದ ಜನರ ದುಃಖ ದುಮ್ಮಾನಗಳಿಗೆ ಪರಿಣಾಮಕಾರಿ ಧ್ವನಿಯಾಗಿದ್ದರು.

ಈ ಅಲ್ಪಾವಧಿಯಲ್ಲೇ ಅವರು ವಿಧಾನಸಭಾಧ್ಯಕ್ಷ ಬಿ. ವೈಕುಂಠ ಬಾಳಿಗಾ, ಮುಖ್ಯಮಂತ್ರಿ ಸಿದ್ದವನಹಳ್ಳಿ ನಿಜಲಿಂಗಪ್ಪ ನಂತರದ ಮುಖ್ಯಮಂತ್ರಿ ವೀರೇಂದ್ರ ಪಾಟೀಲ ಎಚ್. ಸಿದ್ದವೀರಪ್ಪ ಎಸ್.ಡಿ. ಕೋಠಾವಳೆ, ರಾಮಕೃಷ್ಣ ಹೆಗಡೆ ಮೊದಲಾದ ಸಂಸದೀಯ ಪಟುಗಳ ಮೆಚ್ಚುಗೆ ಗಳಿಸಿ, ಸದನದ ಸರ್ವ ಸದಸ್ಯರ ಗಮನ ಸೆಳೆದು ಅತ್ಯುತ್ತಮ ಪ್ರಭಾವೀ ಸಂಸದೀಯ ಪಟುಗಳಲ್ಲೊಬ್ಬರೆನಿಸಿದರು.

ವಿಧಾನಸಭೆ ನಾಲ್ಕನೆಯ ಅಧಿವೇಶನದ ಆರಂಭದ ದಿನ 1967 ಮಾರ್ಚ 15 ರಂದು ಭಾರತೀಯ ಜನಸಂಘ ಗುಂಪಿನ ಧುರೀಣರಾಗಿ ಸದಾಶಿವ ಶೆಟ್ಟರು ಸಭಾಧ್ಯಕ್ಷ ಸ್ಥಾನಕ್ಕೆ ಪುನರಾಯ್ಕೆಗೊಂಡ ಬಿ. ವೈಕುಂಠ ಬಾಳಿಗರನ್ನು ಅಭಿನಂದಿಸಿದ ತಮ್ಮ ಮೊದಲ ಭಾಷಣದಲ್ಲಿ ಸಭಾಧ್ಯಕ್ಷರೊಂದಿಗೆ ತಮ್ಮ ಆತ್ಮೀಯ ಸಂಬಂಧ ಕುದುರಿಸಿಕೊಂಡ ಬಗ್ಗೆ.

''ಭಾರತೀಯ ಜನಸಂಘವು ಮೊಟ್ಟಮೊದಲನೆಯದಾಗಿ ಮೈಸೂರ ಅಸೆಂಬ್ಲಿಯನ್ನು ಪ್ರವೇಶಿಸುತ್ತಿರುವುದು, ತಾವು ಮತ್ತೆ ಅಧ್ಯಕ್ಷರಾಗಿ ಆರಿಸಿಬಂದಿರುವುದು ಬಹಳ ಸಂತೋಷಕರ ಸಂಗತಿ. ತಮ್ಮ ಘನತೆ, ಗೌರವಗಳನ್ನು, ನಿಷ್ಪಕ್ಷಪಾತತನದಿಂದ ತಾವು ವರ್ತಿಸುತ್ತಿರುವುದನ್ನು ಕೇಳಿದ್ದೇನೆ''

''ಇಲ್ಲಿ ತಾವು ತೆಗೆದುಕೊಳ್ಳತಕ್ಕಂತಹ ನಿರ್ಣಯ ಯಾವ ರೀತಿಯಿಂದಲಾದರೂ ಕೂಡ ಪಕ್ಷಪಾತದ್ದಾಗಿರಬಾರದು, ಮತ್ತು ಇನ್ನು ಮುಂದೆಯೂ ವಿರೋಧ ಪಕ್ಷಕ್ಕೆ ಯೋಗ್ಯ ಸಮಯವನ್ನು ಕೊಡುತ್ತಿರಬೇಕು ಎಂದು ಸಭಾಧ್ಯಕ್ಷರಿಗೆ ಕೇಳಿಕೊಳ್ಳುತ್ತ ಶೆಟ್ಟರು'' ಈಗ ನಾವು ನಾಲ್ಕು ಜನ ನಮ್ಮ ಭಾರತೀಯ ಜನಸಂಘ ಪಕ್ಷದಿಂದ ಆರಿಸಿ ಬಂದಿದ್ದೇವೆ. ಆದ್ದರಿಂದ ನಮ್ಮೆಲ್ಲರನ್ನೂ ನಿಷ್ಪಕ್ಷಪಾತತನದಿಂದ ನೋಡಿಕೊಂಡಿರಬೇಕೆಂದು ಪ್ರಾರ್ಥಿಸಿ ತಮಗೆ ವಂದನೆಯನ್ನು ಸಲ್ಲಿಸುತ್ತೇನೆ''

ಸಭಾಧ್ಯಕ್ಷರ ಗೈರುಹಾಜರಿಯಲ್ಲಿ ಇನ್ನೊಬ್ಬರು ಸಭಾಧ್ಯಕ್ಷತೆ ವಹಿಸುವ ವಿಷಯದಲ್ಲಿ ಮೇ 4 ರಂದು ಶೆಟ್ಟರು ವಿಧಿಬಿಂದುವೊಂದನ್ನು ಎತ್ತಿದಾಗ ಮಾನ್ಯ ಸದಸ್ಯ ಶೆಟ್ಟರ ಅವರಿಗೆ "ಈಗ ವಿಧಿಬಿಂದುವನ್ನು ಎತ್ತಲಾಗದು ಆದರೆ ಅವರು ತಮ್ಮ ಮನವಿಯೆಂದು ಇದನ್ನು ಸಲ್ಲಿಸಲಿ. ಮನವಿಯಾಗಿಯೂ ನಾನಿದನ್ನು ಒಪ್ಪಿಕೊಳ್ಳದೇ ಇರಬಹುದಿತ್ತು. ಕಾಯ್ದೆ ಅಂಶವೇನೂ ಇದರಲ್ಲಿಲ್ಲ. ಆದರೂ ಮಾನ್ಯ ಸದಸ್ಯರ ಬಗ್ಗೆ ಪ್ರೇಮಭಾವವಿರುವುದರಿಂದಲೇ ಅವರ ಮನವಿಯನ್ನು ಸ್ವೀಕರಿಸಿ ಚರ್ಚೆಗೆ ಅವಕಾಶ ಕೊಡುತ್ತಿದ್ದೇನೆ.' ಎಂದು ಸಭಾಧ್ಯಕ್ಷ ವೈಕುಂಠ ಬಾಳಿಗಾ ಅವರು ಹೇಳಿ ಶೆಟ್ಟರ ಬಗ್ಗೆ ತಮ್ಮ ಆತ್ಮೀಯತೆ ವ್ಯಕ್ತಪಡಿಸಿದುದು ಒಂದು ಹೃದಯ ಸ್ಪರ್ಶಿ ಸನ್ನಿವೇಶ.

ಶ್ರೀ ಎಸ್. ಎಸ್. ಶೆಟ್ಟರ (ಹುಬ್ಬಳ್ಳಿ) : ಸಭಾಧ್ಯಕ್ಷರು ತಮ್ಮ ಅನುಪಸ್ಥಿತಿಯಲ್ಲಿ ಸಭಾಧ್ಯಕ್ಷತೆ ವಹಿಸಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆಂದು ಶ್ರೀಎಸ್. ಡಿ. ಕೋಠಾವಳೆಯವರನ್ನು ಆಹ್ವಾನಿಸಿರುವುದಕ್ಕೆ ವಿಧಿಬಿಂದುವನ್ನು ಎತ್ತುತ್ತಿದ್ದೇನೆ.

ಸಭಾಧ್ಯಕ್ಷರು : ಈ ವಿಷಯದಲ್ಲಿ ವಿಧಿಬಿಂದುವನ್ನು ಎತ್ತುವಂಥದೇನಿದೆಂಬುದನ್ನು ಸದಸ್ಯರು ನನಗೆ ಮೊದಲಿಗೆ ಖಚಿತ ಮಾಡಿಕೊಡಲಿ, ಸಭಾಧ್ಯಕ್ಷರು ತಮ್ಮ ಗೈರುಹಾಜರಿಯಲ್ಲಿ ಕಲಾಪಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಹಿರಿಯ ಸದಸ್ಯರೊಬ್ಬರನ್ನು ಅಧ್ಯಕ್ಷ ಪೀಠಕ್ಕೆ ಆಹ್ವಾನಿಸಿದುದರಲ್ಲಿ ವಿಧಿಬಿಂದುವನ್ನು ಎತ್ತುವಂತಹದೇನಿದೆ ? ಆದರೆ ಈ ವಿಷಯದಲ್ಲಿ ಮನವಿ ಸಲ್ಲಿಸಲು ಮಾನ್ಯ ಸದಸ್ಯರಿಗೆ ನಾನು ಅವಕಾಶ ನೀಡುತ್ತೇನೆ.

ಶ್ರೀಎಸ್. ಎಸ್. ಶೆಟ್ಟರ : ಮಾನ್ಯ ಸಭಾಧ್ಯಕ್ಷರೇ, ನಾನು ತಮ್ಮಲ್ಲಿ ಮನವಿಯನ್ನೇ ಸಲ್ಲಿಸುತ್ತಿದ್ದೇನೆ. ಸಂವಿಧಾನದ 180 (2)ನೇ ಕಲಮಿನೆಡೆಗೆ ಈಗ ತಮ್ಮ ಲಕ್ಷ್ಯ ಸೆಳೆಯಬಯಸುತ್ತೇನೆ. ಅದು ಹೀಗಿದೆ.

ಸಭಾಧ್ಯಕ್ಷರ ಗೈರುಹಾಜರಿ ಸಂದರ್ಭದಲ್ಲಿ ಸದನದ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಆಸೀನರಾಗಿ ಕಲಾಪ ನಡೆಸಬೇಕು. ಉಪಾಧ್ಯಕ್ಷರೂ ಗೈರುಹಾಜರಿದ್ದರೆ. ಬೇರೆ ಅಧ್ಯಕ್ಷ ಪೀಠದಲ್ಲಿರಬೇಕಾದವರೂ ಗೈರುಹಾಜರಿದ್ದರೆ, ವಿಧಾನಸಭೆ ನಿರ್ಣಯಿಸುವಂಥ ಯಾವುದೇ ಸದಸ್ಯನು ಅಧ್ಯಕ್ಷ ಪೀಠದಲ್ಲಿದ್ದು ಕಲಾಪ ನಡೆಸಬೇಕೆಂದು ಈ ಕಲಮು ಹೇಳುತ್ತದೆ.

ನಾವು ಮುಂದಿನ ಮಾರ್ಗದರ್ಶನಕ್ಕಾಗಿ ಸದನ ಕಲಾಪ ನಡವಳಿಕೆಯ ನಿಯಮಗಳನ್ನೇ ಅವಲಂಬಿಸಬೇಕಾಗುತ್ತದೆ. ಕಲಾಪ ನಡವಳಿಕೆಯ ಒಂಬತ್ತನೆಯ ನಿಯಮದತ್ತ ಸಹ ಈ ವಿಷಯದಲ್ಲಿ ತಮ್ಮ ಗಮನ ಸೆಳೆಯಬಯಸುತ್ತೇನೆ.

ಪ್ರತಿಯೊಂದು ಅಧಿವೇಶನದ ಆರಂಭಕ್ಕೆ ಸಭಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿರಬೇಕಾದಂಥ ನಾಲ್ವರನ್ನು ಸದನದ ಸದಸ್ಯರೊಳಗಿಂದ ಆಯ್ದು ನಾಮಕರಣ ಮಾಡಬೇಕು. ಸಭಾಧ್ಯಕ್ಷ ಹಾಗೂ ಉಪಸಭಾಧ್ಯಕ್ಷರಿಬ್ಬರೂ ಗೈರುಹಾಜರಿರುವ ಸಂದರ್ಭದಲ್ಲಿ ಆ ನಾಲ್ವರಲ್ಲಿಯ ಓರ್ವರನ್ನು ಅಧ್ಯಕ್ಷತೆ ವಹಿಸಲು ಆಹ್ವಾನಿಸಬೇಕೆಂದು ಒಂಬತ್ತನೆಯ ನಿಯಮ ಹೇಳುತ್ತದೆ.

'ಪ್ರತಿಯೊಂದು ಅಧಿವೇಶನದ ಆರಂಭಕ್ಕೆ' ಎಂಬುದು ಇಲ್ಲಿ ಅತ್ಯಂತ ಮಹತ್ವದ್ದು ಅಧಿವೇಶನ ಆರಂಭವಾಗುವುದಕ್ಕೆ ಮೊದಲು ಸಭಾಧ್ಯಕ್ಷರು ಹೀಗೆ ನಾಲ್ವರಿಗೆ ಕಡಿಮೆಯಿಲ್ಲದಷ್ಟು ಜನರನ್ನು ಆಯ್ದು ನಾಮಕರಣ ಮಾಡುವುದಿರುತ್ತದೆ. ಈಗಾಗಲೇ ನಾಲ್ವರು ನಾಮಕರಣ ಮಾಡಲ್ಪಟ್ಟಿದ್ದಾರೆ. ಅವರಲ್ಲಿಯೇ ಒಬ್ಬರು ತಮ್ಮ ನಾಮಕರಣಕ್ಕೆ ರಾಜೀನಾಮೆಯನ್ನು ನೀಡಿದ್ದಾರೆ. ರಾಜೀನಾಮೆ ನೀಡಿದ ಸದಸ್ಯರ ಬದಲಿಗೆ ಬೇರೆಯವರನ್ನು ನಾಮಕರಣ ಮಾಡಲು ಈ ಹಂತದಲ್ಲಿ ಬರುವಂತಿಲ್ಲ. ಅಧಿವೇಶನದ ಆರಂಭಕ್ಕೆಯೇ ಈ ನಾಮಕರಣಗಳಾಗಬೇಕೆಂದಿದೆ.

ಸಭಾಧ್ಯಕ್ಷರು : ನಾನು ನಾಮಕರಣ ಘೋಷಿಸಿದಾಗ ಸದಸ್ಯರು ಎಲ್ಲಿದ್ದರು ? ಅವರೇನು ನಿದ್ದೆ ಮಾಡುತ್ತಿದ್ದರೆ? ಈದಿನ ಬೆಳಿಗ್ಗೆ ನಾಮಕರಣ ಘೋಷಿಸಿಬಿಟ್ಟದ್ದೇನೆ. ಯಾರೂ ಆಗ ಆಕ್ಷೇಪವನ್ನೆತ್ತಲಿಲ್ಲ. ಆದರೂ ನಾನು ಈ ವಿಷಯವನ್ನು ಇಷ್ಟಕ್ಕೇ ಬಿಡಬಯಸುವುದಿಲ್ಲ, ನನ್ನ ತೀರ್ಮಾನ ನೀಡುತ್ತೇನೆ. ನಾನು ನಾಮಕರಣ ಘೋಷಿಸಿದಾಗ ಸದಸ್ಯರು ಗಮನಿಸಲೇ ಇಲ್ಲವೆನ್ನಬೇಕೆ ? ಒಬ್ಬ ಸದಸ್ಯೆಯು ಅಧ್ಯಕ್ಷಪೀಠದಲ್ಲಿಯ ತಮ್ಮ ನಾಮಕರಣಕ್ಕೆ ರಾಜೀನಾಮೆ ನೀಡಿರುವುದನ್ನು ಸದನದ ಗಮನಕ್ಕೆ ತಂದು ತೆರವಾದ ಆ ಸ್ಥಳಕ್ಕೆ ಈಗ ಬೇರೆಯವರ ನಾಮಕರಣ ಮಾಡುವುದಿದೆಯಷ್ಟೇ.

ಎಚ್. ಸಿದ್ದವೀರಪ್ಪ: ನಾಮಕರಣವನ್ನು ಘೋಷಿಸಿದ ಕೂಡಲೇ ನೀವು ಸದನದಿಂದ ಹೊರಗೆ ನಡೆದಿರಿ, ಆದ್ದರಿಂದ ಆ ಹಂತದಲ್ಲಿ ನಮಗೆ ಯಾವುದೇ ಆಕ್ಷೇಪವೆತ್ತಲು ಸಾಧ್ಯವಾಗಲಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ.

ಸಭಾಧ್ಯಕ್ಷರು : ಬೆಳಿಗ್ಗೆ ನಾಮಕರಣವನ್ನು ಘೋಷಿಸಿದ್ದೇನೆ ಮತ್ತು ನನ್ನ ಭಾಷಣವನ್ನೂ ಓದಿದ್ದೇನೆ. ನಾನು ಭಾಷಣ ಆರಂಭಿಸುವುದಕ್ಕೆ ಮೊದಲು ನೀವಿದನ್ನು ಹೇಳಬೇಕಿತ್ತು. ಘೋಷಣೆ ಮಾಡಿದ ಬಳಿಕ ಆ ವಿಷಯ ಅಲ್ಲಿಗೆಯೇ ಮುಗಿದಿತ್ತು. ಮುಂದಿನ ವಿಷಯ ತೆಗೆದುಕೊಳ್ಳಲಾಯಿತು. ನಂತರ ನಾನು ಹೊರನಡೆದಿದ್ದೆ. ಆದರೂ ನಾನು ನಿಮ್ಮನ್ನು ಸುಮ್ಮನಾಗಿಸಲಾಗುವುದಿಲ್ಲ.

ಎಚ್. ಸಿದ್ದವೀರಪ್ಪ: ನೀವು [illegible] ಪೀಠ ತ್ಯಜಿಸಿ ಹೊರನಡೆದುದರಿಂದ ಆಗ ನಾವೇನೂ ಮಾಡಲು ಸಾಧ್ಯವಿಲ್ಲ.

ಸಭಾಧ್ಯಕ್ಷರು : [illegible] ನನ್ನ ಅನುಪಸ್ಥಿತಿಗೂ ಯಾವುದೇ ಸಂಬಂಧವಿಲ್ಲ, ಘೋಷಣೆ ಮಾಡಿ [illegible] ನಿಮಿಷ ತೆಗೆದುಕೊಂಡಿದ್ದೇನೆ. ಆ ವಿಷಯವೇ ಬೇರೆ.

ಎಚ್. ಸಿದ್ದವೀರಪ್ಪ: [illegible]

ಸಭಾಧ್ಯಕ್ಷರು : [illegible]

ಬದ್ಧ ಹಕ್ಕೇನೂ ಅವರಿಗಿಲ್ಲ ಆದರೂ ಅವಕಾಶ ನೀಡುತ್ತಿದ್ದೇನೆ ಆದರೆ ಅವರಿಗೆ ಆಕ್ಷೇಪಿಸುವುದೇ ಇದ್ದರೆ ಆವಾಗಲೇ ಏಕೆ ಆಕ್ಷೇಪವೆತ್ತಲಿಲ್ಲ ಎಂಬುದನ್ನು ಮಾತ್ರ ನಾನು ತಿಳಿದುಕೊಳ್ಳಲೇಬೇಕು. ಬೇರೆ ಏನಾದರೂ ಕಾರಣಗಳಿದ್ದರೂ ಅವುಗಳನ್ನೂ ನಾನು ತಿಳಿದುಕೊಳ್ಳಬಯಸುತ್ತೇನೆ.

ಶ್ರೀಎಸ್. ಎಸ್. ಶೆಟ್ಟರ : ಆ ವಿಶಿಷ್ಟ ಸಂದರ್ಭದಲ್ಲೇ ಈ ವಿಷಯವನ್ನೇಕೆ ಎತ್ತಲಿಲ್ಲವೆಂಬುದರ ವಿವರಣೆ ನೀಡಲು ದಯವಿಟ್ಟು ನನಗೆ ಅವಕಾಶ ನೀಡಬೇಕು. ನಿಜ ಹೇಳಬೇಕೆಂದರೆ ವಿಧಾನಸಭೆ ಕಲಾಪಗಳ ನಿಯಮಾವಳಿಯನ್ವಯ ಅದು ಆಗ ಅನಗತ್ಯವಾಗಿತ್ತು 180 (2) ನೇ ಕಲಮಿನನ್ವಯ ಈಗ ಆಕ್ಷೇಪವೆತ್ತುವುದು ಸರಿಯಿಲ್ಲವೆನ್ನುವುದಾದರೆ ಆಕ್ಷೇಪವನ್ನು ಅಷ್ಟು ಶೀಘ್ರವಾಗಿ ಆಗ ಎತ್ತುವ ಅಗತ್ಯವೇ ಇರಲಿಲ್ಲ. ಇದು ಮೊದಲ ಅಂಶ.

ಸಭಾಧ್ಯಕ್ಷರು : ಮಾನ್ಯ ಸದಸ್ಯರು ಆಗಿನ ಆ ಸಂದರ್ಭವನ್ನು ನಿರ್ಲಕ್ಷಿಸುವುದೇ ಸೂಕ್ತವೆಂದು ಬಗೆಯುವುದಾದಲ್ಲಿ ಹೆಚ್ಚಿನ ಪ್ರತಿಪಾದನೆ ನನಗೆ ಬೇಕಿಲ್ಲ. ಅಧ್ಯಕ್ಷ ಪೀಠಕ್ಕಾಗಿ ನಾಲ್ವರ ನಾಮಕರಣದ ಘೋಷಣೆಯು ಆಗಿನ ಅಧ್ಯಕ್ಷರದಿತ್ತು, ಸದಸ್ಯರು ತಾವೇ ನಿರ್ಣಯಿಸುವವರು ಎಂದು ಭಾವಿಸುವುದಾದರೆ ನಾನು ಹೀಗೆ ತೀರ್ಮಾನವನ್ನು ನೀಡುತ್ತೇನೆ.

ಶ್ರೀಎಸ್. ಎಸ್. ಶೆಟ್ಟರ : ಮಾನ್ಯ ಅಧ್ಯಕ್ಷರೇ, ಅಧ್ಯಕ್ಷರ ಕ್ರಮದ ಬಗ್ಗೆ ನಾನು ತೀರ್ಮಾನಕ್ಕೆ ಬಂದ ಹಾಗೆ ಇದು ಆಗುವುದಿಲ್ಲ. ಅಧ್ಯಕ್ಷರು ನಾಮಕರಣದ ಘೋಷಣೆ ಮಾಡಿದ ಬಳಿಕ ಈ ಆಕ್ಷೇಪವನೆತ್ತಲು ನಾನು ಅದೆಷ್ಟು ಸಮಯ ತೆಗೆದುಕೊಂಡಿದ್ದೇನೆಂಬುವನ್ನು ಅಧ್ಯಕ್ಷರು ಗಮನಕ್ಕೆ ತಂದುಕೊಳ್ಳಬೇಕೆಂಬುದೇ ನನ್ನ ಮನವಿ, ನಾವು ದೀರ್ಘಕಾಲ ತೆಗೆದುಕೊಂಡಿಲ್ಲ, ತಾವು ಈ ವಿಷಯದಲ್ಲಿ ಅನೇಕ ನಿಯಮಗಳನ್ನೂ ಲಕ್ಷಕ್ಕೆ ತೆಗೆದುಕೊಳ್ಳಲೇಬೇಕಾಗುತ್ತದೆ. ಮತ್ತು 180 (2) ನೇ ಕಲಮನ್ನೂ ಗಮನಿಸಬೇಕಾಗುತ್ತದೆ.

ಸಭಾಧ್ಯಕ್ಷರು : ಸದಸ್ಯರು ಹಾಗಾದರೆ ಗೊತ್ತುವಳಿಯನ್ನೇ ಮಂಡಿಸಬೇಕಾಗುತ್ತದೆ. ಒಂದು ವೇಳೆ ಸದಸ್ಯರು ಈ ವಿಷಯವನ್ನು ಎತ್ತುವುದೇ ಇದ್ದರೆ ಗೊತ್ತುವಳಿಯನ್ನೇ ಮಂಡಿಸಬೇಕು. ಅವರದು ಮನವಿಯಾಗಲಾರದು. ಸದಸ್ಯರು ತಾವು ಹೇಳಬೇಕೆಂದಿರುವುದನ್ನು ಸರಿಯಾಗಿ ಹೇಳಲಿ, ನಾನು ಎದುರಿಸುತ್ತೇನೆ.

ಶ್ರೀಎಸ್. ಎಸ್. ಶೆಟ್ಟರ : ಸಭಾಧ್ಯಕ್ಷರು ಒಂದು ವೇಳೆ ಯೋಗ್ಯರಲ್ಲದವರನ್ನು ಸಭಾಧ್ಯಕ್ಷರೆಂದು ಕಾರ್ಯ ನಿರ್ವಹಿಸಲು ನೇಮಕ ಮಾಡಿದ್ದಾದರೆ ಗೊತ್ತುವಳಿ ಮಂಡನೆಯ ಉದ್ದೇಶ ಫಲಕಾರಿಯೆನಿಸದು, ಆದ್ದರಿಂದಲೇ ನೀವು ಸೂಚಿಸಿದ ವ್ಯಕ್ತಿಯು ಅಧ್ಯಕ್ಷಪೀಠವನ್ನು ಅಲಂಕರಿಸುವುದಕ್ಕೆ ಮೊದಲಿಗೆಯೇ ಈ ವಿಷಯವನ್ನು ನಿಮ್ಮ ಗಮನಕ್ಕೆ ತರುತ್ತಲಿದ್ದೇನೆ.

ಸಭಾಧ್ಯಕ್ಷರು : ಇದೆಂಥ ತಪ್ಪು ಅಭಿಪ್ರಾಯ? ನಾನು ಈಗ ಗೊತ್ತುವಳಿಯ ಸೂಚನೆ ಸ್ವೀಕರಿಸಬೇಕಾಗಿದೆ. ಈಗ ನಾನು ಯಾವುದೇ ಮನವಿಯನ್ನು ಸ್ವೀಕರಿಸಲು ಸಾಧ್ಯವಿಲ್ಲ, ಸಂಕ್ಷಿಪ್ತವಾಗಿ ಏನು ಹೇಳಬೇಕೋ ಅದನ್ನು ಹೇಳಿ. ಸರಿಯಾದ ರೀತಿ, ಸಮರ್ಪಕವಾಗಿ ಹೇಳಿ.

ಎಚ್. ಸಿದ್ದವೀರಪ್ಪ: ಆವಾಗಲೇ ಅದೇ ದಿನ, ಅದೇ ಸಂದರ್ಭದಲ್ಲಿ ಆಕ್ಷೇಪವನ್ನು ಎತ್ತಬೇಕಿತ್ತೋ ಅಥವಾ ಈಗಲೂ ಆಕ್ಷೇಪವೆತ್ತಬಹುದೋ ಎಂಬ ವಿಷಯವೇ ಬೇರೆ. ನನಗೆ ಈಗ ಏನನ್ನೂ ಹೇಳುವುದಕ್ಕಿಲ್ಲ.

ಸಭಾಧ್ಯಕ್ಷರು : ನೇಮಕದ ಹಕ್ಕು ನನಗಿಲ್ಲವೆಂಬ ನನ್ನ ಕಾರ್ಯವ್ಯಾಪ್ತಿಯ ಬಗೆಗೂ ಸಹ ಏನು?

ಎಚ್. ಸಿದ್ದವೀರಪ್ಪ: ನೀವು ಯಾವುದೇ ತಪ್ಪು ಮಾಡಲು ಸಾಧ್ಯವಿಲ್ಲವೆಂಬುದು ನನಗೆ ಗೊತ್ತು. ಆದರೆ ಕೆಲ ಸಲ ಕಣ್ತಪ್ಪಿ ತಪ್ಪು ಸಂಭವಿಸಿದಲ್ಲಿ ನಿಮ್ಮ ಲಕ್ಷಕ್ಕೆ ತರುವುದು ನಮ್ಮ ಕರ್ತವ್ಯವೇ ಆಗಿದೆ. ಶ್ರೀ ಕೋಠಾವಳೆಯವರ ವಿಷಯದಲ್ಲಿ ಹೇಳಬೇಕೆಂದರೆ ಅವರು ನನ್ನ ಒಳ್ಳೇ ಸ್ನೇಹಿತರು. ನೀವು ಅವರನ್ನು ಅಧ್ಯಕ್ಷಪೀಠ ಸ್ವೀಕರಿಸಲು ಆಯ್ಕೆ ಮಾಡಿರುವಿರಿ, ಆದರೆ ಆಕ್ಷೇಪದ ವಿಷಯದಲ್ಲಿ ಹೇಳಬೇಕೆಂದರೆ ಅದು ಮೂಲಭೂತ ಸ್ವರೂಪದ್ದು. ನೀವು ನಿಯಮಗಳನ್ನು ಅನುಸರಿಸುತ್ತೀರಿ ಇದು ನನಗೆ ತಿಳಿದಿದೆ, ನಿಯಮಾವಳಿ ನಮ್ಮ ಮಾರ್ಗದರ್ಶನಕ್ಕೆಯೇ ಇರುವುದರಿಂದ, ಒಂಬತ್ತನೆಯ ನಿಯಮದಡಿಯಲ್ಲಿ ನಡೆದಿರುವುದರಿಂದ ನಾವು ಕೂಡಾ ನಿಯಮಗಳನ್ನು ಪಾಲಿಸಬೇಕೆಂದೇ ನೀವು ಬಯಸುತ್ತೀರಿ. ಒಂಬತ್ತನೇ ನಿಯಮದಲ್ಲಿ ಇದರ ಬಗ್ಗೆ ವಿಶೇಷ, ಸ್ಪಷ್ಟ ಉಲ್ಲೇಖವೂ ಇದೆ. ಪ್ರತಿ ಅಧಿವೇಶನದ ಆರಂಭದಲ್ಲಿ ಅಂದರೆ ಅಧಿವೇಶನ ಆರಂಭಗೊಳ್ಳುವಾಗ ಅದೇ ದಿನ ಸಭಾಧ್ಯಕ್ಷರು ಅಧ್ಯಕ್ಷಪೀಠಕ್ಕೆ ನಾಲ್ವರುಳ್ಳ ಪ್ಯಾನೆಲನ್ನು ಅಧ್ಯಕ್ಷೀಯ ಸಮಿತಿಯನ್ನು ಘೋಷಿಸಬೇಕೆಂದಿದೆ. ನೀವು ಘೋಷಿಸಿದ ಪ್ಯಾನೆಲ್‌ದಲ್ಲಿ ನೀವು ಮೂವರನ್ನಷ್ಟೇ ನಾಮಕರಣ ಮಾಡಿದ್ದರೂ ನಿಯಮಬಾಹಿರವೆನಿಸದು. ಹೆಚ್ಚೆಂದರೆ ನಾಲ್ವರಿರಬೇಕೆಂದು ಮಾತ್ರ ಗರಿಷ್ಠ ಮಿತಿ ಗೊತ್ತುಪಡಿಸಲಾಗಿದೆ. ಉಪಾಧ್ಯಕ್ಷರು ಇಲ್ಲಿದ್ದಾರೆ. ಅವರು ಸದನಕ್ಕೇಕೆ ಬಂದಿಲ್ಲವೋ ? ನನಗೆ ತಿಳಿಯದು. ಅದು ನನಗೆ ಸಂಬಂಧಿಸಿದ್ದೂ ಅಲ್ಲ, ಪ್ಯಾನೆಲ್‌ನಲ್ಲಿ ಬೇರೆ ಇಬ್ಬರೂ ಸದಸ್ಯರಾಗಿದ್ದಾರೆ. ಸದಸ್ಯರೊಬ್ಬರು ತಮ್ಮ ನಾಮಕರಣಕ್ಕೆ ರಾಜೀನಾಮೆ ಸಲ್ಲಿಸಿದ ವರದಿಗಳಿವೆ. ಅವರು ತಮಗೆ ಬೇಕೆನಿಸಿದ ಯಾವುದೇ ನಿರ್ಣಯ ತೆಗೆದುಕೊಳ್ಳಲು ಪೂರ್ಣ ಸ್ವಾತಂತ್ರ್ಯ ಹೊಂದಿದ್ದಾರೆ.

ಸಭಾಧ್ಯಕ್ಷರು : ಆ ಸದಸ್ಯೆ ವಿರೋಧಿಪಕ್ಷಗಳಿಗೆ ಅಂಜಿದ್ದಾರೋ ಹೇಗೆ ?

ಎಚ್. ಸಿದ್ದವೀರಪ್ಪ: ಮಾನ್ಯರೇ, ಹಾಗೇನೂ ಇಲ್ಲ, ನಮಗೆ ಅವರ ಬಗ್ಗೆ ಗೌರವವಿದೆ. ವೈಯಕ್ತಿಕವಾಗಿ ಅವರಿಗೆ ಯಾವುದೇ ರೀತಿ ಅಗೌರವ ಹಾಗೂ ನೋವುಂಟು ಮಾಡಲಾರೆವು. ಈಗ ಇಲ್ಲಿ ಪ್ಯಾನೆಲ್ಲಿನಲ್ಲಿಯ ಬೇರೆಯವರೂ ಇದ್ದಾರೆಂಬುದೂ ಒಂದು ಅಂಶ. ರಾಜೀನಾಮೆ ನೀಡಿರುವ ಸದಸ್ಯೆಯು ಒಡಂಬಡಿಕೆ ಆಗವಾ ತಿಳುವಳಿಕೆಯೊಂದಕ್ಕೆ ಬರುವ ರೀತಿಯಲ್ಲಿ ಯತ್ನಿಸಬಹುದಿತ್ತು. ಆದ್ದರಿಂದ ನಾವು ಯಾವುದೇ ಅನಿಷ್ಟ ಪರಿಪಾಠ ಹಾಕುವುದು ಬೇಡವೆಂಬುದಿಷ್ಟೇ ಈಗಿನ ವಿಚಾರ. ಶ್ರೀಕೋಠಾವಳೆಯವರು ಒಂಬತ್ತನೇ ನಿಯಮದ ಪ್ರಕಾರ ಸಮರ್ಪಕ ರೀತಿಯಲ್ಲಿ ನಾಮಕರಣಗೊಂಡಿಲ್ಲವಾದ್ದರಿಂದ ಸಭಾಧ್ಯಕ್ಷ ಪೀಠದಲ್ಲಿ ಕುಳಿತಿರಲಾರರು. ಇದು ಅಧಿವೇಶನದ ಪ್ರಾರಂಭದ ಸಂದರ್ಭವಲ್ಲವಾದ್ದರಿಂದ ನಾನು ನಿಮಗೆ ನಿಮ್ಮ ರೂಲಿಂಗ್‌ನ ಪುನರ್ವಿಮರ್ಶೆ ಮಾಡಲು ವಿನಂತಿಸುತ್ತಿದ್ದೇನೆ. ಈಗಾಗಲೇ ನೀವು ಅಧಿವೇಶನಾರಂಭದಲ್ಲಿ ಪ್ಯಾನೆಲ್‌ನ ಆಯ್ಕೆ ಮಾಡಿ ಘೋಷಿಸಿರುವಿರಿ. ಇತರ ಇಬ್ಬರು ಸದಸ್ಯರು ಇಲ್ಲಿದ್ದಾರೆ. ನನ್ನ ಹಳೆಯ ಸ್ನೇಹಿತ ಡಾ|| ಆರ್. ನಾಗನಗೌಡರಿದ್ದಾರೆ. ನನ್ನ ಯುವ ಸ್ನೇಹಿತ

ಕೆ. ಎಚ್. ರಂಗನಾಥರಿದ್ದಾರೆ. ಹೀಗೆ ಹೇಳುವಾಗ ಶ್ರೀ ಕೋಣಾವಳೆಯವರಿಗೆ ಅಗೌರವ ತೋರಿಸುತ್ತಿದ್ದೇನೆಂದೇನೂ ಇಲ್ಲ. ಅವರ ನಾಮಕರಣ ಸಮರ್ಪಕವಾದುದಿಲ್ಲವೆಂದಿಷ್ಟೇ ನನ್ನ ಆಕ್ಷೇಪ. ಕಾಯ್ದೆರೀತ್ಯಾ ಅವರು ಅಧ್ಯಕ್ಷ ಪೀಠದಲ್ಲಿ ಕುಳಿತುಕೊಳ್ಳಲಾರರು. ಅಧ್ಯಕ್ಷ ಪೀಠದಲ್ಲಿ ಕುಳಿತುಕೊಂಡು ಕಲಾಪ ನಡೆಸಲು ನಿಯಮಾವಳಿ ಪ್ರಕಾರ ಅರ್ಹತೆಯುಳ್ಳ ಯಾರೂ ಇಲ್ಲವೆಂದಾಗ ಮಾತ್ರ ಅವರು ಅಧ್ಯಕ್ಷ ಪೀಠ ಅಲಂಕರಿಸಬಹುದು. ಕಾಯ್ದೆ ನಿಯಮಾವಳಿ ಪ್ರಕಾರ ಯಾರೇ ನಾಮಕರಣಗೊಂಡರೂ ನಮ್ಮ ಆಕ್ಷೇಪವಿಲ್ಲ.

ಬೇರೊಬ್ಬ ಸದಸ್ಯರು : ನಾನೊಂದು ಚಿಕ್ಕ ಮನವಿ ಸಲ್ಲಿಸುತ್ತೇನೆ.

ಸಭಾಧ್ಯಕ್ಷರು : ಯಾರನ್ನೂ ಈಗ ನಾನು ಕೇಳುವುದಿಲ್ಲ ಯಾರೋ ಯಾರಿಗೆ ಅನುಮತಿ ನೀಡಿದೆನಾದರೆ ಬೇರೆಯವರಿಗೂ ಅವಕಾಶ ನೀಡಲೇ ಬೇಕಾಗುತ್ತದೆ. ಬೇರೆಯವರು ಅವಕಾಶ ಕೋರುವುದಿಲ್ಲವೆಂಬುದು ನನಗೆ ಖಚಿತವಾದರೇನೇ ಈ ಸದಸ್ಯರಿಗೆ ಅನುಮತಿ ನೀಡುತ್ತೇನೆ.

ಮಾನ್ಯ ಸದಸ್ಯರು : ನನಗೊಂದು ಹೊಸ ಅಂಶ ಹೊಳೆದಿದೆ. ಪ್ಯಾನೆಲ್ಲಿನಲ್ಲಿಯ ಸದಸ್ಯ ರಾಜೀನಾಮೆ ನೀಡಿದರೆ ಇನ್ನೊಬ್ಬರ ನೇಮಕ ಮಾಡಲು ನಿಯಮಾವಳಿಯಲ್ಲಿ ಅವಕಾಶವಿರದು.

ಸಭಾಧ್ಯಕ್ಷರು : ನಾನು ಈಗ ರೂಲಿಂಗ್ ನೀಡುತ್ತೇನೆ. ಬೆಳಿಗ್ಗೆ ನಾನು ನಾಮಕರಣ ಮಾಡಿದ ಅಧ್ಯಕ್ಷೀಯ ಪ್ಯಾನೆಲ್ ದೊಳಗಿನ ಒಬ್ಬ ಸದಸ್ಯೆ ಶ್ರೀಮತಿ ಬಸವ ರಾಜೇಶ್ವರಿಯವರು ರಾಜೀನಾಮೆ ನೀಡಿರುವದರಿಂದ ಪ್ರಶ್ನೆ ಉದ್ಭವಿಸಿದೆ. ಅವರ ರಾಜೀನಾಮೆಯಿಂದ ತೆರವಾದ ಸ್ಥಳಕ್ಕೆ ಅಧ್ಯಕ್ಷೀಯ ಪ್ಯಾನೆಲ್ಲನಲ್ಲಿಯ ಓರ್ವ ಸದಸ್ಯರನ್ನಾಗಿ ಶ್ರೀಎಸ್. ಡಿ. ಕೋಣಾವಳೆಯವರ ನೇಮಕ ಮಾಡಲಾಗಿದೆ.

(ನಡುವೆ ಕೆಲವರು ಮಾತಾಡಿದಾಗ ಗೊಂದಲ)

[illegible] ಸದ್ದು ಯಾವುದಕ್ಕೂ ಒಂದು ಮಿತಿಯಿರಬೇಕು. ಯಾರಿಗಾದರೂ ಏನಾದರೂ ಹೊಳೆದ ತಕ್ಷಣ ಮಾತನಾಡಲು ಎದ್ದು ನಿಂತು ಬಿಡುವುದೇ ?

ನಿಮ್ಮ ನಿಲುಮೆಯಲ್ಲಿ ನಾಕಷ್ಟು ಹುರುಳಿದೆಂದು ನನಗನಿಸಿಲ್ಲ. ಒಂಬತ್ತನೆಯ ನಿಯಮಾವಳಿಯ ಪ್ರಕಾರ ಪ್ಯಾನೆಲ್ಲಿನ ಸದಸ್ಯರ ನಾಮಕರಣವಾಗಬೇಕೆಂದು ವಿನಂತಿಸಲಾಗುತ್ತಿದೆ. ಮಾನ್ಯ ಸದಸ್ಯರೂ, ಪರಿಣತ [illegible] ಆಗಿರುವ ಸದಾಶಿವ ಶೆಟ್ಟರು ಪ್ರಸ್ತಾಪಿಸಿರುವ ಸಂವಿಧಾನದ ಕಲಮಿನಲ್ಲಿ ಈ ಬಗ್ಗೆ ಏನೂ ಹೇಳಿಲ್ಲ ......

ಶ್ರೀಎಸ್. ಗೋಪಾಲಗೌಡ : ಸ್ವಾಮಿ ಇದರಲ್ಲಿ ಬಹಳ ವಿಷಾದ ಕಂಡು ಬಂತು. ಶ್ರೀಮತಿ ಬಸವ ರಾಜೇಶ್ವರಿಯವರು ಏತಕ್ಕೆ ರಾಜೀನಾಮೆ ಕೊಟ್ಟರು ? ಶ್ರೀಮಾನ್ ಕೋಣಾವಳೆಯವರು ಏತಕ್ಕೆ ಈ ಸ್ಥಾನ [illegible]? ಶ್ರೀಮತಿ ಬಸವರಾಜೇಶ್ವರಿಯವರು ರಾಜೀನಾಮೆ ಕೊಡುವುದಕ್ಕೆ ಸರಕಾರದ ಮೇಲೆ ಇವರಿಗೆ [illegible] ಎಂದು ಇದರಿಂದ ಗೊತ್ತಾಗುತ್ತದೆ, ಅಲ್ಲವೇ ?

ಅಧ್ಯಕ್ಷರು : ಶ್ರೀಮಾನ್ ಗೋಪಾಲಗೌಡರ ತಲೆಯಲ್ಲಿ ತುಂಬಾ ಆಲೋಚನೆ ಓಡುತ್ತವೆ. ರೂಲಿಂಗ ಕೊಡುವ ಸಂದರ್ಭದಲ್ಲಿ ಸದಸ್ಯರು ಮಧ್ಯಮಾತಾಡುವುದು ಸರಿಯಲ್ಲ. ಶ್ರೀವಾಟಾಳ ನಾಗರಾಜ ಅವರು ಹೊಸಬರಾದ್ದರಿಂದ ಅವರಿಗ ಗೊತ್ತಿಲ್ಲ. ಅವರು ಎದ್ದು ನಿಲ್ಲುತ್ತಾರೆ. ತಪ್ಪು ಮಾಡಿದರೆ ಹೇಳುತ್ತೇನೆ, ಆದುದರಿಂದ ಮಾನ್ಯ ಸದಸ್ಯರಿಗೆ ಕುಳಿತುಕೊಳ್ಳಿ ಎಂದು ಹೇಳುತ್ತೇನೆ.

ಉತ್ತರ ಕರ್ನಾಟಕದ ಧ್ವನಿ

16ನೇ ಮಾರ್ಚ್ 1967

ರಾಜ್ಯಪಾಲರಿಗೆ ಜಂಟಿ ಅಧಿವೇಶನದಲ್ಲಿಯ ಅವರ ಭಾಷಣಕ್ಕಾಗಿ ವಂದನೆ ಸಲ್ಲಿಸಲು ಸರಕಾರ ಮಂಡಿಸಿದ್ದ ನಿರ್ಣಯ ಕುರಿತು ಮಾರ್ಚ 16 ರಂದು ಮಾತನಾಡುತ್ತ ಎಸ್. ಎಸ್. ಶೆಟ್ಟರ ಅವರು ರಾಜ್ಯಪಾಲರ ಭಾಷಣದಲ್ಲಿ

1) ಎಲ್ಲ ನಗರಗಳಲ್ಲಿ ಪಡಿತರ ಆಹಾರಧಾನ್ಯ ವಿತರಣೆಯಲ್ಲಿ ಏಕರೂಪತೆ ತರುವ ಧೋರಣೆಯ ಪ್ರಸ್ತಾಪವಿಲ್ಲದಿರುವಿಕೆ.

2) ಭಾರೀ ಬೆಲೆಯೇರಿಕೆ ಹಾಗೂ ಆಹಾರಧಾನ್ಯ ವಿತರಣೆಯಲ್ಲಿಯ ತಾರತಮ್ಯ-ಅನ್ಯಾಯಗಳ ನಿವಾರಣೆ ಕುರಿತ ಕ್ರಮಗಳ ಉಲ್ಲೇಖವಿಲ್ಲದಿರುವಿಕೆ.

3) ಕಾರ್ಮಿಕರಿಗೆ ಹಾಗೂ ಬಡವರಿಗೆ ವಸತಿ ನಿರ್ಮಾಣ ಮಾಡುವ ಕುರಿತು ಪ್ರಸ್ತಾಪವಿಲ್ಲದಿರುವಿಕೆ.

4) ನಗರಗಳಲ್ಲಿಯ ಕೊಳಚೆ ಪ್ರದೇಶ ನಿವಾಸಿಗಳ ಪ್ರಶ್ನೆ ಹಾಗೂ ನೈರ್ಮಲೀಕರಣ ಸಂಬಂಧಿಸಿದ ಕ್ರಮಗಳ ಉಲ್ಲೇಖವಿಲ್ಲದಿರುವಿಕೆ.

5) ರಾಜ್ಯದಲ್ಲಿಯ ನೇಯ್ಗೆ ಹಾಗೂ ನೂಲಿನ ಗಿರಣಿಗಳಲ್ಲಿಯ ಸ್ಥಿತಿಗತಿ ಹಾಗೂ ಆ ಗಿರಣಿಗಳಲ್ಲಿ ಕಾರ್ಮಿಕ ಕಾಯ್ದೆಗಳ ಜಾರಿಯಾಗದಿರುವಿಕೆ ಹಾಗೂ

6) ಹುಬ್ಬಳ್ಳಿ-**ಧಾರವಾಡ ಮಹಾನಗರ ಪಾಲಿಕೆ**ಯಲ್ಲಿ ಲೋಕ ನಿಯುಕ್ತ **ಸದಸ್ಯರ** ಅಧಿಕಾರ ಮಂಡಳಿ ಅಸ್ತಿತ್ವಕ್ಕೆ ಬರುವ ವಿಷಯದಲ್ಲಿಯ ಕ್ರಮಗಳ ಪ್ರಸ್ತಾಪವಿಲ್ಲದಿರುವಿಕೆ ಈ ದೋಷಗಳನ್ನು ಎತ್ತಿ ತೋರಿಸಿ, ವಿಷಾದ ಪ್ರಕಟಿಸುತ್ತ **ಈ ಆರೂ ಸಲಹೆಗಳನ್ನು ಒಳಗೊಂಡ ತಿದ್ದುಪಡಿಯನ್ನು** ವಂದನಾ **ನಿರ್ಣಯಕ್ಕೆ ಸೂ**ಚಿಸಿದರು.

ಸಭಾಧ್ಯಕ್ಷರು ಪ್ರತಿಯೊಂದು **ಸಲಹೆಯನ್ನೂ ಪುನರುಚ್ಚರಿಸಿ ಇದನ್ನು ಒಳಗೊಂಡ** ತಿದ್ದುಪಡಿಯನ್ನು ನಿರ್ಣಯದೊಂದಿಗೆ ತೆಗೆದುಕೊಳ್ಳಲಾಗಿದೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಚುನಾವಣೆಗೆ ಸಂಬಂಧಿಸಿದ ಸದಸ್ಯರ ಆರನೆಯ ತಿದ್ದುಪಡಿಯೊಂದು ಮಾತ್ರ **ಕಾಣುತ್ತಿಲ್ಲವೆಂದರು**

ಶ್ರೀ ಎಸ್. ಎಸ್. ಶೆಟ್ಟರ : ತಿದ್ದುಪಡಿ **ಪತ್ರದಲ್ಲಿ ಇದೊಂದನ್ನು ಮಾತ್ರ ಕೈ** ಬಿಡಲಾಗಿದೆ.

ಸಭಾಧ್ಯಕ್ಷರು : ಮಾನ್ಯ ಸದಸ್ಯರ ಒಪ್ಪಿಗೆ **ಪಡೆದು ಅದನ್ನು ಕೈ ಬಿಡಲಾಗಿದೆಯೇ** ?

ಶ್ರೀ ಎಸ್. ಎಸ್. ಶೆಟ್ಟರ : ಮಾನ್ಯರೆ, ಹಾಗೇನೂ ಇಲ್ಲ

ಸಭಾಧ್ಯಕ್ಷರು : ನಾನಿದನ್ನು ಪರಿಶೀಲಿಸುತ್ತೇನೆ.

ಶ್ರೀ ಎಸ್. ಎಸ್. ಶೆಟ್ಟರ : ಹುಬ್ಬಳ್ಳಿ-ಧಾರವಾಡ ನಗರದ ಜ್ವಲಂತ ಸಮಸ್ಯೆಯು ಅತ್ಯಂತ ಮಹತ್ವದ್ದು.

ಸಭಾಧ್ಯಕ್ಷರು : ಅದನ್ನು ನಿಶ್ಚಿತವಾಗಿ ಸೇರಿಸಲಾಗಿದೆ.

ಶ್ರೀ ಎಸ್. ಎಸ್. ಶೆಟ್ಟರ : ಸನ್ಮಾನ್ಯ ಸಭಾಪತಿಗಳೇ ಹೊಸದಾಗಿ ದೇಶದಲ್ಲಿ ಚುನಾವಣೆಗಳು ನಡೆದ ಮೇಲೆ ನಮ್ಮ ರಾಜ್ಯದಲ್ಲಿ ಜನತೆಯನ್ನು ಪ್ರತಿನಿಧಿಸತಕ್ಕ ಪ್ರತಿಯೊಂದು ಸ್ಥಾನಿಕ ಚುನಾವಣೆಗಳ ಬಗ್ಗೆ ನಮ್ಮ ಸರಕಾರದವರ ದೃಷ್ಟಿಯೇನಿದೆ. ಇವರ ಧೋರಣೆಯೇನಿದೆ ? ಅನ್ನುವುದರ ಬಗ್ಗೆ ನಾನು ನಮ್ಮ ರಾಜ್ಯಪಾಲರು ಅಪ್ಪಣೆ ಕೊಡಿಸಿರತಕ್ಕ ಭಾಷಣದ ಪ್ರತಿಯಲ್ಲಿ ಹುಡುಕಿ ನೋಡಿದೆ. ಅದರಲ್ಲಿ ಏನೂ ಇಲ್ಲ. ರಾಜ್ಯಪಾಲರು ಈ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಬಗ್ಗೆ ಏನಾದರೊಂದು ಸಂದೇಶವನ್ನು ನೀಡಬಹುದು ಎಂಬುದಾಗಿ ನಾನು ಭಾವಿಸಿದ್ದೆ ಆದರೆ ಅವರು ಏನನ್ನೂ ಹೇಳದಿರುವುದು ನನಗೆ ಬಹಳ ನಿರಾಶೆಯನ್ನುಂಟು ಮಾಡಿದೆ. ಅದಕ್ಕಾಗಿ ನಾವು ವಂದನಾರ್ಪಣೆಯ ನಿರ್ಣಯದ ಬಗ್ಗೆ ಒಂದು ತಿದ್ದುಪಡಿಯನ್ನೂ ಸಹ ಸೂಚಿಸಬೇಕಾಗಿ ಬಂತು ಅದನ್ನು ಮಾಡಿದ್ದೇನೆ.

ಈ ಹಿಂದೆ ಮಾತನಾಡಿದ ಒಬ್ಬ ಮಾನ್ಯ ಸದಸ್ಯರು 1959 ರಲ್ಲಿ ಹುಬ್ಬಳ್ಳಿ ಹಾಗೂ ಧಾರವಾಡ ಮ್ಯುನಿಸಿಪಾಲಿಟಿಗಳನ್ನು ಏತಕ್ಕಾಗಿ ಸೂಪರ್‌ಸೀಡ್ ಮಾಡಲಾಯಿತು ಅನ್ನುವುದರ ಬಗ್ಗೆ ಕೆಲವು ಕಾರಣಗಳನ್ನು ಕೊಟ್ಟರು. ಹಾಗೆ ಅವರು ಕಾರಣಗಳನ್ನು ಕೊಡುತ್ತ ಪಾಕಿಸ್ತಾನದ ಯುದ್ಧ ಸಂಭವಿಸಿದುದರಿಂದ ಇಲ್ಲಿ ನಡೆಯಬೇಕಾಗಿದ್ದ ಚುನಾವಣೆಗೆ ಆತಂಕವುಂಟಾಯಿತು. ಆದುದರಿಂದ ತಾ। 10-10-1965 ರಲ್ಲಿ ಚುನಾವಣೆಗಳನ್ನು ನಡೆಸಲಿಕ್ಕಾಗಲಿಲ್ಲ ಎಂಬುದಾಗಿ ಹೇಳಿದರು. ಆದರೆ ಇತ್ತೀಚಿಗೆ ದೇಶದಲ್ಲಿ ಹೊಸ ಚುನಾವಣೆಗಳು ನಡೆದ ಮೇಲೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವುದಕ್ಕೆ ಇರತಕ್ಕ ಅಡೆತಡೆಗಳಾದರೂ ಏನು ? ಹಿಂದೆ ಆ ಚುನಾವಣೆಗಳನ್ನು ಮುಂದೂಡತಕ್ಕ ಕಾಲದಲ್ಲಿ ದೇಶದಲ್ಲಿ ಏನು ಒಂದು ಗಂಭೀರವಾದ ಪರಿಸ್ಥಿತಿಯಿತ್ತೋ ಅಂಥ ಗಂಭೀರ ಪರಿಸ್ಥಿತಿ ಈ ದಿವಸ ಇರುವುದಿಲ್ಲ. ಆದಾಗ್ಯೂ ಈ ಚುನಾವಣೆಗಳನ್ನು ಸರಕಾರದವರು ಮುಂದೂಡುತ್ತಾ ಬರುತ್ತಿರುವುದನ್ನು ನೋಡಿದರೆ ಇವರ ಧ್ಯೇಯ ಧೋರಣೆಗಳು ಪ್ರಜಾಪತ್ತೆಯ ಮೂಲ ಧ್ಯೇಯಕ್ಕೆ ಕೊಡಲಿಯನ್ನು ಹಾಕಿದಂತೆ ಆಗಿಲ್ಲವೇ ಎಂಬುದು ನಾವು ಸಾಕಷ್ಟು ಪರಿಶೀಲನೆ ಮಾಡಬೇಕಾದಂಥ ವಿಷಯ.

ಮೊನ್ನೆ ತಾನೇ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಚುನಾವಣೆಯ ಘೋಷಣೆ ಪತ್ರದಲ್ಲಿ ಕೇಂದ್ರೀಕೃತವಾಗಿರುವ ಜಾಣಕೀಯ ಅಧಿಕಾರವನ್ನು ಕೂಡಲೇ ವಿಕೇಂದ್ರೀಕರಣ ಮಾಡುವುದಾಗಿ ಹೇಳಿದ್ದಾರೆ. ಅದನ್ನು ನಾವೀಗ ಅವರ ಗಮನಕ್ಕೆ ತರಬೇಕಾಗಿದೆ. ಸರಕಾರದವರು ಸೂಪರ್ ಸೀಡ್ ಮಾಡಿದತಕ್ಕ ಸ್ಥಳಗಳಾದರೂ ಅವು ಎಂಥವು ? ಬೆಂಗಳೂರ ಮತ್ತು ಧಾರವಾಡ- ಹುಬ್ಬಳ್ಳಿಯಂಥ ಬಹಳ ಮುಂದುವರಿದಿರುವ ನಗರಗಳಲ್ಲೇ ಪ್ರಜಾಪತ್ತಾತ್ಮಕ ಆಡಳಿತದ ಮೂಲ ಸಂಸ್ಥೆಗಳಾದ ಸ್ಥಳೀಯ ಸಂಸ್ಥೆಗಳನ್ನು ಸೂಪರ್ ಸೀಡ್ ಮಾಡಿರುವುದನ್ನು ನೋಡಿದರೆ ಸ್ಥಳೀಯ ಸಂಸ್ಥೆಗಳ ಆಡಳಿತವನ್ನೇ ಈ ರಾಜ್ಯದಲ್ಲಿ ಕೊಲೆ ಮಾಡಿದಂತಾಗಿದೆ. ಅನ್ನಬಹುದು. ಸಂದರ್ಭಗಳು ಹೀಗಿದ್ದಾಗ್ಯೂ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ಸಂಸ್ಥೆಗಳನ್ನು ಕುರಿತು ಒಂದು ಮಾತನ್ನಾದರೂ ಹೇಳದಿರುವುದು

ಪ್ರಜಾತಂತ್ರಕ್ಕೇ ದೊಡ್ಡ ಕೊಡಲಿಯ ಪೆಟ್ಟು ಬಿದ್ದಂತಾಗಿದೆ. ಇದೇ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ವಂದನಾರ್ಪಣೆಯನ್ನು ಸೂಚಿಸಿದ ಓರ್ವ ಸದಸ್ಯರು ನಮ್ಮ ರಾಜ್ಯದಲ್ಲಿ ಪ್ರಜಾತಂತ್ರಕ್ಕೆ ಪೆಟ್ಟು ಬಿದ್ದು ಅದರ ಮೂಗಿನಲ್ಲಿ ರಕ್ತಸೋರುತ್ತಿದೆ ಎಂದು ಹೇಳಿದರು. ನಾನಾದರೋ ಅದನ್ನು ಹಾಗೆ ಹೇಳುವುದಿಲ್ಲ, ನಮ್ಮ ರಾಜ್ಯದಲ್ಲಿ ಪ್ರಜಾತಂತ್ರದ ಕೊಲೆಯೇ ಆಗಿದೆ ಎಂದು ಹೇಳುತ್ತೇನೆ.

ಈ ಹಿಂದೆ 1959ರಲ್ಲಿ ಹುಬ್ಬಳ್ಳಿ-ಧಾರವಾಡ ಮುನಿಸಿಪಾಲಟಿಗಳನ್ನು ಸೂಪರ್ ಸೀಡ್ ಮಾಡುವ ಕಾಲಕ್ಕೆ ಶ್ರೀಮಾನ್ ನಿಜಲಿಂಗಪ್ಪನವರು ಹುಬ್ಬಳ್ಳಿ-ಧಾರವಾಡಕ್ಕೆ ಬಂದಿದ್ದರು. ಆ ವೇಳೆಗೆ ಅಲ್ಲಿಯ ಪರಿಸ್ಥಿತಿ ಬಹಳ ಕೆಟ್ಟಿತ್ತು ಅದನ್ನು ನೋಡಿ ಸೂಪರ್‌ಸೀಡ್ ಮಾಡುವಂತೆ ಹೇಳಿದರು ಹಾಗೆಯೇ ನೋಟೀಸನ್ನು ಕೊಟ್ಟು ಅದನ್ನು ಮುಗಿಸಿದರು. ಆದರೆ ಆ ದಿವಸ ಅಲ್ಲಿ ಏನು ಪರಿಸ್ಥಿತಿ ಇತ್ತೋ ಅದೇ ಪರಿಸ್ಥಿತಿ ಈಗಲೂ ಇದೆ. ಅಲ್ಲಿರತಕ್ಕ ಸ್ಲಮ್ (ಕೊಳಚೆ ಪ್ರದೇಶ) ಏರಿಯಾಗಳ ವಿಚಾರದಲ್ಲಿ ನಾನು ಅನೇಕಾವರ್ತಿ ಶ್ರೀಮಾನ್ ನಿಜಲಿಂಗಪ್ಪನವರಿಗೂ ಮತ್ತು ಶ್ರೀಮಾನ್ ಜತ್ತಿಯವರಿಗೂ ತಿಳಿಸಿದ್ದೇನೆ. ಆದರೆ ಅದೇ ಸ್ಥಿತಿ ಈಗಲೂ ಇದೆ.

ಈ ಹಿಂದೆ ಶ್ರೀಮಾನ್ ಜತ್ತಿಯವರು ಹುಬ್ಬಳ್ಳಿ ಮತ್ತು ಧಾರವಾಡ ಈ ಎರಡೂ ಪಟ್ಟಣಗಳನ್ನು ಒಂದುಗೂಡಿಸಿ ಅಲ್ಲಿ ಒಂದು ಕಾರ್ಪೊರೇಶನ್ ಮಾಡಲಾಗುತ್ತಿದೆ. ಅದರಿಂದ ಎರಡೂ ನಗರಗಳು ಸುಧಾರಿಸುತ್ತವೆ. ವಿಕಾಸ ಹೊಂದುತ್ತವೆ ಎಂದು ಹೇಳಿದಾಗ ನಾವೆಲ್ಲರೂ ಬಹಳ ಸಂತೋಷಪಟ್ಟು ನಮಗೆ, ನಾಗರಿಕರಿಗೆ ದೊರೆಯುವಂಥ ಸೌಲಭ್ಯಗಳು ಹೆಚ್ಚಾಗಿ ದೊರೆಯುತ್ತವೆ. ನಮ್ಮ ಪಟ್ಟಣವೂ ಬೆಂಗಳೂರ ನಗರದ ಹಾಗೆ ಒಂದು ಸುಧಾರಣೆಯಾದ ನಗರವಾಗಬಹುದು. ಅದಕ್ಕಾಗಿ ನಾವು ಸ್ವಲ್ಪ ಹೆಚ್ಚಿಗೆ ತೆರಿಗೆಗಳನ್ನು ಕೊಟ್ಟರೂ ಚಿಂತೆಯಿಲ್ಲವೆಂದು ಒಪ್ಪಿಕೊಂಡೆವು. ಆದರೆ ಆಗಿದ್ದ ಪರಿಸ್ಥಿತಿಗೂ ಈಗಿರತಕ್ಕ ಪರಿಸ್ಥಿತಿಗೂ ಹೋಲಿಕೆ ಮಾಡಿ ನೋಡಿದರೆ ಅಲ್ಲಿ ಯಾವ ಬದಲಾವಣೆಯೂ ಕಂಡು ಬರುತ್ತಿಲ್ಲ. ಎಲ್ಲವೂ ಹಿಂದೆ ಇದ್ದಂತೆಯೇ ಇದೆ. ಆದರೆ ನಾವು ತೆರತಕ್ಕ ಕರಭಾರ ಒಂದು ಮಾತ್ರ ಅತಿಶಯವಾಗಿ ಹೆಚ್ಚಿರುವುದು ಕಂಡು ಬರುತ್ತದೆ. ಮನೆಯ ಕರಭಾರ, ನೀರಿನ ಕರಭಾರ ಇವುಗಳೆಲ್ಲವನ್ನೂ ಅತಿಶಯವಾಗಿ ಹೆಚ್ಚಿಸಿದ್ದಾರೆ. ಆದರೆ ಈಗಾಗಲೇ ಹಿಂದೆ ಮಾತನಾಡಿದಂಥ ಮಾನ್ಯ ಸದಸ್ಯರು ಈ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರ ನಾಮಕರಣ ವಿಚಾರದಲ್ಲಿ ಏನೊಂದು ಮಾತನ್ನೂ ಹೇಳಿದ್ದಾರೋ ಆ ಮಾತಿನಲ್ಲಿ ಒಂದು ಅರ್ಥವಿದೆ. ಅಲ್ಲಿ ನಾಮಿನೇಟ್ ಮಾಡಿರತಕ್ಕ ಸದಸ್ಯರ ವಿಚಾರದಲ್ಲಿ ಒಂದು ಚಮತ್ಕಾರ ನಡೆದಿದೆ. ಆದುದರಿಂದಲೇ ಅಲ್ಲಿ ಸರಕಾರದವರು ಅವರಿಗೆ ಮೇಲಿಂದ ಮೇಲೆ ಜೀವದಾನ ಮಾಡುತ್ತಾ ಬಂದಿದ್ದಾರೆ. ಅಲ್ಲಿ ಚುನಾವಣೆಗಳನ್ನು ತಡೆಹಿಡಿದಿರುವುದರ ಬಗ್ಗೆ ಬೆಂಗಳೂರ ಹೈಕೋರ್ಟಿನಲ್ಲಿ ಒಂದು ರಿಟ್‌ನ್ನೂ ಹಾಕಲಾಗಿದೆ. ಇಷ್ಟೆಲ್ಲಾ ಆಗಿದ್ದರೂ ದೇಶದಲ್ಲಿರತಕ್ಕ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಚಾರದಲ್ಲಿ ಏನಾದರೊಂದು ಸೂಚನೆಯನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೊಡಬೇಕಾಗಿತ್ತು ಎಂದು ನನಗೆ ಅನಿಸುತ್ತದೆ.

ನಾನು ಅದರ ಬಗ್ಗೆ ಬಹಳ ತವಕಪಟ್ಟುಕೊಂಡು ನೋಡುತ್ತಿದ್ದೆನು, ಆದರೆ ಅವರೇನೂ ಹೇಳಿಲ್ಲ. ಅದಕ್ಕಾಗಿ ನಾನು ಈ ವಿಚಾರದಲ್ಲಿ ತಿದ್ದುಪಡಿಯನ್ನು ಸೂಚಿಸತಕ್ಕ ಆಗತ್ಯವುಂಟಾಯಿತು. ಅದನ್ನು ಅಧ್ಯಕ್ಷರ ಕಛೇರಿಗೆ ಕಳುಹಿಸಿದ್ದೇನೆ. ಅದನ್ನು ಅವರು ಅಂಗೀಕಾರ ಮಾಡುತ್ತಾರೆಂಬ ಆಶೆ ನನಗಿದೆ.

ಇನ್ನು ಬೆಂಗಳೂರಿನಲ್ಲಿ ಪೊಲೀಸ್ ನೌಕರರಿಗೆ ಒದಗಿಸಿರತಕ್ಕ ವಸತಿ ಸೌಲಭ್ಯದ ಬಗ್ಗೆ ರಾಜ್ಯಪಾಲರು ಬಹಳ ಹೇಳಿದ್ದಾರೆ. ಇದು ಒಂದು ಸಂತೋಷದ ವಿಚಾರವೇ ಸರಿ, ಆದರೆ ಇಲ್ಲಿ ಇವರಿಗೆ ಯಾವ ರೀತಿ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡಲಾಗಿದೆಯೋ ಅದೇ ರೀತಿಯಲ್ಲಿ ಹುಬ್ಬಳ್ಳಿ-ಧಾರವಾಡ ಮತ್ತು ಇನ್ನಿತರೇ ಮ್ಯುನಿಸಿಪಾಲಿಟಿಗಳು ಇರತಕ್ಕ ಸ್ಥಳಗಳಲ್ಲೂ ಬಡನೌಕರರಿಗೂ, ಕೂಲಿಕಾರರಿಗೂ ಮತ್ತು ಭಾಡಿಗೆದಾರರಿಗೂ ವಸತಿಸೌಲಭ್ಯಗಳನ್ನು ಕಲ್ಪಿಸಬೇಕಾದ್ದು ಅತ್ಯಗತ್ಯ. ದೇಶದಲ್ಲಿರತಕ್ಕ ಅನೇಕ ನಿರ್ಗತಿಕರಿಗೆ ಸ್ವಂತ ವಾಸದ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಸರಕಾರದವರಿಗೆ ಸಾಧ್ಯವಾಗದಿದ್ದಲ್ಲಿ ಅವರಿಗೆ ಸುಲಭಸಾಧ್ಯ ಭಾಡಿಗೆಗಾದರೂ ಮನೆಗಳು ಸಿಕ್ಕುವಂತೆ ಒಂದು ಏರ್ಪಾಟನ್ನು ಮಾಡಬೇಕಾದ್ದು ಅತ್ಯಗತ್ಯ. ಅತ್ಯವಶ್ಯಕ ಇಲ್ಲಿಯವರೆಗೂ ಈ ಜನರ ಬಗ್ಗೆಸಾಕಷ್ಟು ನಿಗಾ ತೆಗೆದುಕೊಳ್ಳದೇ ಇದ್ದುದಕ್ಕಾಗಿ ನಾನು ನನ್ನ ವ್ಯಸನವನ್ನು ವ್ಯಕ್ತಪಡಿಸುತ್ತೇನೆ. ಇನ್ನು ಹುಬ್ಬಳ್ಳಿ-ಧಾರವಾಡದಲ್ಲಿ ನಾಲ್ಕನೆಯ ಮೂರು ಅಂಶದಷ್ಟು ಜನರು ಕೊಳಚೆ ಜಾಗದಲ್ಲಿ ವಾಸಿಸುತ್ತಾರೆ. ತಿರುಗಾಡಲು ಶಕ್ಯವಿಲ್ಲದಂಥ ಓಣಿಗಳಲ್ಲಿ, ಚರಂಡಿಗಳಿಲ್ಲದ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದಾರೆ. ಈ ವಿಚಾರವಾಗಿ ನಾನೇ ಅನೇಕಾವರ್ತಿ ಮುಖ್ಯಮಂತ್ರಿಗಳಿಗೂ ಮತ್ತು ಶ್ರೀಮಾನ್ ಜತ್ತಿಯವರಿಗೂ ತಿಳಿಸಿದ್ದೇನೆ.

ಶ್ರೀಎಸ್. ವ್ಹಿ. ಅಗ್ನಿಹೋತ್ರಿ : ಮೊದಲು ಅಲ್ಲಿ ಎಷ್ಟು ಕೊಳಚೆಯ ಪ್ರದೇಶವಿತ್ತು ? ಈಗ ಅಲ್ಲಿ ಎಷ್ಟಿವೆ ಎಂಬುದನ್ನು ತಿಳಿಸುವಿರಾ ?

ಶ್ರೀಎಸ್. ಎಸ್. ಕೆಟ್ಟರ : ನಾನು ಹೇಳುತ್ತಿರುವುದರಲ್ಲಿ ಸತ್ಯಕ್ಕೆ ದೂರವಾದದ್ದು ಯಾವುದೂ ಇಲ್ಲ, ನಾನು ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರಿಗೆ ತೋರಿಸಿದಾಗ, ಆ ದಿವಸ ಅಲ್ಲಿ ಏನು ಒಂದು ಪರಿಸ್ಥಿತಿ ಇತ್ತೋ ಈ ದಿವಸವೂ ಅಲ್ಲಿ ಅದೇ ಪರಿಸ್ಥಿತಿಯಿದೆ.ಇದನ್ನು ಶ್ರೀಮಾನ್ ನಿಜಲಿಂಗಪ್ಪನವರನ್ನೇ ಕರೆದುಕೊಂಡು ಹೋಗಿ ತಾವು ಪರಿಶೀಲನೆ ಮಾಡಬಹುದು ಆದರೆ ಶ್ರೀ ಅಗ್ನಿಹೋತ್ರಿಯವರು ಕೂಡ ನಮ್ಮ ಹಾಗೆಯೇ ಚುನಾವಣೆಯಲ್ಲಿ ನಿಂತು ಆರಿಸಿ ಬಂದವರು. ಅವರಿಗೆ ಅಲ್ಲಿಯ ಪ್ರತಿಯೊಂದು ವಿಚಾರಗಳೂ ಚನ್ನಾಗಿ ಗೊತ್ತಿದ್ದರೂ ಅವರು ಇಲ್ಲಿ ಪ್ರಜೆಗಳ ಪ್ರತಿನಿಧಿಯಾಗಿ ಬಂದು ಏನೋ ಒಂದು ಕಾಂಗ್ರೆಸ್ ಪಾರ್ಟಿಯಲ್ಲಿದ್ದೇನೆಂಬ ಮಾತ್ರಕ್ಕೆ ಇದ್ದುದನ್ನು ಇದ್ದ ಹಾಗೆ ಹೇಳದೇ ಅದನ್ನು ವಿಪರ್ಯಾಸಮಾಡಿ ಹೇಳಿದ್ದನ್ನು ನೋಡಿ ಬಹಳ ವ್ಯಸನ ಉಂಟಾಯಿತು.

ಈ ಕ್ವಾರ್ಟರಗಳನ್ನು ಕಟ್ಟಿಸಿದ ಮೇಲೆ ಬಡವರಿಗೆ ಕೊಡದೇ ತಿಂಗಳಿಗೆ ಸಾವಿರಾರು ರೂಪಾಯಿಗಳ ಪಗಾರ ಪಡೆಯುವಂತಹವರಿಗೆ ಕೊಟ್ಟರು.

ಸಭಾಧ್ಯಕ್ಷರು : ಮಾನ್ಯಸದಸ್ಯರು ಇನ್ನೆಷ್ಟು ನಿಮಿಷಗಳಲ್ಲಿ ತಮ್ಮ ಭಾಷಣ ಮುಗಿಸುವರೋ?

ಶ್ರೀಎಸ್. ಎಸ್. ಕೆಟ್ಟರ್ : ಸೋಮವಾರದಂದು ನನಗೆ ಭಾಷಣ ಮುಂದುವರಿಸಲು ಅವಕಾಶ ನೀಡಬೇಕೆಂದು ವಿನಂತಿಸುವೆ.

ಅಧ್ಯಕ್ಷರು : ಹಾಗಾದರೆ ಈಗ ಸದನದ ಕಲಾಪ ಮುಂದುವರಿಸುವ ಅಗತ್ಯವಿಲ್ಲ, ಕಲಾಪವನ್ನು ದಿನಾಂಕ : 20 ಕ್ಕೆ ಮುಂದೂಡಲಾಗಿದೆ.

ಮಾನ್ಯ ಸಭಾಧ್ಯಕ್ಷರೇ, ಮೊನ್ನೆ ನಾನು ಮಾತನಾಡುತ್ತಾ ಪಟ್ಟಣಗಳಲ್ಲಿ ಬಡಜನರಿಗೆ ವಸತಿ ಸೌಕರ್ಯದ ಬಗ್ಗೆ ವಿಚಾರ ಮಾಡುತ್ತಿದ್ದೆ. ಹುಬ್ಬಳ್ಳಿಯಲ್ಲಿ ಕಟ್ಟದಂಥ ಬಡವರ ಮನೆಗಳನ್ನು 1200 ರೂಪಾಯಿಗಳ ಪ್ರಕಾರ ಇದ್ದಂಥ ಬಡಜನರಿಗೆ ಹಂಚಲಾಗಿದೆ ಎನ್ನುವ ಮಾತನ್ನು ಹೇಳಿದೆ.

ಎಷ್ಟೋ ಹಿಂದುಳಿದ ವರ್ಗದವರಿಗೆ ಮನೆ ಕಟ್ಟುವುದಕ್ಕೆ ಹೆಂಚು ಕೊಡಬೇಕೆಂದು ಸಹಾಯ ಮಾಡುತ್ತಿದ್ದಾರೆ ನಿಜ ಆದರೆ ಇದರಿಂದ ಯಾವ ಕೆಲಸವೂ ಪೂರ್ಣವಾಗಿಲ್ಲ ಇವತ್ತಿನ ದಿವಸ ಸರಕಾರದವರೇ ಕೆಲವು ಜಾಗಗಳನ್ನು ಕೊಟ್ಟು ಅವರಿಗೆ ಬೇಕಾದ ಹಣವನ್ನು ಕಲ್ಪಿಸಿಕೊಟ್ಟು ಇಂತಹ ಯೋಜನೆಯನ್ನು ತಮ್ಮ ಕೈಲಿ ತೆಗೆದುಕೊಂಡು ಶಿಸ್ತುಬದ್ಧವಾಗಿ ಒಂದು ಒಳ್ಳೆಯ ಯೋಜನೆ ಮಾಡಿದರೆ ಒಳ್ಳೆಯದು.

ಇನ್ನು ಆಹಾರ ವಿತರಣೆಯ ವಿಷಯ ಬಹಳ ಮಹತ್ತರ ವಿಷಯ ಇದರ ಬಗ್ಗೆ ಹೇಳುವುದಾದರೆ ಒಂದು ಊರಿನಲ್ಲಿ 8 ಕಿಲೋ, ಇನ್ನೊಂದು ಕಡೆ 5 ಕಿಲೋ ಈ ರೀತಿ ತಾರತಮ್ಯ ಮಾಡಿ ಆಹಾರ ಹಂಚಿಕೆ ಮಾಡಲಾಗಿದೆ ಎಂದು ರಾಜ್ಯಪಾಲರ ಭಾಷಣದಲ್ಲೇ ಹೇಳಿದೆ. ಆದರೆ ಇದನ್ನು ಯಾವ ಆಧಾರದ ಮೇಲೆ ಮಾಡಿದೆ ಎಂಬುದನ್ನು ಸರಿಯಾಗಿ ತಿಳಿಸಿಲ್ಲ, ಬೆಂಗಳೂರಿನಲ್ಲಿ ಕೊಡತಕ್ಕ 8 ಕಿಲೋ ಸಹ ಸಾಲುವುದಿಲ್ಲವೆನ್ನುವುದನ್ನೂ ಮತ್ತು ಅವರಿಂದ ಆಗುತ್ತಿರುವ ತೊಂದರೆಯನ್ನೂ ಸಹ ನನ್ನ ಸ್ನೇಹಿತರಾದ ಶ್ರೀವಾಟಾಳ್ ನಾಗರಾಜ ಅವರು ಹೇಳಿದ್ದಾರೆ. ಅದೇ ಪ್ರಕಾರ ಉಳಿದ ಕಡೆಗಳಲ್ಲಿಯೂ ಬಹಳ ಅಭಾವ ಪರಿಸ್ಥಿತಿ ಇದೆ. ಜನ ಹೆಚ್ಚಿನ ಬೇಡಿಕೆಗಳ ಬಗ್ಗೆ ಪೇಟೆಯನ್ನು ಅವಲಂಬಿಸಬೇಕಾಗಿದೆ. ಆದರೆ ಪೇಟೆಯಲ್ಲಿನ ಧಾರಣೆ ಬಹಳ ಎತ್ತರವಾಗಿದೆ. ಆದ್ದರಿಂದ ಸರಕಾರದವರು ಪುನಃ ಅಪ್ರತ್ಯಕ್ಷವಾಗಿ ಏರತಕ್ಕ ಧಾರಣೆಗಳಿಗೆ ಅವಕಾಶ ಕೊಟ್ಟಂತೆ, ಒಮ್ಮೆ ಬೆಲೆಯನ್ನು ನಿಯಂತ್ರಿಸುವ ಪ್ರಯತ್ನ ಮಾಡಿ ಅಕ್ಕಿಯ ಬೆಲೆ ಒಂದು ಕಿಲೋಗೆ 70 ಪೈಸೆ ಎಂದು ಮಾಡಿದರೆ ಕೊಳ್ಳುವವರಿಗೆ ಪ್ರಯೋಜನವಾಗುತ್ತದೆ. ವ್ಯಾಪಾರಸ್ಥರಿಗೆ ಅನಾನುಕೂಲ ಅದನ್ನು ಶ್ರೀಆರ್. ಎಂ. ಪಾಟೀಲ ಅವರೇ ಒಪ್ಪಿಕೊಂಡರು. ಆದರೆ ಈಗಿನ ಒಂದು ಸನ್ನಿವೇಶದಲ್ಲಿ ಸರಕಾರ ಈ ಬಗ್ಗೆ ರಚಿಸಿದಂಥ ನಿಯಮಗಳನ್ನು ಚಾಲ್ತಿಯಲ್ಲಿ ತರುವುದಕ್ಕೆ ಸಾಧ್ಯವಿಲ್ಲ, ಸರಕಾರದ ಬೇರೆ ಯಾವ ನಿಯಮಗಳು ಈ ಬಗ್ಗೆ ಇದ್ದರೂ ಅವು ನಿಷ್ಫಲವಾದುವು ಎಂದು ಹೇಳಬೇಕಾಗಿದೆ. ಆದರೂ ಇವರ ಕೈಯಲ್ಲಿ ಧಾರಣೆಯನ್ನು ನಿಯಂತ್ರಿಸುವುದಕ್ಕಾಗಿಲ್ಲ, ಲೇವಿಯನ್ನು ವಸೂಲು ಮಾಡುವುದಕ್ಕಾಗಲೀ ಅದನ್ನು ಬಿಡಲಿಕ್ಕಾಗಲಿ ನಮಗೆ ಸಾಧ್ಯವಿಲ್ಲ, ಇದರಲ್ಲಿ ಯಾವ ಒಂದು ಸ್ಪಷ್ಟವಾದ ಯೋಜನೆಯನ್ನು ಸರಕಾರ ತರುವುದಕ್ಕೆ ಸಾಧ್ಯವೆನ್ನುವುದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಬೇಕಾಗಿತ್ತು.

ಜನರಿಗೆ ಅವಶ್ಯವಾಗಿ ಬೇಕಾದ ಆಹಾರಧಾನ್ಯಗಳು, ಜೀವನದ ಅವಶ್ಯ ವಸ್ತುಗಳನ್ನು ಯಾವ ರೀತಿಯಲ್ಲಿ ದೊರಕಿಸಿಕೊಡಬೇಕೆನ್ನುವ ಬಗ್ಗೆ ಒಂದು ಭರವಸೆಯನ್ನು ನೀಡಬೇಕಾಗಿತ್ತು. ಇನ್‌ಫಾರ್ಮಲ್ ರೇಶನಿಂಗ್ ಬಗ್ಗೆ ಹೆಚ್ಚಿಗೆ ಪ್ರಯತ್ನಪಡಬೇಕಾಗಿತ್ತು, ಕಳೆದ ಸಲ ನಿಗದಿಪಡಿಸಿದ್ದಂಥ ಆಹಾರಧಾನ್ಯಗಳನ್ನು ಈಗ ಕೊಡುತ್ತಾ ಇಲ್ಲ, ಅನೇಕಸಲ ಆಹಾರಧಾನ್ಯಗಳ ಸಂಗ್ರಹ ಇಲ್ಲದಿರುವ ಕಾರಣ ಅದನ್ನು ಕೊಡಲಿಕ್ಕೆ ಸಾಧ್ಯವಿಲ್ಲವೆನ್ನುವ ಉತ್ತರವನ್ನು ಕೊಡುತ್ತಾರೆ. ಹೀಗಿರುವ ಕಾರಣ ಯಾವ ಪ್ರಶ್ನೆಗೂ ಸಮರ್ಪಕವಾದ ಉತ್ತರ ದೊರೆಯುತ್ತಾ ಇಲ್ಲ. ಸರಕಾರ ಆಹಾರ ವಿತರಣೆ ಬಗ್ಗೆ ಯಾವ ಒಂದು ಘೋಷಣೆಯನ್ನೂ ಮಾಡದೇ ಇರುವುದು ಮತ್ತೊಂದು ವಿಷಾದಕರ.

ಇನ್ನೊಂದು ಮುಖ್ಯವಾದಂಥ ವಿಷಯವೆಂದರೆ, ನಮ್ಮ ಮೈಸೂರ ರಾಜ್ಯದಲ್ಲಿ ಬಟ್ಟೆಗಳನ್ನು ಉತ್ಪಾದಿಸುವ ಅನೇಕ ಗಿರಣಿಗಳಿವೆ. ಹುಬ್ಬಳ್ಳಿಯಲ್ಲಿ, ಬೆಂಗಳೂರಿನಲ್ಲಿ, ದಾವಣಗೆರೆಯಲ್ಲಿ, ಮೈಸೂರಿನಲ್ಲಿ ಮತ್ತು ಗುಲಬರ್ಗಾದಲ್ಲಿ ಅವು ಉಂಟು. ಇವುಗಳ ಬಗ್ಗೆ ಬಹಳ ಸಂದಿಗ್ಧ ಪ್ರಶ್ನೆ ಉಂಟಾಗಿದೆ. ಅನೇಕ ಬಟ್ಟೆ ಗಿರಣಿಗಳನ್ನು ನಿಲ್ಲಿಸುತ್ತೇವೆಂದು ಕಾರ್ಮಿಕರಿಗೆ ಮೇಲಿಂದ ಮೇಲೆ ಭಯ ತೋರಿಸುತ್ತಿದ್ದಾರೆ. ಬೆಂಗಳೂರಿನಲ್ಲಿರತಕ್ಕ ಮಿನರ್ವಾ ಮತ್ತು ಮೈಸೂರ ಸ್ಪಿನ್ನಿಂಗ್ ಮತ್ತು ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿಗಳಲ್ಲಿ ಸುಮಾರು 7500 ಜನರು ಕೆಲಸ ಮಾಡುತ್ತಿದ್ದರು. ಬಹಳ ದಿವಸಗಳ ಹಿಂದಿನಿಂದಲೂ ಈ ಗಿರಣಿಗಳನ್ನು ಮುಚ್ಚಿದ್ದು ಪುನಃ ಪ್ರಾರಂಭಿಸುತ್ತೇವೆಂದು ಆಶ್ವಾಸನೆಯನ್ನು ಕೊಟ್ಟು ಫೆಬ್ರುವರಿ 10ನೇ ತಾರೀಖಿಗೆ ಅವನ್ನು ತೆರೆಯುತ್ತೇವೆಂದು ಹೇಳಿದರು. ಆ ರೀತಿ ಹೇಳಿ ಕೇವಲ 1200 ಜನರನ್ನು ಮಾತ್ರ ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಇದೇ ಪ್ರಕಾರ ಹುಬ್ಬಳ್ಳಿಯಲ್ಲಿ ಎರಡನೇ ಶಿಫ್ಟನ್ನು ಬಂದ್ ಮಾಡಿದ್ದಾರೆ. ಹೀಗೆ ಕಾರ್ಮಿಕರಿಗೆ ಮೇಲಿಂದ ಮೇಲೆ ಗಿರಣಿಗಳನ್ನು ಬಂದ್ ಮಾಡುತ್ತೇವೆಂದು ಅನೇಕ ಷರತ್ತುಗಳನ್ನು ಹಾಕಿ ಹೆದರಿಸುತ್ತಿದ್ದಾರೆ. ಹುಬ್ಬಳ್ಳಿಯಲ್ಲಿ ಕಾರ್ಮಿಕರಿಗೆ ಕೊಡುವ ಪ್ರಾವಿಡೆಂಟ್ ಫಂಡ್ ಕಾಂಟ್ರಿಬ್ಯೂಷನ್ನನ್ನು ಮ್ಯಾನೇಜ್‌ಮೆಂಟಿನವರು ತುಂಬಿಲ್ಲ, ಇನ್ನು ಬೆಂಗಳೂರಿನ ಎರಡು ಮಿಲ್ಲುಗಳಲ್ಲಿನ ಕಾರ್ಮಿಕರಿಗೆ ಕೊಡುವ ಕಂಪೆನ್‌ಸೇಷನ್ನನ್ನು ಇದುವರೆಗೆ ಕೊಟ್ಟಿಲ್ಲ, ಡಿ.ಎ.ಕೇಳಿದರೆ ಅದನ್ನು ಕೊಡುವುದಿಲ್ಲವೆಂದು ಹೇಳಿ ಮಿಲ್ ಬಂದ್ ಮಾಡುವುದಾಗಿ ಬೆದರಿಕೆಯನ್ನು ಹಾಕುತ್ತಾರೆ. ಇಂತಹ ಪ್ರಶ್ನೆಯನ್ನು ಸರಕಾರದವರು ಏತಕ್ಕೆ ವಿಚಾರಮಾಡಬಾರದು ? ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸಾಕಷ್ಟು ಏನೂ ಹೇಳದಿದ್ದರೂ ಈ ಒಂದು ಪ್ರಶ್ನೆಯ ಬಗ್ಗೆ ಹೇಳಬೇಕಾಗಿತ್ತು. ಯಾವ ಗಿರಣಿಗಳಲ್ಲಿಯೇ ಆಗಲಿ ದುಡಿಯುತಕ್ಕ ಕಾರ್ಮಿಕರಿಗೆ ಇದು ಬಹಳ ಮುಖ್ಯವಾದ ವಿಷಯ ಇದಲ್ಲದೇ ಇತ್ತೀಚಿಗೆ ಕಾರ್ಮಿಕ ಒಪ್ಪಂದಗಳನ್ನು ಮುರಿಯುತ್ತಿದ್ದಾರೆ. ಇದರ ಬಗ್ಗೆ ಸರಕಾರದ ಯಾವ ಕ್ರಮವೂ ಇಲ್ಲ. ಆದರೆ ಗಿರಣಿಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್ ಕೊಡದೇ ಇರುವುದು ಮತ್ತು ಲೇ ಆಫ್ ಕಂಪೆನ್ಸೇಷನ್ ಕೊಡದೇ ಇರುವುದು ಬಹಳ ದೊಡ್ಡ ಅಪರಾಧ. ಮ್ಯಾನೇಜಮೆಂಟಿನವರಿಗೆ ಇಷ್ಟೊಂದು ಸವಲತ್ತು ಇವರು ಏತಕ್ಕೆ ಕೊಡುತ್ತಾರೋ ಗೊತ್ತಿಲ್ಲ, ಆದರಿಂದಲೇ ಸರಕಾರ ಈಗ ಬಹಳ ಹೆಚ್ಚಿನ ಜವಾಬ್ದಾರಿಯಿಂದ ಉತ್ತರ ಕೊಡುವ ಪರಿಸ್ಥಿತಿ ಉದ್ಭವವಾಗಿದೆ.

ಇನ್ನು ಇತರ ಕ್ಷೇತ್ರಗಳನ್ನು ನೋಡೋಣ ಇವತ್ತು ಸರ್ವೆ ಡಿಪಾರ್ಟ್‌ಮೆಂಟ ಒಂದು ಶಾಖೆ. ಅಲ್ಲಿ ಸುಮಾರು 1000 ಕೆಲಸಗಾರರು ನಾಳೆ ಎಪ್ರಿಲ್ ಕೊನೆಯ ತಾರೀಖಿನಿಂದ ಕೆಲಸವನ್ನು ಕಳೆದುಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಸಾಕಷ್ಟು ಗಮನವನ್ನು ರಾಜ್ಯಪಾಲರು ಕೊಟ್ಟಿಲ್ಲ. ಆದರಿಂದಾಗಿ ಈಗ ಅನೇಕರಿಗೆ ಕೆಲಸಗಳು ಸಿಗದೇ ಅವರು ತೊಂದರೆಗೊಳಪಟ್ಟಿದ್ದಾರೆ. ಇಂತಹ ಸಮಸ್ಯೆಯಲ್ಲಿ ಅಂಥವರಿಗೆ ಸಮರ್ಪಕವಾದ ರೀತಿಯಲ್ಲಿ ಪರಿಹಾರ, ಅಂತಹ ತೊಂದರೆಗಳಿಗೆ ತಕ್ಕ ನಿವಾರಣೋಪಾಯವನ್ನು ರಾಜ್ಯಪಾಲರು ನಿಜವಾಗಿ ಕೊಡಬೇಕಾಗಿತ್ತು. ಆದ್ದರಿಂದ ಇಂತಹ ಸಂದಿಗ್ಧ ಪರಿಸ್ಥಿತಿ ಇನ್ನು ಮುಂದೆ ಎಷ್ಟಾಗಬಹುದು ಎಂಬುದನ್ನು ಅಂದಾಜು ಮಾಡುವುದು ಬಹಳ ಕಠಿಣವಾಗಿದೆ. ಆದ್ದರಿಂದ ಎಲ್ಲರನ್ನೂ ಸರಿಸಮಾನ ದೃಷ್ಟಿಯಿಂದ ಕಾಣುವುದು ಒಳ್ಳೆಯದು. ಆ ಒಂದು ದೃಷ್ಟಿಕೋನ ಇವತ್ತು ಸರಕಾರಕ್ಕೆ ಬೇಕು.

ಇನ್ನೂ ಒಂದು ವಿಚಾರ. ಈಗ 58ನೇ ವರ್ಷದ ವರೆಗೂ ಸರ್ವೀಸಿನಲ್ಲಿ ಮುಂದುವರೆಯುವ ಹಾಗೆ ಸೆಕೆಂಡರೀ ಟೀಚರ್ಸಗೆ ಒಂದು ಸವಲತ್ತನ್ನು ಕೊಟ್ಟಿದ್ದಾರೆ. ಉಳಿದ ನೌಕರರಿಗೆ ಅಂತಹ ಸವಲತ್ತನ್ನು ಕೊಟ್ಟಿಲ್ಲ. ಅದನ್ನು ಎಲ್ಲರಿಗೂ ಏತಕ್ಕೆ ಕೊಡಬಾರದು ? ಉಪಾಧ್ಯಾಯರಿಗೆ 58ನೇ ವರ್ಷದ ವರೆಗೂ ಪರಮಾವಧಿ ಸರ್ವೀಸ್ ಕೊಟ್ಟಿರುವುದರಿಂದ ಅದನ್ನು ಯಾವ ಒಂದು ಆಧಾರದ ಮೇಲೆ ಕೊಟ್ಟಿದ್ದಾರೆಂಬುದನ್ನು ಸರಕಾರದವರು ತಿಳಿಸಬೇಕು. ಅದನ್ನು ಎಲ್ಲರಿಗೂ ಅನ್ವಯಿಸಬೇಕು. ಆ ಬಗ್ಗೆ ವಿಚಾರ ಮಾಡಬೇಕು. ನಾವು ಯಾವುದೇ ಪ್ರಶ್ನೆಯನ್ನು ತೆಗೆದುಕೊಂಡಾಗ ಎಲ್ಲರನ್ನೂ ಸರಿಸಮಾನವಾದ ದೃಷ್ಟಿಯಿಂದ ಕಾಣಬೇಕು. ಒಂದು ಸಮಾನತೆ ದೃಷ್ಟಿಯನ್ನು ಇಟ್ಟುಕೊಂಡು ವಿಚಾರ ಮಾಡಬೇಕು ಏನೇ ಆಗಲಿ ತಾರತಮ್ಯ ಮಾಡಬಾರದು. ಅದರಲ್ಲೂ ನೌಕರ ವರ್ಗದಲ್ಲಿ ಭೇದಭಾವವನ್ನು ಕಾಣುವುದು ಬಹಳ ತಪ್ಪು ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಆದಕ್ಕಾಗಿ ರಾಜ್ಯಪಾಲರು ತಮ್ಮ ಈ ಒಂದು ಭಾಷಣದಲ್ಲಿ ಈ ಎಲ್ಲಾ ಸಂಗತಿಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುವುದು ಅವಶ್ಯವಿತ್ತು.

ಇನ್ನು ಶಿಕ್ಷಣ ರಂಗದಲ್ಲಿ 5 ವರ್ಷ 9 ತಿಂಗಳುಗಳಾದ ತಮ್ಮ ಹುಡುಗ ಹುಡುಗಿಯರನ್ನು ಇವತ್ತು ಪಾಲಕರು ಶಾಲೆಗೆ ಕಳಿಸುತ್ತಾರೆ. ಆ ಹುಡುಗ ಹುಡುಗಿಯರು ಯಾವ ಒಂದು ವಾತಾವರಣದಲ್ಲಿ ಬೆಳೆಯುತ್ತಾರೋ ಗೊತ್ತಿಲ್ಲ. ಮುಖ್ಯವಾಗಿ ಹಿಂದುಳಿದ ವರ್ಗದಲ್ಲಿ ಕೆಟ್ಟ ವಾತಾವರಣದಲ್ಲಿ ಬೆಳೆಯುವ ಪರಿಸ್ಥಿತಿಯಿರುತ್ತದೆ. ಅವರಿಗೆ ಒಳ್ಳೇ ವಾತಾವರಣವಿರಬೇಕು. ಈ ಬಗ್ಗೆ ಸರಕಾರ ಕ್ರಮ ಕೈಕೊಳ್ಳಬೇಕು. ಮೊಟ್ಟ ಮೊದಲನೆಯದಾಗಿ ಕೇವಲ 4 ವರ್ಷದಿಂದಲೇ ಮಕ್ಕಳು ಕಲಿಯಲು ಆರಂಭಿಸುವ ಸ್ಥಿತಿ ಬರಬೇಕು. ಆದಕ್ಕಾಗಿ ಆ ವಿಚಾರವನ್ನು ಲಕ್ಷ್ಯಪೂರ್ವಕ ವಿಚಾರ ಮಾಡಬೇಕಾಗಿದೆ. ಕೇವಲ 4ನೇ ವರ್ಷದಲ್ಲಿಯೇ ಮಕ್ಕಳು ಯಾವುದಾದರೂ ಸುತ್ತಮುತ್ತಲಿರುವ ವಾತಾವರಣವನ್ನು ನೋಡಿದಕೂಡಲೇ ಅದನ್ನು ಗ್ರಹಣ ಮಾಡುವ ಶಕ್ತಿ, ಸ್ವಭಾವವನ್ನು ಹೊಂದಿರುತ್ತಾರೆ. ಇದಕ್ಕಾಗಿ ಸರಕಾರದವರು ಪ್ರತ್ಯೇಕವಾಗಿ ಕೆಲವು ಯೋಜನೆಗಳನ್ನು ಹಾಕಿಕೊಂಡು ಅಷ್ಟನ್ನೂ ಕೂಡಲೇ ತೆಗೆದುಕೊಳ್ಳಬೇಕು. ಮತ್ತು ಶಿಕ್ಷಣದಲ್ಲಿ ಮುಖ್ಯವಾಗಿ ಕ್ರಾಂತಿಯನ್ನು ಮಾಡಬೇಕಾದ್ದು ಏನೆಂದರೆ, ಎಳೆಯ ವಯಸ್ಸಿನ ಮಕ್ಕಳ ಮನಸ್ಸಿನ ಮೇಲೆ ಪರಿಣಾಮಕಾರಿಯಾಗುವಂತಹ ಪುಸ್ತಕ, ಪರಿಣಾಮಕಾರಿಯಾದ ಶಿಕ್ಷಣ, ಪರಿಣಾಮಕಾರಿಯಾದ ವಾತಾವರಣ, ಸ್ಥಳದ ಆವರಣ, ಸ್ಕೂಲು, ಕಟ್ಟಡ ಇತ್ಯಾದಿಗಳನ್ನು ಒದಗಿಸಬೇಕಾದ್ದು ಮುಖ್ಯ ಎಂದು ನಾನು ಈ ಮೂಲಕ ಸರಕಾರದವರನ್ನು ಕೇಳಿಕೊಳ್ಳುತ್ತೇನೆ. ರಾಜ್ಯಪಾಲರ ಭಾಷಣದ ಬಗ್ಗೆ ನಾನು ಈ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಅವುಗಳನ್ನೂ ಸರಕಾರದವರು ಸ್ವೀಕಾರ ಮಾಡುತ್ತಾರೆಂದು ಆಶೆ ಮಾಡಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಬೇರೆ ಬೇರೆ ಇಲಾಖೆಗಳ ಪೂರಕ ಬೇಡಿಕೆಗಳಿಗೆ ಸರಕಾರ ಮಂಜೂರಿ ಪಡೆಯುವ ವಿಷಯದಲ್ಲಿ ಮಾರ್ಚ 23 ರಂದು ಮಾತನಾಡುತ್ತ 'ಮಾನ್ಯ ಸಭಾಪತಿಗಳೇ, ಸಂವಿಧಾನದ 205 ನೇ ಕಲಮಿನ ಪ್ರಕಾರ ಯಾವುದಾದರೂ ಒಂದು ಹುದ್ದೆಯನ್ನು ನಿರ್ಮಾಣ ಮಾಡುವ ಪ್ರಶ್ನೆ ಬಂದಾಗ ಇಲ್ಲವೇ ಯಾವುದಾದರೂ ಒಂದು ಖಾತೆಯಲ್ಲಿ ಹಿಂದೆ ಒಪ್ಪಿರುವುದಕ್ಕಿಂತ ಹೆಚ್ಚು ಹಣ ಬೇಕಾದಾಗ ಮಾತ್ರ ಅಂಥವುಗಳು ಈ ಸಪ್ಲಿಮೆಂಟರಿ ಪೂರಕ ಬೇಡಿಕೆಗಳಲ್ಲಿ ಬರುತ್ತವೆ. ಆದರೆ ಆನೇಕ ಡಿಮ್ಯಾಂಡುಗಳನ್ನು ಇವತ್ತಿನ ದಿವಸ ಪರಿಶೀಲನೆ ಮಾಡಿದಾಗ ಸರಕಾರ ಸಾಕಷ್ಟು ಸಂಯಮದಿಂದ

ವರ್ತಿಸಿಲ್ಲವೆಂದು ತಿಳಿದುಬರುತ್ತದೆ. ಕೆಲವು ಡಿಮ್ಯಾಂಡುಗಳಲ್ಲಿ ಕೆಲವು ಮಾತುಗಳನ್ನು ಹೇಳಲಾಗಿದೆ. ಡಿಯರ್ ನೆಸ್ ಅಲೋವನ್ಸ್ ಬಗ್ಗೆ ಸರಕಾರಿ ನೌಕರರ ಬೇಡಿಕೆಯನ್ನು ಮಾನ್ಯ ಮಾಡಿ ಅದನ್ನು ಕೊಡಲಿಕ್ಕೆ ನಮ್ಮ ಅಡ್ಡಿಯೂ ಇಲ್ಲ, ಇದರ ಬಗ್ಗೆ ಯಾವ ಆಕ್ಷೇಪಣೆಯೂ ಬರಲಾರದು.

ಡಿಮ್ಯಾಂಡ 1 ರಲ್ಲಿ ಹೇಳಿದಂತೆ ಹೊಸ ಹುದ್ದೆಗಳನ್ನು ನಿರ್ಮಾಣ ಮಾಡಿದಿರಿ, ಹೆಚ್ಚು ಅಪೀಲ್ಸ್ ಉಳಿದಿದ್ದರಿಂದ ತೀವ್ರ ಗತಿಯಿಂದ ನಿರ್ಣಯ ಮಾಡಲಿಕ್ಕೆ ಕೆಲವು ಹುದ್ದೆಗಳನ್ನು ನಿರ್ಮಾಣ ಮಾಡಿದ್ದೀರಿ, ಸಂಯಮದಿಂದ ವರ್ತಿಸಿದ್ದರೆ ಕಾದು ನೋಡಿದ್ದರೆ ಅಪೀಲುಗಳನ್ನು ತೀರ್ಮಾನ ಮಾಡಲಿಕ್ಕೆ ಬರುತ್ತಿತ್ತು. ಮಾರ್ಚ ಹೊಸ ಬಜೆಟ್ ಬಂದ ಮೇಲೆ ಈ ಬೇಡಿಕೆಗಳನ್ನು ಮುಂದೆ ಇಟ್ಟು ಈ ನಿರ್ಣಯ ಆದ ಮೇಲೆ ತೀರ್ಮಾನ ಮಾಡಲಿಕ್ಕೆ ಬರುತ್ತಿತ್ತು. ಹೀಗಾಗಿ ಸಂಯಮಗಿಂದ ವರ್ತಿಸಿಲ್ಲ. ಈ ಸಭೆಗೆ ಹಲವು ಸಂಗತಿಗಳನ್ನು ತಿಳಿಸದೇ ನಿಮಗೆ ತಿಳಿದಂತೆ ವರ್ತಿಸಿ ಆಮೇಲೆ ಒಪ್ಪಿಗೆ ಕೊಡಬೇಕೆಂದು ಕೇಳುತ್ತಿದ್ದೀರಿ ಆಳುವ ಪಕ್ಷದವರಿಗೆ ಬಹುಮತ ಇದೆ ಎಂದು ಹೀಗೆ ಮಾಡುತ್ತಾ ಇದ್ದೀರಿ ಎಂದು ಗೊತ್ತಾಗುತ್ತದೆ ಇದು 3ನೆಯ ಸಪ್ಲಿಮೆಂಟರಿ ಬಜೆಟ್ 2ನೆಯ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಇವುಗಳನ್ನು ವಿಚಾರ ಮಾಡಬಹುದಾಗಿತ್ತು.

ಖಾದಿ ಬೋರ್ಡಿನಲ್ಲಿ ಬೇಕಾದಷ್ಟು ಭ್ರಷ್ಟಾಚಾರ ನಡೆದಿದೆ. ಲೆಕ್ಕ ಸರಿಯಾಗಿಲ್ಲ ಅಪವ್ಯಯ ಸಾಕಷ್ಟು ಆಗಿದೆ ಎಂಬುದನ್ನು ಮುಖ್ಯಮಂತ್ರಿಗಳೇ ಒಪ್ಪಿದ್ದಾರೆ. ಇದರ ಬಗ್ಗೆ ಹಣಬೇಕು ಎನ್ನುವ ಬಗ್ಗೆ ಬಂದಿರುವುದು ವಿಷಾದದ ಸಂಗತಿ.

ಕೆಲ ಕೆಲವು ಬೇಡಿಕೆಗಳು ಬಹಳ ವಿಚಿತ್ರವಾಗಿವೆ. ಇನ್ನು ಡಿಮ್ಯಾಂಡ ನಂಬರ 20 ರಲ್ಲಿ ವಿಮಾನದ ಮೂಲಕ ಬೆಳೆಗಳಿಗೆ ಔಷಧಗಳನ್ನು ಸಿಂಪಡಿಸುವ ಸಲುವಾಗಿ 19.10 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಈಗ ಇದನ್ನು ಮಾಡುವಂಥ ಅವಶ್ಯಕತೆ ಇರಲಿಲ್ಲ. ಮುಂದಿನ ಬೇಡಿಕೆಗಳನ್ನು ಮಂಡಿಸುವಾಗ ಈ ಸಭೆ ಒಪ್ಪಿಗೆ ಕೊಟ್ಟಾಗ ಈ ವಿಚಾರವನ್ನು ವಿಚಾರಿಸಲಿಕ್ಕೆ ಬರುತ್ತದೆ. ಆರ್ಟಿಕಲ್ 205 ರ ಪ್ರಕಾರ ಇದನ್ನು ಲಕ್ಷದಲ್ಲಿಟ್ಟುಕೊಳ್ಳದೇ ಮನಸ್ಸಿಗೆ ಬಂದಂತೆ ವರ್ತಿಸಿದ್ದಾರೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲವೆಂದು ಹೇಳುತ್ತೇನೆ. ಹೀಗೆ ಸರಕಾರ ವರ್ತಿಸುತ್ತಾ ಹೋದರೆ ಬಜೆಟ್ಟು ಮಾಡುವ ಅವಶ್ಯಕತೆ ಉಳಿಯುವುದಿಲ್ಲ. ತಮಗೆ ತಿಳಿದಂತೆ ಖರ್ಚು ಮಾಡತಕ್ಕದ್ದು, ಖರ್ಚು ಮಾಡಿದ ಮೇಲೆ ಸಪ್ಲಿಮೆಂಟರಿ ಬಜೆಟ್ಟು ಹಾಕತಕ್ಕದ್ದು ಹೀಗೆ ಮಾಡಿದರೆ ಸಂಯಮ ಉಳಿಯಲಾರದು. ಇದರಿಂದ ಈ ಸಭೆಯ ಅಧಿಕಾರವನ್ನು ಕಸಿದುಕೊಂಡಂತಾಗುತ್ತದೆ.

ನ್ಯಾಯಾಧೀಶರ ಹಕ್ಕು ಕಸಿತಕ್ಕೆ ವಿರೋಧ

31ನೇ ಮಾರ್ಚ್ 1967

ಮಾರ್ಚ 31 ರಂದು ಸರಕಾರ ಮಂಡಿಸಿದ ಮೈಸೂರ ರಾಜ್ಯ ನಾಗರಿಕ ಸೇವೆಗಳ (ಮುಷ್ಕರ ಸಂಪೂರ್ಣ ಪ್ರತಿಬಂಧಕ) ತಿದ್ದುಪಡಿ ವಿಧೇಯಕ 1967 ರ ವಿಷಯದಲ್ಲಿ ಶ್ರೀ ಸದಾಶಿವ ಶೆಟ್ಟರು.

'ಈ ಶಾಸನವನ್ನು ಒಂದು ತತ್ವದ ತಳಹದಿಯ ಮೇಲೆ ನಾನು ವಿರೋಧ ಮಾಡುತ್ತಿದ್ದೇನೆ. ಯಾವುದೇ ಒಬ್ಬ ಅಪರಾಧಿಯನ್ನು ಶಿಕ್ಷೆಗೆ ಗುರಿ ಮಾಡಿದಾಗ ಅಂತಹ ಅಪರಾಧವನ್ನು ಎಸಗಬಾರದು ಎಂಬ ದೃಷ್ಟಿಯಲ್ಲಿ ಶಿಕ್ಷೆಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಕೊಡುವಂತಹ ಒಂದು ಕಲಮನ್ನು ಸೇರಿಸಿ ಆ ಪ್ರಕಾರ ಯಾವುದೇ ಅಪರಾಧಗಳು ಆಗಬಾರದು ಅಂತಾ ಹೇಳಿ ಡೆಟರೆಂಟ್ ಪನಿಶ್‌ಮೆಂಟ್' (ಕಠಿಣ ಶಿಕ್ಷೆ) ಅಂತಾ ಏನು ಅನ್ನುತ್ತೇವೋ ಆ ಪ್ರಕಾರ ಶಿಕ್ಷೆಯನ್ನು ಮಾಡಲು ಅಧಿಕಾರವನ್ನು ಪಡೆಯುತ್ತಾರೆ. ಆದಕ್ಕೆ ಇಲ್ಲಿ ಫಾಯಿನ್ (ದಂಡ) ಮತ್ತು ಪನಿಶ್‌ಮೆಂಟ (ಶಿಕ್ಷೆ) ಎರಡನ್ನೂ ಕೂಡಿಯೇ ಕೊಡಬೇಕೆಂಬ ತತ್ವವನ್ನು ಈ ಶಾಸನವನ್ನು ತಿದ್ದುಪಡಿಮಾಡುವ ಕಾಲಕ್ಕೆ ತಂದಿದ್ದಾರೆ. ಆದರೆ ರಾಜಕೀಯ ಅಪರಾಧ ಅಥವಾ ರಾಜಕೀಯ ಹೋರಾಟ ಮಾಡತಕ್ಕವರಿಗೆ ಯಾವುದೇ ಒಂದು ಶಿಕ್ಷೆ ಅಥವಾ ಯಾವುದೇ ಒಂದು ಹೆದರಿಕೆ ಬರುವಂತಹದೇನನ್ನೂ ಮಾಡುವುದಿಲ್ಲ. ಇವತ್ತು ಇದನ್ನು ಹತ್ತು ವರ್ಷಕ್ಕೆ ಏರಿಸಿದರೂ ಕೂಡ ಈ ಶಿಕ್ಷೆ ಅವರನ್ನು ಬಾಧಿಸಲಿಕ್ಕೆ ಇಲ್ಲ. ಈ ಒಂದು ಬದಲಾವಣೆಯನ್ನು ತಂದು ತನ್ನ ಉದ್ದೇಶ ಈಡೇರಿತು ಎಂದು ಸರಕಾರದವರು ತಿಳಿದಿದ್ದರೆ ಸರಕಾರದ ಉದ್ದೇಶ ಎಂದೂ ಸಾಧಿಸಲಿಕ್ಕೆ ಇಲ್ಲ. ಇದರಿಂದ ಸರಕಾರ ಎನ್. ಜಿ. ಓಗಳೇ ಅಥವಾ ಯಾವುದೇ ಸರಕಾರಿ ಅಧಿಕಾರಿಯನ್ನಾಗಲೀ ಮತ್ತಷ್ಟು ರೊಚ್ಚಿಗೆ ಎಬ್ಬಿಸಬಾರದು. ಈ ರೀತಿ ಮಾಡುವುದರಿಂದ ಅವರಲ್ಲಿ ಇನ್ನೂ ಸಿಟ್ಟುಗೇಡಿತನ ಹೆಚ್ಚಿ ಅವರ ಮನಸ್ಸು ಅತಿರೇಕವನ್ನು ಮುಟ್ಟೀತು ಎಂಬ ಎಚ್ಚರಿಕೆಯನ್ನು ಸರಕಾರದವರಿಗೆ ಕೊಡಬಯಸುತ್ತೇನೆ

ಎರಡನೆಯದು, ತತ್ವದ ಮೇಲೆ ವಿರೋಧ ಮಾಡುವುದು ಏನೆಂದರೆ ಜಾಮೀನಿನ ಮೇಲೆ ಬಿಡುವ ಕಾಲಕ್ಕೆ ಎರಡೂ ಕಡೆಯ ಮತ ಅಭಿಪ್ರಾಯಗಳನ್ನು ಅನುಸರಿಸಬೇಕು ಎನ್ನುವುದನ್ನು ಈ ತಿದ್ದುಪಡಿಯಲ್ಲಿ ಹೇಳಲಾಗಿದೆ. ಈಗ ಕೋರ್ಟಿನವರು ಒಂದು ಜಾಮೀನಿನ ಪ್ರಶ್ನೆಯನ್ನು ಪರಿಶೀಲಿಸುತ್ತಾ ಇರುವಾಗ ಯಾವುದಾದರೂ ಒಂದು ತೀರ್ಮಾನಕ್ಕೆ ಬರಲೇ ಬೇಕಾದಂತಹ ಅವಶ್ಯಕತೆ ಈ ತಿದ್ದುಪಡಿಯಲ್ಲಿ ಇದೆ. ಯಾವಾಗ ಸರಕಾರದ ಪರವಾಗಿ ಒಂದು ವಾದವನ್ನು ಹೇಳಲಾಗುತ್ತದೆ ಆ ಕಾಲದಲ್ಲಿ ಕೋರ್ಟಿನವರು ಜಾಮೀನನ್ನು ಕೊಡಬಹುದೇ ಅಥವಾ ಕೊಡಬಾರದೇ ಎಂಬ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ಪೂರ್ವಭಾವಿಯಾದ ನಿರ್ಣಯಕ್ಕೆ ಕೋರ್ಟಿನವರು ಬಂದದ್ದೇ ಆದರೆ ಸರಿಯಾದಂತಹ ನಿರ್ಣಯ ಜಾರಿಯಾಗಿಲ್ಲ ಎಂಬ ಸಂಶಯ ಪ್ರತಿಯೊಬ್ಬರಲ್ಲೂ ಉತ್ಪನ್ನವಾದೀತು. ಎಂಬ ಒಂದು ತಾತ್ವಿಕ ತಳಹದಿಯ ಮೇಲೆ ಈ ತಿದ್ದುಪಡಿಯನ್ನು ನಾವು ಸ್ವೀಕರಿಸಬಾರದು ಎಂಬ ಮಾತನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದರಲ್ಲಿ ಇನ್ನೊಂದು ಅನಾಹುತ ಏನೆಂದರೆ.

ಸಚಿವ ಶ್ರೀಎಸ್. ಆರ್. ಕಂಠಿ : ಸದಸ್ಯರ ಪ್ರಯೋಜನಕ್ಕಾಗಿ 92 ನೇ ನಿಯಮವನ್ನು ಓದಬಯಸುತ್ತೇನೆ.

' ವಿಧೇಯಕ ಅಥವಾ ತಿದ್ದುಪಡಿ ಸೂಚಿಸಲ್ಪಟ್ಟ ವಿಧೇಯಕ ಯಾವುದೇ ಅಂಗೀಕಾರಕ್ಕಾಗಿ ಮಂಡಿಸಲ್ಪಟ್ಟಾಗ ಸದಸ್ಯರು ಅದನ್ನು ಅಂಗೀಕರಿಸುವುದರ ಪರ ಅಥವಾ ವಿರುದ್ಧ ಅಷ್ಟೇ ತಮ್ಮ ಪ್ರತಿಪಾದನೆ ಸೀಮಿತಗೊಳಿಸಬೇಕೆಂದಿದೆ. ಮಾನ್ಯ ಸದಸ್ಯರು ವಿಧೇಯಕದ ವಿವರಗಳನ್ನು ಕುರಿತು ಪ್ರಸ್ತಾಪಿಸಿ ಪ್ರತಿಪಾದನೆಯನ್ನು ಮುಂದುವರಿಸುವುದು ಅನವಶ್ಯಕ. ಸಾಮಾನ್ಯವಾದ ಅಭಿಪ್ರಾಯಗಳನ್ನು ಮಾತ್ರ ಮಂಡಿಸಬೇಕು.

ಉಪಾಧ್ಯಕ್ಷರು : ಮಾನ್ಯ ಸದಸ್ಯರು ಇದನ್ನು ಗಮನಿಸಲಿ

ಶ್ರೀಎಸ್. ಎಸ್. ಶೆಟ್ಟರ : ಕೋರ್ಟಿನಲ್ಲಿ ನಡೆಯತಕ್ಕ ವ್ಯಾಜ್ಯಗಳು ಬೇಗ ತೀರ್ಮಾನವಾಗುವುದಿಲ್ಲ ಎಂಬುದನ್ನು ಮಾತ್ರ ಎಲ್ಲರೂ ಒಪ್ಪುತ್ತಾರೆ. ನಾವೂ ಒಪ್ಪುತ್ತೇವೆ. ಇದಕ್ಕಾಗಿ ಒಂದು ತಿದ್ದುಪಡಿಯನ್ನು ಬೇಗ ತೀರ್ಮಾನ ಮಾಡತಕ್ಕ ದೃಷ್ಟಿಯಿಂದ ಒಪ್ಪಿಕೊಳ್ಳಬೇಕು ಎಂದರೆ ನಾವು ವಿಶಿಷ್ಟ ಕೇಸುಗಳ ಬಗ್ಗೆ ಆಗುತ್ತಿರುವ ವಿಧಾನವನ್ನು ಗಮನಕ್ಕೆ ತೆಗೆದುಕೊಳ್ಳದೇ ಈ ಒಂದು ವಿಶೇಷ ಸಂದರ್ಭಕ್ಕೆ ಹೆಚ್ಚಿನ ಗಮನ ಕೊಟ್ಟು ಇದನ್ನು ಆಗಬಹುದು ಎಂಬುದಾಗಿ ನಾವು ಒಪ್ಪಿಕೊಂಡರೆ ಇನ್ನುಳಿಯತಕ್ಕ.........

ಶ್ರೀ ಎಸ್.ಆರ್.ಕಂಠಿ :- ಅಧ್ಯಕ್ಷರೆ ಮತ್ತೆ ಮಾನ್ಯ ಸದಸ್ಯರು ವಿವರಗಳಿಗೆಯೇ ಹೋಗುತ್ತಿದ್ದರೆ. ಆ ಸ್ಟೇಜ ಈಗಾಗಲೇ ಮುಗಿದು ಹೋಗಿದೆ.

ಉಪಾಧ್ಯಕ್ಷರು :- ಮಾನ್ಯ ಮಂತ್ರಿಗಳು ಹೇಳುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ಮಾತುಗಳನ್ನು ಮುಂದುವರೆಸಿ.

ಶ್ರೀ ಎಸ್.ಎಸ್. ಶೆಟ್ಟರ :- ನಾನು ಕೂಡ ಈಗ ಜನರಲ್ ಅಬ್‌ಝರವೇಶನ್ನನ್ನೇ ಮಾಡುತ್ತಿದ್ದೇನೆ. ಇಲ್ಲಿ ನಾವು ಇದರ ಸ್ವರೂಪವನ್ನು ವಿವರಣೆ ಮಾಡದೇ ಇದಕ್ಕೆ ಒಪ್ಪಿಗೆಯನ್ನು ಕೊಟ್ಟರೆ ಮುಂದೆ ನ್ಯಾಯಾಲಯದಲ್ಲಿ ಜನರಿಗೆ ತೊಂದರೆಯಾಗುತ್ತದೆ. ಕೇಸನ್ನು ವಿಚಾರಣೆ ಮಾಡದೇ ಜಾಮೀನನ್ನು ಕೊಡ ಕೂಡದು ಅಂತಾ ಇದರಲ್ಲಿದೆ. ಅದನ್ನು ಯಾವ ತಾತ್ವಿಕ ದೃಷ್ಟಿಯಿಂದ ನಾವಿಲ್ಲಿ ಒಪ್ಪಬೇಕು ಇದನ್ನು ನಾವು ಒಪ್ಪಬೇಕೆಂದು ಕೇಳುತ್ತಿರುವುದು ಬಹಳ ಅಸಮಂಜಸ ಅದು ಇಲ್ಲಿ ಒಡಮೂಡಿ ಕಾಣುತ್ತದೆ.

ಇನ್ನು ಮೂರನೆಯದಾಗಿ ಇವರು ತಂದಿರತಕ್ಕ ತಿದ್ದುಪಡಿಯು ಸಿ.ಆರ್. ಪಿಸಿಯಲ್ಲಿ ಇರತಕ್ಕ ಸೆಕ್ಷನ್ 496ಕ್ಕೆ ತದ್ವಿರುದ್ಧವಾಗಿದೆ. ಮ್ಯಾಜಿಸ್ಟ್ರೇಟರಿಗೆ ಈ ಕಲಮಿನ ಪ್ರಕಾರ ಒಂದು ತಾತ್ವಿಕ ತಳಹದಿಯ ಮೇಲೆ ಅಪರಾಧಿಗಳನ್ನು ಜಾಮೀನಿನ ಮೇಲೆ ಬಿಡತಕ್ಕ ಒಂದು ಹಕ್ಕೂ ಇದೆ. ಅವರ ಹಕ್ಕನ್ನು ಮೋಟಕು ಮಾ ಡುವುದಕ್ಕೆ ನಾವೀಗ ಪ್ರಯತ್ನ ಮಾಡುತ್ತಿದ್ದೇವೆ. ಕ್ರಿಮಿನಲ್ ಪ್ರೊಸೀಜರ ಕೋಡದ 496ನೇ ಕಲಮಿನಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದಾದ ಅಪರಾಧವಾಗಿದ್ದರೆ ಮ್ಯಾಜಿಸ್ಟ್ರೇಟರು ಜಾಮೀನಿಗೆ ಮಂಜೂರಿ ನೀಡಿ ಆಜ್ಞೆವಿಧಿಸಬಹುದಾಗಿದೆ. ಅವರು ಬೇರೆ ಸಲಹೆ ಪಡೆವ ಆಗತ್ಯ ವಿರುವುದಿಲ್ಲ. ಜಾಮೀನನ್ನು ಹಕ್ಕೆಂದೇ ನೀಡಲಾಗುತ್ತಿದೆ. ಈಗ ಆ ಹಕ್ಕನ್ನು ಸರಕಾರ ಕಿತ್ತುಕೊಳ್ಳುತ್ತಿದೆ.

ಶ್ರೀ ಎಸ್.ಆರ್.ಕಂಠಿ :- ಈ ಹಕ್ಕನ್ನು ಕಿತ್ತಿಕೊಳ್ಳಲಾಗುತ್ತಿಲ್ಲ. ಮ್ಯಾಜಿಸ್ಟೇಟರು ಅಪರಾಧ ಪ್ರಕರಣದಲ್ಲಿಯ ಇನ್ನೊಂದು ಬಾಜುವನ್ನು ಕೊಳ್ಳಿಕೊಳ್ಳ ಬೇಕಾಗುತ್ತದೆಯಷ್ಟೇ.

ಶ್ರೀ ಎಸ್.ಎಸ್.ಶೆಟ್ಟರ :- ಜಾಮೀನು ನೀಡುವ ಮ್ಯಾಜಿಸ್ಟ್ರೇಟರಿಂದಾದ ವಿವೇಚನಾ ನಿರ್ಣಯವನ್ನು ವರ್ಗಾಯಿಸಲಾಗುತ್ತಿದೆ. ಮ್ಯಾಜಿಸ್ಟ್ರೇಟರ ಈ ಹಕ್ಕನ್ನು ಕಡಿತಗೊಳಿಸಲಾಗಿದೆ. ಮ್ಯಾಜಿಸ್ಟ್ರೇಟರ ಕೈಗಳನ್ನು ಕಟ್ಟಿಹಾಕಿದಂತಾಗಲಿದೆ. ಈ ವಿಶಿಷ್ಟ ತಿದ್ದುಪಡಿಯಿಂದ ಮ್ಯಾಜಿಸ್ಟ್ರೇಟರು ಯಾವುದೇ ನಿರ್ಣಯಕ್ಕೆ ಬರಲಾರರು. ಆದ್ದರಿಂದ ವಿರೋಧಿಸುತ್ತಿದ್ದೇನೆ. ಮ್ಯಾಜಿಸ್ಟ್ರೇಟರ ವಿವೇಚನಾ ಹಕ್ಕನ್ನು ಕಡಿತಗೊಳಿಸಲಾಗುತ್ತಿದೆ. ನಾವಿಲ್ಲಿ ಈ ಒಂದು ತಪ್ಪು ಮಾಡುತ್ತಲಿದ್ದೇವೆ. ಮ್ಯಾಜಿಸ್ಟ್ರೇಟರು ಬಳಸಬಹುದಾದ ವಿವೇಚನಾ ನಿರ್ಣಯದ ಹಕ್ಕಿನ ಕ್ಷೇತ್ರದಲ್ಲಿ ಪ್ರವೇಶಿಸುತ್ತಿದ್ದೇವೆ. ಈ ಕಾರಣಕ್ಕಾಗಿ ತಿದ್ದುಪಡಿಯನ್ನು ನಾನು ವಿರೋಧಿಸುತ್ತಿದ್ದೇನೆ.

ಶ್ರೀ ಎಚ್. ಸಿದ್ದವೀರಪ್ಪ: ನಾನೊಂದು ಅಂಶ ಕುರಿತು ಹೇಳಬಯಸುತ್ತೇನೆ.

ಉಪಾಧ್ಯಕ್ಷರು :- ಮಾನ್ಯ ಸದಸ್ಯರು ಈಗಾಗಲೇ ಒಮ್ಮೆ ಮಾತಾಡಿದ್ದಾರೆ. ಈಗ ಬಿ.ಪಿ.ಗಂಗಾಧರ ಅವರು ಮಾತಾಡ ಬಯಸಿದ್ದಾರೆ. ಅವರೇ ಮಾತಾಡಲಿ

ಶ್ರೀ ಬಿ.ಪಿ.ಗಂಗಾಧರ :- ಈ ದಿವಸ ಸರ್ಕಾರದವರು ಈ ಸಭೆಯ ಮುಂದೆ ತಂದಿರತಕ್ಕ ಒಂದು ತಿದ್ದುಪಡಿ ಮಸೂದೆಯೇನಿದೆ ಅದನ್ನು ಈಗಾಗಲೇ ಕೆಲವು ಮಾನ್ಯ ಸದಸ್ಯರು ಒಂದು ಕರಾಳ ಶಾಸನವೆಂದು ಕರೆದುದನ್ನು ನಾನೂ ಒಪ್ಪುತ್ತೇನೆ. ಇಂಥ ಒಂದು ಕರಾಳ ಶಾಸನವನ್ನು ಮಾಡಬೇಕಾದ ಅಗತ್ಯವಾದರೂ ಏನಿತ್ತು ಅನ್ನುವುದರ ಬಗ್ಗೆ ಸರ್ಕಾರದವರು ಯಾವ ವಿವರಣೆಗಳನ್ನು ನೀಡಿಲ್ಲ. ಈ ಹಿಂದೆ ಹೀಗೆ ಆಡಳಿತ ನಡೆಸಿದ ಸರ್ಕಾರಗಳು ಎಷ್ಟೋ ಉರುಳಿಹೋದವು. ಆದರೆ ಆ ಯಾವ ಒಂದು ಸರ್ಕಾರವು ಇಂಥ ಒಂದು ಕಾನೂನನ್ನು ಮಾಡಿರಲಿಲ್ಲ. ಹೀಗಿರುವಾಗ ಈ ದಿವಸ ಈ ಸರಕಾರಕ್ಕೆ ಇಂಥ ಒಂದು ಅವಶ್ಯಕತೆ ಏತಕ್ಕೆ ಉಂಟಾಯಿತೋ ನಮಗೆ ತಿಳಿಯಲಿಲ್ಲ.

ಉಪಾಧ್ಯಕ್ಷರು :- ಮಾನ್ಯ ಸದಸ್ಯರು ಮುಖ್ಯ ಸೂಚನೆ ಬಗ್ಗೆ ಮಾತಾಡುತ್ತಿದ್ದೀರಿ ಅದೆಲ್ಲ ಈಗ ಮುಗಿದು ಹೋಗಿದೆ. ನಿಮ್ಮ ಸಾಮಾನ್ಯ ಅನಿಸಿಕೆ ಅಭಿಪ್ರಾಯಗಳನ್ನಷ್ಟೇ ತಿಳಿಸಿರಿ.

ಶ್ರೀ ಬಿ.ಪಿ. ಗಂಗಾಧರ :- ಸರ್ಕಾರದವರ ನೀತಿ ಏನೆಂಬುದೇ ಗೊತ್ತಾಗುತ್ತಿಲ್ಲವೆಂದು ಈ ರಾಜ್ಯಾಡಳಿತವನ್ನು ಪೋಲೀಸಿನವರ ಕೈಗೆ ಕೊಟ್ಟರೆ ರಾಜ್ಯ ಬಹಳ ಸುಖವಾಗಿರಬಹುದು ಎನ್ನುವ ಭಾವನೆ ಪ್ರಬಲ [illegible] ದಂತಿದ್ದ ಹಾಗೆ ಕಂಡು ಬರುತ್ತದೆ. ಈ ಹಿಂದೆ ಕೇವಲ ಎರಡು ತಿಂಗಳು ಕಾಲ ಕೇಂದ್ರ ಸರಕಾರದವರು [illegible] ಇಂಥಾ ರೂಲ್ಸನ್ನು ಪೋಲೀಸಿನವರ ಕೈಗೆ ಕೊಡಲಾಗಿತ್ತು ಈ ಅತ್ಯಲ್ಪ ಕಾಲದಲ್ಲೇ ಅವರು ದೇಶಕ್ಕೆ ಎಷ್ಟು ದ್ರೋಹ ಮಾಡಬಹುದಾಗಿತ್ತೋ ಅಷ್ಟನ್ನೂ ಮಾಡಿ ಮುಗಿಸಿದರು. ಅನೇಕರನ್ನು ಕಾರಾಗೃಹಕ್ಕೆ ಕಳುಹಿಸಿದರು. ಶ್ರೀ ನಂಜುಂಡರಾಯರಂಥ ಜನಾನುರಾಗಿಗಳನ್ನು ಕೂಡಾ ಕಾರಾಗೃಹಕ್ಕೆ ಕಳುಹಿಸಿದರು. ಇಷ್ಟೆಲ್ಲಾ ನಮ್ಮ ಹಿಂದೆ ಇದ್ದ ಮಂತ್ರಿ ರಾಮರಾಯರ ಕಾಲದಲ್ಲಿ ನಡೆದು ಹೋದವು. ಬಡಬಗ್ಗರಿಗೆ ತಿನ್ನಲು ಸರಿಯಾಗಿ ಕಾಳನ್ನು ಕೊಡುತ್ತಿಲ್ಲವೆಂದು ಹೇಳಿದುದೇ ಒಂದು ಮಹಾಪರಾಧವಾಯಿತು ಅದಕ್ಕಾಗಿ ಅನೇಕರು ಸೆರೆಮನೆಯ ವಾಸ ಮಾಡಬೇಕಾಯಿತು. ಇನ್ನು ಅದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈ ದಿವಸ ನಾವು ಈ ತಿದ್ದುಪಡಿಗೆ ನಮ್ಮ ಅನುಮತಿಯನ್ನು ಕೊಟ್ಟರೆ ದೇಶದಲ್ಲಿ ಪ್ರಜಾಪ್ರಭುತ್ವ ಎನ್ನುವುದು ನಿರ್ನಾಮವಾಗಿ ರಾಜ್ಯದಲ್ಲಿ ಪೋಲೀಸ ದೌಲತ್ತು ನಡೆಯುತ್ತದೆ. ಆಗ ಅನೇಕ ರಾಜಕಾರಣಿಗಳು

ಆಳುವ ಪಕ್ಷಕ್ಕೆ ವಿರೋಧಿಗಳಾಗಿರತಕ್ಕವರು ಈ ಕರಾಳ ಶಾಸನಕ್ಕೆ ತುತ್ತಾಗಬೇಕಾಗಿ ಬರುತ್ತದೆ. ಅದು ಹೇಗೆ ಎಂದರೆ ಇಲ್ಲಿ ಸರಕಾರದವರು ಇನ್‌ಸ್ಟಿಗೇಶನ್ ಎಂಬ ಪದವನ್ನು ಹಾಕಿದ್ದಾರೆ. ದಿನ ಬೆಳಗಾದರೆ ನಾವು ಒಬ್ಬರಲ್ಲೊಬ್ಬರು ಒಂದಲ್ಲ ಒಂದು ಕಾರಣಕ್ಕಾಗಿ ಕಲೆಯಬೇಕಾಗಿ ಬರುತ್ತದೆ. ನೌಕರರ ಸಹಕಾರ ನಮಗೆ ಅನೇಕ ವೇಳೆ ಬೇಕಾಗಬಹುದು. ಅವರಿಗೂ ನಮ್ಮ ಸಹಕಾರ ಬೇಕಾಗುವುದು. ಅಂಥ ಸನ್ನಿವೇಶಗಳಲ್ಲಿ ಇಂಥ ವಿಚಾರಗಳು ಏನಾದರೂ ಎದ್ದಾಗ ನಾವು ಇವರಿಗೆ ಒಳ್ಳೆಯದನ್ನೇ ಹೇಳಿದರೂ ನಾವೂ ಕೂಡಾ ಒಂದು ರಾಜಕೀಯ ಪಕ್ಷದಲ್ಲಿ ಇರುವುದರಿಂದ ಸರಕಾರಿ ನೌಕರರಿಗೆ ಇನ್‌ಸ್ಟಿಗೇಟ್ ಮಾಡಿದರೆಂಬ ಒಂದೇ ನೆಪದ ಮೇಲೆ ನಮಗೂ ಇದರಿಂದ ಮುಂದೆ ಅನೇಕ ತೊಂದರೆಗಳಾಗತಕ್ಕ ಸಂದರ್ಭಗಳಿರುತ್ತವೆ. ಆದುದರಿಂದ ಇದನ್ನು ನಾನು ಒಂದು ದೇಶದ್ರೋಹದ ಮಸೂದೆ ಎಂದು ಕರೆದರೆ ತಪ್ಪಿಲ್ಲ. ಇದನ್ನು ನಾವು ಒಪ್ಪಿಕೊಂಡ ಮೇಲೆ ಇಲ್ಲಿ ಸರಕಾರವನ್ನು ಟೀಕೆ ಮಾಡುವುದಕ್ಕೂ ಬಿಕ್ಕಟ್ಟು ಬರುತ್ತದೆ. ಇದು ಇಂಥ ಒಂದು ಅನ್ಯಾಯದ ಕಾನೂನಾಗಿದೆ. ಆದರೆ ಇಂಥ ಒಂದು ಅನ್ಯಾಯದ ಅಪಾಯಕರವಾದ ಮಸೂದೆಯನ್ನು ಸಭೆಯ ಮುಂದೆ ತರತಕ್ಕ ಒಂದು ಕಹಿಯ ಪ್ರಸಂಗ ರಾಮರಾಯರ ಪಾಲಿಗೆ ಹೋಗದೇ ಶ್ರೀಮಾನ್ ಕಂಠಿಯವರ ಪಾಲಿಗೆ ಬಂದಿತಲ್ಲಾ ಎಂಬುದು ನನಗೆ ತುಂಬಾ ವ್ಯಥೆಯನ್ನು ಉಂಟು ಮಾಡಿದೆ. ಆದರೆ ಶ್ರೀ ರಾಮರಾಯರಿಗೆ ಶ್ರೀಮಾನ್ ಕಂಠಿಯವರು ಸುಮ್ಮನೆ ಕೊಟ್ಟಿದ್ದಾರೆಂದು ಕಂಡುಬರುತ್ತದೆ. ಈ ಸ್ಟ್ರೈಕುಗಳನ್ನಾದರೂ ಜನರು ಏತಕ್ಕೆ ಮಾಡುತ್ತಾರೆ? ತಪ್ಪು ಯಾರಲ್ಲಿದೆ ? ಹುಳುಕು ಯಾರಲ್ಲಿದೆ ? ಎಂಬುದನ್ನು ಸರಕಾರ ನೋಡುತ್ತಿಲ್ಲ.

ಉಪಾಧ್ಯಕ್ಷರು : ಅದೆಲ್ಲವನ್ನೂ ಅನೇಕ ಮಾನ್ಯ ಸದಸ್ಯರು ಆಗಲೇ ಹೇಳಿದ್ದಾರೆ.

ಶ್ರೀ ಬಿ. ಪಿ. ಗಂಗಾಧರ : ನೌಕರರ ಜೀವನ ವೆಚ್ಚಕ್ಕೆ ಸಾಕಾಗುವಷ್ಟು ಸಂಬಳ ಸಾರಿಗೆಗಳು ಸಿಕ್ಕದಿದ್ದಾಗ ಅವರೇನು ಮಾಡಬೇಕು?

ಉಪಾಧ್ಯಕ್ಷರು : ಮಾನ್ಯಸದಸ್ಯರು ತಿದ್ದುಪಡಿಯ ಮೇಲೆ ಮಾತನಾಡದೇ ಕ್ಲಾಜುಗಳ ಮೇಲೆ ಈಗಾಗಲೇ ಹೇಳಿದ್ದನ್ನೇ ಹೇಳಬಾರದು.

ಶ್ರೀ ಬಿ. ಪಿ. ಗಂಗಾಧರ : ತಿದ್ದುಪಡಿಯ ಮೇಲೆಯೇ ನಾನು ಮಾತಾಡುತ್ತಿದ್ದೇನೆ.

ಶ್ರೀ ಎಸ್. ಆರ್. ಕಂಠಿ : ಮಾನ್ಯ ಸದಸ್ಯರಿಗೆ ಮುಂದೆ ಮಾತನಾಡಲು ಸಮಯ ಸಿಗುವುದಿಲ್ಲವೆಂದು ಈ ರೀತಿಯಾಗಿ ಮಾತಾಡುತ್ತಿರಬೇಕು. ಆ ರೀತಿ ಮಾಡಬಾರದು.

ಶ್ರೀ ಬಿ. ಪಿ. ಗಂಗಾಧರ : ಇದರಲ್ಲಿ ಅಬ್ಜೆಕ್ಟಿವ್ಸ್ ಮತ್ತು ರೀಜನ್ಸ್ ಏನಿದೆ ?

ಶ್ರೀ ಎಸ್. ಆರ್. ಕಂಠಿ : ಮಾನ್ಯರೇ, ನಾನೊಂದು ವಿಧಿಯೆಂದು ಎತ್ತುತ್ತೇನೆ. ವಿಧೇಯಕದ ವಿಷಯಗಳನ್ನೆಲ್ಲ ಹೇಳಿಯಾಗಿದೆ. ಮಾನ್ಯ ಸದಸ್ಯರು ವಿಧೇಯಕದ ವಿವರಗಳನ್ನೇ ಹೇಳುತ್ತಿದ್ದಾರೆ. ಸಾಮಾನ್ಯ ಅಭಿಮತ, ಅನಿಸಿಕೆಗಳನ್ನು ಮಾತ್ರ ಅವರು ಹೇಳಬಹುದು ಇಲ್ಲವಾದರೆ ಅದಕ್ಕೆ ಅರ್ಥವೇ ಇರದು. ಮೂಲ ಕಾಯ್ದೆ ಹಾಗೂ ಕಲಮುಗಳು ಈಗಾಗಲೇ ಪಾಸಾಗಿವೆ. ಹಿಂದಿನ ಅವೇ ವಿಷಯಗಳನ್ನೆಲ್ಲಾ ಹೇಳುವುದು ಎಂದರೇನು? ಹೀಗೆಯೇ ಮಾಡುತ್ತ ಹೋದರೆ ಕೊನೆಯೆಂಬುದೇ ಇರದು ಈಗಾಗಲೇ ನಾನು ಈ ವಿಷಯದಲ್ಲಿ 92ನೇ ನಿಯಮವನ್ನು ಉಲ್ಲೇಖಿಸಿದ್ದೇನೆ.

ಉಪಾಧ್ಯಕ್ಷ : ಶ್ರೀ ಗಂಗಾಧರ ಅವರೇ ಸಚಿವರು ಹೇಳಿದ ಎಲ್ಲ ಅಂಶಗಳನ್ನು ಗ್ರಹಿಸಿದಿರಾ ?

ಬಿ. ಪಿ. ಗಂಗಾಧರ : ಗ್ರಹಿಸಿದ್ದೇನೆ.

ಉಪಾಧ್ಯಕ್ಷ : ಸದಸ್ಯರು ಬೇಗನೇ ತಮ್ಮ ಭಾಷಣ ಮುಗಿಸಲಿ

ಬಿ. ಪಿ. ಗಂಗಾಧರ : ಇದರಲ್ಲಿರತಕ್ಕ ಆಬ್ಜೆಕ್ಟಿವ್ಸ್ ತಿರುಗು ಮುರುಗು ಮಾಡಿದ್ದಾರೆ. ಇವು ನಿಜವಾದ ಆಬ್ಜೆಕ್ಟಿವ್ಸ್ ಅಲ್ಲ. ಇನ್ನು ಮುಂದೆ ಯಾರೂ ಯೂನಿಯನ್ಸ್ ಮಾಡಬಾರದು. ಕಟ್ಟಬಾರದು, ಆ ಯೂನಿಯನ್ ಮುಖಾಂತರ ನೌಕರರು ತಮ್ಮ ಕುಂದುಕೊರತೆಗಳನ್ನು ಯಾರಿಗೂ ಹೇಳಬಾರದು, ಅವರಿಗೆ ಏನೇ ತಾಪತ್ರಯ ಬಂದರೂ ಯಾರಿಗೂ ಹೇಳಿಕೊಳ್ಳುವುದಕ್ಕೆ ಅವಕಾಶವಿರಕೂಡದು ಎಂದು ಈ ರೀತಿ ಮಾಡಿದ್ದಾರೆ. ಕೆಲವು ಕ್ಲಾಜಸನ್ನು ಹೊಸದಾಗಿ ಸೇರಿಸಿರುವುದು ಮ್ಯಾಜಿಸ್ಟ್ರೇಟರಿಗೆ ಇರುವ ಹಕ್ಕನ್ನು ಕಸಿದುಕೊಳ್ಳುವ ರೀತಿಯಿದೆ. ಇನ್ ಡೈರೆಕ್ಟಾಗಿ ಬೇಲ್ ಮೇಲೆ ನೌಕರರನ್ನು ಮ್ಯಾಜಿಸ್ಟ್ರೇಟರು ಬಿಡಬಾರದೆಂದಿದೆ. ಆದ್ದರಿಂದ ಇದು ನಿಜವಾದ ಶಾಸನವಲ್ಲ ಇದರಿಂದ ಇನ್ನು ಮುಂದೆ ಈ ದೇಶದಲ್ಲಿ ಪೊಲೀಸ್ ರಾಜ್ಯವಾಗುತ್ತದೆ. ಆಗ ನಾವೂ , ಅವರೂ ಒಟ್ಟಿಗೆ ನಿರ್ನಾಮವಾಗುವ ಸನ್ನಿವೇಶ ಬರುತ್ತದೆ ಆದ್ದರಿಂದ ಸರಕಾರದವರು ಇನ್ನು ಮುಂದೆ ಹುಷಾರಾಗಿ ಇರಬೇಕೆಂದು ನಾನು ಹೇಳುತ್ತೇನೆ.

ಕಲಾಪ ಪಟ್ಟಿಯ ಹಠಾತ್ ಬದಲಿಗೆ ಆಕ್ಷೇಪ

2ನೇ ಮೇ 1967

1967 ಮೇ 2 ರಂದು ಆರಂಭವಾದ ಕಲಾಪಗಳಲ್ಲಿ ಶ್ರೀಎಚ್. ಎಂ. ಚನ್ನಬಸಪ್ಪನವರು ಕೇವಲ ಐದು ದಿನಗಳ ಅಧಿವೇಶನ ಸೇರಿಸಿದ್ದ ಸರಕಾರದ ಕ್ರಮಕ್ಕೆ ತೀವ್ರವಾಗಿ ಆಕ್ಷೇಪಿಸಿ ನನಗೆ ಗೊತ್ತಿರುವಂತೆ, ದೇಶಕ್ಕೆ ಗೊತ್ತಿರುವಂತೆ ಹಳ್ಳಿಹಳ್ಳಿಗಳಲ್ಲಿ ಮಾತನಾಡುತ್ತಿರುವಂತೆ, ಈ ರಾಜ್ಯಭಾರದ ಕ್ರಮ ಒಂದು ಹುಡುಗಾಟಿಕೆಯಾಗಿದೆಯೇ ವಿನಾ ಬೇರೇನೂ ಅಲ್ಲ, ಇದು ರೂಲ್ ಆಫ್ ಲಾ ಆಗುವ ಬದಲು ರೂಲ್ ಆಫ್ ವಿಮ್ಸ್ ಆಗಿದೆ. ಎಂದು ತರಾಟೆಗೆ ತೆಗೆದುಕೊಳ್ಳುತ್ತ, ಇಂತಹ ವಿಷಯ ನಾನು ಹೇಳತಕ್ಕದ್ದಲ್ಲ, ದಯವಿಟ್ಟು ತಾವು ತಲೆಮರೆಸಿಕೊಂಡು ಹೋಗಿ ಹಳ್ಳಿಗಳಲ್ಲಿ ಕೇಳಿಕೊಂಡು ಬನ್ನಿ, ಈ ಪರಿಸ್ಥಿತಿಯಿರುವಾಗ ಈ ಕಾರ್ಯಕ್ರಮ ನಡೆದಿರತಕ್ಕದ್ದು ಪತ್ರಿಕೆಗಳಲ್ಲಿ ಹೇಳಿಕೆ ಬಂದಿರತಕ್ಕದ್ದು, ಇದು ಒಂದು ಕಾಕತಾಳೀಯ ನ್ಯಾಯವಾಗಿದೆ. ಸರಕಾರದವರ ಒತ್ತಡ ತಮಗೆ ಜಾಸ್ತಿಯಾಗಿ ತಾವು ಏನಾದರೂ ಈ ಕಾರ್ಯಕ್ರಮ ಮಾಡಿದ್ದೀರೋ ಎಂಬುದು ಒಂದು ಶಂಕೆಯಿದೆ, ನಮಗೊಂದೂ ಕಾಣುತ್ತಾ ಇಲ್ಲ, ಏನು 50-60 ಜನ ವ್ಯಾಜ್ಯಕ್ಕೆ ಶುರುಮಾಡಿದ್ದಾರೆ ಎಂದು ಪತ್ರಿಕೆಗಳಲ್ಲಿ ಬಂದಿತ್ತು, ಗುದ್ದಲಿ, ಪಿಕಾಶಿಗಳಿಂದ ಶುರು ಮಾಡಿಲ್ಲವಷ್ಟೇ ಅದರ ಸತ್ಯಾಂಶ ಅವರು ಹೇಳಬೇಕಷ್ಟೇ, ಮಾನ್ಯ ಮುಖ್ಯಮಂತ್ರಿಯವರು? ಹೇಳುತ್ತಾರೆ, ಅದು ನಿಜವಲ್ಲ, ಅದು ಸುಳ್ಳು ಎಂದು ಅದು ನಮಗಿರುವ ಶಂಕೆಯನ್ನು ಹೊಡೆದೋಡಿಸುವದಕ್ಕೋಸ್ಕರ ಹೇಳಿದ ಒಂದು ಕಾರಣ. ಎರಡನೆಯದು ನಮ್ಮನ್ನು ಕೇಳುವುದನ್ನು ತಪ್ಪಿಸುವುದಕ್ಕೋಸ್ಕರ, ದೇಶದ ಹಣವನ್ನು ಈ ರೀತಿಯಾಗಿ ನಿಷ್ಕಾರಣವಾಗಿ ದುರುಪಯೋಗ ಮಾಡುವುದನ್ನು ತಪ್ಪಿಸುವುದಕ್ಕೋಸ್ಕರ ಮತ್ತು ವಿಧಿವತ್ತಾದ ರೀತಿಯಲ್ಲಿ ಈ ಮಾನ್ಯ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ತಮ್ಮ ವಿವರಣೆಯನ್ನು ಕೇಳಬೇಕಾಗಿದೆ. ಈ ವಿವರಣೆಯನ್ನು ಕೊಟ್ಟ ಮೇಲೆ ಅದು ದೇಶಕ್ಕೆ ಮತ್ತು ನಮಗೆ ಸಮರ್ಪಕವಾಗಿ ಕಂಡುಬಂದ ಮೇಲೆ ಮುಂದಿನ ಕಾರ್ಯಕ್ರಮವನ್ನು ಮಾಡೋಣ, ಅದು ಆಗದೇ ಇದ್ದರೆ ಈ ಪಾಪದ ಕೃತ್ಯಕ್ಕೆ ನಾವು ಭಾಗಿಯಾಗಲಿಕ್ಕೆ ಸಾಧ್ಯವಿಲ್ಲ.

ಸಭಾಧ್ಯಕ್ಷರು : ಈಗ ನಾನು ಎಸ್. ಗೋಪಾಲಗೌಡರಿಗೆ ಮಾಡಲು ಹೇಳುತ್ತೇನೆ. ಶ್ರೀ ಎಸ್. ಎಸ್. ಶೆಟ್ಟರ, ಶ್ರೀಜಿ. ದುಗ್ಗಪ್ಪ ಹಾಗೂ ಶ್ರೀವಾಟಾಳರಿಗೂ ಅವಕಾಶ ಕೊಡಬೇಕಾಗಿದೆ. ಇತರ ಸದಸ್ಯರು ಹೇಳಿದುದನ್ನೇ ಪುನರುಚ್ಚರಿಸದಿರಿ ಎಂಬುದೊಂದೇ ನನ್ನ ವಿನಂತಿ.

ಶ್ರೀ ಎಚ್. ಎಂ. ಚನ್ನಬಸಪ್ಪ : ಸಂಯುಕ್ತ ಕರ್ನಾಟಕದ ದಿನಾಂಕ : 26-4-67 ರ ಸಂಚಿಕೆಯಲ್ಲಿಯ ವರದಿಯನ್ನು ತಮ್ಮ ಅನುಮತಿ ಪಡೆದು ಓದಿ ತೋರಿಸಬಯಸುತ್ತೇನೆ.

ಬೆಂಗಳೂರು ಎಪ್ರಿಲ್ 25, ಪುನರ್ವಿಮರ್ಶಿತ ಕಾರ್ಯಕ್ರಮದ ಪಟ್ಟಿಯ ಪ್ರಕಾರ ರಾಜ್ಯದ ವಿಧಾನಮಂಡಲದ ಅಧಿವೇಶನವು ಮೇ 2 ರಿಂದ ಕೇವಲ 6ನೇ ತಾರೀಖಿನವರೆಗೆ ಅಂದರೆ 5 ದಿನ ಮಾತ್ರ ನಡೆಯಲಿದೆ. ಮೊದಲೇ ಗೊತ್ತಾಗಿದ್ದ ಕಾರ್ಯಕ್ರದಲ್ಲಿ ವಿಧಾನಮಂಡಲವು ಮೇ 2 ರಿಂದ ಜೂನ್ 10ನೇ ತಾರೀಖಿನ ವರೆಗೆ ಸುಮಾರು 5 ವಾರಗಳ ಕಾಲ ನಡೆಯಬೇಕಾಗಿತ್ತು, ಇದರ ಕಾರ್ಯಕ್ರಮದ ಪಟ್ಟಿಯನ್ನು ಸಿದ್ಧಗೊಳಿಸಿ, ಸದಸ್ಯರಿಗೆ ಕಳಿಸಲಾಗಿದೆ. ಆದರೆ ಈ ಅಧಿವೇಶನವನ್ನು ಕೇವಲ ಐದು ದಿನಗಳ ವರೆಗೆ ನಡೆಸಲು ಕಾರಣವೇನೆಂಬುದು ತಿಳಿದುಬಂದಿಲ್ಲ, ಮೇ 2 ರಿಂದ ಖಾಸಗೀ ನಿರ್ಣಯಗಳನ್ನು

ಚರ್ಚಿಸಿದ ನಂತರ 3,4,5,6 ರಂದು ಸರಕಾರಿ ಕಾರ್ಯಕಲಾಪಗಳನ್ನು ನಡೆಸಲಾಗುವುದು. 6ನೇ ತಾರೀಖು ರಾಷ್ಟ್ರಪತಿ, ಉಪರಾಷ್ಟ್ರಪತಿ ಚುನಾವಣೆ ಇರುವುದರಿಂದ ಅಧಿವೇಶನ ಮುಂದುವರೆಯುವುದು ಎಂದು ಇದೆ. ಇದನ್ನು ಯಾರು ಕೊಟ್ಟರು? ಯಾವತ್ತು ಕೊಟ್ಟರು?

ಸಭಾಧ್ಯಕ್ಷರು ಎಲ್ಲ ಸರಿಯಾದ ಅಂಶಗಳನ್ನು ಸಮರ್ಪಕವಾಗಿ ಪರಿಶೀಲಿಸಿ ನಂತರ ರೂಲಿಂಗ ನೀಡಲೆಂದು ವಿನಂತಿಸುತ್ತೇನೆ.

ಸಭಾಧ್ಯಕ್ಷರು : ಎಲ್ಲ ಅಂಶಗಳನ್ನು ಸರಿಯಾಗಿ ಪರಿಶೀಲಿಸಬೇಕೆಂದು ಸದಸ್ಯರು ಕೇಳಿಕೊಂಡಿದ್ದಾರೆ. ಎಲ್ಲವನ್ನೂ ಪರಿಶೀಲಿಸಿ ರೂಲಿಂಗ ಕೊಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ) ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧ ಪಕ್ಷದ ನಾಯಕರು ಸಭೆಯ ಮುಂದೆ ಇಟ್ಟಿರತಕ್ಕ ಸೂಚನೆಯನ್ನು ನಾನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಈಗಾಗಲೇ ಮಾನ್ಯ ಹರಿಹರದ ಸದಸ್ಯರು ಹಾಗೂ ಪಿರಿಯಾಪಟ್ಟಣದ ಸದಸ್ಯರು ಸಾಕಷ್ಟು ವಿಷಯಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಬಹುಶಃ ಶ್ರೀಮಾನ್ ಶಿವಪ್ಪನವರ ಸೂಚನೆ ಬಗ್ಗೆ ತಮಗೆ ಈಗಾಗಲೇ ಒಪ್ಪಿಗೆಯಾಗಿದೆ ಎಂದು ನನಗೆ ಕಾಣುತ್ತದೆ ಮತ್ತು ಅದು ಸಮಂಜಸವಾಗಿಯೂ ಇದೆ. ಸಾಮಾನ್ಯವಾಗಿ ಪ್ರತಿದಿವಸವೂ ಮೊದಲ ಒಂದು ಗಂಟೆಯ ಕಾಲ ಪ್ರಶ್ನೋತ್ತರಗಳಿಗಾಗಿ ಈ ಸಭೆ ಉಪಯೋಗಿಸಿಕೊಳ್ಳುತ್ತಿತ್ತು. ಇದನ್ನು ವಿರೋಧ ಪಕ್ಷದವರು ಹಾಗೂ ಇತರರು ಈ ಒಂದು ಗಂಟೆಯ ಕಾಲವನ್ನು ಸಾರ್ಥಕವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಬಗ್ಗೆ ನಮಗೆ ಯಾವ ರೀತಿಯ ಭಿನ್ನಾಭಿಪ್ರಾಯವೂ ಇಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ತಮ್ಮನ್ನು ನಾವು ಕೇಳುತ್ತಿರುವುದು 32ನೇ ವಿಧಿಯ ಪ್ರಕಾರ ಮೀಸಲಾದ ಒಂದು ಗಂಟೆಯ ಕಾಲದ ಪ್ರಶ್ನೋತ್ತರಗಳಿಗಾಗಿ ಮೀಸಲಾಗಿಟ್ಟಿದುದನ್ನು ನಮಗೆ ಬಂದಿರತಕ್ಕ ಈ ದೊಡ್ಡ ಸಮಸ್ಯೆಯನ್ನು ಚರ್ಚೆ ಮಾಡುವುದಕ್ಕಾಗಿ ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಕೇಳುತ್ತಿದ್ದೇವೆ ಹಾಗೂ ಇದನ್ನು ರೂಲ್ 146ರ ಪ್ರಕಾರ ಕೇಳುತ್ತಿದ್ದೇವೆ. ನಾನು ಈಗ ಇಲ್ಲಿ ಹಕ್ಕುಬಾಧ್ಯತೆಯ ಪ್ರಶ್ನೆಯನ್ನು ಎತ್ತುವುದಿಲ್ಲ, ಮುಖ್ಯವಾಗಿ ಈಗಾಗಲೇ ಮಾನ್ಯ ಹರಿಹರದ ಸದಸ್ಯರು ಹಾಗೂ ಪಿರಿಯಾಪಟ್ಟಣದ ಸದಸ್ಯರು ಹೇಳಿರುವ ಹಾಗೆ ನಾನು ಹೇಳಬೇಕಾಗಿದೆ, ಮಾನ್ಯ ಅಧ್ಯಕ್ಷರು ಇದನ್ನು ಯಾವ ನಿಯಮದಂತೆ ತೆಗೆದುಕೊಂಡಿದ್ದೀರಿ ಎನ್ನುವುದನ್ನು ಕೇಳಬೇಕಾಗಿದೆ.

ಅಧ್ಯಕ್ಷರು : ಇದು ನನ್ನ ಅಧಿಕಾರದೊಳಗೆ ಇದ್ದು ನನ್ನ ವಿವೇಚನೆಗೆ ಒಳಪಟ್ಟಿದೆ. ರೂಲ್ 30ರ ಪ್ರಕಾರ ಎಂದು ಆಗಲೇ ಹೇಳಿದೆ ಇದರಲ್ಲಿ 146ನೇ ರೂಲ್ ಬರುವುದಿಲ್ಲ.

ಶ್ರೀಎಸ್. ಗೋಪಾಲಗೌಡ : ಅದಕ್ಕೆ ನಾನು ಆಗಲೇ 32ನೇ ವಿಧಿ ಪ್ರಕಾರ ಎಂದು ಹೇಳಿದೆ ಇದರ ಚರ್ಚೆಗೆ ತಾವು ಅನುವು ಮಾಡಿಕೊಡಬೇಕು. ಎನ್ನುವುದಕ್ಕಾಗಿ ನಾವು ಇಲ್ಲಿ ಕೊಡುತ್ತಿದ್ದೇವೆ. ಇಂದು ಈ ಸಭೆಯ ಮುಂದೆ ಇಟ್ಟಿರುವ ವಿಷಯ ಬಹಳ ಮಹತ್ವವಾದ ವಿಷಯ ತಾತ್ಕಾಲಿಕವಾಗಿ ಗೊತ್ತಾಗಿದ್ದ ಕಾರ್ಯಕ್ರಮವನ್ನು ಬದಲಾಯಿಸಲು ವಿಶೇಷ ಕಾರಣಗಳಾದರೂ ಏನಿದ್ದವು ? ಸಭೆಯನ್ನು ಕರೆಯಲು ಅಧ್ಯಕ್ಷರಾಗಿರುವ ತಾವು ಇದಕ್ಕೆ ಹೇಗೆ ಒಪ್ಪಿಗೆ ಕೊಟ್ಟಿರಿ, ಇದು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿರಲಿಲ್ಲವೇ ? ಅಥವಾ ಸರಕಾರದವರು ಇಷ್ಟ ಬಂದಾಗ ಈ ಸಭೆಯನ್ನು ಅವರಿಗೆಲ್ಲ ಇಷ್ಟ

ಬಂದ ರೀತಿಯಲ್ಲಿ ಕರೆದು ಬದಲಾವಣೆ ಮಾಡುವುದಕ್ಕೆ ಅಧಿಕಾರವನ್ನೇನಾದರೂ ಇತ್ತಿದ್ದೀರಾ ? ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ನಾವು ಕೇಳುತ್ತಿದ್ದೇವೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿರುವಂತೆ ಇಂತಹ ಒಂದು ಪರಿಸ್ಥಿತಿ ಅಥವಾ ಬಹುಶಃ ಇಂತಹ ಪ್ರಕರಣ ಈ ದೇಶದ ಚರಿತ್ರೆಯಲ್ಲಿ ಹಿಂದೆ ಎಂದೂ ನಡೆದಂತೆ ನನಗೆ ನೆನಪಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಕೆಲವು ಬದಲಾವಣೆಗಳು ಆಗಿದ್ದುದು ಉಂಟು, ಆದರೆ ಇದು ಒಂದು ವಿಶೇಷವಾದ ಬದಲಾವಣೆ. ಇದರಲ್ಲಿ ಸರಕಾರದವರ ಕೈಗೂಸಾಗಿ ಈ ಸಭೆಯನ್ನು ಬೆಳೆಸಬೇಕು. ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಈ ಪ್ರಸಂಗವನ್ನು ಇಲ್ಲಿ ಚರ್ಚೆಮಾಡಲು ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ತಾವು ಹೇಳುತ್ತಿರುವುದು ಸರಿಯಾಗಿ ಕಾಣುವುದಿಲ್ಲ, ಯಾರು ಯಾರ ಕೈಗೊಂಬೆ ಅಥವಾ ಕೈಗೂಸು ಆಗಿದ್ದಾರೆ ಎಂದು ಹೇಳುವುದು ಸರಿಯಾಗಿ ಕಾಣುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ : ಮಾನ್ಯ ಸಭೆಯವರು ಹಾಗೂ ತಾವು ಎಂದು ನಾವು ಸೂಚನೆಯಲ್ಲಿ ಆಗಲೇ ಹೇಳಿಬಿಟ್ಟಿದ್ದೇವೆ.

ಶ್ರೀ ಎಸ್. ಎಸ್. ಶೆಟ್ಟರ (ಹುಬ್ಬಳ್ಳಿ) 31ನೇ ನಿಯಮ ಹಾಗೂ ಮಿತಿ ನಿರ್ದೇಶಕ ಷರತ್ತಿನ ಕಡೆಗೆ ತಮ್ಮ ಗಮನ ಸೆಳೆಯಬಯಸುತ್ತೇನೆ.

'ಯಾವುದೇ ಒಂದು ದಿನ ಹಾಗೂ ಅವಧಿಗಾಗಿ ಸಭಾಧ್ಯಕ್ಷರು ಈ ನಿಯಮದ ಅನುಸರಣೆಯನ್ನು ಸ್ಥಗಿತಗೊಳಿಸಬಹುದು' ಎಂದು ಅದು ಹೇಳುತ್ತದೆ.

ಯಾವುದೇ ಒಂದು ದಿನ ಅಥವಾ ಹಲವು ದಿನಗಳಿಗೆ ಗೊತ್ತುಪಡಿಸಲಾದ ಕಲಾಪಗಳನ್ನು ನಿಯಮಗಳಲ್ಲಿ ಅವಕಾಶವಿರುವಂತೆ ಸಭಾಧ್ಯಕ್ಷರನ್ನು ಹೊರತುಪಡಿಸಿ ನಡೆಸಲಾಗದು.

ಆದ್ದರಿಂದ 1967 ಎಪ್ರೀಲ್ 3 ರಂದು ಪ್ರಕಟಿಸಲಾದ ಸದನದ ಕಾರ್ಯಕಲಾಪಗಳನ್ನು ಕುರಿತ ಪ್ರಕಟಣೆಯನ್ನು ತಮ್ಮ ಲಕ್ಷ್ಯಕ್ಕೆ ತರುತ್ತಲಿದ್ದೇನೆ ಮತ್ತು ಈ ಕಾರ್ಯಕಲಾಪಗಳ ಯಾದಿಯನ್ವಯ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಕಲಾಪಗಳನ್ನು ಮೇ 2ರಂದು ಕೈಕೊಳ್ಳಲೇಬೇಕಾಗುತ್ತದೆ. 1967 ಎಪ್ರೀಲ್ 25 ರಂದು ಪ್ರಕಟಿಸಲಾದ ಇನ್ನೊಂದು ಕಲಾಪ ಪ್ರಕಟಣೆಯಲ್ಲಿ ಮೇ 2ನ್ನು ಸರಕಾರೇತರ ಖಾಸಗೀ ಕಲಾಪಗಳಿಗಾಗಿ ನಿಗದಿಗೊಳಿಸಲಾಗಿದೆ. ಆದ್ದರಿಂದ ಸಭಾಧ್ಯಕ್ಷರು [illegible] ಕಾರ್ಯಕಲಾಪಗಳ ಮತ್ತು ಕಾರ್ಯಕ್ರಮಗಳನ್ನು ಈಗ ಉಲ್ಲೇಖಿಸಲ್ಪಟ್ಟ ನಿಯಮ ಹಾಗೂ [illegible] ಯುವ ಮಿತಿ ನಿರ್ದೇಶಕ ಷರತ್ತು ಪ್ರೊವಿಜೋ ಪ್ರಕಾರ ಸ್ಥಗಿತಗೊಳಿಸದೇ ಇದ್ದರೆ [illegible] ಕೆಂಬುದು ತಿಳಿಯದಂಥ ಸಮಸ್ಯಾತ್ಮಕ ಸ್ಥಿತಿ ನಿರ್ಮಾಣವಾಗುತ್ತದೆ. ಎಪ್ರೀಲ್ 25 ರಂದು [illegible] ನೇ ಪ್ರಕಟಣೆ ಹೊರಡಿಸಲಾಗಿದೆ ಎಂಬ ಒಂದೇ ಕಾರಣಕ್ಕಾಗಿ ಸಭಾಧ್ಯಕ್ಷರು ಎಪ್ರಿಲ್ 3ರ ಪ್ರಕಟಣೆಯ ಅನುಸರಣೆಯನ್ನು ಸ್ಥಗಿತಗೊಳಿಸುವುದಾಗಲೀ ಎಪ್ರೀಲ್ 25 ಕ್ಕೆ ಹೊರಡಿಸಲಾದ ಪ್ರಕಟಣೆಯ ಅನ್ವಯಕ್ಕೆ ಅದನ್ನು ಬದಲಿಸುವುದಾಗಲೀ ಸಾಧ್ಯವಿಲ್ಲವೆಂಬುದು ನಾನು ವಿನಮ್ರವಾಗಿ ಹೇಳಬಯಸುವ ಅಭಿಮತ. ಮಿತಿನಿರ್ದೇಶಕ ಶರತ್ತು ಸ್ಪಷ್ಟವಿದ್ದು ಅದನ್ನು ಬದಲಿಸಲು ಸಾಧ್ಯವಿಲ್ಲ, ಸಭಾಧ್ಯಕ್ಷರು ಈಗ ತಮ್ಮ ಹಕ್ಕನ್ನು ಅಧಿಕಾರವನ್ನೇ ಚಲಾಯಿಸಬೇಕಾಗುತ್ತದೆ.

ಸಭಾಧ್ಯಕ್ಷರು : ಸಭಾಧ್ಯಕ್ಷರ ಆದೇಶ ಬೇಕೆ ಬೇಕು ಎಂದು ಹೇಳುವ ಭಾಗವೆಲ್ಲಿದೆ ?

ಶ್ರೀ ಎಸ್. ಎಸ್.ಶೆಟ್ಟರ : ಸಭಾಧ್ಯಕ್ಷರ ಆದೇಶದ ಮೇರೆಗೆ ಎಂದಿಷ್ಟೇ ಕಾರ್ಯಕ್ರಮ ಉಲ್ಲೇಖಿಸಲ್ಪಟ್ಟಿದೆ. ಕಾರ್ಯಕ್ರಮ ಪ್ರಕಟಣೆಗಳ ಎರಡೂ ಯಾದಿಗಳಲ್ಲೂ ಹೀಗೆ ಉಲ್ಲೇಖವುಂಟು. 31ನೇ ನಿಯಮದ ಮೇರೆಗೆಯೇ ಎರಡೂ ಪ್ರಕಟಣೆಗಳನ್ನು ಹೊರಡಿಸಲಾಗಿದೆ. ಒಂದು ಕಾರ್ಯಕ್ರಮ ಯಾದಿ ಪ್ರಕಟಿಸಿ ಐದು ದಿನದ ನಂತರ ಸದನ ಬಯಸಿದರೆ ಆರನೆಯ ದಿನದಂದು ಕಲಾಪಗಳನ್ನು ಮುಂದೂಡುವ ಗೊತ್ತುವಳಿಯು ಮಂಡಿಸಲ್ಪಡಲು ಸಾಧ್ಯವಿದೆ. ಸಭಾಧ್ಯಕ್ಷರ ಆದೇಶದ ಮೇರೆಗೆ ಎಂಬ ಉಲ್ಲೇಖವಿರುವ ಎರಡು ಕಾರ್ಯಕ್ರಮಗಳ ಪಟ್ಟಿಗಳನ್ನು ಬಹಳಷ್ಟು ಮುಂಚಿತವಾಗಿಯೇ ನಾವು ಸ್ವೀಕರಿಸಿದ್ದರಿಂದ ಈಗ ಪ್ರಶ್ನೆ ಉದ್ಭವಿಸಿದೆ. ಆದ್ದರಿಂದ ಈಗ ಸಭಾಧ್ಯಕ್ಷರು ಮಿತಿ ನಿರ್ದೇಶಕ ಶರತ್ತಿನ ವಾಕ್ಯದಡಿ ತಮಗಿರುವ ಅಧಿಕಾರ ಚಲಾಯಿಸಿ ಮೊದಲಿನ ಕಾರ್ಯಕ್ರಮ ಪಟ್ಟಿಯ ಮಾರ್ಪಾಟು ಅಥವಾ ಸ್ಥಗಿತಗೊಳಿಸದೇ ಎರಡನೇ ಕಾರ್ಯಕ್ರಮ ಪಟ್ಟಿ ಅನುಸರಣೆಗೆ ತೆಗೆದುಕೊಳ್ಳಲಾರರು ಎಂದು ನನ್ನ ಪ್ರಶ್ನೆ.

ಶ್ರೀ ಆಜೀಜ್‌ಸೇಟ್, (ನರಸಿಂಹರಾಜ) : ಸ್ವಾಮೀ ಇದುವರೆಗೆ ಮಾನ್ಯ ಸದಸ್ಯರಾದ ಶ್ರೀ ಶಿವಪ್ಪನವರು ಬರೆದಂಥ ಕಾಗದದ ಬಗ್ಗೆ ಶ್ರೀ ಸಿದ್ದವೀರಪ್ಪನವರು ಮತ್ತು ಶ್ರೀಚನ್ನಬಸಪ್ಪನವರು ಮಾತನಾಡಿ ಬೇಕಾದಷ್ಟು ಚರ್ಚೆ ಮಾಡಿದ್ದಾರೆ. ಸಾಧಾರಣವಾಗಿ ಒಂದು ಪಂಚಾಯತಿಯ ಮುನಿಸಿಪಲ್ ಕಾರ್ಪೊರೇಶನ್ನಿನ ಮೀಟಿಂಗ್ ತಾರೀಖು ಗೊತ್ತುಮಾಡಿ ಪ್ರೋಗ್ರಾಂ ಕಳುಹಿಸಿದ ನಂತರ ಅದನ್ನು ರಿವೈಜ್ ಮಾಡುವುದು ಕಷ್ಟ. ಈರೀತಿ ಇರುವಾಗ ಇದು ವಿಧಾನಸಭೆ, ಜನರ ಪ್ರತಿನಿಧಿಗಳ ಸಭೆ. ಇದು ಜನರ ಸರಕಾರ, ಈ ರಾಜ್ಯದಲ್ಲಿ ಆಡಳಿತದಲ್ಲಿ ಅಧಿಕಾರವಹಿಸಿಕೊಂಡ ಪಕ್ಷದವರಿಗೆ ಎಷ್ಟು ಹಕ್ಕು ಬಾಧ್ಯತೆಗಳು ಇವೆಯೋ, ಎಷ್ಟು ಅಧಿಕಾರ ಇದೆಯೋ ಅಷ್ಟೇ ಅಧಿಕಾರ ಹಕ್ಕುಬಾಧ್ಯತೆ ವಿರೋಧ ಪಕ್ಷದವರಿಗೂ ಇದೆ. ಈಗಾಗಲೇ ನಾವು ವಿರೋಧ ಪಕ್ಷದ ನಾಯಕರನ್ನು ನೇಮಕ ಮಾಡಿದ್ದೇವೆ. ಅದನ್ನು ತಾವೂ ಒಪ್ಪಿದ್ದೀರಿ, ಇದು ತಮಗೆ ಗೊತ್ತಿದೆ. ರೂಲಿಂಗ್ ಪಾರ್ಟಿಯವರು ಕಾರ್ಯಕ್ರಮ ಬದಲಾವಣೆ ಮಾಡಬೇಕೆಂದು ಹೇಳಿದರು. ಆದರೆ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದ ನಾಯಕರನ್ನೂ ಕರೆಸಿ ಈ ಬಗ್ಗೆ ಮುಂಚಿತವಾಗಿ ಅವರೊಂದಿಗೆ ಮಾತನಾಡಬೇಕಿತ್ತು. ಆ ರೀತಿ ಮಾಡದೇ ಕಾರ್ಯಕ್ರಮ ಬದಲಾವಣೆ ಮಾಡಿದ ನೋಟೀಸು ಕಳಿಸಲಾಗಿದೆ. ಮೊದಲಿನ ನೋಟೀಸ ಪ್ರಕಾರ ಫೈನಾನ್ಸಿಯಲ್ ಬಿಜಿನೆಸ್ ಬಜೆಟ್ ಪರಿಶೀಲನೆಯನ್ನು ಈ ಸಭೆಯಲ್ಲಿ ಈಗ ಮಾಡಬೇಕಾಗಿತ್ತು. ಮೊದಲು ಕಳುಹಿಸಿದ್ದ ಪ್ರೋಗ್ರಾಂ ಪ್ರಕಾರ ಕಾರ್ಯಕ್ರಮ ಮಾಡದೇ 'ಅಲ್ಲಾವುದ್ದೀನ್ ಅದ್ಭುತ ದೀಪ ಮಾಡುವಂತೆ ಒಂದೇ ರಾತ್ರಿಯೊಳಗೆ ಆರು ವಾರ ನಡೆಸಬೇಕು ಎಂದು ಇದ್ದ ಕಾರ್ಯಕ್ರಮವನ್ನು ಬದಲಾಯಿಸಿದ್ದೀರಿ. ಇದನ್ನು ಬದಲಾಯಿಸಬೇಕಾದ ಕಾರಣವೇನಿತ್ತು? ದೇಶದಲ್ಲಿ ಅಭಾವ ಪರಿಸ್ಥಿತಿಯುಂಟಾಗಿದೆಯೇ? ಮತ್ತೇನಾದರೂ ಪರಿಸ್ಥಿತಿ ಉದ್ಭವಿಸಿದೆಯೇ ಎನ್ನುವ ಸಂಶಯ ನಮಗೆ ಬಂದಿದೆ. ಆದ್ದರಿಂದ ಈ ವಿಷಯವನ್ನು ಕೂಲಂಕುಷವಾಗಿ ಚರ್ಚೆಮಾಡಬೇಕು ಈ ಸಭೆ ಪವಿತ್ರವಾದ ಸಭೆ ಮೇಲ್ಗಡೆ ತಕ್ಕಡಿಯನ್ನು ಇಟ್ಟಿದ್ದಾರೆ. ಸದಸ್ಯರು ಪ್ರಮಾಣ ವಚನವನ್ನು ಸ್ವೀಕಾರ ಮಾಡುವಾಗ ಧರ್ಮದಿಂದ, ಸತ್ಯದಿಂದ ನಡೆಯುತ್ತೇವೆಂದು ಒಪ್ಪಿಕೊಂಡಿದ್ದೇವೆ. ವಿರೋಧ ಪಕ್ಷದ ಸದಸ್ಯರನ್ನು ಬಾ ಎಂದರೆ ಬಾ ಹೋಗು ಎಂದರೆ ಹೋಗು ಎನ್ನುವಂತೆ ಹೇಳುವುದು ಯಾವ ಧರ್ಮ, ಯಾವ ನ್ಯಾಯ ಎಂದು ಕೇಳುತ್ತೇನೆ. ಹಣಕಾಸಿಗೆ ಸಂಬಂಧಪಟ್ಟ ಕಾರ್ಯಕ್ರಮ ಬಹಳ ಮುಖ್ಯವಾದುದು ಎಂದು ಅದನ್ನು ಚರ್ಚೆಮಾಡಲು ಗೊತ್ತು ಮಾಡಲಾಗಿತ್ತು. ಆದರೆ ಆ ತರಹ ಮಾಡದೇ ಇರುವುದಕ್ಕೆ

ಕಾರಣ ಗೊತ್ತಾಗುತ್ತಿಲ್ಲ. ತಾವು ಲಾಯರಾಗಿದ್ದವರು. ಪ್ರ್ಯಾಕ್ಟೀಸ ಮಾಡಿದ್ದೀರಿ. ಕಾನೂನು ಕಟ್ಟಳೆ, ರಾಜ್ಯಾಂಗ ಎಲ್ಲಾ ಗೊತ್ತಿದೆ ತಾವು ಈ ಸಭೆಯ ಗೌರವವನ್ನು ಕಾಪಾಡಬೇಕು.

ಆ ಕಡೆಯಲ್ಲಿ ನಡೆಯುತ್ತಿರುವುದನ್ನು ನೋಡಿದರೆ, ಆ ವಿಚಾರವನ್ನು ಕೇಳಿದರೆ ಸುಮಾರು 55 ಜನರು ಹರಿಯಾನಾ, ರಾಜಸ್ಥಾನಗಳಲ್ಲಿ ಮಾಡಿದ್ದಂತೆ ಮಾಡುವುದಕ್ಕೆ ಹೊರಟದ್ದರೆಂದು ಗೊತ್ತಾಗುತ್ತದೆ. ಆ ಭಯದಿಂದ ಸಭೆಯ ಕಾರ್ಯಕ್ರಮ ಪಟ್ಟಿಯನ್ನು ಬದಲಾವಣೆ ಮಾಡಿದರೋ ಅಥವಾ ಪಂಚಾಯತಿ ಅಥವಾ ಪಂಚಾಯತಿ ಚುನಾವಣೆಗಳನ್ನು ನೋಡಿ ಮಾಡಿದರೋ ಅಥವಾ ಮತ್ತೆ ಏನು ಕಾರಣವಿದೆ, ಏಕೆ ಈ ರೀತಿ ಮಾಡಿದರೋ ಎಂದು ನಮಗೆ ಗೊತ್ತಾಗುತ್ತಿಲ್ಲ. ವಿರೋಧ ಪಕ್ಷಕ್ಕೆ ಸೇರಿದ ನಮ್ಮನ್ನೂ ನಂಬಿಕೆಗೆ ತೆಗೆದುಕೊಂಡು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದರೆ ಚೆನ್ನಾಗಿತ್ತು. ಹಾಗೆ ಮಾಡದೇ ಇದ್ದಕ್ಕಿದ್ದಂತೆ ಕಾರ್ಯಕ್ರಮ ಪಟ್ಟಿಯನ್ನು ಬದಲಾಯಿಸಿರುವುದು ಸರಿಯಲ್ಲ 'ಬಾ ಎಂದರೆ ಬಾ, ಹೋಗು ಎಂದರೆ ಹೋಗು' ಎನ್ನುವಂತೆ ಮಾಡುವುದಾದರೆ ನಾವು ಹೋಗುವುದಿಲ್ಲ, ನಾವು ಬರುವುದಿಲ್ಲ ಎಂದು ಹೇಳುವ ಶಕ್ತಿ ನಮಗೂ ಇದೆ, ಆದರೆ ಸಭೆಯ ಮರ್ಯಾದೆ ಕಾಪಾಡಿಕೊಳ್ಳಬೇಕು. ಅವರು ಏನು ಶಬ್ದ ಕೂಗುತ್ತಾರೆ ಅದೇ ಶಬ್ದ ನಮ್ಮಲ್ಲಿಯೂ ಬರುತ್ತದೆ. ಇದು ಆಗಬಾರದು ಮಂತ್ರಿಗಳಾಗಿರುವವರು ಏನು ಬೇಕಾದರೂ ಮಾಡಬಹುದು ಎಂದು ಮಾಡಿದರೆ ಜನತೆಗೆ ರಕ್ಷಣೆ ಇಲ್ಲವೇ ಸ್ವಾಮಿ ! ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಚುನಾವಣೆಗಳನ್ನು ನಡೆಸಿ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪ್ರತಿನಿಧಿಗಳು ಎಂದು ಒಪ್ಪಿಕೊಂಡು ಬಂದು ಇಲ್ಲಿ ಅವರು ಮನಸ್ಸಿಗೆ ಬಂದಂತೆ ಆಟವಾಡುವುದು ಯಾವ ಧರ್ಮ ? ಇದರಿಂದ ಕೆಟ್ಟ ಪರಿಸ್ಥಿತಿಯುಂಟಾಗಿ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಮಾನ್ಯ ಶಿವಪ್ಪನವರು ಏನು ಪತ್ರ ಬರೆದಿದ್ದಾರೆ ಅದರ ಬಗ್ಗೆ ದೀರ್ಘವಾಗಿ ಚರ್ಚೆ ನಡೆಯಬೇಕು. ಈಗ ಮಾಡಿರುವ ರೀತಿ ಮುಂದೆ ಪರಿಪಾಠ ಪ್ರಿಸೀಡೆಂಟ್ ಆಗಬಾರದು ಈ ರೀತಿ ಮುಂದೆ ನಡೆಯಬಾರದು ಎಲ್ಲರನ್ನೂ ನಂಬಿಕೆಗೆ ತೆಗೆದುಕೊಂಡು ಸಭೆಯ ಗೌರವವನ್ನು ಕಾಪಾಡಬೇಕು. ತಮ್ಮ ಆರ್ಡರ್ ಪ್ರಕಾರ ಸೆಕ್ರೆಟರಿಗಳು ನೋಟೀಸ ಕಳಿಸಿದರು. ಪುನಃ ರಿವೈಸ್ಡ್ ನೋಟೀಸ್ ಕಳಿಸಿದ್ದಾರೆ. ಇದು ನ್ಯಾಯವಲ್ಲ ಎಂದು ಹೇಳಬೇಕಾಗುತ್ತದೆ. ಈ ಸಭೆಯಲ್ಲಿ ಮಹಾತ್ಮಾ ಗಾಂಧೀಜಿಯವರ ಫೋಟೋ ಇದೆ, ವಲ್ಲಭಭಾಯಿ ಪಟೇಲರ ಫೋಟೋ ಇದೆ. ಸರಕಾರ ನಡೆಸುತ್ತಿರುವ ಅನ್ಯಾಯವನ್ನು ನೋಡಿದರೆ ಇಂಥ ಮಹನೀಯರ ಫೋಟೋಗಳು ಇಲ್ಲಿ ಏಕೆ ಇರಬೇಕು? ತಾವು ಸಭೆಯ ಗೌರವವನ್ನು ಕಾಪಾಡಬೇಕು. ನಿಷ್ಪಕ್ಷಪಾತವಾಗಿ ಇರಬೇಕು. ಆ ಕಡೆಗೆ ಸ್ವಲ್ಪವೂ ನೋಡಬಾರದು ಎಂದು ವಿನಂತಿ ಮಾಡಿಕೊಂಡು ನನಗ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ನಮಸ್ಕಾರ ಮಾಡುತ್ತೇನೆ.

ಸಭಾಧ್ಯಕ್ಷರು : ಇಡೀ ಪ್ರಶ್ನೋತ್ತರ ವೇಳೆ ಮುಗಿದುಹೋಗಿದೆ. ನಾನು ರೂಲಿಂಗ್ ಕೊಡಬೇಕೆಂದು ಸದಸ್ಯರು ಬಯಸುತ್ತಿದ್ದಾರೆ.

ಶ್ರೀ ಜಿ. ದುಗ್ಗಪ್ಪ (ಭರಮಸಾಗರ) ಸಭೆಯ ಕಾರ್ಯಕಲಾಪಗಳನ್ನು ಎಪ್ರಿಲ್ 3 ರಂದು ಪ್ರಚುರಪಡಿಸಿ ಸದಸ್ಯರಿಗೆ ಕಳಿಸಿದ್ದೀರಿ. ಎಪ್ರಿಲ್ 3 ರಿಂದ 25 ರ ವರೆಗೆ ಏನಾಗಿದೆ ಎನ್ನುವುದನ್ನು ಮತ್ತು ನಮಗೆ ಕೊಟ್ಟಿರತಕ್ಕ ನಿರೂಪಣೆಯನ್ನು ನೋಡಿದರೆ ಸರಕಾರದ ಕೆಲಸ ತಲೆ ಕೆಳಗಾಗಿಬಿಟ್ಟಿದೆ. ಹಿಂದು ಮುಂದಾಗಿದೆ ಎಂದು ಹೇಳಬಹುದು. ಎಪ್ರಿಲ್ 3 ರಂದು ಒಂದು ಕಾರ್ಯಕ್ರಮ ಪಟ್ಟಿ ಕಳುಹಿಸಿದಿರಿ, ಆದರ ಪ್ರಕಾರ ಸರಕಾರದ ಕೆಲಸ ಜೂನ 5 ರಿಂದ ಆರಂಭವಾಗಬೇಕಿತ್ತು,

ಸಿಂಧು ಘಟ್ಟದ ದೇವರು ಹಿಂದು ಮುಂದು ಎಂಬತೆ ಸರಕಾರದ ಕೆಲಸವಾಗಿದೆ. ಹೀಗೆ ಕಲಾಪಗಳನ್ನು ಹಿಂದು ಮುಂದು ಮಾಡುವುದಕ್ಕೆ ಏನು ಪ್ರಬಲವಾದ ಕಾರಣ ? ಸರಕಾರದ ತಲೆ ಸುಮ್ಮನೆ ಗಿರ್ ಎಂದು ತಿರುಗುತ್ತಿದೆ.

ಶ್ರೀ ಎಸ್. ಎಸ್. ಶೆಟ್ಟರ (ಹುಬ್ಬಳ್ಳಿ) : ಮಾನ್ಯ ಅಧ್ಯಕ್ಷರೆ, 1967 ಎಪ್ರಿಲ್ 3 ರಿಂದ 25ರ ವರೆಗಿನ ಬೆಳವಣಿಗೆಗಳನ್ನು ಕುರಿತಂತೆ ಸದ್ಯದ ರಾಜ್ಯ ಸರಕಾರದ ವಿದ್ಯಮಾನಗಳ ಬಗ್ಗೆ ಮುಖ್ಯಮಂತ್ರಿಗಳು ನೀಡಿದ ಹೇಳಿಕೆಯ ಸಂಬಂಧದಲ್ಲಿ ನಾನು ಮುಖ್ಯವಾಗಿ ಪ್ರಸ್ತಾಪಿಸುತ್ತಿದ್ದೇನೆ. ಕೇಂದ್ರದ ಸಹಾಯದಲ್ಲಿ ಬದಲಾವಣೆಯಾಗಲಿರುವುದರಿಂದ ರಾಜ್ಯದ ಹಣಕಾಸಿನ ಸ್ಥಿತಿಯ ಮೇಲೆ ಭಾರೀ ಪರಿಣಾಮ ಬೀರಲಿದೆ ಎಂದು ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಆದರೆ ಅರ್ಥಸಚಿವ ಶ್ರೀ ರಾಮಕೃಷ್ಣ ಹೆಗಡೆಯವರು ಮಂಡಿಸಿದ ಆಯ-ವ್ಯಯದ ಅಂದಾಜು ಹಾಗೂ ಭಾಷಣವನ್ನು ನಾವು ನೆನಪಿಗೆ ತಂದುಕೊಳ್ಳಬೇಕು. ಅವರ ಪ್ರಕಾರ ಇದು ಉಳಿಕೆ ಆಯವ್ಯಯವಿದ್ದು ಹೊಸ ಕರಗಳನ್ನು ವಿಧಿಸಿಲ್ಲ. ಸದ್ಯಕ್ಕೆ ಭಾರೀ ಕರಭಾರವಿರುವುದು ನನಗೆ ಗೊತ್ತಿದೆ. ಮುಖ್ಯವಾಗಿ ಮಾರಾಟ ಕರವನ್ನಂತೂ ಕಡಿಮೆ ಮಾಡಲೇಬೇಕು. ಆದರೆ ಅವರು ಹೊಸ ಕರಗಳನ್ನು ಹೇರಲಾಗಿಲ್ಲ ಹಾಗೂ ಇದು ಉಳಿಕೆ ಆಯವ್ಯಯವೆಂದು ತಿಳಿಸಿದ್ದಾರೆ. ಹೀಗಾಗಿ ರಾಜ್ಯದ ಆರ್ಥಿಕ ಸ್ಥಿತಿ ಅತ್ಯುತ್ತಮ ಅಲ್ಲದೇ ಮದ್ಯಪಾನ ಪ್ರತಿಬಂಧವನ್ನು ಅವರು ಸಡಿಲಿಸಲಿರುವುದರಿಂದ ರಾಜ್ಯಸರಕಾರಕ್ಕೆ ಮತ್ತೆ ಹೆಚ್ಚಿನ ಹೊಸ ಆದಾಯವೂ ಬರಲಿದೆ. ಅರ್ಥಸಚಿವರ ಹೇಳಿಕೆಯನ್ನು ಗಮನಿಸಿ ಅವರೆಂದಂತೆ ರಾಜ್ಯದ ಆರ್ಥಿಕಸ್ಥಿತಿ ಸಮೃದ್ಧವಾದುದೆನ್ನಬೇಕೆ ಅಥವಾ ಮುಖ್ಯಮಂತ್ರಿಗಳು ಹೇಳುವ ಸ್ಥಿತಿ ನಿಜವೆನ್ನಬೇಕೆ ? ಎಂಬುದನ್ನು ನಾವು ನಿರ್ಣಯಿಸಬೇಕಾಗುತ್ತದೆ. ಸಚಿವಸಂಪುಟ ಡೋಲಾಯಮಾನ ಸ್ಥಿತಿಯಲ್ಲಿದೆ. ಸಂದಿಗ್ಧತೆಯಲ್ಲಿದೆ. ಆಯವ್ಯಯದ ಅಂದಾಜುಗಳನ್ನು ಸದನದಲ್ಲಿ ಸಚಿವಸಂಪುಟ ಸಮರ್ಥಿಸದೇ ಹೋದರೆ ಅದು ಉಳಿಯಲಾರದು ಅಧಿಕಾರದಲ್ಲಿ ಮುಂದುವರೆಯುವ ಹಕ್ಕು ಅದಕ್ಕಿರಲಾರದು ಮುಖ್ಯಮಂತ್ರಿಗಳು ನೀಡಿದ ಹೇಳಿಕೆಯು ಅರ್ಥಸಚಿವರ ಹೇಳಿಕೆಗೆ ತದ್ವಿರುದ್ಧವಿದೆ. ಇಬ್ಬರ ಹೇಳಿಕೆಗಳಲ್ಲೂ ಹೊಂದಾಣಿಕೆ, ಸಹಮತ ಇರದೇ ಹೋದರೆ ಎದವಟ್ಟಾದ ಅಸಂಬದ್ಧ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಸದನ ಈ ಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಕೇಂದ್ರ ಸರಕಾರ ತನ್ನ ಸಹಾಯ ಕಡಿಮೆ ಮಾಡಲಿದೆ ಎಂದು ಮುಖ್ಯಮಂತ್ರಿ ಭಾವಿಸುವುದಾದರೆ ಅವರು ಸರಕಾರವನ್ನು ಕರೆದು ಆಯವ್ಯಯ ಚರ್ಚಿಸಬೇಕಿತ್ತು. ಈ ವಿಶೇಷ ಸಂದರ್ಭದಲ್ಲಿ ಆಯವ್ಯಯದ ಚರ್ಚೆ ಬಹಳ ಮಹತ್ವದ್ದು. ಕೇಂದ್ರ ಸರಕಾರ ಯಾವ ರೀತಿಯಲ್ಲಿ ಸಹಾಯವನ್ನು ನಿರಾಕರಿಸಬಹುದು ಅಥವಾ ಕಡಿಮೆ ಮಾಡಬಹುದು ಹಾಗೂ ನಮ್ಮ ರಾಜ್ಯದ ಆಯವ್ಯಯದ ಮೇಲೆ ಏನು ಪರಿಣಾಮವಾಗಬಹುದು ಎಂಬುದನ್ನು ಸರಕಾರ ಪರಿಶೀಲಿಸಬೇಕಾಗುತ್ತದೆ. ಅಂದಾಜನ್ನು ಇಡೀ ಸದನವೇ ಪರಿಶೀಲಿಸಬೇಕು ಮುಖ್ಯಮಂತ್ರಿಗಳು ಇರುವ ಬಟ್ಟೆಯ ಅಳತೆಯಂತೆ ಹೊಲಿಗೆ ಮಾಡಬೇಕು. ನಾವು ಕೆಲವು ಅಗತ್ಯತೆಗಳನ್ನು ಬಿಟ್ಟುಕೊಡಬೇಕೆಂದು ಇದರ ಅರ್ಥವಲ್ಲ. ಕೇಂದ್ರ ಸರಕಾರ ಕೆಲಸಹಾಯ ನಿರಾಕರಿಸುತ್ತದೆಂದಾಕ್ಷಣ ನಾವು ತೊಂದರೆ ಅನುಭವಿಸಬೇಕೆಂದೂ ಅಗದು. ನಾವು ಕೇಂದ್ರದ ಮೇಲೆ ನಮ್ಮ ಹಕ್ಕುಗಳ ಪ್ರಾಪ್ತಿಗಾಗಿ ಒತ್ತಡ ಹೇರಲೇಬೇಕಾಗುವುದು. ಹೀಗೆ ಮಾಡಬೇಕಾದರೆ ರಾಜ್ಯ ಸರಕಾರದ ಆರ್ಥಿಕ ಸ್ಥಿತಿಯನ್ನು ಸದನ ಪರಿಶೀಲಿಸಬೇಕಾಗುತ್ತದೆ. ನಾವು ಅಂಗೀಕರಿಸಿದ ಮೂಲ ಆಯವ್ಯಯ ಅಂದಾಜಿಗೆ ಅಂಟಿಕೊಳ್ಳಬೇಕಾಗುತ್ತದೆ. ಆ ಮೂಲ ಆಯವ್ಯಯ ಅಂದಾಜಿಗೆ ದೃಢವಾಗಿ ಅಂಟಿಕೊಂಡು, ಮೊದಲಿಗೆ ಚರ್ಚಿಸಿ ಒಪ್ಪಿಕೊಳ್ಳಲಾದ ಸಹಾಯ ಪಡೆದುಕೊಳ್ಳಲು ಯತ್ನಿಸಬೇಕಾಗುತ್ತದೆ. ಬೇಕಾದಂಥ

ನೆರವನ್ನು ನೀಡುವಂತೆ ಮುಖ್ಯಮಂತ್ರಿಗಳು ಕೇಂದ್ರಕ್ಕೆ ಪ್ರಭಾವಿಯಾಗಿ ತಿಳಿಸಿಹೇಳಬೇಕಾಗುತ್ತದೆ. ಮುಖ್ಯಮಂತ್ರಿಗಳು ಹತಾಶರಾಗಿ ಆಯವ್ಯಯ ಅಂದಾಜಿನ ಚರ್ಚೆ ಮುಂದೂಡಿದರೆ ಮೈಸೂರ ಸರಕಾರ ತನ್ನ ಆಯವ್ಯಯವನ್ನು ಹೇಗಾದರೂ ಸರಿಹೊಂದಿಸಿಕೊಳ್ಳುತ್ತದೆಂಬ ಭಾವನೆಯಿಂದ ಕೇಂದ್ರ ಸರಕಾರ ತನ್ನ ಸಹಾಯವನ್ನು ಕಮ್ಮಿ ಮಾಡುತ್ತ ಹೋಗುತ್ತದೆ. ಒಂದೆರಡು ಸಂದರ್ಭಗಳಲ್ಲಿ ನಮ್ಮ ಮುಖ್ಯಮಂತ್ರಿಗಳು ಹತಾಶವೃತ್ತಿ ತಳೆದುದರಿಂದ ನಮ್ಮ ರಾಜ್ಯಕ್ಕೆ ಬಹಳ ಹಾನಿಯಾಗಿರುವುದನ್ನು ನಾವು ಕಂಡಿದ್ದೇವೆ. ನಾನು ಈಗ ವಿಶಿಷ್ಟ ಗೊತ್ತುವಳಿಯೊಂದರ ಬಗ್ಗೆ ಮಾತಾಡುತ್ತಿರುವೆನಾದ್ದರಿಂದ ಅಂಥ ಸಂದರ್ಭಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿಲ್ಲ, ಆದರೆ ಗಡಿತಂಟೆ ವಿಷಯದಲ್ಲಿಯ ಅವರ ಹಾನಿಕಾರಕ ಹೇಳಿಕೆಗಳನ್ನು ಮಾತ್ರ ಉದ್ಧರಿಸದೇ ನಾನಿರಲಾರೆ. ನಮ್ಮ ರಾಜ್ಯದಲ್ಲಿ ಹಲವಾರು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೇವೆ. ನಮ್ಮ ಮುಖ್ಯಮಂತ್ರಿಗಳು ಗಡಿ ತಂಟೆ ಪ್ರಶ್ನೆಯನ್ನು ಮತ್ತೆ ಎತ್ತಬಾರದಿತ್ತು. ಆದರೆ ಹಠಾತ್ತನೆ ಹೀಗೆ ಅವರು ಎತ್ತಲು ಕಾರಣವೇನೋ ತಿಳಿಯದು.

ಸಭಾಧ್ಯಕ್ಷರು : ಅದೂ ಕೂಡಾ ಪ್ರಸ್ತಾಪಿಸಲ್ಪಡಲಿಲ್ಲವೇ ?

ಶ್ರೀ ಎಸ್. ಎಸ್. ಶೆಟ್ಟರ : ಮುಖ್ಯಮಂತ್ರಿಗಳು ರಾಜ್ಯದ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಹೇಗೆ ನಡೆದುಕೊಳ್ಳುತ್ತಿದ್ದಾರೆಂಬ ಉದಾಹರಣೆಯೆಂದು ಹೇಳುತ್ತಿದ್ದೇನಷ್ಟೇ, ಈಗ ನಮ್ಮ ರಾಜ್ಯದ ಹಣಕಾಸಿನ ಸ್ಥಿತಿ ವಿಷಯದಲ್ಲಿ ಸಹ ಕೇಂದ್ರ ಸರಕಾರ ತನ್ನ ಸಹಾಯವನ್ನು ಕಡಿಮೆ ಮಾಡಲಿದೆಯೆಂಬ ಭಯದಿಂದಲೇನೇ ಆಯವ್ಯಯ ಅಂದಾಜಿನ ಚರ್ಚೆಯನ್ನು ಮುಂದೂಡಲಾಗುತ್ತಿದೆ. ಗಡಿತಂಟೆ ವಿಷಯದಲ್ಲಿ ನಮಗೆ ಪೆಟ್ಟು ಬಿದ್ದಂತೆಯೇ ಹಣಕಾಸಿನ ವಿಷಯದಲ್ಲೂ ಪೆಟ್ಟು ಬೀಳಲಿದೆ ಎಂದು ನನಗನಿಸುತ್ತದೆ. ನಮ್ಮ ಮುಂದೆ ಇರಿಸಲಾದ ಆಯವ್ಯಯ ಅಂದಾಜಿಗೆ ಸಮರ್ಥಿಸುವುದಿಲ್ಲವಾದರೆ ಈ ಸಚಿವ ಸಂಪುಟಕ್ಕೆ ಅಧಿಕಾರದಲ್ಲಿ ಮುಂದುವರಿಯುವ ಹಕ್ಕೇ ಇಲ್ಲವೆಂಬುದು ನನ್ನ ಅಭಿಮತ. ಸಚಿವ ಸಂಪುಟ ತಾನು ಮಂಡಿಸಿದ ಆಯವ್ಯಯ ಅಂದಾಜಿಗೆ ಸಮರ್ಥಿಸಬೇಕು ಇಲ್ಲವೇ ಅಧಿಕಾರ ತ್ಯಜಿಸಬೇಕು. ಆಯವ್ಯಯದ ಅಂದಾಜಿನಲ್ಲಿ ಹೇಳಲಾದ ಅಗತ್ಯತೆಗಳನ್ನು ಪೂರೈಸಲು ಸಂಪನ್ಮೂಲಗಳೇ ಇಲ್ಲದಿದ್ದರೆ ಅಧಿಕಾರದಲ್ಲಿ ಮುಂದುವರೆಯುವ ನೈತಿಕ ಹಕ್ಕೇ ಇರಲಾರದು. ನಾನು ಇಲ್ಲಿ ಮುಖ್ಯವಾಗಿ ಮುಖ್ಯಮಂತ್ರಿಗಳ ಭಾಷಣ ಹಾಗೂ ಅವರ ಕ್ರಿಯೆಯಿಂದಾಗಿ ರಾಜ್ಯಕ್ಕಾದ ಆರ್ಥಿಕ ಹಾನಿ ಇವುಗಳ ಬಗ್ಗೆ ಹೇಳುತ್ತಿದ್ದೇನೆ. ಅವರು ತಾವಾಗಿಯೇ ಹೇಳಿಕೆಯಿತ್ತರೋ ಅಥವಾ ಚರ್ಚೆಗೆ ಉತ್ತರಕೊಡುತ್ತಿದ್ದರೋ ಹೇಗೆಂಬುದನ್ನು ನಾನರಿಯೆ, ಹೇಳಿಕೆ ನೀಡಬೇಕೆಂದು ಅವರಿಗೆ ಕೇಳಿಕೊಳ್ಳಲಾಗಿತ್ತು. 45 ದಿನಗಳ ಅಧಿವೇಶನವನ್ನು ಐದು ದಿನಗಳಿಗೇಕೆ ಕಡಿಮೆ ಮಾಡಲಾಯಿತೆಂಬುದನ್ನು ಅವರು ವಿವರಿಸಿದ್ದಾರೆ ಹಲವು ಸಹಾಯಗಳಲ್ಲಿ ಕೇವಲ ಕಡಿತವಾಗಲಿದೆ ಎಂಬ ಕಾರಣಕ್ಕಾಗಿ ಕಲಾಪಗಳನ್ನು ಮೊಟಕುಗೊಳಿಸಲಾಯಿತೇ? ಕೆಲವು ಸಹಾಯ, ಕೆಲವು ಅರ್ಥವ್ಯವಸ್ಥೆಯಲ್ಲಿಯ ಏವಲಾವಣೆಯ ದೆಸೆಯಿಂದಲೇ ಸದನದ ಕಾರ್ಯಕ್ರಮವನ್ನು ಬದಲಿಸಬೇಕೆ? ಕಾರ್ಯಕ್ರಮ. ಕಾರ್ಯಕಲಾಪ ಯಥಾವತ್ತಾಗಿ ಮುಂದುವರಿಯಲೇ ಬೇಕು. ಯಾವುದೇ ಗಂಭೀರ ಸಮಸ್ಯೆ ಉದ್ಭವಿಸಿದರೂ ಸದನ ಅದನ್ನು ಚರ್ಚಿಸತಕ್ಕದ್ದು. ಕೇಂದ್ರ ಸಹಾಯ ರದ್ದಾಗುತ್ತದೆ ಎಂದು ಮುಖ್ಯಮಂತ್ರಿಗಳು ಅಭಿಪ್ರಾಯಪಡುವುದಾದರೆ ಇದು ಇದೇ ಸದನಕ್ಕೆ ಸಂಬಂಧಿಸಿದ ವಿಷಯ ಈ ಸಮಸ್ಯೆ ಕುರಿತು ಸದನದಲ್ಲಿ ಚರ್ಚೆ ಆಗಲೇಬೇಕು. ಮುಖ್ಯಮಂತ್ರಿಗಳು ಉದ್ದೇಶಪೂರ್ವಕವಾಗಿ ನಮ್ಮಿಂದ ಏನನ್ನೋ ಬಚ್ಚಿಡುತ್ತಿದ್ದಾರೆ. ಆದಕ್ಕಂದೇ ಸಮಸ್ಯೆ ಕುರಿತು ಚರ್ಚಿಸುವುದಕ್ಕೆ ಟಿಪ್ಪಣಿ ನೀಡುವ ನಮ್ಮ ಹಕ್ಕನ್ನು ಮೊಟಕುಗೊಳಿಸುತ್ತಿದ್ದಾರೆ ಆದ್ದರಿಂದ ನಮ್ಮ ರಾಜ್ಯದ ಆರ್ಥಿಕ ಹಿತಾಸಕ್ತಿಗೆ ಹಾನಿಯುಂಟು ಮಾಡುವ ಹೇಳಿಕೆ ನೀಡಿರುವರೆಂದೇ ನಾನು ವ್ಯಕ್ತಪಡಿಸುತ್ತಿದ್ದೇನೆ.

ಸಭಾಧ್ಯಕ್ಷರು : ಮುಖ್ಯಮಂತ್ರಿಗಳ ವಿರುದ್ಧ ಸದನದಲ್ಲಿ ಈಗಾಗಲೇ ಬಹಳಷ್ಟು ಹೇಳಲ್ಪಟ್ಟಿದೆಯಾದ್ದರಿಂದ ಬೇರೆ ಸದಸ್ಯರಿಗೆ ಇನ್ನು ಮುಂದೆ ಮಾತಾಡಲು ಹೇಳುವುದಕ್ಕೆ ಮೊದಲು ಮುಖ್ಯಮಂತ್ರಿಗಳು ಬಯಸಿದರೆ ಉತ್ತರ ಕೊಡಬಹುದಲ್ಲವೇ?

ಶ್ರೀ ಎಸ್. ಆರ್. ಕಂಠಿ : ಅವರಿಗೆ ಅರ್ಧಗಂಟೆ ಕಾಲಾವಕಾಶ ಬೇಕು.

ಶ್ರೀ ವಾಟಾಳ ನಾಗರಾಜ : ಸನ್ಮಾನ್ಯ ಅಧ್ಯಕ್ಷರೇ ಮುಖ್ಯಮಂತ್ರಿ ನಿಜಲಿಂಗಪ್ಪನವರು ಈ ಅಧಿವೇಶನವನ್ನು ಕಡಿಮೆ ಮಾಡುವುದಕ್ಕೆ......

ಸಭಾಧ್ಯಕ್ಷರು ; ದಯವಿಟ್ಟು ವ್ಯೆಯಕ್ತಿಕ ಆರೋಪ ಮಾಡದಿರಿ.

ಶ್ರೀ ವಾಟಾಳ ನಾಗರಾಜ : ಅವರ ಹೇಳಿಕೆಯ ಬಗ್ಗೆ ಮಾತಾಡುತ್ತೇನೆ.

ಅಧ್ಯಕ್ಷರು : ಆದರ ವಿಚಾರದಲ್ಲಿ ನ್ಯಾಯವಾಗಿ ಟೀಕೆ ಮಾಡುವುದಕ್ಕೆ ಆಕ್ಷೇಪಣೆಯಿಲ್ಲ 'ಪರ್ಸನಲ್ ಎಲಿಗೇಶನ್' ಮಾಡಬಾರದು ಆಗಲೇ ಕೇಳಿದಿರಿ ಯಾರೋ ರಿಜೈನ್ ಮಾಡಿದ್ದಾರೆಯೋ ಎಂದು ? ಆದನ್ನೆಲ್ಲಾ ಕೇಳುವುದಕ್ಕೆ ಅವಕಾಶವಿಲ್ಲ, ಬೇಕಾದರೆ ಕಾಗದ ಬರೆದು ತಿಳಿದುಕೊಳ್ಳಿ.

ಶ್ರೀ ವಾಟಾಳ ನಾಗರಾಜ : ಅಧಿವೇಶನವನ್ನು ಕಡಿಮೆ ಮಾಡಿದ ಬಗ್ಗೆ ಅವರು ನಾಲ್ಕುದಿನ ಈ ಶಾಸನಸಭೆಯನ್ನು ಇಕ್ಕಟ್ಟಿನ ಪರಿಸ್ಥಿತಿಗೆ ತಂದು ತಮಗೂ ಅನಾರೋಗ್ಯವನ್ನು ತಂದುಕೊಂಡು ಕೊನೆಯ ಘಳಿಗೆಯಲ್ಲಿ ನಮಗೆ ಸರಿಯಾದ ಒಂದು ಹೇಳಿಕೆಯನ್ನು ನೀಡಲಿಲ್ಲ ಮತ್ತು ಅವರ ಹೇಳಿಕೆಯ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿರುವಾಗ ಈಗಲೂ ಸಹ ಈ ಸಭೆಯನ್ನು ಅವರು ಒಂದು ರೀತಿಯಲ್ಲಿ ಧಿಕ್ಕರಿಸಿ ಸಭೆಯಿಂದ ಹೊರಗೆ ಹೋಗಿದ್ದಾರೋ ಏನೋ ಎಂದು ನನಗೆ ಅನಿಸ್ತಾ ಇದೆ. ತಾವು ದಯವಿಟ್ಟು ಅವರನ್ನು ಸಭೆಗೆ ಕರೆಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರು ಕೊಟ್ಟಿರತಕ್ಕಂಥ ಹೇಳಿಕೆ ಸಮಂಜಸವಾಗಿಲ್ಲ ಎಂದು ನನಗಾದರೂ ಅನಿಸುತ್ತದೆ. ಈ ಅಧಿವೇಶನ ಏನಿದೆ ಅಂದರೆ, ನಾಳೆ ದಿನ ಅವರು ದೆಹಲಿಗೆ ಪ್ರಯಾಣ ಮಾಡುತ್ತಾರೆ. ಸುಮಾರು 6ನೇ ತಾರೀಖಿನಿಂದ ಎಂದರೆ ಇವತ್ತಿನಿಂದ 12ನೇ ತಾರೀಖಿನ ವರೆಗೂ ದೆಹಲಿಯಲ್ಲಿ ಅವರಿಗೆ ಕೆಲಸವಿದೆ. ಅದು ಸರಕಾರದ ಕೆಲಸವಲ್ಲ ಕಾಂಗ್ರೆಸ್‌ನ ಪುನಾರಚನೆಯ ಒಂದು ಸಭೆ ಅಲ್ಲಿ ನಡೆಯುತ್ತಿದೆ. ಆ ಸಭೆಗೆ ಅವರು ಹೋಗಬೇಕಾಗಿದೆ. ಆದರೆ ಅವರು ಹೇಳಿರತಕ್ಕದ್ದು ಕೇಂದ್ರ ಮಂತ್ರಿಗಳನ್ನು ಕಂಡು ಬರುವುದಕ್ಕೆ ಹೋಗಿ ಬರುತ್ತಾ ಇದ್ದೇನೆ ಎಂದು. ಈ ಹೇಳಿಕೆ ಪತ್ರಿಕೆಯಲ್ಲಿ ಬಂದಿದೆ ಇದರ ಉದ್ದೇಶ ನಾನಾದರೂ ಹೇಳುತ್ತೇನೆ. ಅವರು ಕೊಟ್ಟಿರತಕ್ಕ ಹೇಳಿಕೆ ಯಾವ ದೃಷ್ಟಿಯಲ್ಲಿದೆ ಎಂದರೆ ಇದು ಒಂದು ರೀತಿಯಾದಂಥ ಕಪಟನಾಟಕ ಎಂದು ಕರೆಯುತ್ತೇನೆ. ಯಾವಾಗಲೂ ಅವರು ಈ ರೀತಿ ಮಾಡುತ್ತ ಬಂದಿದ್ದಾರೆ. ಈ ನಿಜಲಿಂಗಪ್ಪನವರು ನಿಜ ಹೇಳುವುದಕ್ಕೆ ಇಬ್ಬರು ಜಯವಿಜಯರು ಅಡ್ಡಿ ಬರುತ್ತಾ ಇದ್ದಾರೆ. ಹಿಂದೆ ವಿಷ್ಣುವಿನ ಹತ್ತಿರ ಇದ್ದ ಜಯವಿಜಯರು ಶಾಪಕ್ಕೆ ಗುರಿಯಾಗಿ ಮೂರು ಜನ್ಮಗಳನ್ನು ತಾಳಿ ರಾಕ್ಷಸರಾಗಿ ಹುಟ್ಟಿದ್ದರು ಅಂತಾ ಪ್ರತೀತಿಯಿದೆ. ಅವರ ಅವ್ತಾರವನ್ನೇ ಎತ್ತಿ ಈ ರಾಮಕೃಷ್ಣ ಹೆಗಡೆ ಮತ್ತು ವೀರೇಂದ್ರ ಪಾಟೀಲರವರು ಇವರನ್ನು ಬಲಿಹಾಕುವುದಕ್ಕೆ ಹೊರಟಿದ್ದಾರೋ ಏನೋ ಗೊತ್ತಿಲ್ಲ. ಇದನ್ನು ಅವರು ಗಣನೆಗೆ ತೆಗೆದುಕೊಳ್ಳಬೇಕು. ಎಲ್ಲಿಯವರೆಗೆ ಗಣನೆಗೆ ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಅವರಿಗೆ ಕೆಟ್ಟದ್ದು ಉಂಟಾಗುತ್ತದೆ. ಈಗಲಾದರೂ ದಯಮಾಡಿ ಕಾಮರಾಜ್ ಪ್ಲಾನನ್ನು ಹಾಕಿಕೊಂಡು ಅವರನ್ನು ಕಳುಹಿದರೆ

ಒಳ್ಳೆಯದು ಎಂದು ಹೇಳುತ್ತೇನೆ. ಅವರು ದೆಹಲಿಗೆ ಹೋಗಿ 7 ದಿವಸಗಳ ಕಾಲ ಅವರು ಇಲ್ಲದೇ ಇರತಕ್ಕ ಸಂದರ್ಭದಲ್ಲಿ ಈ ಶಾಸನ ಸಭೆಯಲ್ಲಿ ಏನಾದರೂ ನಡೆದರೆ ಅವರ ಒಳ ಗುಂಪಿನವರಿರತಕ್ಕ ಜನ ಅವರು ದೆಹಲಿಯಿಂದ ವಿಮಾನ ನಿಲ್ದಾಣಕ್ಕೆ ಬರುವಷ್ಟರಲ್ಲೇ ಅವರನ್ನು ಅಧಿಕಾರದಿಂದ ಕಿತ್ತು ಹಾಕಬೇಕೆಂಬ ಪ್ರಯತ್ನ ನಡೆಯುತ್ತಾ ಇತ್ತು ಎಂಬುದು ಅವರಿಗೆ ಗೊತ್ತಾಗಿ, ಈ ಶಾಸನಸಭೆ ನಡೆದರೆ ನನ್ನ ಅಧಿಕಾರ ಎಲ್ಲಾ ಹೊರಟು ಹೋಗುತ್ತದೆ ಎಂದು ಈ ರೀತಿಯಾದ ಕುಂಟು ನೆಪವನ್ನು ಹೇಳಿಕೊಂಡು ವಿಧಾನಸಭೆಯನ್ನು ಮುಕ್ತಾಯ ಮಾಡಿ ನಾಳೆ ದೆಹಲಿಗೆ ಹೋಗ್ತಾ ಇದ್ದಾರೆ. ಇಷ್ಟೆಲ್ಲ ಹಗರಣ ನಡೆದಿದೆ ಎಂಬುದನ್ನು ಅವರ ಬಾಯಲ್ಲಿಯೇ ಅವರು ಸ್ಪಷ್ಟವಾಗಿ ನೀಡಿದ ಹೇಳಿಕೆಯಲ್ಲಿ ವ್ಯಕ್ತಪಡಿಸಿದ್ದಾರೆ. ಇಷ್ಟೆಲ್ಲ ಹಗರಣ ಬರಬೇಕಾದರೆ ಶ್ರೀಮಾನ್ ದಯಾನಂದ ಸಾಗರ ಅವರ ಪತ್ರಪ್ರಸಂಗವೇ ಇದಕ್ಕೆ ಕಾರಣ ಎಂದು ಹೇಳುತ್ತಾ ಇದ್ದೇನೆ. ಒಂದೇ ಸಮನೆ ಪತ್ರಪ್ರಸಂಗ ನಡೆಯಿತಲ್ಲಾ ಅಲ್ಲಿಂದ ಇಲ್ಲಿಯವರೆಗೂ ಅವರಿಗೆ ಶಾಂತಿ ಇಲ್ಲ, ನಿದ್ರೆಯಿಲ್ಲ, ಪಾಪ ಮೊನ್ನೆಯಿಂದ ನೋಡುತ್ತಾ ಇದ್ದೇನೆ ಅವರು ಬಹಳ ಬಳಲಿದ್ದಾರೆ.

ಅಧ್ಯಕ್ಷರು : ಅದನ್ನೆಲ್ಲಾ ಈಗ ಏಕೆ ಹೇಳುತ್ತೀರಿ ಒಂದು ದೊಡ್ಡ ಕಾಗದ ಬರೆದು ಹಾಕಿದರೆ ಆಯಿತು.

ಶ್ರೀ ವಾಟಾಳ ನಾಗರಾಜ : ಕಾಗದ ಬರೆದದ್ದಾಯಿತು, ಒಂದು ಕಾಗದಕ್ಕೂ ಉತ್ತರವಿಲ್ಲಾ ಸ್ವಾಮೀ ಆದ್ದರಿಂದ ತಾವಾದರೂ ತಮ್ಮ ಅಧಿಕಾರವನ್ನು ಉಪಯೋಗ ಮಾಡಿಕೊಂಡು ಈ ಪ್ರಸಂಗ ಏನು ನಡೆದಿದೆ ? ಅದು ತಪ್ಪೋ ಅಥವಾ ನಿಜವೇ ಎಂಬ ಬಗ್ಗೆ ಅವರು ಹೇಳಿಕೆಯನ್ನು ನೀಡುವಂತೆ ಮಾಡಬೇಕೆಂದು ಹೇಳುತ್ತೇನೆ. ಈ ಒಂದು ಬಜೆಟ್ ಅಧಿವೇಶನವನ್ನು ಮುಂದೆ ತಳ್ಳಬೇಕೆಂಬ ದೃಷ್ಟಿಯಿಂದ ಅವರು ಈ ರೀತಿಯ ಹೇಳಿಕೆಯನ್ನು ನೀಡಿದ್ದಾರೆ. ಮೈಸೂರು ಬಹಳ ಕಷ್ಟ ಪರಿಸ್ಥಿತಿಯಲ್ಲಿದೆ. ನಾವು ಬಹಳ ಕಷ್ಟವನ್ನು ಎದುರಿಸಬೇಕಾಗಿದೆ ಹಣಕಾಸಿನ ವಿಷಯದಲ್ಲಿ ಎಂದು ಅವರು ಹೇಳಿದ್ದಾರೆ. ನಾನು ಅವರಿಗೆ ಒಂದು ಮಾತನ್ನು ಹೇಳುತ್ತೇನೆ. ಇಂತಹ ಕಷ್ಟ ಪರಿಸ್ಥಿತಿಯಲ್ಲಿ ಬೆಂಗಳೂರು ನಗರದಲ್ಲಿ ನಡೆಯುತ್ತಾ ಇರತಕ್ಕ ಅವರ ಪಾರ್ಟಿ ಕಾಂಗ್ರೆಸ್ ಎಗ್ಜಿಬಿಶನ್ ದಲ್ಲಿ ಸರಕಾರದ ಸ್ಟಾಲ್ ಗಳನ್ನು ಇಟ್ಟು ಲಕ್ಷಾಂತರ ರೂಪಾಯಿಗಳನ್ನು ಕಾಂಗ್ರೆಸ್ ಪಾರ್ಟಿಯವರಿಗೆ ಕೊಡುತ್ತಾ ಇದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಯಾವ ಕಷ್ಟ ಪರಿಸ್ಥಿತಿಯಲ್ಲಿ ಸರಕಾರ ಮತ್ತು ಈ ಕರ್ನಾಟಕದ ಜನ ಸಿಕ್ಕಿ ಹಾಕಿಕೊಂಡಿದ್ದಾರೆ. ಇಂತಹ ಒಂದು ಪರಿಸ್ಥಿತಿ ಅವರಿಗೆ ಅರ್ಥವಾಗಿದ್ದರೂ ಕೂಡಾ ಅವರದೇ ಪಾರ್ಟಿದಿರತಕ್ಕ ಈ ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಲಕ್ಷಾಂತರ ರೂಪಾಯಿಗಳನ್ನು ಹಾಕಿ ನಾಶ ಮಾಡುತ್ತಾ ಇದ್ದಾರೆಯಲ್ಲಾ ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಏಕೆ ಅರ್ಥವಾಗುತ್ತಿಲ್ಲವೆಂದು ಕೇಳುತ್ತೇನೆ. ಒಂದು ಕಡೆ ಕಷ್ಟ ಪರಿಸ್ಥಿತಿ ಇದೆ ಎಂದು ಹೇಳುತ್ತಾರೆ. ಮತ್ತೊಂದು ಕಡೆ ಅವರ ಕಾಂಗ್ರೆಸ್ ಪಾರ್ಟಿಯವರು ನಡೆಸತಕ್ಕ ವಸ್ತುಪ್ರದರ್ಶನಕ್ಕೆ ಹಣ ನೀಡುತ್ತಾರೆ. ಕಾಂಗ್ರೆಸ್ ವಸ್ತುಪ್ರದರ್ಶನದಿಂದ ಸರಕಾರಕ್ಕೆ ಒಂದು ನಯಾಪೈಸೆ ಸಂಪಾದನೆಯಿಲ್ಲ, ತಾವು ಈ ರೀತಿ ತಮ್ಮ ಮನಸೋ ಇಚ್ಛೆ ಬಂದಂತೆ ವ್ಯವಹಾರವನ್ನು ಮಾಡುತ್ತಾ ಹೋಗಿ 40 ದಿವಸಗಳ ಕಾರ್ಯಕಲಾಪವನ್ನು ಇದ್ದಕ್ಕಿದ್ದ ಹಾಗೆ ಐದು ದಿವಸಗಳಿಗೆ ಇಳಿಸುವುದರ ಉದ್ದೇಶವಾದರೂ ಏಷ್ಟೇ. ಈ ಐದು ದಿವಸ ಕೂಡಾ ನಡೆಸುತ್ತಾ ಇರಲಿಲ್ಲ, ಪ್ರೆಸಿಡೆಂಟರ ಚುನಾವಣೆ ನಡೆಯಬೇಕಾಗಿಬಂತು. ಆದ್ದರಿಂದ ನಡೆಸಿದಿರಿ, ಇಲ್ಲದೇ ಇದ್ದರೆ ಖಂಡಿತವಾಗಿಯೂ ಕೂಡಾ ಈ ಐದು ದಿವಸಗಳ ಕಾರ್ಯಕಲಾಪವನ್ನೂ ಸಹ ಮಾಡುತ್ತಾ ಇರಲಿಲ್ಲ ಅದು ನನಗೆ ಗೊತ್ತು. ನೀವು ಇಂಥ ಕಪಟ ನಾಟಕ ಆಡಬೇಡಿರಿ ನಮ್ಮ ನಾಯಕರ ಹೆಸರು ಎಸ್. ನಿಜಲಿಂಗಪ್ಪ ಎಂದು ಅಂದರೆ ದಿಲ್ಲಿಗೆ ಹೋದರೆ ಇವರು ಅಲ್ಲಿಯೂ ಎಸ್. ಅಲ್ಲಿಂದ ಇಲ್ಲಿಗೆ ಬಂದರೆ ಇಲ್ಲಿಯೂ ಎಸ್ಸೇ, ಹೀಗೆ ಇವರು ಹೇಳುತ್ತಿರುವ ಆ

ಎಸ್‌ಗೆ ಅರ್ಥವೇನೆಂಬುದು ಬೇರೆಯವರಿಗೇ ಅರ್ಥವಾಗುತ್ತಿದೆ. ನಾನು ತಿಳಿದಿರುವ ಹಾಗೆ ಇವರು ಯಾರು ಏನೇ ಹೇಳಿದರೂ ಎಸ್ ಅಂತಾ ಹೇಳತಕ್ಕವರು ಎಂದು ಇಷ್ಟು ಮಾತ್ರ ನನಗೆ ಗೊತ್ತಿದೆ. ಅಂದರೆ ಇವರು ಯಾರು ಹೇಗೆ ಹೇಳಿದರೂ ಹಾಗೆ ನಡೆಯತಕ್ಕವರು ಎಂದು...

ಸಭಾಧ್ಯಕ್ಷರು : ತಾವು ಹೀಗೆ [illegible] ವ್ಯಾಖ್ಯಾನ ಮಾಡುವುದಕ್ಕಾಗಿ ತಮಗೆ ಹೆಚ್ಚಿನ ಕಾಲಾವಕಾಶ ಕೊಡಲಿಲ್ಲ. ಮಾತನಾಡತಕ್ಕ ಮಾನ್ಯ ಸದಸ್ಯರು ಇನ್ನೂ ಅನೇಕರಿದ್ದಾರೆ. ತಮಗೆ ನಿಗದಿ ಮಾಡಲಾಗಿದ್ದ ಕಾಲಾವಕಾಶ ಮುಗಿಯಿತು. ತಾವು ಸ್ವಲ್ಪ ಕುಳಿತುಕೊಳ್ಳ [illegible] ಉಳಿದಿರುವುದು [illegible] ನಿಮಿಷ ಮಾತ್ರ, ಮುಖ್ಯ ಮಂತ್ರಿಗಳಿಗೆ ಉತ್ತರಿಸುವುದಕ್ಕಾಗಿ ಅರ್ಧ ಗಂಟೆ ಕಾಲಾವಕಾಶ [illegible]. ಇನ್ನೂ ಎಷ್ಟೋ ಜನರು ಮಾತಾಡುವವರಿದ್ದು ಅಂಥವರ ಉದ್ದಪಟ್ಟಿ ನನ್ನ ಮುಂದಿದೆ. [illegible] ಮುಖ್ಯಮಂತ್ರಿಗಳ ಉತ್ತರಕ್ಕೆ ಮೊದಲು ತಾವು ಮಾತನಾಡುವುದಾಗಿ ಶ್ರೀ ಎಸ್. ಶಿವಪ್ಪ [illegible] ಏನೋ ಹೇಳಬಯಸುತ್ತಾರೆ. 294ನೇ ನಿಯಮ ಹೀಗೆ ಹೇಳುತ್ತದೆ

ಈ ನಿಯಮಗಳ ಮೇರೆಗೆ [illegible] ಹೊರತು ಪಡಿಸಿ ಒಬ್ಬ ಮಾನ್ಯರಾದ ಸದಸ್ಯನು ಅಧ್ಯಕ್ಷರ ಅನುಮತಿಯಿಲ್ಲದೇ [illegible].

ಗೊತ್ತುವಳಿಯನ್ನು ಮಂಡಿಸಿದ [illegible] ಮಾತಾಡಬಹುದು. ಅವರು ಹಾಗೆ ಮಾತನಾಡಿದ ಬಳಿಕ [illegible] ಉತ್ತರ ನೀಡಬಹುದು.

ವಿಧೇಯಕಕ್ಕೆ [illegible] ಸಭಾಧ್ಯಕ್ಷರು ಅನುಮತಿಯನ್ನು ನೀಡದ ವಿನಾ ಮಾತಾಡುವ ಹಕ್ಕಿದೆ ಎಂದು [illegible].

ಇಲ್ಲಿ ಒಂದೆರಡು ಪ್ರಶ್ನೆಗಳು [illegible] ಈ [illegible] ನಾನು ಸದನದ ಅಭಿಪ್ರಾಯ [illegible] ನಿಯಮಗಳನ್ನು ಓದುವುದಕ್ಕೆ [illegible] ವಿನಾ ಉತ್ತರಿಸುವ ಅಧಿಕಾರವಿಲ್ಲದಿರುವುದನ್ನು ಸ್ಪಷ್ಟವಾಗಿ [illegible] 35 ನಿಮಿಷ [illegible] ಸಮಾಧಾನ [illegible] ಉತ್ತರಿಸದಿರಬಹುದು.

ಶ್ರೀ ಕೆ.ಎಚ್.ಪಾಟೀಲ [illegible] ಅವಕಾಶವಿದೆ

ಸಭಾಧ್ಯಕ್ಷರು : [illegible] ಪಡೆದುಕೊಂಡು ಮಾತಾಡಬಹುದು. [illegible] ಸೂಚಿಸುತ್ತೇನೆ. ವೇಳೆಯಾದರೂ ಎಲ್ಲಿದೆ? ಶಿವಪ್ಪನವರು [illegible]

ಒಬ್ಬ ಸದಸ್ಯರು : ಕಾಲಾವಕಾಶ ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸಭಾಧ್ಯಕ್ಷರು : ಸಂಯೋಜನೆ ಅಥವಾ ನಿಯೋಜನವನ್ನೇಕೆ ಮಾಡುವುದಿಲ್ಲ ? ಮಾನ್ಯ ಸದಸ್ಯರು ಸದನದ ಹೊರಗಡೆಯವರೊಂದಿಗೆ ಸಂಯೋಜನೆ ಮಾಡುತ್ತಾರೆಯೇ ವಿನಾ ಸದನದ ಒಳಗಡೆಯಲ್ಲ.

ಶ್ರೀ ಎಸ್.ಆರ್.ಕಂಠಿ :- ನಿನ್ನೆ ಪಾಳಿಯ ಬಗ್ಗೆ ಎಸ್.ತಿಪ್ಪಣ್ಣನವರು ಮಾತಾಡಿದ್ದಾರೋ ಹೇಗೆ ಎಂಬುದನ್ನು ತಿಳಿಯ ಬಯಸುತ್ತೇನೆ. ಅವರು ಈಗಾಗಲೇ ಮಾತಾಡಿದ್ದಾರೆಂದು ಒಬ್ಬರು ಹೇಳಿದ್ದಾರೆ. ಆದ್ದರಿಂದ ಅವರಿಗೆ ಪುನಃ ಮಾತಾಡುವ ಹಕ್ಕಿಲ್ಲ.

ಸಭಾಧ್ಯಕ್ಷರು : ಯಾರೋ ಏನೋ ಹೇಳಿದರೆಂದು ಸಹಜವಾಗಿ ಅದನ್ನು ಒಪ್ಪಿ ಕೊಳ್ಳಲಾಗದು. ಶ್ರೀ ಕೆ.ಎಚ್.ಪಾಟೀಲರು ಗೊತ್ತುವಳಿ ಮಂಡಿಸಿದ್ದಾರೆ. ಶ್ರೀ ತಿಪ್ಪಣ್ಣನವರು ಇನ್ನೂ ಮಾತಾಡಿಲ್ಲವೆಂಬುದು ನನಗೆ ಗೊತ್ತಿದೆ. ವಾಟಾಳ್ ನಾಗರಾಜರು ಬೇಗನೇ ನಿಮಿಷದಲ್ಲಿ ತಮ್ಮ ಭಾಷಣ ಮುಗಿಸಿ ಕುಳಿತುಕೊಳ್ಳಲಿ.

ಶ್ರೀ ವಾಟಾಳ ನಾಗರಾಜ : ಸಭಾಧ್ಯಕ್ಷರೇ, ಅವರು ನನಗೆ ಈ ... ಪ್ರಯೋಕತ್ವವನ್ನೂ ಇಲ್ಲದೆ ತಪ್ಪುತ್ತಿರುವುದು ನಗರ ಪಾಲಿಕೆ ಸ್ಥಗಿತಗೊಳಿಸಿರುವುದರ ಬಗ್ಗೆ ನಾನು ಎರಡು ಮಾತನ್ನು ಹೇಳಬಯಸುತ್ತೇನೆ ಅದೇನೆಂದರೆ ನಮ್ಮ ನಾಯಕರು ಇಲ್ಲಿ ... ಕಾರಣವಾದ ಅನೇಕ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ತಾವು ಒಂದು ಕಾರ್ಪೊರೇಶನ್ನನ್ನು ... ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೇ ಬರೀ ಭಾಷಣಗಳನ್ನು ಮತ್ತು ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಈ ಬೆಂಗಳೂರು ನಗರ ಕರ್ನಾಟಕ ರಾಜಧಾನಿ ಸುಮಾರು 20 ವರ್ಷಗಳಿಂದಲೂ ಈ ಬೆಂಗಳೂರು ಕಾರ್ಪೊರೇಶನ್ ಸಂಸ್ಥೆ ಒಂದು ಸ್ವತಂತ್ರವಾದ ಅಂಗಸಂಸ್ಥೆಯಾಗಿ ಕೆಲಸಮಾಡಿಕೊಂಡು ಬರುತ್ತಿದೆ. ಈ ಸಂಸ್ಥೆಗೆ ಮುಂದಿನ ಸಾರಿಯಲ್ಲಿ ಕಾಂಗ್ರೆಸ್ ಮೇಯರ್ ಬರುವುದಕ್ಕೆ ಅವಕಾಶವಿಲ್ಲವೆಂದೂ, ಇನ್ನೊಂದು ದೃಷ್ಟಿಯಲ್ಲಿ ಹೇಳಬಹುದಾಗಿದೆ.

ಅಧ್ಯಕ್ಷರು : ಇಲ್ಲಿ ನಗರ ಕಾರ್ಪೊರೇಶನ್ ವಿಚಾರ ಹೇಗೆ ಬರುತ್ತದೆ ? ಯಾವತ್ತು ತಮಗೆ ಈ ವಿಷಯಗಳಲ್ಲಿ ಒಂದು ಸರಿಯಾದ ತಿಳುವಳಿಕೆ ಬರುತ್ತದೆಯೋ ಅದು ದೇವರಿಗೇ ಗೊತ್ತು. ತಾವು ಇನ್ನೊಬ್ಬರಿಗೆ ದೇವರು ಬುದ್ಧಿಯನ್ನು ಕೊಡಲಿ ಎಂದು ಹೇಳಿದ್ದೀರಿ ಆ ದೇವರು ತಮಗೂ ಬುದ್ಧಿಯನ್ನು ಕೊಡಬೇಕಾಗಿದೆ. ಇನ್ನು ಒಂದು ನಿಮಿಷದಲ್ಲಿ ತಮ್ಮ ಭಾಷಣವನ್ನು ತಾವು ಮುಗಿಸಬೇಕು.

ಶ್ರೀ ವಾಟಾಳ ನಾಗರಾಜ : ಈ ಹಿಂದೆ ಇದ್ದ ನಗರ ಕಾರ್ಪೊರೇಶನ್‌ನ್ನು ಈ ನಾಯಕರು ಯಾರೋ ಒಬ್ಬ ಕಾಂಗ್ರೆಸ್ಸಿನವರ ಮಾತನ್ನು ಕೇಳಿ ಅದನ್ನು ರದ್ದು ಮಾಡುವಂತೆ ಆಜ್ಞೆ ಮಾಡಿದರು. ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೇ ನ್ಯಾಯಸಮ್ಮತವಲ್ಲದ ಆಜ್ಞೆ ಮಾಡಿದ್ದಾರೆಂದು ಅದನ್ನು ಹೈಕೋರ್ಟಿನವರು ತಳ್ಳಿಹಾಕಿದ್ದಾರೆ. ಹೀಗಿರುವಾಗ ಇವರು ತಮ್ಮ ಮಂತ್ರಿಮಂಡಲಕ್ಕೆ ಕೂಡಲೇ ರಾಜೀನಾಮೆ ಕೊಡಬೇಕಾದ್ದು ಅವರ ಮುಖ್ಯ ಕರ್ತವ್ಯ. ಪರಿಸ್ಥಿತಿ ಹಾಗಿದ್ದರೂ ಇವರು ಇನ್ನೂ ಇಲ್ಲೇ ತಂಪಾಗಿ, ಸೊಂಪಾಗಿ ಕುಳಿತಿರಬೇಕು ಅನ್ನುತ್ತಿದ್ದಾರೆ. ಇವರು ಇಲ್ಲಿ ಹೀಗೆ ಕುಳಿತಿದ್ದರೆ ಅತ್ತ ದೇಶದಲ್ಲಿ ಜನರು ಇವರನ್ನು ಬೈಯುತ್ತಿದ್ದಾರೆ. ಎಷ್ಟು ಬೈದರೂ ಇವರಿಗೆ ನಾಚಿಕೆಯಿಲ್ಲ.

ಅಧ್ಯಕ್ಷರು : ಈಗ ಮಾನ್ಯ ಶಿವಣ್ಣನವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಸ್. ಶಿವಪ್ಪ : ಮಾನ್ಯ ಸಭಾಪತಿಗಳೇ, ಇಲ್ಲಿ ನಡೆಯುತ್ತಿರುವ ಚರ್ಚೆಯೇನಿದೆ ? ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂಥ ಒಂದು ಹೇಳಿಕೆಯ ವಿಷಯಾನುಸಾರವಾಗಿ ಚರ್ಚೆ ನಡೆಯುತ್ತಿದೆ. ಈ ಅಧಿವೇಶನವು ಪ್ರಾರಂಭವಾಗುವ ದಿನವೇ ಸಭೆಯ ಕಾರ್ಯಕಲಾಪಗಳು ಆರಂಭವಾಗುವುದಕ್ಕೆ ಮುನ್ನವೇ ಇಲ್ಲಿ ನಡೆಯಬೇಕಾಗಿದ್ದ ಪ್ರಶ್ನೋತ್ತರ ವೇಳೆಯನ್ನು ಮುಂದೂಡಿ ಹಿಂದೆ ಅಡ್ಜರ್ನ್ ಆಗಿದ್ದ ಬಜೆಟ್ ಅಧಿವೇಶನದ ಚರ್ಚೆಗೆ ಹಿಂದೆಯೇ ನಿಗದಿಯಾಗಿದ್ದ 40 ದಿವಸಗಳ ಅವಧಿಯನ್ನು ಹಠಾತ್ತಾಗಿ ಏಕಾಏಕಿಯಾಗಿ ಕೇವಲ 5 ದಿನಗಳಿಗೆ ಇಳಿಸಿದ್ದರ ಔಚಿತ್ಯವೇನು ಅನ್ನತಕ್ಕ ವಿಷಯ ಚರ್ಚೆಯಾಗುತ್ತಿದ್ದ ಕಾಲಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರವೇಶಮಾಡಿ ಒಂದು ಹೇಳಿಕೆ ಕೊಟ್ಟರು ಅವರು ಯಾವ ಉದ್ದೇಶದಿಂದ ಸಭೆಯ ಕಲಾಪಗಳನ್ನು ಅಂದರೆ ಬಜೆಟ್ ಅಧಿವೇಶನದ ಅವಧಿಯನ್ನು 5 ದಿನಗಳಿಗೆ ಸ್ಥಗಿತಗೊಳಿಸಿದರು ಎಂಬುದನ್ನು ಸಮರ್ಥನೆ ಮಾಡತಕ್ಕ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅವುಗಳ ಬಗ್ಗೆ ನನ್ನ ಆಕ್ಷೇಪಣೆಯೇನೂ ಇಲ್ಲ, ಆದರೆ ಅವರು ತಮ್ಮ ಒಂದು ವಿಷಯವನ್ನು ಭದ್ರಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಹೇಳಿದ ವಿಚಾರಗಳೇ ನಮ್ಮ ವಿಷಯಗಳನ್ನೂ ಸಮರ್ಥನೆ ಮಾಡತಕ್ಕವುಗಳಾಗಿವೆ.

ಹಣದ ಕೊರತೆಯಿಂದ ಆತಂಕ

1ನೇ ಜುಲೈ 1967

1967 ಜುಲೈ 1 ರಂದು ಶ್ರೀ ಎಸ್. ಎಸ್. ಶೆಟ್ಟರ ಅವರು ರಾಜ್ಯದಲ್ಲಿ ಉತ್ಪಾದಿಸಲ್ಪಡುವ ವಿದ್ಯುಚ್ಛಕ್ತಿ ಹಾಗೂ ನೀರಾವರಿಯ ಸೌಲಭ್ಯಗಳನ್ನು ಹಣದ ಕೊರತೆಯಿಂದಾಗಿ ಪೂರ್ಣ ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂಬುವನ್ನು ವಿಧಾನಸಭೆಯಲ್ಲಿ ಟೀಕಿಸಿದರು.

ಶ್ರೀ ಎಸ್. ಎಸ್. ಶೆಟ್ಟರ (ಹುಬ್ಬಳ್ಳಿ) ಮಾನ್ಯ ಸಭಾಪತಿಗಳೇ ಇಷ್ಟು ದಿವಸ ಈ ಸಭೆಯಲ್ಲಿ ಚರ್ಚೆ ಮಾಡಿದ ಮೇಲೆ ನಾವು ನಮ್ಮ ರಾಜ್ಯದಲ್ಲಿ ಉತ್ಪಾದಿಸತಕ್ಕ ವಿದ್ಯುಚ್ಛಕ್ತಿಯನ್ನು ಮತ್ತು ನೀರಾವರಿಯಿಂದ ನಮಗೆ ಸಿಗತಕ್ಕಂಥ ನೀರನ್ನು ಈ ಎರಡು ಶಕ್ತಿಗಳನ್ನು ನಾವು ಉಪಯೋಗಿಸಲಿಕ್ಕೆ ಸಾಧ್ಯವಿಲ್ಲ, ಹಣದ ಅಡಚಣೆಯಿಂದ ಅದು ಸಾಧ್ಯವಾಗುತ್ತಿಲ್ಲ ಎನ್ನುವಂಥಾ ಮಾತು ಮಂತ್ರಿವರ್ಯರ ಹೇಳಿಕೆಯಿಂದ ಸಿದ್ಧವಾಗಿದೆ. ಹಣದ ಕೊರತೆಯಿಂದ ಪ್ರತಿಯೊಂದು ಹಳ್ಳಿಗೂ ನಾವು ವಿದ್ಯುಚ್ಛಕ್ತಿಯನ್ನು ಒಯ್ಯುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳಿದ್ದಾರೆ. ಈ ಆಯವ್ಯಯ ಮುಂಗಡಪತ್ರವನ್ನು ಚರ್ಚೆ ಮಾಡುವ ಕಾಲದಲ್ಲಿ ಹಣದ ಕೊರತೆ ಎಷ್ಟಾಗಬಹುದೆಂಬ ಅಂದಾಜನ್ನು ಪರಿಶೀಲನೆ ಮಾಡಿ ಅದನ್ನು ಒಪ್ಪಿಕೊಳ್ಳಬೇಕ್ಕಿತ್ತು. ಇಷ್ಟು ಹಣ ಈ ಒಂದು ಉದ್ದೇಶಕ್ಕೆ ಬೇಕಾಗಿತ್ತು. ಈ ನೀರನ್ನು ಬಳಸಬೇಕಾದರೆ ಯಾವ ದೃಷ್ಟಿಯಲ್ಲಿ ಏನು ಹಣವನ್ನು ತೊಡಗಿಸಬೇಕು ಎನ್ನುವ ಅಂದಾಜು ಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಕೂಡ ನಮ್ಮ ರಾಜ್ಯದ ಉದ್ಯಮಗಳನ್ನು ಬೆಳೆಸಬೇಕಾದರೆ ಸರಕಾರದಲ್ಲಿ ಹಣವಿಲ್ಲ ಎಂದು ಹೇಳುತ್ತಿದ್ದಾರೆ. ಇನ್ನು ಆ ಆಯವ್ಯಯ ಪತ್ರಿಕೆಯಲ್ಲಿ ಕೂಡ ಸರಕಾರದವರು ನಮ್ಮಲ್ಲಿ ಹಣವಿಲ್ಲ, ಹಣದ ಕೊರತೆ ಸಾಕಷ್ಟು ಇದೆ ಎನ್ನುವ ಮಾತನ್ನು ಒಪ್ಪಿಕೊಂಡಿದ್ದಾರೆ. ಕೇಂದ್ರ ಸರಕಾರದ ಧನಸಹಾಯ ನಮ್ಮ ರಾಜ್ಯಕ್ಕೆ 34 ಕೋಟಿ ರೂಪಾಯಿಗಳು ಸಿಕ್ಕಬಹುದು ಎಂದು ಅಂದಾಜು ಇದೆ. ಕೇಂದ್ರ ಸರಕಾರದಿಂದ ಸಿಗತಕ್ಕಂಥ ಸಹಾಯಧನದಿಂದ ಯಾವ ಯಾವ ಯೋಜನೆಗಳನ್ನು ಸರಕಾರದವರು ಮಾಡುತ್ತಿದ್ದಾರೆ. ಎಂಬುದನ್ನು ಪರಿಶೀಲನೆ ಮಾಡಿದರೆ ಕೆಲವು ಸಂಗತಿಗಳನ್ನು ವಿಚಾರಮಾಡುವ ಅಗತ್ಯವಿದೆ. ಯೋಜನೆಗಳ ಬಗ್ಗೆ ಪುನರ್ವಿಮರ್ಶೆಮಾಡಬೇಕಾದಂತಹ ಕೆಲವು ಸಂಗತಿಗಳಿವೆ. ಜನತೆ ಏನು ಅಪೇಕ್ಷೆ ಮಾಡುತ್ತಾರೆ. ನಾವು ಆಯವ್ಯಯ ಪತ್ರಿಕೆಯ ಚರ್ಚೆಯ ಕಾಲಕ್ಕೆ ಏನು ಅಪೇಕ್ಷೆ ಮಾಡುತ್ತೇವೆ ಎಂಬುದರಲ್ಲಿ ಎರಡರಲ್ಲಿಯೂ ಹೊಂದಾಣಿಕೆಯಿಲ್ಲ, ಜನತೆ ಅಪೇಕ್ಷೆ ಮಾಡುವುದು ಒಂದು ನಾವು ಇಲ್ಲಿ ಚರ್ಚೆ ಮಾಡುವುದು ಇನ್ನೊಂದು. ಈ ಗೊಂದಲದಲ್ಲಿ ನಾವು ಸಿಕ್ಕಿ ಜನಸಾಮಾನ್ಯರನ್ನು ಸಮಾಧಾನ ಮಾಡುವುದು ನಮ್ಮ ಕಡೆಯಿಂದ ಸಾಧ್ಯವಾಗುತ್ತಾ ಇಲ್ಲ, ಬಜೆಟನ್ನು ಚರ್ಚೆ ಮಾಡುವ ಕಾಲದಲ್ಲಿ ಅಧಿಕಾರಾರೂಢ ಪಕ್ಷಕ್ಕೆ ತಮ್ಮ ಬಜೆಟ್‌ನಲ್ಲಿ ನಾವು ದೇಶದಲ್ಲಿ ಬೇಕಾದಷ್ಟು ಅಭಿವೃದ್ಧಿಯ ಕೆಲಸಗಳನ್ನು ಮಾಡುತ್ತೇವೆ. ಆದರಿಂದ ಜನತೆಗೆ ಸುಖಸಮೃದ್ಧಿಗಳು ಸಿಕ್ಕುತ್ತವೆ ಎನ್ನುವ ಸಮಾಧಾನವಿರುತ್ತದೆ. ಇವರು ಸಮಾಜದ ದೃಷ್ಟಿಕೋನವನ್ನು ಬಹಿರಂಗವಾಗಿ ಖಂಡನೆ ಮಾಡಿದ್ದಾರೆ.ನಮಗೆ ಸುಖ ಸಿಕ್ಕುವ ಸನ್ನಿವೇಶವಿಲ್ಲ ದೇಶದಲ್ಲಿ ಸಾಕಷ್ಟು ಅಭಿವೃದ್ಧಿಯಾಗುವ ಸನ್ನಿವೇಶವಿಲ್ಲ ಎಂದು ಜನಸಾಮಾನ್ಯರೂ ಖಂಡನೆ ಮಾಡಿದ್ದಾರೆ. ಇದರ ಬಗ್ಗೆ ಚರ್ಚೆ ಮಾತ್ರ ನಡೆದಿದೆ. ಇದರಲ್ಲಿ ಒಂದು ಮಾತು ಸ್ಪಷ್ಟವಾಗುತ್ತದೆ. ಜನಸಾಮಾನ್ಯರ ಅಪೇಕ್ಷೆಯು ಇದರಲ್ಲಿ ಒಡಮೂಡಲಿಕ್ಕೆ ಸಾಧ್ಯವಾಗಿಲ್ಲ.

ಇವತ್ತು ಮದ್ಯಪಾನ ಪ್ರತಿಬಂಧದ ಪ್ರಶ್ನೆಯನ್ನು ತೆಗೆದುಕೊಂಡಾಗ ಇದರ ನೀತಿನಿಯಮ ಏನೇ ಇದ್ದರೂ ಕೂಡ ಈ ವಿಷಯದಲ್ಲಿ ಸರಕಾರ ತನ್ನ ಸೋಲನ್ನು ಒಪ್ಪಿಕೊಂಡಿದೆ. ಸರಕಾರವು ಈ ಪಾನಪ್ರತಿಬಂಧವನ್ನು ಜಾರಿಗೆ ತರುವುದು ಸಾಧ್ಯವಿಲ್ಲ ಈ ಅಭಿಪ್ರಾಯವನ್ನು ನಾನು ಅನುಮೋದಿಸುತ್ತೇನೆ.

ಜನತೆಯು ಮದ್ಯಪಾನ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಕುಡಿಯುತ್ತಾರೆ ಮತ್ತು ಕಾಯ್ದೆಯ ಚಿತ್ರಹಿಂಸೆಗೆ ಸಿಕ್ಕಿ ಕಷ್ಟಪಡುತ್ತಾರೆ. ಕುಡಿಯುವ ಚಟವಿದ್ದವರು ಏನಾದರೂ ಮಾಡಿ ಕುಡಿಯುತ್ತಾರೆ ಮತ್ತು ಆರೋಗ್ಯವನ್ನೂ ಕೂಡ ಹಾಳುಮಾಡಿಕೊಳ್ಳುವುದನ್ನು ನೋಡುತ್ತೇವೆ. ಇಂಥ ಪರಿಸ್ಥಿತಿ ಇರುವುದರಿಂದ ಮದ್ಯಪಾನ ನಿರೋಧವನ್ನು ಸ್ಥಗಿತಗೊಳಿಸಿದರೆ ಅದರಲ್ಲಿ ತಪ್ಪೇನೂ ಇಲ್ಲ.

ಹೆಂಡದ ಅಂಗಡಿಗೆ ಲೈಸೆನ್ಸ್ ಕೊಡುವ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗುತ್ತದೆ. ಗ್ರಾಮಗಳಲ್ಲಿ [illegible] ಹೆಂಡದ ಅಂಗಡಿಗಳು ಇರುತ್ತವೆ. ಇದರಿಂದ [illegible] ಮಕ್ಕಳ ಮನಸ್ಸಿನ ಮೇಲೆ ಬಹಳ [illegible] [illegible] [illegible] ಗಮನಿಸಬೇಕು. ಕುಡಿಯುವುದು ಸಾಕಷ್ಟು [illegible]. ಕುಡಿಯ [illegible] ಬಹಳ ಭಾರವಾಗುವಂತೆ ಮಾಡಿದರೆ ಅಡ್ಡಿಯಿಲ್ಲ. ಕುಡಿಯುವುದು [illegible] ಪ್ರಚಾರವಾಗಬಾರದು, ಅಲ್ಲದೇ ವಿಶೇಷವಾಗಿ ಕುಡಿಯುವುದು ಶಾಲಾ ಮಕ್ಕಳ ಕಣ್ಣಿಗೆ ಬೀಳಬಾರದು. ಇದನ್ನು ಸರಕಾರ ಗಮನದಲ್ಲಿಟ್ಟುಕೊಂಡಿಲ್ಲ ಎಂದು ಕಾಣುತ್ತದೆ. ಅನೇಕ ಸಂಗತಿಗಳ ವಿಚಾರಮಾಡುವಾಗ್ಗೆ ಕಾನೂನುಗಳ ಹಿನ್ನೆಲೆ ಏನಿದೆ ಎಂಬ ವಿಚಾರಮಾಡುತ್ತಿಲ್ಲ ಎಂಬ ವಿಷಯ ಬಜೆಟ್ ಚರ್ಚೆಯ ಕಾಲಕ್ಕೆ ಬಂದಿದೆ.

ಕಾನೂನು ಮಾಡುವವರು ನಾವು. ನಾವು ಕಾನೂನನ್ನು ಅನುಸರಿಸಬೇಕಾಗುತ್ತದೆ. ಆಹಾರ ಸಮಸ್ಯೆ ವಿಷಯವಾದರೂ ಎಲ್ಲರ ಮುಂದೆ ಇದೆ. ಸಕ್ಕರೆಯ ಅಭಾವ ಉಂಟಾಗಿದೆ, ಆದರೆ ಬ್ಲ್ಯಾಕ್ ಮಾರ್ಕೆಟ್‌ನಲ್ಲಿ ಬೇಕಾದಷ್ಟು ಸಕ್ಕರೆ ಹೇಗೆ ಸಿಕ್ಕುತ್ತದೆ ? ಎಲ್ಲಿಂದ ಬರುತ್ತದೆ ಎಂಬ ವಿಷಯವನ್ನು ಬಜೆಟ್ ಚರ್ಚೆಯಲ್ಲಿ ಪ್ರಸ್ತಾಪ ಮಾಡಲಾಯಿತು. ಇದರಿಂದ ಏನು ಕಂಡು ಬರುತ್ತದೆ ಅಂದರೆ, ಇಂಥ ವಿಚಾರದಲ್ಲಿ ಸರಕಾರದ ಹಿಡಿತ ಸರಿಯಾಗಿಲ್ಲ, ಇದುವರೆಗೆ ನಡೆದ ಬಜೆಟ್ ಚರ್ಚೆಯ ಪರಿಣಾಮ ಎಲ್ಲರ ಮನಸ್ಸಿನ ಮೇಲೆ ಭಾರೀ ಪೆಟ್ಟು ಕೊಟ್ಟದೆ ಎಂಬುದು ಕಂಡುಬರುತ್ತದೆ. ಈಗಾಗಲೇ ಬೆಂಗಳೂರಿನಲ್ಲಿ 26ನೇ ತಾರೀಖಿನಂದು ನಡೆದ ಚಳುವಳಿ, ಹುಬ್ಬಳ್ಳಿಯಲ್ಲಿ ನಡೆದ ಸಾಮೂಹಿಕ ಉಪವಾಸ ಇದು ಜನತೆಯ ಮನಸ್ಸಿನ ಮೇಲೆ ಎಷ್ಟು ದುಷ್ಪರಿಣಾಮ ಉಂಟಾಗಿದೆ ಎಂಬುದನ್ನು ತೋರಿಸುತ್ತದೆ. ಈ ವರ್ಷ ಜನರು ಸುಖದಿಂದ ಜೀವನ ಮಾಡುವ ಹಾಗೆ ಕಾಣುವುದಿಲ್ಲ. ಈ ಬಜೆಟ್ ಕೂಡ ಅದಕ್ಕೊಂದು ನಿದರ್ಶನ. ಒಂದು ಸಾಮಾನ್ಯ ಆಫೀಸಿನಲ್ಲಿ ಲೆಕ್ಕ ಪತ್ರ ಇಟ್ಟುಕೊಂಡು ಆದಾಯವೆಚ್ಚ ತೋರಿಸುವ ಹಾಗೆ ಈ ಬಜೆಟ್ಟು ಇದೆ.

ಜನತೆಯ ಅಪೇಕ್ಷಿತ ಪ್ರಗತಿ ಸಾಧಿಸತಕ್ಕಂಥದ್ದು ಆಗಿಲ್ಲ. ಆದುದರಿಂದ ನಮ್ಮ ರಾಜ್ಯ ಪ್ರಗತಿಪಥದಲ್ಲಿ [illegible] ಎಂಬುದು ಸ್ಪಷ್ಟವಾಗುತ್ತದೆ. ಹುಬ್ಬಳ್ಳಿಯಲ್ಲಿ ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಎಂದು ಇದೆ ಅಲ್ಲಿಯ ಕಾರ್ಖಾನೆಯಲ್ಲಿ ತಂತಿಗಳ ಉತ್ಪಾದನೆಯಾಗುತ್ತದೆ. ಅಲ್ಲಿಯ ಕಾರಖಾನೆಗೆ ಒದಗಬೇಕಾದ ಸಾಮಗ್ರಿಯ ಕೊರತೆಯುಂಟಾಗಿದೆ ರಾ ಮಟೀರಿಯಲ್, ಕಬ್ಬಿಣ ಸರಕು ಸಿಕ್ಕದೇ ಇದ್ದ ಕಾರಣ ಕಾರ್ಖಾನೆ ಬಂದಾಗುವ ಸ್ಥಿತಿಗೆ ಬಂದಿದೆ. [illegible] ಪ್ರೋತ್ಸಾಹ ದೊರೆಯದೇ ಇರುವುದರಿಂದ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಕಾರ್ಖಾನೆ ನಡೆಸುವುದು ಕಷ್ಟವಾಗಿದೆ. ಇಂಡಸ್ಟ್ರಿಯಲ್ ಎಸ್ಟೇಟ್ ಎಂಬುದು ಒಂದು [illegible] ಆಗಿದೆ. ಕೇಂದ್ರ ಸರಕಾರದಿಂದ [illegible] ಅದಕ್ಕೆ [illegible] ಇದರಿಂದ [illegible] ಇದಕ್ಕೆ [illegible] ಕೊಡಬೇಕು

ಇನ್ನು [illegible] ವಿಷಯಗಳ [illegible] [illegible] [illegible] 200 [illegible] [illegible] [illegible] ಆಧಾರವಿಲ್ಲ [illegible] [illegible] ಬೇಕಾಗಿದೆಯೋ [illegible] ಬೆರೆಗೆ ಮುದ್ದು ಕೊಟ್ಟು ಸ್ಥಳ [illegible] ತಾಲೂಕ [illegible] ಸ್ಥಳ ಸಿಕ್ಕಿಲ್ಲ [illegible] ಕಟ್ಟಡ ಕಟ್ಟಬೇಕು ಎನ್ನುವುದರ ಸಲುವಾಗಿ ಕಳೆದ 8 - 10 ವರ್ಷಗಳಿಂದ [illegible] 30 [illegible] ಅವರ ಸಲುವಾಗಿ [illegible] ಸ್ಥಳ ಸಿಕ್ಕಿಲ್ಲ [illegible] ಮಂತ್ರಿಗಳು ಬಂದಾಗ ಅವರನ್ನು ಕರೆದುಕೊಂಡು ಹೋಗಿ [illegible] ತೋರಿಸಿದೆವು. [illegible] ಇಂಥ ಪರಿಸ್ಥಿತಿ ಅಲ್ಲಿ ಉಂಟಾಗಿದೆ. [illegible] ಅಲ್ಲಿ [illegible] ಎನ್ನುವ ಪರಿಸ್ಥಿತಿಯಾಗಿದೆ.

ಅನೇಕ [illegible] ನಾವು ವಿಚಾರಮಾಡಿ ನೋಡಿದಾಗ, ನಾವು [illegible] ಉಪಯೋಗವಿಲ್ಲದೇ ನಮ್ಮ ಯೋಜನೆಗಳು ಹಾಳಾಗುತ್ತಿವೆ ಎನ್ನುವಂಥದನ್ನು ನಾವು [illegible]. ಹುಬ್ಬಳ್ಳಿಯಲ್ಲಿರುವ ಕೆ. ಎಂ. ಸಿ ಆಸ್ಪತ್ರೆಗೆ ಕ್ಯಾನ್ಸರ್ ರೋಗದ [illegible] ಸಲುವಾಗಿ ಒಂದು [illegible] ಬಂದಿದೆ. ಅದಕ್ಕೆ ಬೇಕಾದ ಲೆಡ್ ಹೌಸ ಕಟ್ಟಿದರೆ ಆ ರೋಗದ ಚಿಕಿತ್ಸೆಗೆ [illegible] ಯಾರೂ ಬರಬೇಕಾಗಿಲ್ಲ. ಅಲ್ಲಿ ಒಂದು ಲೆಡ್ ಹೌಸ್ ಕಟ್ಟದೇ ಇರುವುದರಿಂದ ಸುತ್ತಮುತ್ತ [illegible] ಪ್ರದೇಶಗಳಿಂದ ಬರುವ ಜನರಿಗೆ ಕ್ಯಾನ್ಸರ್ ರೋಗದ ಚಿಕಿತ್ಸೆ ದೊರೆಯುವುದಕ್ಕೆ ಅವಕಾಶವಿಲ್ಲವಾಗಿದೆ. ಅದಕ್ಕೆ ಬೇಕಾಗುವ ಹಣದ ವ್ಯವಸ್ಥೆಯಾಗಿಲ್ಲ ಎನ್ನುವ ಸಲುವಾಗಿ ಆ

ಯಂತ್ರ ಸುಮ್ಮನೇ ಬಿದ್ದಿದೆ. ಅದಕ್ಕೆ ನೇಮಕವಾಗಿರುವ ಸಿಬ್ಬಂದಿ ಬೇರೆ ಕೆಲಸ ಮಾಡುತ್ತಿದೆ. ಯಂತ್ರ ನಿರುಪಯೋಗವಿದೆ ಎನ್ನುವಂಥ ಮಾತನ್ನು ಸ್ಪಷ್ಟವಾಗಿ ಅಧ್ಯಕ್ಷರ ಮುಖಾಂತರ ಸರಕಾರದ ಗಮನಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇನೆ.

ಹಿಂದಿನ ಅನೇಕ ಯೋಜನೆಗಳ ಪರಿಪಾಠ ಈ ರೀತಿಯಾಗಿ ನಡೆದಿದೆ ಎನ್ನುವುದನ್ನು ಡಿಸ್ಟ್ರಿಕ್ಟ್ ಡೆವಲಪ್ ಮೆಂಟ್ ಕೌನ್ಸಿಲ್ ಮೀಟಿಂಗಗೆ ಹೋದಾಗ ಸ್ವಲ್ಪವಾಗಿ ಮನವರಿಕೆ ಮಾಡಿಕೊಟ್ಟೆ. ನಮಗೆ ಬೇಕಾದಷ್ಟು ದುಡ್ಡು ಶ್ರೀ ರಾಮಕೃಷ್ಣ ಹೆಗಡೆಯವರು ತಂದು ಕೊಡಬಹುದು ಎಂದು ಇಟ್ಟುಕೊಳ್ಳಿ ದುಡ್ಡು ನಮಗೆ ಸಿಕ್ಕಬಹುದು, ಆದರೆ ಅದನ್ನು ಸರಿಯಾಗಿ ಉಪಯೋಗ ಮಾಡಿಕೊಂಡು ಮುಂದೆ ನಡೆಯತಕ್ಕ ಯಂತ್ರವೇನಿದೆ ? ಅದು ಕೆಟ್ಟು ಹೋಗುವುದರಿಂದ ಯೋಜನೆಗಳು ಸರಿಯಾಗಿ ನಡೆಯುವುದಿಲ್ಲ, ಯೋಜನೆಗಳನ್ನು ನಾವು ಇಲ್ಲಿ ಏನು ಮಾಡುತ್ತೇವೆ ಅವು ಕೆಳಗಿನ ಜನರ ಬೇಡಿಕೆ ಏನಿರುತ್ತವೆಯೋ ಅವುಗಳಿಗೆ ಸರಿಯಾಗಿ ಇರುವುದಿಲ್ಲ. ಜನರ ಬೇಡಿಕೆಗಳು ಒಂದು ಇದ್ದರೆ ನಾವು ಯೋಜನೆಗಳನ್ನು ತಯಾರು ಮಾಡುವಾಗ ಬೇರೆ ದೃಷ್ಟಿಯಿಂದ ಮಾಡಿರುತ್ತೇವೆ. ಸಾಮಾನ್ಯವಾಗಿ ಜನರ ಬೇಡಿಕೆ ಇಂಥ ಕಟ್ಟಡ ಆಗಬೇಕು ನಮ್ಮ ಊರಿಗೆ ಆಸ್ಪತ್ರೆ ಬೇಕು ಎಂದರೆ ಅದರ ಬಗ್ಗೆ ನಮ್ಮ ಆಯವ್ಯಯ ಪತ್ರಿಕೆಯಲ್ಲಿ ಏನೂ ವ್ಯವಸ್ಥೆಯಿರುವುದಿಲ್ಲ. ನಮ್ಮ ಯೋಜನೆಯ ಪ್ರಕಾರ ಈ ಸಲ ಇಷ್ಟು ಭಾವಿ ತೆಗೆಬೇಕು ಎಂದು ತೀರ್ಮಾನ ಮಾಡಿರುತ್ತೇವೆ. ಈ ಸಲ ನಮ್ಮ ತಾಲೂಕಿನಲ್ಲಿ ಭಾವಿಗಳ ಅವಶ್ಯಕತೆಯಿಲ್ಲ ಎನ್ನುವಂಥ ಮಾತನ್ನು ಮಂತ್ರಿಗಳ ಗಮನಕ್ಕೆ ತರಲಾಯಿತು. ಸಣ್ಣ ಸಣ್ಣ ರೈತರಿಗೆ ಸಹಾಯ ಕೊಡುವ ವ್ಯವಸ್ಥೆ ಮಾಡಿದರೆ ಅವರು ತಮಗೆ ಬೇಕಾದ ವ್ಯವಸಾಯದ ಅಭಿವೃದ್ಧಿಯನ್ನು ಮಾಡಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ ಎನ್ನುವಂಥ ಮಾತನ್ನು ಕೆಲವರು ಹೇಳಿದರು. ಆದರೆ ಮಂತ್ರಿಗಳು ತಮ್ಮ ಮನಸ್ಸಿನಲ್ಲಿದ್ದಂತೆ ತಮ್ಮ ಕಾರ್ಯಕ್ರಮದ ಪ್ರಕಾರ ಮಾಡಿದರು. ಮುಂದಿನ ಸಲ ಬಂದಾಗ ಇಷ್ಟು ಭಾವಿ ಆಗಿವೆ ಎಂದು ಹೇಳುತ್ತಾರೆ. ಇದರಿಂದ ನಮ್ಮ ಜನರ ಪ್ರವೃತ್ತಿ ಕೆಡುವಂತೆ ಆಗುತ್ತದೆ. ನಮ್ಮ ಯೋಜನೆಗಳ ಬಗ್ಗೆ ಆದರ ಪ್ರಗತಿಯ ಬಗ್ಗೆ, ನಮ್ಮ ದೇಶವನ್ನು ಮುಂದುವರಿಸಬೇಕೆನ್ನುವುದರ ಬಗ್ಗೆ ಸದಾ ಸಿದ್ಧರಾಗಿ ಕೆಲಸ ಮಾಡುವಂಥ ಪ್ರವೃತ್ತಿಯವರಾಗಿದ್ದಾರೆ ನಮ್ಮ ಜನ. ಆದರೆ ಅವರ ಮನಸ್ಸಿನಲ್ಲಿರುವಂಥ ಬೇಡಿಕೆಯನ್ನು ಅವರ ಮನಸ್ಸಿನಲ್ಲಿರತಕ್ಕ ಯೋಜನೆಗಳನ್ನು ನಾವು ಅರ್ಥ ಮಾಡಿಕೊಂಡಿಲ್ಲ. ಅದಕ್ಕೆ ಬೇಕಾಗುವಂಥ ಲಕ್ಷ್ಯ, ತಯಾರಿ ನಮ್ಮಲ್ಲಿಲ್ಲ. ಈ ಎರಡಕ್ಕೂ ಹೊಂದಾಣಿಕೆಯಾಗಬೇಕು. ಆ ಹೊಂದಾಣಿಕೆ ಆಗದ ಹೊರತು ಏನೇ ಯತ್ನಮಾಡಿದರೂ ಕೂಡ ಪ್ರಗತಿಯಾಗಲಾರದು ಎಂದು ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ.

ಸ್ಥಳೀಯ ಸಂಸ್ಥೆ ಚುನಾವಣೆಗೆ ಆಗ್ರಹ

3ನೇ ಜುಲೈ 1967

ಜುಲೈ 3ರಂದು ಅಭಿವೃದ್ಧಿ ಹಾಗೂ ಸಹಕಾರ ಸಚಿವ ಶ್ರೀ ಪಿ.ಎಂ.ನಾಡಗೌಡರು ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸುತ್ತ ಆಪತ್ ಸ್ಥಿತಿ ಜಾರಿಯ ಅಂತ್ಯದ ವರೆಗೆ ಮೈಸೂರು ಸ್ಥಳೀಯ ಸಂಸ್ಥೆಗಳ (ಚುನಾವಣೆ ಮುಂದೂಡಿಕೆ ಹಾಗೂ ಸರಕಾರಿ ಪ್ರಶಾಸನ ಮುಂದುವರಿಕೆ) ಕಾಯ್ದೆ 1965ರ ಮೇರೆಗೆ ರಾಜ್ಯದಲ್ಲಿಯ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮುಂದೂಡಲಾಗಿದೆಂದು ತಿಳಿಸಿ ಕೇಂದ್ರ ಸರಕಾರದಿಂದ ಸದ್ಯದ ಆಪತ್‌ಸ್ಥಿತಿ ಕ್ರಮಗಳು ಹಿಂತೆಗೆದುಕೊಳ್ಳಲ್ಪಟ್ಟ ಬಳಿಕವೇ ತಾಲೂಕ ಅಭಿವೃದ್ಧಿ ಮಂಡಳಿಗಳಿಗೆ ಚುನಾವಣೆ ನಡೆಸಲಾಗುವುದೆಂದು ಘೋಷಿಸಿದರು.

ರಾಜಕೀಯದ ಬಹು ಮುಖ್ಯ ಕೆಲಸಗಳನ್ನು ನಡೆಸತಕ್ಕ ಪಾರ್ಲಿಮೆಂಟಿನ ಚುನಾವಣೆಗಳನ್ನು ಮಾಡಿರುವಾಗ ತುರ್ತು ಪರಿಸ್ಥಿತಿಯ ಶಾಸನವು ತಾಲೂಕ ಬೋರ್ಡುಗಳ ಚುನಾವಣೆಗೆಯೇ ಏಕೆ ಅಡಚಣೆಯಾಗಬೇಕು? ಆಪತ್‌ಸ್ಥಿತಿ ಜಾರಿಯನ್ನು ಜೂನ 30ರೊಳಗಾಗಿ ತೆಗೆದು ಹಾಕುವುದಾಗಿ ಹೇಳಲಾಗಿತ್ತು. ಆ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ? ಎಂಬ ಪ್ರಶ್ನೆಗಳಿಗೆ ಸಚಿವರು ಆಪತ್ ಸ್ಥಿತಿಯನ್ನು ಮುಂದುವರಿಸಲಾದುದನ್ನು ಕೇಂದ್ರ ಸರಕಾರದ ಆದೇಶದಂತೆಯೇ ಚುನಾವಣೆ ನಡೆಸಲಾಗುತ್ತಿಲ್ಲವೆಂದು ವಿವರಿಸಿದರು. ಆಪತ್ ಸ್ಥಿತಿ ಜಾರಿಯಲ್ಲಿರುವ ವರೆಗೂ ತಾಲೂಕ ಬೋರ್ಡ ಚುನಾವಣೆಗಳನ್ನು ನಡೆಸದಂತೆ ಕೇಂದ್ರದಿಂದ ನೇರವಾಗಿ ಆದೇಶ ಬಂದಿದೆಯೇ? ಅಥವಾ ನಮ್ಮ ಸರಕಾರವೇ ಚುನಾವಣೆಗಳನ್ನು ಮುಂದೂಡುತ್ತ ನಡೆದಿದ್ದಾರೆಯೇ ? ಎಂಬುವುದನ್ನು ಶ್ರೀ ಎಸ್.ಶಿವಪ್ಪ ಅರಿಯ ಬಯಸಿದ್ದಕ್ಕೆ ಸಚಿವರು ಈ ಕಾಯ್ದೆ ಆಗುವ ಮುನ್ನ ಇವುಗಳನ್ನು 4 ವರ್ಷ ಮುಂದೂಡಲಾಗಿತ್ತು. ಈ ಶಾಸನವಾದ ನಂತರ 2 ವರ್ಷ ಕಾಲ ವಿಸ್ತರಿಸಲಾಯಿತು. ಈಗ ತುರ್ತು ಪರಿಸ್ಥಿತಿ ಇರುವುದರಿಂದ ಇದು ಮುಗಿಯುವ ತನಕ ಮುಂದೂಡಲಾಗಿದೆ ಎಂದು ತಿಳಿಸಿದರು. ಕಾಯ್ದೆಗೆ ತಿದ್ದುಪಡಿಯಾಗುವ ತನಕ ಆಪತ್ ಸ್ಥಿತಿ ಮುಂದುವರಿಯುವುದೆಂದು ಸಭಾಧ್ಯಕ್ಷರು ನುಡಿದರು.

ಈ ಕಾನೂನು ಕೇಂದ್ರದ್ದೋ ಅಥವಾ ರಾಜ್ಯಕ್ಕೆ ಮಾತ್ರ ಅನ್ವಯಿಸತಕ್ಕದ್ದೋ ಎಂದು ಕೇಳಿದ್ದಕ್ಕೆ ಸಚಿವರು ಅಖಂಡ ಹಿಂದು ಸ್ಥಾನಕ್ಕೆ ಅನ್ವಯಿಸುವ ಕಾನೂನು ಇದು ಎಂದರು.

ಆಪತ್ ಸ್ಥಿತಿ ಇರುವುದರಿಂದ ತಾಲೂಕ ಬೋರ್ಡ ಚುನಾವಣೆ ಮಾಡುವುದಿಲ್ಲ ಎಂದು ಹೇಳುತ್ತೀರಿ ಪಂಚಾಯತಿ ಚುನಾವಣೆ ಮಾಡುವುದಿಲ್ಲ ಎಂದು ಹೇಳುತ್ತೀರಿ ಸಂಚಾಯತಿ ಚುನಾವಣೆ ಮಾಡುತ್ತೇವೆ ಎಂದು ಪತ್ರಿಕೆಗಳಲ್ಲಿ ಹೇಳಿರುವುದನ್ನು ಕೇಳುತ್ತೇವೆ ಇದು ನಿಜವೆ? ಎಂದು ಇನ್ನೊಬ್ಬ ಸದಸ್ಯರು ಪ್ರಶ್ನಿಸಿದರು.

ಸಂಸತ್ ಹಾಗೂ ವಿಧಾನಸಭೆ ಸಾರ್ವತ್ರಿಕ ಚುನಾವಣೆಗಳು ಮುಗಿದಿವೆ. ಗ್ರಾಮ ಪಂಚಾಯತಿ ಚುನಾವಣೆಗಳನ್ನು ಈಗ ನಡೆಸದಿರುವುದಕ್ಕೆ ಕಾರಣವೇನು? ಎಂದು ಎಸ್.ಎಸ್.ಶೆಟ್ಟರ ಪ್ರಶ್ನಿಸಿದ್ದಕ್ಕೆ ಸಚಿವರು ಆಪತ್ ಸ್ಥಿತಿ ಕೊನೆಗೊಳ್ಳುವ ತನಕ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮುಂದಕ್ಕೆ ಹಾಕಲಾಗಿದೆ. ಕೇಂದ್ರ ಸರಕಾರ ಆಪತ್ ಸ್ಥಿತಿಕ್ರಮಗಳನ್ನು ಹಿಂತೆಗೆದುಕೊಂಡ ನಂತರ ಈ ಚುನಾವಣೆಗಳನ್ನು ನಡೆಸಲು ಕ್ರಮ ತೆಗೆದುಕೊಳ್ಳಲಾಗುವುದೆಂದರು.

ಎಚ್.ಎಸ್.ಕೆಟ್ಟರ : ಮಾನ್ಯ ಮಂತ್ರಿಗಳು 1961ನೇ ಇಸವಿಯ ಮೈಸೂರ ರಾಜ್ಯದ ಸ್ಥಳೀಯ ಸಂಸ್ಥೆಗಳ ಬಗ್ಗೆ ಒಂದು ಅಮೆಂಡಮೆಂಟ ತಂದು ಇಲೆಕ್ಷನ್ ಮಾಡಬೇಕೆಂದು ಇಟ್ಟುಕೊಂಡಿದ್ದೀರಾ?

ಪಿ.ಎಂ.ನಾಡಗೌಡ : ಪಂಚಾಯತಿಗಳ ಬಗ್ಗೆ ಹೇಳುವುದಾದರೆ ಈಗಾಗಲೇ ಸರಕಾರ ಜನೇವರಿ ಫೆಬ್ರುವರಿಯಲ್ಲಿ ಇಲೆಕ್ಷನ್ ಮಾಡಬೇಕೆಂದು ನಿರ್ಧರಿಸಿದೆ. ಆದನ್ನು ಬದಲಾವಣೆ ಮಾಡುವ ಸಲುವಾಗಿ ಠರಾವು ಆಗಿಲ್ಲ. ಇನ್ನೊಂದು [illegible] ಈ ಮನೆಯ ಮುಂದೆ ಒಂದು ಪಂಚಾಯತ [illegible] ಇದೆ ಕೊಂಡಜ್ಜಿ ರಿಪೋರ್ಟ [illegible] ಮೇಲೆ ತಾಲೂಕ ಬೋರ್ಡ ಇಲೆಕ್ಷನ್ ಮಾಡಬೇಕಾಗುತ್ತದೆ.

[illegible] ಒಂದು ಪ್ರಶ್ನೆ ಇಲ್ಲಿ ಕೇಳಲು ಬಯಸುತ್ತೇನೆ. [illegible] ತಾಲೂಕ ಬೋರ್ಡ ಇಲೆಕ್ಷನ್ [illegible] ಎಂದು [illegible] ಇಲೆಕ್ಷನ್ ಮಾಡುವುದಕ್ಕೆ ಸಾಧ್ಯವಾಗಿಲ್ಲ [illegible] ಎಂದು ಸ್ಪಷ್ಟವಾಗಿ ಹೇಳಿದರು. [illegible] ಮತ್ತು ಪಂಚಾಯತಿ ಇಲೆಕ್ಷನ್ [illegible] ಈ ಮನೆಯ [illegible] ಕಾನೂನು ಆಗಿದೆಯೋ [illegible] ಕಾನೂನು ಆಗಿದೆಯೋ?

[illegible] : ಈ ಮನೆಯಿಂದ ಕಾನೂನು ಆಗಿದೆ.

[illegible] : ಕೊಂಡಜ್ಜಿ ಬಸಪ್ಪ ಕಮಿಟಿ ರಿಪೋರ್ಟ [illegible] ಮೇಲೆ [illegible] ಮಾಡುತ್ತೇವೆ. [illegible] ಎಂದು ಹೇಳುತ್ತೀರಿ. [illegible] ಅಲ್ಲವೇ? [illegible]

[illegible] : ಪಂಚಾಯತಿ [illegible]

[illegible] : ಆಪತ್ ಸ್ಥಿತಿ [illegible] ರಾಜ್ಯಗಳಿಗೂ ಅನ್ವಯವಾಗುತ್ತಿದೆಯೋ ಎಂಬುದನ್ನು ತಿಳಿಯ ಬಯಸುತ್ತೇನೆ.

ಪಿ.ಎಂ.ನಾಡಗೌಡ : ಎಲ್ಲಾ ರಾಜ್ಯಗಳಿಗೂ ಸಂಬಂಧ ಇದೆ.

[illegible] ಗೋಪಾಲಗೌಡ : ತಾಲೂಕ ಮಂಡಳಿ ಹಾಗೂ ಪಂಚಾಯತಿಗಳ [illegible] ಆಗಿದೆಯೋ ಅಥವಾ ಅದಕ್ಕೆ ಏನಾದರೂ ಕಾಯಿದೆ ಇದೆಯೋ ಎಂಬುದನ್ನು ಸ್ಪಷ್ಟಪಡಿಸಲಿಲ್ಲ.

[illegible] ನಾಡಗೌಡ : ಆಪತ್ ಸ್ಥಿತಿ ಕೊನೆಗೊಳ್ಳುವ ತನಕ ಮುಂದೂಡಿದ್ದಕ್ಕೆ ಕಾಯ್ದೆಯಿದೆಂದು ಈ ಮೊದಲೇ [illegible]

ಶ್ರೀ ಎಸ್.ಗೋಪಾಲಗೌಡ : ಈಗಾಗಲೇ ಚುನಾವಣೆಗಳು ನಡೆಯಬೇಕಾಗಿತ್ತು. ಎರಡು ವರ್ಷ ಮುಗಿದುಹೋಗಿವೆ. ತಮಗೆ ಸಾಧ್ಯವಿಲ್ಲದೇ ಹೋದರೆ ಪಂಚಾಯತಿ ಮತ್ತು ತಾಲೂಕ ಬೋರ್ಡುಗಳನ್ನು ರದ್ದುಪಡಿಸುವುದಕ್ಕೆ ಸರ್ಕಾರದವರು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ?

ಪಿ.ಎಂ.ನಾಡಗೌಡ : ಈ ಸೂಚನೆ ಅಷ್ಟು ಉಚಿತವಲ್ಲ.

ಎಸ್.ಶಿವಪ್ಪ : ತಾಲೂಕ ಬೋರ್ಡು ಕಾನೂನು ಪ್ರಕಾರ 4 ವರ್ಷ ಇರುತ್ತವೆ. ಈಗ ನಾಲ್ಕು ವರ್ಷ ಮುಗಿದು ಹೋಗಿವೆ. ಈಗ ಎಂಟು ವರ್ಷಗಳಾಗುತ್ತಿವೆ. ಇದು ಯಾವ ಪ್ರಜಾಪ್ರಭುತ್ವದ ನಿಯಮ ಎಂಬುದನ್ನು ದಯವಿಟ್ಟು ಸಭೆಗೆ ತಿಳಿಸುತ್ತೀರಾ? ದೇಶದಲ್ಲಿ ಆಪತ್ ಸ್ಥಿತಿ ಜಾರಿಯಿದೆಂದು ಹೇಳುತ್ತೀರಾ ಮಹಾಚುನಾವಣೆಗಳನ್ನು ನಡೆಸಿದ ಮೇಲೆ ಇದನ್ನು ಏತಕ್ಕೆ ನಡಸಬಾರದು?

ಪಿ.ಎಂ.ನಾಡಗೌಡ : ನಾಲ್ಕು ವರ್ಷಗಳೆಂದು ಹೇಳಿಲ್ಲಾ. ಇದು ಸರ್ವ ಸಾಮಾನ್ಯವಾದ ಮಾತು. ಮೊದಲು ಎರಡು ವರ್ಷ ಮುಂದೆ ಹಾಕಿತು. ಅಷ್ಟರಲ್ಲಿ ಒಂದು ಹೊಸ ಕಾಯ್ದೆ ಬಂದು ಒಂದು ವರ್ಷ ಮತ್ತೆ ಮುಂದೆ ಹಾಕಿತು ಆಪತ್ ಸ್ಥಿತಿ ಜಾರಿಗೆ ಬಂದ ಮೇಲೆ 7 ವರ್ಷ ಮುಂದೆ ಹೋದಂತೆ ಆಗಿದೆ. ಮುಂದೆ ಚುನಾವಣೆ ನಡೆಯುವವರೆಗೆ ಹಿಂದಿನ ಸ್ಥಾನಿಕ ಸಂಸ್ಥೆಗಳೇ ಇರಬೇಕೆಂದು ಅಭಿಪ್ರಾಯವಾಗಿದೆ.

ಕೆ.ಎಸ್.ನಂಜೇಗೌಡ : ಮಾನ್ಯ ಮಂತ್ರಿಗಳು ಪಂಚಾಯ್ತಿ ಮತ್ತು ತಾಲೂಕ ಬೋರ್ಡ ಚುನಾವಣೆಗಳನ್ನು ಜನೇವರಿ, ಪೆಬ್ರುವರಿ ತಿಂಗಳಲ್ಲಿ ನಡೆಸುವಂತೆ ಸೂಚನೆ ಕೊಟ್ಟಿದ್ದೇವೆಂದು ಹೇಳಿದರು. ಇದು ಅಲ್ಲದೇ ಮತ್ತೇನಾದರೂ ವಿಶೇಷ ಕಾರಣಗಳಿವೆಯೇ?

ಪಿ.ಎಂ.ನಾಡಗೌಡ : ಈಗಲೇ ಉತ್ತರ ಹೇಳಿದ್ದೇನೆ.

ಎಸ್.ಗೋಪಾಲಗೌಡ : ಅವರು ಉತ್ತರ ಹೇಳಿದ್ದೇನೆಂದರೆ ನೀವು ಮುಂದಿನ ಪ್ರಶ್ನೆ ಎಂದು ಹೇಳುತ್ತೀರಿ. ಅವರು ಏನು ಉತ್ತರ ಹೇಳಿದ್ದಾರೆ ?

ಅಧ್ಯಕರು : ಅವರು ಏನು ಉತ್ತರ ಕೊಟ್ಟಿದ್ದಾರೆಂದು ನನ್ನನ್ನು ಕೇಳುತ್ತೀರಾ ? ನಾನು ಉತ್ತರ ಕೊಟ್ಟಿಲ್ಲ. ಅವರು ಉತ್ತರ [illegible] ಮತ್ತೇನನ್ನೂ ಹೆಚ್ಚಿಗೆ ಹೇಳಲು ಒತ್ತಾಯಿಸಲಾರೆ.

ಎಸ್.[illegible]ಗೌಡ ; ಅವರು ಏನು ಉತ್ತರ ಕೊಟ್ಟಿದ್ದಾರೆಂಬುದನ್ನು ನಾನೇ ಬೇಕಾದರೆ ಹೇಳುತ್ತೇನೆ. [illegible] ಹೇಳಿದರೋ ಅದನ್ನೇ ಮರ್ಯಾದೆಯಿಂದ ಮತ್ತೆ ಹೇಳಬೇಕು. ನಾನು ಹೀಗೆ ಹೇಳಿದ್ದೇನೆ. ಇದು ಉತ್ತರವೆಂದು ಇನ್ನೊಮ್ಮೆ ಹೇಳಬೇಕು.

ಸಭಾಧ್ಯಕ್ಷರು : ನಾನು ಯಾವುದೇ ಉಪಪ್ರಶ್ನೆಗೆ ಅವಕಾಶ ನೀಡಲು ಸಾಧ್ಯವಿಲ್ಲ.

ಹುಬ್ಬಳ್ಳಿ-ಧಾರವಾಡ ಕಾರ್ಪೊರೇಶನ್ ಕ್ಷೇತ್ರ ದಲ್ಲಿ ಅನೌಪಚಾರಿಕ ಪಡಿತರ ವಿದೆಯಾದರೂ ಅಲ್ಲಿಯ ನಿವಾಸಿಗಳಿಗೆ ಅಕ್ಕಿಯ ಪೂರೈಕೆಯನ್ನೇಕೆ ಮಾಡುತ್ತಿಲ್ಲವೆಂದು ಎಸ್. ಎಸ್. ಶೆಟ್ಟರು ಜುಲೈ 4 ರಂದು ಪ್ರಶ್ನಿಸಿದ್ದಕ್ಕೆ ಆಹಾರ ಹಾಗೂ ನಾಗರಿಕ ವಸ್ತು ಪೂರೈಕೆ ಮಂತ್ರಿ ಶ್ರೀ ಬಿ. ಡಿ. ಜತ್ತಿ ಹುಬ್ಬಳ್ಳಿ ಧಾರವಾಡ ಕಾರ್ಪೊರೇಶನ್ ಪ್ರದೇಶಕ್ಕೆ ಅನೌಪಚಾರಿಕ ಪಡಿತರ ಅನ್ವಯಿಸಿಲ್ಲ ಎಂದು ಉತ್ತರಿಸಿದರು.

ಎಸ್. ಎಸ್. ಶೆಟ್ಟರ : ನಮ್ಮ ಮೈಸೂರ ರಾಜ್ಯದಲ್ಲಿರತಕ್ಕ ಎಲ್ಲಾ ಕಾರ್ಪೊರೇಶನ್‌ಗಳಿಗೂ ಒಂದೇ ತರಹೆಯ ಆಹಾರ ವಿತರಣೆ ಇದೆಯೇ ಇಲ್ಲವೋ ?

ಬಿ. ಡಿ. ಜತ್ತಿ : ಬೆಂಗಳೂರ ನಗರ ಹಾಗೂ ಗಣಿಗಾರಿಕೆಯಿಲ್ಲದ ಪ್ರದೇಶವನ್ನು ಒಳಗೊಂಡಂತೆಯೇ ಕೆ.ಜಿ.ಎಫ್ ಈ ಎರಡೇ ಕಡೆಗಳಲ್ಲಿ ಮೈಸೂರ ಸರಕಾರ ಅನೌಪಚಾರಿಕ ಪಡಿತರ ಜಾರಿಗೊಳಿಸಿದೆ. ಉಳಿದೆಡೆ ಅನೌಪಚಾರಿಕ ಪಡಿತರವನ್ನು ಜಾರಿಗೆ ತಂದಿಲ್ಲ.

ಎಸ್. ಎಸ್. ಶೆಟ್ಟರ : ಹುಬ್ಬಳ್ಳಿ - ಧಾರವಾಡ ಸಹ ಕಾರ್ಪೊರೇಶನ್ನಿರುವುದರಿಂದ ಅಲ್ಲಿಯೂ ಅನೌಪಚಾರಿಕ ಪಡಿತರ ಜಾರಿ ಮಾಡದಿರುವುದಕ್ಕೆ ಕಾರಣವೇನು ?

ಬಿ. ಡಿ. ಜತ್ತಿ : ಹುಬ್ಬಳ್ಳಿ - ಧಾರವಾಡ ಕಾರ್ಪೊರೇಶನ್ ಕ್ಷೇತ್ರ ಸುತ್ತಮುತ್ತಲಿನ ಗ್ರಾಮೀಣ ಭಾಗಗಳನ್ನು ಒಳಗೊಂಡಿದೆಯಾದ್ದರಿಂದ ಈ ಮಹಾನಗರದಲ್ಲಿಯ ಅನೇಕರು ಜಮೀನುಗಳನ್ನು ಹೊಂದಿ ಆಹಾರಧಾನ್ಯ ಬೆಳೆಯುವ ಕೃಷಿಕರೇ ಆಗಿರುತ್ತಾರೆ. ಹೀಗಾಗಿ ಈ ಕಾರ್ಪೊರೇಶನ್ ಕ್ಷೇತ್ರದಲ್ಲಿ ಅನೌಪಚಾರಿಕ ಪಡಿತರವನ್ನು ಜಾರಿಗೆ ತರುವುದು ಅಗತ್ಯವೆಂದು ಇಲ್ಲಿಯ ತನಕ ಸರಕಾರ ಭಾವಿಸಿಲ್ಲ. ಹೀಗಾಗಿ ಅಲ್ಲಿಯ ಜನತೆಗೆ ತಾತ್ಕಾಲಿಕ ತಳಹದಿಯ ಮೇಲೆ ಆಹಾರ ಧಾನ್ಯ ವಿತರಿಸಲಾಗುತ್ತಿದೆ.

ಎಚ್. ಬಿ. ಜ್ವಾಲನಯ್ಯ : ಪಟ್ಟಣಗಳಿಗೆ ಮಾತ್ರ ಒಳ್ಳೇ ಅಕ್ಕಿ, ಗೋದಿ ಇತ್ಯಾದಿಗಳನ್ನು ಸರಬರಾಜು ಮಾಡಿ ಗ್ರಾಮಾಂತರ ಪ್ರದೇಶಗಳನ್ನು ನಿರ್ಲಕ್ಷ್ಯ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ

ಬಿ.ಡಿ.ಜತ್ತಿ : ಹಾಗೆ ಪಟ್ಟಣಗಳಿಗೇ ಒಂದು ಗ್ರಾಮಾಂತ್ಕರ ಪ್ರದೇಶಗಳಿಗೆಯೇ ಒಂದು ರೀತಿ ಆಹಾರಧಾನ್ಯ ಒದಗಿಸಬೇಕೆಂಬ ನೀತಿ ಸರಕಾರಕ್ಕಿಲ್ಲ. ಅಂಥದ್ದು ಇದ್ದರೆ ತಿಳಿಸಿ ಸರಿಪಡಿಸುತ್ತೇನೆ.

ವಾಟಾಳ್ ನಾಗರಾಜ : ನಗರಗಳಲ್ಲಿ ಸರಕಾರದವರು ಯೋಗ್ಯದರದ ಅಂಗಡಿಗಳನ್ನು ಇಟ್ಟು ಅವುಗಳಿಗೆ ಕಳುಹಿಸತಕ್ಕ ಆಹಾಧಾನ್ಯಗಳೆಲ್ಲಾ ಬ್ಲ್ಯಾಕ್ ಮಾರ್ಕೆಟಿನಲ್ಲಿ ಮಾರಾಟವಾಗುತ್ತಿದೆ ಇದನ್ನು ತಪ್ಪಿಸುವುದಕ್ಕೆ ಪ್ರತಿಯೊಂದು ಡಿ ವಿಜನ್ನಿನಲ್ಲೂ ಸರಕಾರಿ ಡಿಪೋಗಳನ್ನಿಡುವರೇ ?

ಬಿ. ಡಿ. ಜತ್ತಿ : ಎಲ್ಲಾ ಧಾನ್ಯಗಳೂ ಹಾಗೆ ಕಳ್ಳ ಸಂತೆಗೆ ಹೋಗುತ್ತವೆ ಎಂಬುದನ್ನು ನಾನು ಒಪ್ಪುವುದಿಲ್ಲ. ಏನೋ ಅಲ್ಲಿಷ್ಟು ಇಲ್ಲಿಷ್ಟು ಹೋಗಬಹುದು. ಅಂಥದನ್ನು ತಡೆಗಟ್ಟುವುದಕ್ಕೆ ಸರಕಾರ ಎಲ್ಲ ಕ್ರಮಗಳನ್ನೂ ಕೈಗೊಂಡಿದೆ. ಇನ್ನೂ ಮೊನ್ನೆ ತಾನೇ ಇಂಥಾ ಕೆಲಸದಲ್ಲಿ ತೊಡಗಿದ್ದ ಒಂದು ದೊಡ್ಡ ಹೋಲ್ ಸೇಲ್ ಕೋ ಆಪರೇಟಿವ್ ಸೊಸೈಟಿ, ಒಂದು ರಿಟೇಲ್ ಶಾಪ್ ಎರಡರ ಬಗ್ಗೆ ತೀವ್ರ ಕ್ರಮ ಕೈಗೊಳ್ಳಲಾಗಿದೆ.

ಎಸ್. ಎಸ್. ಶೆಟ್ಟರ್ : ಮೊದಲು ಹುಬ್ಬಳ್ಳಿಯಲ್ಲಿ 5 ಕೆಜಿ ಧಾನ್ಯ ಕೊಡುತ್ತಿದ್ದರು ಇತ್ತೀಚೆಗೆ ಸ್ಟಾಕ್ ಇಲ್ಲ ಎಂದು ಹೇಳಿ ಅದನ್ನು ಎರಡು ಕೆಜಿಗೆ ಇಳಿಸಿದ್ದಾರೆ ಅದನ್ನು ಸರಿಪಡಿಸಲು ತಾವೇನು ಕ್ರಮ ಕೈಗೊಂಡಿರಿ ?

ಬಿ. ಡಿ. ಜತ್ತಿ : ಮೊದಲಿದ್ದ ಹಾಗೆಯೇ ಈಗಲೂ ಕೊಡಲಾಗುತ್ತದೆ. ಮಧ್ಯ ಎಲ್ಲೋ ಸ್ವಲ್ಪ ಧಾನ್ಯ ಸಾಗಾಣಿಕೆ ತೊಂದರೆಯಿಂದ ಹಾಗಾಗಿದ್ದರೂ ಆಗಿರಬಹುದು.

ಟಿ. ಆರ್. ಶಾಮಣ್ಣ : ಪಟ್ಟಣದಲ್ಲಿ ಒಳ್ಳೇ ಅಕ್ಕಿ, ಗೋದಿ ಕೊಡುತ್ತಾರೆಂದು ಹೇಳಲಾಯಿತು. ಇಲ್ಲಿ ಗೋದಿ ಕೊಟ್ಟರೆ ಅಕ್ಕಿ ಇಲ್ಲ, ಅಕ್ಕಿ ಕೊಟ್ಟರೆ ಸಕ್ಕರೆ ಯಿಲ್ಲ ಅಷ್ಟೇ ಅಲ್ಲದೇ ಮನುಷ್ಯರು ತಿನ್ನಲಿಕ್ಕಾಗದ ಧಾನ್ಯ ಕೊಟ್ಟಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಬಿ. ಡಿ. ಜತ್ತಿ : ಸ್ವಾಮೀ ಬೆಂಗಳೂರ ನಗರದಲ್ಲಿ ಎಲ್ಲ ಕಾಲದಲ್ಲಿಯೂ ಒಳ್ಳೆಯ ಆಹಾರಧಾನ್ಯವನ್ನೇ ಒದಗಿಸಲಾಗುತ್ತಿದೆ. ಎಲ್ಲೋ ಒಂದೆರಡಾವರ್ತಿ ಶ್ಯಾಮಣ್ಣನವರು ಕೆಟ್ಟಿದ್ದ ಅಕ್ಕಿಯನ್ನು ತಂದು ತೋರಿಸಿದರು ಅಂಥಾ ಸ್ಟಾಕ್ ಬಂದಾಗ ಅದನ್ನು ಸರಕಾರಕ್ಕೆ ವಾಪಸ್ಸು ಕೊಡಬೇಕೆಂದು ಹೇಳಿದ್ದೇನೆ. ಈಗ ಅಂಥ ದೂರುಗಳಿಗೆ ಅವಕಾಶವಿರುವುದಿಲ್ಲ. ಕಳೆದ ಫೆಬ್ರುವರಿಯಲ್ಲಿ ಮಾತ್ರ ಹಾಗಾಗಿತ್ತು. ಆಗ ಅಕ್ಕಿಗೂ ಸ್ವಲ್ಪ ಅಭಾವ ಇತ್ತು ಈಗ ಅಂಥಾ ತೊಂದರೆಗಳೇನೂ ಇಲ್ಲ.

ಎಚ್. ಸಿದ್ದವೀರಪ್ಪ: ಆಹಾರಧಾನ್ಯ ಸಂಗ್ರಹಣೆಗಾಗಿ ಸರಕಾರಿ ಉಗ್ರಾಣಗಳಿವೆಯೇ ? ಅಥವಾ ಭಾಡಿಗೆ ಉಗ್ರಾಣಗಳಿವೆಯೇ ?

ಬಿ. ಡಿ. ಜತ್ತಿ : ಧಾರವಾಡ ಹುಬ್ಬಳ್ಳಿಗಳಲ್ಲಿ ಸರಕಾರದ ಉಗ್ರಾಣಗಳಿವೆ. ಆಹಾರ ಧಾನ್ಯಗಳನ್ನು ಅವುಗಳಲ್ಲಿ ಸಂಗ್ರಹಿಸಿಟ್ಟು ಕಾರ್ಡುಧಾರಕರಿಗೆ ವಿತರಿಸುತ್ತಿದ್ದೇವೆ.

ಎಸ್. ಗೋಪಾಲಗೌಡ : ಹುಬ್ಬಳ್ಳಿ ಧಾರವಾಡ ಪ್ರದೇಶದಲ್ಲಿ ಅನೌಪಚಾರಿಕ ಪಡಿತರ ಪದ್ಧತಿಯಿರುವುದಿಲ್ಲವೆಂದು ಹೇಳಿರುವುದಲ್ಲದೇ ಅಲ್ಲಿ ಬಹಳ ಜನರು ಬೇಸಾಯ ಮಾಡತಕ್ಕವರಿದ್ದಾರೆ ಎಂದು ಹೇಳಿದ್ದಾರೆ. ಇದುವರೆಗೆ ಹುಬ್ಬಳ್ಳಿ ಧಾರವಾಡ ಕಾರ್ಪೊರೇಶನ್ ಪ್ರದೇಶಕ್ಕೆ ಎಷ್ಟು ಅಕ್ಕಿ ಮತ್ತು ಗೋದಿಯನ್ನು ಒದಗಿಸಲಾಗಿದೆ. ಅದು ಸಾಲದು ಎಂದು ತಮಗೇನಾದರೂ ದೂರುಗಳು ಬಂದಿವೆಯೇ?

ಬಿ. ಡಿ. ಜತ್ತಿ : ಹುಬ್ಬಳ್ಳಿ ಧಾರವಾಡ ಕಾರ್ಪೊರೇಶನ್ ಪ್ರದೇಶಕ್ಕೆ 1967ನೇ ಜನೇವರಿಯಲ್ಲಿ ಅಕ್ಕಿಯನ್ನು 790 ಕ್ವಿಂಟಲ್, ಫೆಬ್ರುವರಿಯಲ್ಲಿ 800 ಕ್ವಿಂಟಲ್, ಮಾರ್ಚದಲ್ಲಿ 800 ಕ್ವಿಂಟಲ್ ಅಕ್ಕಿಯನ್ನು ಒದಗಿಸಿದ್ದೇವೆ. ಜನೇವರಿಯಿಂದ ಜೂನ್‌ವರೆಗೆ 150 ಟನ್ ಅಕ್ಕಿ 500 ಟನ್ ಗೋದಿ, 300 ಟನ್ ಮಿಲೋ, 500 ಟನ್ ಇತರ ಧಾನ್ಯ ಕೊಟ್ಟಿದ್ದೇವೆ. ಅದೇ ರೀತಿ ಜುಲೈನಲ್ಲೂ ಕೊಡುತ್ತೇವೆ.

ಎಸ್. ಆರ್. ಬೊಮ್ಮಾಯಿ : ಹುಬ್ಬಳ್ಳಿ ಉಗ್ರಾಣದಲ್ಲಿ ಕಡಲೆಹಿಟ್ಟು ಯೋಗ್ಯ ಸಮಯದಲ್ಲಿ ಹಂಚದೇ ಇದ್ದುದಕ್ಕೆ ಕೆಟ್ಟಿದೆ. ಆದ್ದರಿಂದ ಅದು ಎಷ್ಟು ಕೆಟ್ಟಿದೆ ?

ಬಿ. ಡಿ. ಜತ್ತಿ : ಕಡಲೆಹಿಟ್ಟು ಹುಬ್ಬಳ್ಳಿ ಧಾರವಾಡದಲ್ಲಿ ಕೆಟ್ಟಿಲ್ಲ. ಯಾವುದು ಎಲ್ಲಿ ಕೆಟ್ಟಿದೆ ಎಂದು ಹೇಳಿದರೆ ನಾನು ತಪ್ಪಾಸಣೆ ಖಾತ್ರಿ ಮಾಡಿಸುತ್ತೇನೆ.

ಎಸ್. ಎಸ್. ಶೆಟ್ಟರ : ಹುಬ್ಬಳ್ಳಿಯ ಒಂದು ಗುದಾಮಿನಲ್ಲಿ 61 ನೇ ಇಸವಿಯ ಸ್ಟಾಕ್ ಸುಮಾರು ಎರಡು ಎರಡು ನೂರು ಚೀಲಗಳಷ್ಟು ಸೆಜ್ಜೆಗೆ ಹುಳು ಹತ್ತಿ ಅದು ಕೆಟ್ಟು ಹೋಗಿದೆಯೆಂಬುದು ನಿಜವೇ?

ಬಿ.ಡಿ.ಜತ್ತಿ : ಕೆಟ್ಟಿಲ್ಲ, ಹಾಗಿದ್ದರೆ ಯಾವರೀತಿ ಮಾರಿರಬೇಕು ಎಂಬುದನ್ನು ಯೋಚಿಸಬೇಕು. ಆ ರೀತಿಯಾಗಿದ್ದನ್ನು ಮಾರಿದ್ದರೆಂದು ತಪ್ಪು ಮಾತನ್ನು ಯಾರೋ ಹೇಳಿದ್ದಾರೆ.

ಕೆ. ಎಚ್. ಪಾಟೀಲ : ಗದುಗಿನಲ್ಲಿ ಸರಕಾರದವರು ಕೊಡತಕ್ಕ ಅಕ್ಕಿಯ ಪ್ರಮಾಣ ಜನರಿಗೆ ಸಿಕ್ಕುವುದೇ ಇಲ್ಲ ಮತ್ತು ಜೋಳದ ಪ್ರಮಾಣ ನೇಕಾರರಿಗೆ ಅತಿ ಕಡಿಮೆ ಪ್ರಮಾಣದಲ್ಲಿ ಸಿಕ್ಕುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ಆಹಾರಧಾನ್ಯಗಳ ಬೆಲೆ ಬಹಳ ಏರಿದೆ. ಜನರಿಗೆ ಸರಿಯಾಗಿ ಆಹಾರಧಾನ್ಯ ಸಿಕ್ಕುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಬಿ. ಡಿ. ಜತ್ತಿ : ಅದು ಕೆಲ ಮಟ್ಟಿಗೆ ಏರಿದೆಯೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಗದುಗಿನಲ್ಲಿರತಕ್ಕ ನೇಕಾರರಿಗೆ ಜೋಳ ಪೂರೈಕೆ ಆಗಿದೆ. ಕಡಿಮೆ ಬರುತ್ತದೆ ಎಂದು ಹೇಳುವುದಾದರೆ ಅವರಿಗೆ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿದೆ ಕೊಡುತ್ತೇವೆ.

ಮುಂಬಯಿ ಕರ್ನಾಟಕ ಜಿಲ್ಲೆಗಳಲ್ಲಿರುವ ಪ್ರೊಬೇಶನ ಮತ್ತು ಆಫ್ಟರ್ ಕೇರ್ ಅಸೋಸಿಯೇಶನ್ನುಗಳ ಪೂರ್ಣ ಖರ್ಚನ್ನು ಹಳೇ ಮೈಸೂರು ಭಾಗಗಳಲ್ಲಿಯವುಗಳ ಹಾಗೆ ಭರಿಸುತ್ತಿಲ್ಲವೇಕೆ ? ಎಂದು ಎಸ್. ಎಸ್. ಶೆಟ್ಟರ ಅವರು ಜುಲೈ 5 ರಂದು ಪ್ರಶ್ನಿಸಿದ್ದಕ್ಕೆ ಸಮಾಜ ಕಲ್ಯಾಣ ಖಾತೆ ಸಚಿವ ಶ್ರೀ ಜಿ. ನಾರಾಯಣಗೌಡರು, 'ಮುಂಬಯಿ ಕರ್ನಾಟಕದೊಳಗಿನ ಪ್ರೊಬೇಶನ್ ಹಾಗೂ ಆಫ್ಟರ್ ಕೇರ್ ಅಸೋಸಿಯೇಶನ್‌ಗಳು ಸ್ವಯಂಸೇವಾ ಸಂಸ್ಥೆಗಳಿರುವದರಿಂದ ಸರಕಾರ ಅವುಗಳ ಪೂರ್ಣ ವೆಚ್ಚವನ್ನು ಭರಿಸಬೇಕಾಗಿಲ್ಲ, ಹಳೇ ಮೈಸೂರ ಭಾಗದಲ್ಲಿ ಇಂತಹ ಸಂಸ್ಥೆಗಳಿರುವುದಿಲ್ಲ' ಎಂದು ಉತ್ತರಿಸಿದರು.

ಶ್ರೀ ಎಸ್. ಎಸ್. ಶೆಟ್ಟರ : ಪ್ರೊಬೇಶನ್ ಮತ್ತು ಆಫ್ಟರ್ ಕೇರ್ ಅಸೋಸಿಯೇಶನ್ ಏನಿವೆಯೋ ಅವು ಕಾಯ್ದೆಬದ್ಧವಾಗಿವೆಯೆಂದು ಹೇಳಿದ ಮೇಲೆ ಆ ಕಾಯ್ದೆಯನ್ನು ಮಾನ್ಯ ಮಾಡಿದ್ದೀರೋ ಇಲ್ಲವೋ ?

ನಾರಾಯಣಗೌಡ : ಹೌದು ಮಾನ್ಯ ಮಾಡಿದೆ.

ಶ್ರೀ ಎಸ್. ಎಸ್. ಶೆಟ್ಟರ : ಹಾಗಿದ್ದರೆ ಈಗ ಅವುಗಳಿಗೆ ಏನು ಗ್ರಾಂಟ ಕೊಡುತ್ತೀರೋ ಅದು ಶೇಕಡಾ 50 ರಷ್ಟು ಆಗಿದೆ. ಸಂಪೂರ್ಣವಾಗಿ ಏಕೆ ಕೊಟ್ಟಿಲ್ಲ ?

ಶ್ರೀ ಜಿ. ನಾರಾಯಣಗೌಡ : ಅವುಗಳು ಸ್ವಯಂಸೇವಾ ಸಂಸ್ಥೆಗಳಾಗಿರುವುದರಿಂದ ಅವುಗಳಿಗೆ ಗ್ರಾಂಟ ಇನ್ ಏಡ್ ರೂಲ್ಸ್ ಪ್ರಕಾರ ಕೊಡಬೇಕಾದ ಗ್ರಾಂಟನ್ನು ಕೊಡುತ್ತಿದ್ದೇವೆ.

ಶ್ರೀ ಎಸ್. ಎಸ್. ಶೆಟ್ಟರ : ಒಂದು ಭಾಗದಲ್ಲಿ ನೂರಕ್ಕೆ ನೂರರಷ್ಟು ಇನ್ನೊಂದು ಭಾಗದಲ್ಲಿ ನೂರಕ್ಕೆ 50 ರಷ್ಟು ಗ್ರಾಂಟ್ ಕೊಡುವ ಭೇದಭಾವ ಏಕೆ ?

ಜಿ. ನಾರಾಯಣಗೌಡ : ಬೇಧಭಾವನೆಯೂ ಇಲ್ಲ, ಬೇರೆ ಭಾಗಗಳಲ್ಲಿ ಅಂತಹ ಸ್ವಯಂ ಸೇವಾ ಸಂಸ್ಥೆ ಇಲ್ಲ.

ಶ್ರೀ ಕೆ. ಎಚ್. ಪಾಟೀಲ : ಮುಂಬಯಿ ರಾಜ್ಯದ ಪ್ರಕಾರ ಅಲ್ಲಿ ಏನು ಪ್ರೊಬೇಶನ್ ಮತ್ತು ಆಫ್ಟರ್ ಕೇರ್ ಅಸೋಸಿಯೇಶನ್ನ ನಡೆಯುತ್ತಿವೆಯೋ ಅವುಗಳಿಗೆ ಯಾವುದೇ ಗ್ರ್ಯಾಂಟ್ ಈಗ ಕೊಡದೇ ಇರುವುದರಿಂದ ಇಲ್ಲಿಯ ರೂಲ್ಸನ್ನು ಅಷ್ಟೇ ಬದಲು ಮಾಡಿ ಪೂರ್ತಿ ವೆಚ್ಚವನ್ನು ಏಕೆ ಕೊಡುವುದಕ್ಕಾಗುವುದಿಲ್ಲ? ಅಲ್ಲಿಯ ಪ್ರೆಸಿಡೆಂಟ್ ಅವರು ಏನು ಕೊಡುತ್ತಾರೋ ಅದು ಸಾಲದು ಆದ್ದರಿಂದ ಈಗ ಅಲ್ಲಿ ಕೊಡುತ್ತಾ ಇರತಕ್ಕ ಗ್ರ್ಯಾಂಟನ್ನು ಹೆಚ್ಚು ಮಾಡಿ ಎಂದು ಆ ಅಸೋಸಿಯೇಶನ್‌ಗಳಿಂದ ಏನಾದರೂ ಸರಕಾರಕ್ಕೆ ಮನವಿಗಳು ಬಂದಿವೆಯೇ ?

ನಾರಾಯಣಗೌಡ : ಆ ಮಾಹಿತಿ ಈಗ ನನ್ನಲ್ಲಿ ಇಲ್ಲ. ಬೇರೆ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀಮತಿ ಚಂಪಾಬಾಯಿ ಭೋಗಲೆ : ಈಗ ಮುಂಬಯಿ ಕರ್ನಾಟಕದೊಳಗೇ ಒಂದು ರೂಲ್, ಹಳೆಯ ಮೈಸೂರಿನಲ್ಲಿಯೇ ಒಂದು ರೂಲ್ ಇಟ್ಟೆಯೆಂದು ಗ್ರ್ಯಾಂಟ್ ಕೊಡುತ್ತೀದ್ದೀರಿ, ವರ್ಷದ ಕೊನೆಯ ಭಾಗದಲ್ಲಿ ಗ್ರ್ಯಾಂಟ್ ಕೊಡುತ್ತಾರೆ. ಕೆಲವು ವೇಳೆ ಹೋದ ವರ್ಷದ ಗ್ರ್ಯಾಂಟ ಈ ವರ್ಷ ಕೊಡುತ್ತಾರೆ. ಈ ವರ್ಷದ ಗ್ರ್ಯಾಂಟನ್ನು ಮುಂದಿನ ವರ್ಷ ಕೊಡುತ್ತಾರೆ. ಆದ್ದರಿಂದ ಮುಂಬಯಿ ಕರ್ನಾಟಕದ ಆ ಒಂದು ರೂಲು ಇಲ್ಲಿಯ ರೂಲ್‌ಗೆ ಅನ್ವಯವಾಗುತ್ತದೋ ?

ಜಿ. ನಾರಾಯಣಗೌಡ : ಇಲ್ಲಿ ಬೇರೆ ರೂಲ್ಸ್ ಅಲ್ಲಿ ಬೇರೆ ರೂಲ್ಸ್ ಏನೂ ಇಲ್ಲ ಅಲ್ಲಿ ಯಾವ್ಯಾವ ಸ್ವಯಂಸೇವಾ ಸಂಸ್ಥೆ ನಡೆಸುತ್ತಾರೋ ಅಂಥವುಗಳಿಗೆ ಗ್ರ್ಯಾಂಟ್ ಇನ್‌ಏಡ್ ಕೋಡ್ಸ್ ರೂಲ್ಸ್ ಪ್ರಕಾರ ಗ್ರ್ಯಾಂಟ್ಸ್ ಕೊಡುತ್ತೇವೆ . ಮುಂಬಯಿ ಕರ್ನಾಟಕದಲ್ಲಿ ಇರುವ ಹಾಗೆ ಸ್ವಯಂಸೇವಾ ಸಂಸ್ಥೆಗಳು ಬೇರೆ ಭಾಗಗಳಲ್ಲಿಯೂ ಇದ್ದರೆ ಅವುಗಳಿಗೂ ಅದೇ ರೀತಿ ಸಹಾಯ ಮಾಡುತ್ತೇವೆ.

ಶ್ರೀಮತಿ ಚಂಪಾಬಾಯಿ ಭೋಗಲೆ : ಹಾಸ್ಟೆಲ್‌ಗಳಲ್ಲಿ ಒಬ್ಬ ಹುಡುಗನಿಗೆ ಒಂದು ತಿಂಗಳಿಗೆ 18 ರೂಪಾಯಿಗಳಂತೆ ಗ್ರ್ಯಾಂಟ್ ಕೊಡುತ್ತಿದ್ದರು. ಹೋದವರ್ಷ ಮಾನ್ಯ ಮುಖ್ಯಮಂತ್ರಿಗಳು 25 ರೂಗಳಂತೆ ಗ್ರ್ಯಾಂಟ್ ಕೊಡುತ್ತೇವೆಂದು ಹೇಳಿದರು. ಆದರೂ ಸಹ ಇಲ್ಲಿಯತನಕ ಮುಂಬಯಿ ಸರಕಾರದ ರೂಲ್ಸನ್ನೇ ಲಾಗುಮಾಡಿ ಅದರಂತೆ ಗ್ರ್ಯಾಂಟ್ ಕೊಡುತ್ತಿದ್ದಾರೆ. ಇಲ್ಲಿಯವರೆಗೂ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಗ್ರ್ಯಾಂಟ್ ಕೊಟ್ಟಿಲ್ಲ, ಆದ್ದರಿಂದ ಮೈಸೂರ ಸ್ಕೇಲಿನಂತೆ ಗ್ರ್ಯಾಂಟ್ ಕೊಡುತ್ತೀರಾ ?

ಅಧ್ಯಕ್ಷರು : ಈ ಸಲಹೆಯ ಕ್ರಮ ಕೈಗೊಳ್ಳಲಿಕ್ಕಾಗಿ.

ಕುಟುಂಬ ಯೋಜನೆ ಅವ್ಯವಸ್ಥೆ

ನಮ್ಮ ಮೈಸೂರು ರಾಜ್ಯದಲ್ಲಿ ಅನೇಕ ಇ.ಎಸ್.ಐ ದವಾಖಾನೆಗಳು ಇವೆ. ಈ ದವಾಖಾನೆಗಳಿಗೆ ಸ್ವಂತದ ಕಟ್ಟಡಗಳಿಲ್ಲ, ಅನೇಕ ಕಡೆ ಕಟ್ಟಡಗಳನ್ನು ಭಾಡಿಗೆಗೆ ತೆಗೆದುಕೊಂಡು ನಡೆಸುತ್ತಿದ್ದಾರೆ. ಕೆಲವು ಕಡೆ ಚಿಕ್ಕ ಚಿಕ್ಕ ಕಟ್ಟಡ ಅಂದರೆ ಮನೆಗಳನ್ನು ಭಾಡಿಗೆಗೆ ತೆಗೆದುಕೊಂಡು ದವಾಖಾನೆ ಇಡಲಿಕ್ಕೆ ಸಾಧ್ಯವಿಲ್ಲದಿದ್ದರೂ ಸಹ ನಡೆಸುತ್ತಿದ್ದಾರೆ. ಈ ದವಾಖಾನೆಗಳ ಪೈಕಿ ಕೆಲವು ಬೆಂಗಳೂರಿನ ಅಲಸೂರು, ಕಾಕ್ಸ್ ಟೌನ್, ಮಲ್ಲೇಶ್ವರಂ, ಚಾಮರಾಜಪೇಟೆ, ಶ್ರೀರಾಮಪುರ ಮತ್ತು ಹುಬ್ಬಳ್ಳಿಯ ಬಸ್‌ಸ್ಟಾಂಡ ಬಳಿ ಇರುವ ನಿದರ್ಶನಗಳಿವೆ. ದವಾಖಾನೆಗಳನ್ನು ನಡೆಸುತ್ತಿರುವ ಬಿಲ್ಡಿಂಗಗಳನ್ನು ನೋಡಿದರೆ ಅದರಲ್ಲಿ ಯಾವ ರೀತಿಯ ವ್ಯವಸ್ಥೆಯೂ ಇರುವುದಿಲ್ಲ, ಡಾಕ್ಟರ್‌ಗಳು ರೋಗಿಗಳನ್ನು ಯಾವ ರೀತಿ ನೋಡಬೇಕು, ಯಾವ ರೀತಿ ಔಷಧವನ್ನು ಕೊಡಬೇಕು ಎಂಬ ಬಗ್ಗೆ ಸರಿಯಾದ ಅನುಕೂಲಗಳು ಇಲ್ಲದೇ ಒಬ್ಬ ಕಾರ್ಮಿಕನಿಗೆ ಸಾವುಂಟಾಯಿತು ಇದರ ಬಗ್ಗೆ ಚಳುವಳಿ ನಡೆಯಿತು. ಕೊನೆಗೆ ದೊಡ್ಡ ಗೊಂದಲವಾಗಿ ಮೂರುದಿನ ಆ ಒಂದು ದವಾಖಾನೆಯನ್ನು ಬಂದ್ ಮಾಡಲಾಯಿತು. ಸರಕಾರದವರು ಈ ಬಗ್ಗೆ ಯಾವ ರೀತಿಯ ವಿಚಾರಣೆ ಮಾಡಿದ್ದಾರೆ ಎಂಬುದು ತಿಳಿಯಲಿಲ್ಲ.

ಇ. ಎಸ್. ಐ ದವಾಖಾನೆಗಳು ಕಾರಖಾನೆಗಳಿಗೆ ಹತ್ತು ಹನ್ನೆರಡು ಮೈಲಿ ದೂರವಿರುತ್ತವೆ. ಕಾರಖಾನೆಯಲ್ಲಿ ಯಾರಿಗಾದರೂ ಅಪಘಾತವಾದರೆ ಕೂಡಲೇ ದವಾಖಾನೆಗಳಿಗೆ 10-12 ಮೈಲು ದೂರದಿಂದ ತರಲು ಯಾವುದೇ ರೀತಿಯಾ ವಾಹನ ಸೌಕರ್ಯದ ವ್ಯವಸ್ಥೆಯಿಲ್ಲ, ಮೋಟರ ವ್ಯವಸ್ಥೆಯಿಲ್ಲ, ಆ್ಯಂಬುಲೆನ್ಸ ವ್ಯವಸ್ಥೆಯಿಲ್ಲ, ಏನಾದರೂ ವ್ಯವಸ್ಥೆಮಾಡಬೇಕೆಂದು ಅನೇಕ ಮನವಿಗಳನ್ನು ಸರಕಾರಕ್ಕೆ ಕಳಿಸಲಾಯಿತು. ಸರಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಬಿಲ್ಡಿಂಗ ಖರೀದಿ ಮಾಡಲು ಹಣದ ವ್ಯವಸ್ಥೆ ಮಾಡಿದರೂ ಸಹ ಏನೂ ಕ್ರಮ ತೆಗೆದುಕೊಂಡಿಲ್ಲ, ಔಷಧವನ್ನೂ ಸಣ್ಣ ಸಣ್ಣ ರದ್ದಿ ಪೇಪರಿನಲ್ಲಿ ಕಟ್ಟಿಕೊಡುತ್ತಾರೆ. ಒಳ್ಳೆಯ ಪೇಪರ್ ತೆಗೆದುಕೊಳ್ಳಲು ದುಡ್ಡು ಇಲ್ಲವೆಂದು ಹೇಳುತ್ತಾರೆ. ಕೆಲವು ದವಾಖಾನೆಗಳಲ್ಲಿ ಔಷಧಿಗಳಿರುವುದಿಲ್ಲ, ಸೀಮೆ ಎಣ್ಣೆಯೂ ಇರುವುದಿಲ್ಲ, ಇಂತಹ ಅನೇಕ ಸಂಗತಿಗಳು ನನ್ನ ಗಮನಕ್ಕೆ ಬಂದಿವೆ. ಈ ಪ್ರಕಾರ ಕಾರ್ಮಿಕರಿಗೆ ಅನಾನುಕೂಲವಾಗುವಂಥ ಈ ಎಲ್ಲಾ ಆಸ್ಪತ್ರೆಗಳು ಏನಿವೆ ಹೇಗಿವೆ? ಇವುಗಳ ಬಗ್ಗೆ ತೀವ್ರವಾಗಿ ಪರಿಶೀಲನೆಯಾಗಬೇಕು. ಈ ರೀತಿ ಮಾಡದಿದ್ದರೆ ಕಾರ್ಮಿಕರಿಗೆ ಬಹಳ ಅನ್ಯಾಯವಾಗುತ್ತದೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಇನ್ನು ಫ್ಯಾಮಿಲಿ ಪ್ಲ್ಯಾನಿಂಗ್ ವಿಚಾರದಲ್ಲಿ ಹೇಳುವುದಾದರೆ ಎಲ್ಲಾ ಕಡೆಯೂ ಫ್ಯಾಮಿಲಿ ಪ್ಲ್ಯಾನಿಂಗ ಎಂಬ ಮಾತು ಜೋರಾಗಿ ಎದ್ದಿದೆ ಇದು ಜನರ ಒಂದು ಹಿತಕ್ಕಾಗಿಯೋ ಅಥವಾ ಅವರ ಆರೋಗ್ಯ ರಕ್ಷಣೆಯ ಸಲುವಾಗಿಯೋ ಎಂಬುದು ತಿಳಿಯಲಿಲ್ಲ. ಈ ಫ್ಯಾಮಿಲಿ ಪ್ಲ್ಯಾನಿಂಗ ಪಾಲಿಸಿ ವಿಫಲವಾದರೂ ಸಹ, ಜನರ ಆರೋಗ್ಯವನ್ನು ಕೆಡಿಸಿದರೂ ಪರವಾಯಿಲ್ಲ, ಸರಕಾರದ ಹಣ ಖರ್ಚಾದರೂ ಸರಿಯೇ? ಒತ್ತಾಯದಿಂದ ಈ ಕೆಲಸ

ನಡೆದಿದೆ. ಇದರಿಂದ ಸಮಾಜದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಪ್ರೊಹಿಬಿಶನ್ ನೀತಿಯನ್ನು ತಾವು ಸಡಿಲು ಮಾಡಿದರೂ ಸಹ ಅದರಿಂದ ಹೇಗೆ ಏನೂ ಪ್ರಯೋಜನವಾಗಲಿಲ್ಲವೋ ಅದೇ ರೀತಿ ಈ ಫ್ಯಾಮಿಲಿ ಪ್ಲಾನಿಂಗ ಕೂಡ ಸಫಲವಾಗುವುದಿಲ್ಲ, ಈಗಾಗಲೇ ಎಷ್ಟೋ ಕಡೆಗೆ ಹೆಂಗಸರಿಗೆ ಲೂಪ್ ಧಾರಣೆ ಮಾಡಿಸುತ್ತಿದ್ದಾರೆ. ಗ್ರಾಮಾಂತರಗಳಿಂದ ಹೆಂಗಸರನ್ನು ಹಿಡಿದುಕೊಂಡು ಬಂದು ಅವರಿಗೆ ಲೂಪ್ ಧಾರಣೆ ಮಾಡಿಸುವ ಚಳುವಳಿ ನಡೆದಿದೆ. ಈ ಒಂದು ಕಾರ್ಯಕ್ರಮವನ್ನು ನೋಡಿದರೆ ಅತ್ಯಂತ ಕಳವಳಕಾರಕವಾಗಿ ಕಾಣುತ್ತಿದೆ. ಜನರಿಗೆ ಲಂಚ ಕೊಡುವ ಪರಿಸ್ಥಿತಿಯಿದೆ. ಲೂಪ್ ಧಾರಣೆ ಮಾಡಿಸಿಕೊಳ್ಳುವ ಹೆಂಗಸಿಗೆ ಒಂದೂವರೆ ರೂಪಾಯಿ ಕೊಡುತ್ತಾರೆ ಕರೆದುಕೊಂಡು ಬಂದವರಿಗೆ ಒಂದು ರೂಪಾಯಿ ಕೊಡುತ್ತಾರೆ. ಧಾರಣೆ ಮಾಡಿಸಿದ ಡಾಕ್ಟರ್‌ಗೆ ಕೂಡಾ ರೊಕ್ಕ ಕೊಡುತ್ತಾರೆ. ಈ ಒಂದು ಪ್ರಚಾರ ವೈಖರಿ ನಡೆದಿದೆ. ಪ್ರೊಹಿಬಿಶನ್ ನೀತಿಯನ್ನು ಸಡಿಲುಮಾಡುವುದಕ್ಕೆ ಹೋಗಿ ಪೊಲೀಸರನ್ನು ಕೆಟ್ಟದಾರಿಗೆ ಎಳೆದಂತೆ, ಈ ಫ್ಯಾಮಿಲಿ ಪ್ಲ್ಯಾನಿಂಗ್ ಜಾರಿಯಿಂದ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುವ ನೌಕರರ ಗುಣಗಳನ್ನು ಕೆಡಿಸುವುದಕ್ಕೆ ಸರಕಾರ ಒಂದು ದಾರಿ ಮಾಡಿಕೊಟ್ಟಂತಾಗಿದೆ. ಒಂದೂವರೆ ಕೋಟಿ ರೂಗಳನ್ನು ಬಜೆಟ್‌ನಲ್ಲಿ ಅದರ ಬಗ್ಗೆ ಒದಗಿಸಲಾಗಿದೆ.

ಅಂದರೆ ಫ್ಯಾಮಿಲಿ ಪ್ಲ್ಯಾನಿಂಗ್ ಸೆಂಟರುಗಳನ್ನು ಜಿಲ್ಲಾವಾರು ಮತ್ತು ಗ್ರಾಮವಾರುಗಳಲ್ಲಿ ಕೆಲವು ಕಡೆ ಮಾಡಿದ್ದಾರೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಕೆಲವು ಸೆಂಟರುಗಳನ್ನು ಮಾಡಿದ್ದಾರೆ. ಇವುಗಳ ರೀತಿ ನೀತಿ ತುಂಬಾ ಅವ್ಯವಸ್ಥೆಯಾಗಿದೆ. ಯಾರು ಯಾವ ರೀತಿಯಿಂದ ಈ ಸೆಂಟರುಗಳಿಗೆ ಖರ್ಚು ಮಾಡುವರು ಎಂಬುದೇ ಗೊತ್ತಾಗುವುದಿಲ್ಲ, 5 ಲಕ್ಷ ರೂಪಾಯಿಗಳವರೆಗೆ ಈ ಫ್ಯಾಮಿಲಿ ಪ್ಲಾನಿಂಗ್‌ಗೆ ಸಂಬಂಧಪಟ್ಟ ಹಾಗೆ ಕೆಲವು ಕಾಂಟ್ರ್ಯಾಸೆಪ್ಟಿವ್ ಟ್ಯಾಬ್ಲೆಟ್ಟುಗಳನ್ನು ಎಲ್ಲೆಲ್ಲಿಂದಲೋ ತರಿಸುತ್ತಿದ್ದಾರೆ. ಆದರೆ ಅವುಗಳ ಬಗ್ಗೆ ಸಾಕಷ್ಟು ಗಮನ ಕೊಟ್ಟಿಲ್ಲ, ಆದ್ದರಿಂದ ಈ ಫ್ಯಾಮಿಲಿ ಪ್ಲಾನಿಂಗ್ ಎಂಬ ಯೋಜನೆ ಏನಿದೆ ಇದು ಜನರ ಶರೀರದ ಮೇಲೆ ಹೆಚ್ಚು ದುಷ್ಪರಿಣಾಮವನ್ನುಂಟುಮಾಡಿದೆ. ಎಷ್ಟೋ ಮನೆಗಳಲ್ಲಿ ಜಗಳ ಹತ್ತಿದೆ. ಎಷ್ಟೋ ಕಡೆಗಳಲ್ಲಿ ಈ ಯೋಜನೆ ಉಲ್ಟಾ ಆಗಿ ಒಬ್ಬರಿಗೊಬ್ಬರು ಹೊಡೆದಾಡುವುದಕ್ಕೆ ಮೂಲ ಕಾರಣವಾಗಿದೆ. ಇವರು ಏನು ಫ್ಯಾಮಿಲಿ ಪ್ಲಾನಿಂಗ ಬಗ್ಗೆ ಒಂದು ಧೋರಣೆಯನ್ನು ಇಟ್ಟುಕೊಂಡಿದ್ದಾರೋ ಅದನ್ನು ನಾನು ಸಂಪೂರ್ಣವಾಗಿ ಖಂಡಿಸುತ್ತೇನೆ. ಬೆಂಗಳೂರಿನ ಗಾಂಧಿ ಸರ್ಕಲ್‌ನೊಳಗಂತೂ ಇದು ಒಂದು ದೊಡ್ಡ ಸಮಸ್ಯೆಯಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ : ಕುಟುಂಬ ಯೋಜನೆ ಶಸ್ತ್ರಚಿಕಿತ್ಸೆ ವಿಫಲವಾದ ಉದಾಹರಣೆಯಿದ್ದರೆ ತಿಳಿಸಿ, ಖಾಸಗಿಯಾಗಿ ಗೌಪ್ಯರೀತಿಯಿಂದ ನನಗೆ ತಿಳಿಸಿದರೂ ವಿಚಾರಿಸುತ್ತೇನೆ. ಇಲಾಖೆ ಒದಗಿಸಿದ ಮಾಹಿತಿ ಪ್ರಕಾರ ಯಾವುದೂ ಶಸ್ತ್ರಚಿಕಿತ್ಸೆ ವಿಫಲವಾಗುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ : ಇದು ಫೇಲ್ಯುವರ ಏನೂ ಅಲ್ಲ ಮತ್ತೆ ಆರು ತಿಂಗಳಲ್ಲಿ ಕನ್ಸೆಪ್‌ಶನ್ ಆಗಿರಬಹುದು ಹಾಗೇನಾದರೂ ಆಗಿದ್ದರೆ ಅದಕ್ಕೆ ಬೇರೆ ಏನೋ ಕಾರಣವೇ ಹೊರತು ಆಪರೇಷನ್ ಫೇಲ್ಯುವರ ಅಲ್ಲ.

ಎಸ್.ಎಸ್.ಶೆಟ್ಟಿ : ಅದು ಯಾವ ಕಾರಣಕ್ಕೂ [illegible] ಆಪರೇಷನ್ ಮಾಡುವಂಥ ಕಾಲದಲ್ಲಿ ನಿರ್ಲಕ್ಷ್ಯ ಮಾಡಬಾರದು. ಆ [illegible] ಸರ್ಕಾರ [illegible] ಸಲ್ಲ. ಅದರಿಂದ ಆಗತಕ್ಕ ದುಷ್ಪರಿಣಾಮವನ್ನು ಸುಳ್ಳಲ್ಲ. ಇದಕ್ಕೆ [illegible] ಮಾಹಿತಿಯಾಗಿ ಮಂತ್ರಿಗಳಿಗೆ ತಿಳಿಸಬಹುದು ಇಂತಹ ಬಹಳ [illegible]. ಈ ವಿಚಾರದಲ್ಲಿ ಸರ್ಕಾರದ ನೀತಿಯನ್ನು ನಾನು ಸಂಪೂರ್ಣವಾಗಿ ಖಂಡಿಸುತ್ತೇನೆ.

ಇನ್ನು ಹುಬ್ಬಳ್ಳಿಯಲ್ಲಿ ಕೆ.ಎಂ.ಸಿ. [illegible] ನಾಲ್ಕನೆಯ ದರ್ಜೆಯ ನೌಕರರಿಗೆ ಯಾವ ಸರ್ಟಿಫಿಕೇಟು [illegible] ಅವನ್ನು [illegible]. ಅಲ್ಲಿರತಕ್ಕ ಡೀನ್ ಆಗಲಿ, ಅಧಿಕಾರಿಗಳೇ ಆಗಿರಲಿ, ಡಾಕ್ಟರುಗಳೇ [illegible] ವಿದ್ಯಾರ್ಥಿಗಳೇ ಆಗಲೀ ನಾಲ್ಕನೇ ದರ್ಜೆ ನೌಕರರೊಂದಿಗೆ ಹಾಗೂ [illegible] ಇಲ್ಲ. ಅವರನ್ನು ಚೆನ್ನಾಗಿ ಕಾಣುತ್ತಾ ಇಲ್ಲ. ಆಸ್ಪತ್ರೆ [illegible] ಕೆಲಸದ ವೇಳೆಯಲ್ಲಿ ಅವರು ಒಂದು ವ್ಯವಸ್ಥಿತ [illegible] ಉಪಯೋಗಿಸಲಾಗುವ ಉಪಕರಣಗಳು ಸರಿಯಾಗಿರಬೇಕು. [illegible] ಬಗ್ಗೆ ವ್ಯವಸ್ಥೆ ಮಾಡಬೇಕಾದರೆ ಅದಕ್ಕೆ ಬೇಕಾದಂಥ [illegible] ನಡೆಯುತ್ತಾ ಇವೆ, ಯಾರಿಗೆ ಬೇಕೋ ಅವರಿಗೆ ಮಾತ್ರ, ಅವನ್ನು [illegible] ಸಿಗುತ್ತದೆ. ರೋಗಿಗಳಿಗೆ [illegible] ಚಿಕಿತ್ಸೆ, ಯಾವ ಕಾಯಿಲೆಯೇ ಆಗಲಿ ಸರಿಯಾದ [illegible] ಇಲ್ಲದಿದ್ದರೆ ರೋಗಿಗಳ ಕಾಯಿಲೆ ಹೇಗೆ ಗುಣವಾದೀತು? ರೋಗಿಗಳ [illegible] ಕೈಯಲ್ಲಿರುತ್ತದೆ.

ಈಗ ಬೆಂಗಳೂರಿನಲ್ಲಿ [illegible] ಮಾಡಲಾಗಿದೆ. ಆದರೆ ಅಲ್ಲಿ [illegible] ಇನ್ನೂ ತೆರೆಯಲಿಲ್ಲ. [illegible] ಬಗ್ಗೆ ವ್ಯವಸ್ಥೆ ಮಾಡಬೇಕು.

ಕೊನೆಯದಾಗಿ ಒಂದು ಮಾತು. [illegible] ವಿದ್ಯಾರ್ಥಿಗಳ [illegible] ಜಾಸ್ತಿ ಆಗುತ್ತೆ. [illegible] ಹೋಗುವ ಇಚ್ಛೆ ಇದ್ದರೆ [illegible] ನಾನು [illegible]. ಈಗ [illegible] ಬಗ್ಗೆ ಬಹಳ [illegible] ಮೆಡಿಕಲ್ ಕೋರ್ಸಿಗೆ ಹೋಗಿ [illegible] ಅಂಥವರಿಗೆ [illegible] ಕೊಡಬೇಕು.

[illegible] ಪ್ರಶ್ನೆ

ಶ್ರೀ ಎಸ್.ಎಸ್.ಶೆಟ್ಟರ್ : ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್ ಕ್ಷೇತ್ರದಲ್ಲಿ ಒಳ ಚರಂಡಿಗಾಗಿ [illegible] ಒದಗಿಸಲು ಮಾಡಲಾದ [illegible]?

[illegible]

[illegible]

[illegible]

[illegible]

[illegible]

[illegible]

[illegible]

[illegible] ಹಾಗೂ [illegible]

ಶ್ರೀ ಆರ್.ವಿ.ಪಾಟೀಲ : [illegible] ಒಳಚರಂಡಿ ಸಂಪರ್ಕ ಒದಗಿಸಲಾಗುತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ : [illegible] ಈ ಯೋಜನೆಯು ಜಾರಿಯಲ್ಲಿ ತರಲ್ಪಟ್ಟಿದೆ ಆದರೂ ಹುಬ್ಬಳ್ಳಿ ಧಾರವಾಡದಲ್ಲಿ ಬಹಳಷ್ಟು ಭಾಗಗಳಿಗೆ ಇದರ ಪ್ರಯೋಜನ ಲಭಿಸಿಲ್ಲವೆಂಬುದು ಸರ್ಕಾರದ ಲಕ್ಷ್ಯಕ್ಕೆ ಬಂದಿದೆಯೇ?

ಶ್ರೀ ಆರ್.ಎಂ.ಪಾಟೀಲ : ಸರ್ಕಾರಕ್ಕೆ ಅದು ಗೊತ್ತಿದೆ.

ಶ್ರೀ ಎಸ್. ಆರ್.ಬೊಮ್ಮಾಯಿ : ಯೋಜನೆಯ ಕೆಲಸ ತೀವ್ರಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ?

ಶ್ರೀ ಆರ್.ಎಂ.ಪಾಟೀಲ : ಅದು ಸರ್ಕಾರದ ಉದ್ದೇಶವೇ ಆಗಿದೆ.

ಶ್ರೀ ಎಸ್.ಎಸ್.ಶೆಟ್ಟರ : ಒಳಚರಂಡಿ ಯೋಜನೆ ಪ್ರಕಾರ ಕಳುಹಿಸಿರುವ ಬಿಲ್ಲುಗಳು ಎಷ್ಟೋ ಸಲ ಮನೆಯ ಕಿಮ್ಮತ್ತಿಗಿಂತ ಒಳಚರಂಡಿ ಯೋಜನೆ ಖರ್ಚು ಹೆಚ್ಚೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್.ಎಂ.ಪಾಟೀಲ : ಸರ್ಕಾರದ ಲಕ್ಷ್ಯಕ್ಕೆ ಬಂದಿಲ್ಲ.

ಶ್ರೀ ಎಸ್. ಎಸ್. ಶೆಟ್ಟರು : ಅನೇಕ ಪ್ರಕರಣಗಳಲ್ಲಿ ಒಳಚರಂಡಿ ಯೋಜನೆ ಸೌಲಭ್ಯ ಒದಗಿಸುವ ಕುರಿತು ಖರ್ಚು ಮನೆಗಳ ಮೌಲ್ಯಕ್ಕಿಂತಲೂ ಅಧಿಕವಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಆರ್. ಎಂ. ಪಾಟೀಲ : ಹಾಗಿರಲಿಕ್ಕಿಲ್ಲ. ಚಿಕ್ಕ ಮನೆಗಳಿದ್ದ ಪಕ್ಷದಲ್ಲಿ ಈ ಸೌಲಭ್ಯಗಳನ್ನು ಒದಗಿಸುವ ಖರ್ಚು ಸ್ವಲ್ಪ ಹೆಚ್ಚಿರಬಹುದು, ಆದರೆ ಆ ರೀತಿ ಆಗಲು ಸಾಧ್ಯವಿಲ್ಲ.

ಭಾರತೀಯ ಜನಸಂಘದ ಸದಸ್ಯರು ವಿಧಾನ ಸೌಧದ ಹೊರಗಡೆ ಸತ್ಯಾಗ್ರಹ ಮಾಡಿದಾಗ ಆ ಸತ್ಯಾಗ್ರಹಿಗಳು ವಿರೋಧ ಪಕ್ಷದ ಮುಖಂಡರಾದ ಶ್ರೀ ಶಿವಪ್ಪನವರ ಕಣ್ಣಿಗೆ ಬೀಳದಿದ್ದರೂ ಶ್ರೀ ನಿಜಲಿಂಗಪ್ಪನವರ ಕಣ್ಣಿಗೆ, ಗೃಹಮಂತ್ರಿಗಳ ಕಣ್ಣಿಗೆ ಆಹಾರಖಾತೆಯ ಮಂತ್ರಿಗಳ ಕಣ್ಣಿಗೆ ಬಿದ್ದರು ಎಂಬುದನ್ನು ಶ್ರೀಎಸ್. ಎಸ್. ಶೆಟ್ಟರ ಜುಲೈ 8 ರಂದು ಪ್ರಸ್ತಾಪಿಸಿದಾಗ ಶ್ರೀ ನಿಜಲಿಂಗಪ್ಪನವರು ತಮ್ಮ ಕಣ್ಣಿಗೆ ಬಿದ್ದಿಲ್ಲವೆಂದು ತಿಳಿಸಿದರು.

ಆಗ ಎಸ್. ಎಸ್. ಶೆಟ್ಟರು ' ಸರಕಾರದ ವತಿಯಿಂದ ಅವರನ್ನು ಅರೆಸ್ಟ ಮಾಡಲಾಯಿತು. ಈಗ ಅವರು ಬಂಧಿತರಾಗಿದ್ದಾರೆ. ಯಾರು ಶಾಂತ ರೀತಿಯಿಂದ ಸತ್ಯಾಗ್ರಹ ಮಾಡಿದರೋ ಅವರನ್ನು ಬಂಧಿಸಲಾಯಿತು. ವಿಧಾನಸಭೆಯ ಹೊರಗಡೆ ಮೊಟ್ಟಮೊದಲನೆಯ ಸಾರಿ ಶಾಂತರೀತಿಯಿಂದ ಸತ್ಯಾಗ್ರಹ ಮಾಡಿದವರನ್ನು ಬಂಧಿಸಲಾಯಿತು. ಇದರ ಯೋಗ್ಯಾಯೋಗ್ಯತೆಯನ್ನು ಈ ಸಭೆ ವಿಚಾರಿಸಬೇಕು. ಇನ್ನು ಸರಕಾರದ ನೀತಿಯಿಂದಲೇ ಈ ರೀತಿ ಧಾರಣೆಗಳು ಏರುತ್ತಿವೆ. ನಿಜವಾಗಿ ಆಹಾರದ ಕೊರತೆಯಿಂದಲೂ ಧಾರಣೆಗಳು ಏರುತ್ತಿವೆ. ಇದನ್ನು ವಿಚಾರಿಸಬೇಕು. ಮಾನ್ಯ ಶ್ರೀಜತ್ತಿಯವರು ಇದನ್ನೇ ಹೇಳುತ್ತಾರೆ. ಕೊರತೆಯಿದೆ ಎಂದು ಹೇಳುತ್ತಾರೆ. ನಮ್ಮ ಧೋರಣೆ ಅಸಮಂಜಸವಾಗಿದೆ ಎಂದು ತಿಳಿದುಕೊಂಡು ಆಹಾರ ವಿತರಣೆ ಸರಿಯಾದ ಪದ್ಧತಿಯಿಲ್ಲವೆಂದು ಹೇಳುತ್ತಿದ್ದೇನೆ. ಕೊರತೆಯಿದೆ ಎಂದು ಹೇಳಿದರೆ ಈಗ ಏನು ಪದ್ಧತಿಯನ್ನು ಅನುಸರಿಸುತ್ತಿದ್ದಾರೋ ಗೊತ್ತಿಲ್ಲ, ಈಗಿರತಕ್ಕದ್ದು ಯಾವ ಕಾಲದ ಕೊರತೆ, ಎಷ್ಟು ಕೊರತೆಯಿದೆ ಎಂಬುದನ್ನು ವಿಚಾರಮಾಡಬೇಕು. ಇವರು ಜೀವನಾವಶ್ಯಕ ವಸ್ತುಗಳ ಕಾನೂನು ಪ್ರಕಾರ ಕೊರತೆ ಇರುವಾಗ ಯಾರ್‍ಯಾರು ಎಷ್ಟೆಷ್ಟು ಹಂಚಿಕೊಳ್ಳಬೇಕು. ಎಷ್ಟೆಷ್ಟು ಕೊಡಬೇಕು ಎಂಬುದರ ಬಗ್ಗೆ ಯಾವ ನಿರ್ಣಯವನ್ನೂ ಇವರು ಮಾಡುತ್ತಿಲ್ಲ. ಹುಬ್ಬಳ್ಳಿಯವರಿಗೂ ಮತ್ತು ಸುತ್ತಲೂ ಇರತಕ್ಕ ಗ್ರಾಮಾಂತರ

ಪ್ರದೇಶಗಳಲ್ಲಿ ಕೊರತೆ ಇದ್ದರೂ ಅಲ್ಲಿ ಸರಿಯಾದ ಆಹಾರ ವಿತರಣೆಯಾಗುತ್ತಾ ಇಲ್ಲ. ಕೊರತೆ ಇದ್ದರೆ ರಾಜ್ಯದೊಳಗೆ ಒಮ್ಮೆ ಪ್ರತಿಯೊಬ್ಬರಿಗೂ ಎಷ್ಟೆಷ್ಟು ಹಂಚುತ್ತಾರೆಂದು ಹೇಳಬೇಕು. ಒಂದು ಕಡೆ ಕೊರತೆ ಇದ್ದ ಮೇಲೆ ಅದನ್ನು ಹೇಗೆ ನೀಗಿಸಬೇಕೆಂಬುದು ಮುಖ್ಯ, ಇವತ್ತು ಜಿಲ್ಲಾ ಲೆಕ್ಕಗಳನ್ನು ಹಾಕಿಕೊಳ್ಳಬೇಕು. ಯಾರಿಗೆ ಸಹಾಯಮಾಡಿದ್ದೀರಿ ಎಂಬುದನ್ನು ತಿಳಿಸಬೇಕು.

ಇವತ್ತು ಪ್ರತಿ ಜಿಲ್ಲೆಗೂ ಲೇವಿ ಗೊತ್ತುಮಾಡುವಾಗ ಧಾರವಾಡ ಜಿಲ್ಲೆಯೊಳಗೆ ಧಾರಣೆ ಏರಿದೆ ಎಂಬುದಾಗಿ ಹೇಳಿದರೂ ಸರಕಾರದವರು ಲಕ್ಷ್ಯ ಕೊಡುವುದಿಲ್ಲ. ಈ ಮಾತು ಪ್ರತಿಯೊಂದು ಜಿಲ್ಲೆಗೂ ಅನ್ವಯಿಸುತ್ತದೆ. ಜಿಲ್ಲಾ ಬಂದಿ ನಮ್ಮ ಹಿತಕ್ಕನುಗುಣವಾಗಿ ಆಗದಿರುವುದರಿಂದ ನಾನು ಒಪ್ಪುವುದಿಲ್ಲ. ಇದು ಬ್ಲ್ಯಾಕ್ ಮಾರ್ಕೆಟ್ ಮಾಡುವವರಿಗೆ ಅನುಕೂಲವಾಗುತ್ತದೆ. ಜಿಲ್ಲಾ ಬಂದಿ ಆದಷ್ಟು ನಿಮ್ಮ ಆಡಳಿತದೊಳಗೆ ಬೇಕಾದ ರೀತಿಯಲ್ಲಿ ಮಾಡುವವರಿಗೆ ಅನುಕೂಲವಾಗಿದೆ ಆಡಳಿತವನ್ನು ಪರಿಶುದ್ಧಮಾಡಿಲ್ಲ, ಜನಗಳಿಗೆ ಏನೂ ಕಲ್ಯಾಣವಾಗಿಲ್ಲ. ಆದ್ದರಿಂದ ಇದರಲ್ಲಿ ಪುನರ್ವಿಮರ್ಶೆಯು ಅವಶ್ಯಕತೆಯಿದೆ.

ಇನ್ನು ವ್ಯಾಪಾರಸ್ಥರ ಮೇಲೆ ನಂಬಿಕೆಯಿದೆಯೋ ಅಪನಂಬಿಕೆಯಿದೆಯೋ ಅದನ್ನು ಈ ಸಭೆಯಲ್ಲಿ ವಿಚಾರ ಮಾಡಬೇಕು. ಅಪನಂಬಿಕೆಯಿದ್ದರೆ ಯೋಗ್ಯವಾದ ಕಾನೂನು ಮಾಡಿ ಅದನ್ನು ಯೋಗ್ಯ ರೀತಿಯಲ್ಲಿ ಸರಿಪಡಿಸಿ. ವ್ಯಾಪಾರಸ್ಥರ ಮೇಲೆ ಅಪನಂಬಿಕೆಯಿಲ್ಲವೆಂದು ಹೇಳುತ್ತಾರೆ. ಆದರೆ ಅರ್ಧಂಬರ್ಧ ವಿಶ್ವಾಸವಿಟ್ಟಿದ್ದಾರೆ. ಸಕ್ಕರೆಯ ಮೇಲೆ ಒಂದು ಕಾನೂನು ನಿರ್ಬಂಧ ಇದೆ ಎಂದು ಹೇಳುತ್ತಿದ್ದಾರೆ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಸಾಗಿಸಲು ಹೋಲ್‌ಸೇಲ್ ಮಾರಾಟಗಾರರು ಲೈಸನ್ಸ್ ಪಡೆಯಬೇಕು. ಆಗ ಅದರಿಂದ ವ್ಯಾಪಾರಸ್ಥರಿಗೂ ಹಾಗೂ ಎಲ್ಲ ಜನರಿಗೂ ಅನುಕೂಲವಾಗುತ್ತದೆ. ಮತ್ತು ಕಲ್ಯಾಣವಾಗುತ್ತದೆ ಫುಡ್ ಗ್ರೇನ್ಸ್ ಆರ್ಡರ್ ಪ್ರಕಾರ ನಿಮ್ಮ ತಹಶೀಲ್ದಾರರಿಗೆ ಏನಾದರೂ ಒಂದು ರಿಟರ್ನ್ ಬರುತ್ತದೆ ಎಂಬುದಾಗಿ ಯಾರೂ ಹೇಳುವುದಕ್ಕಾಗುವುದಿಲ್ಲ. ಈಗ ಸರಕಾರಿ ಸಿಬ್ಬಂದಿ ಇದರಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲವೆಂಬ ಪರಿಸ್ಥಿತಿಯುಂಟಾಗಿದೆ. ಇವ್ವತ್ತು ಯಾರೇ ಆಗಲಿ, ತಹಶೀಲ್ದಾರನು ವ್ಯಾಪಾರಸ್ಥರ ಬಳಿಗೆ ಹೋಗಿ ಜಬರ್‌ದಸ್ತಾಗಿ ಪೇಟೆಯೊಳಗೆ ಇಂಥಿಂಥ ಸಿಲ್ಕು ಇದೆ ಎಂದು ಕೇಳಿದರೆ ಹೇಳುವುದಿಲ್ಲ, ನಿಜವಾಗಿ ಇವರು ಇಂಥವರನ್ನು ತಡೆಹಿಡಿಯುವ ಪರಿಸ್ಥಿತಿಯಲ್ಲಿಲ್ಲ. ನಿಮ್ಮ ಡಿಮ್ಯಾಂಡ್ ಎಲ್ಲಾ ಏನೂ ಪ್ರಯೋಜನವಾಗುವಂತಿಲ್ಲ, ಜನರಿಂದ ಸಮಾಧಾನವನ್ನು ಇವರು ಪಡೆಯಬೇಕಾಗಿದೆ. ಸರಕಾರದ ನೀತಿ ಈ ಪ್ರಕಾರ ಇದೆಯೆಂಬುದನ್ನು ಜನರು ಅರಿತುಕೊಂಡಿದ್ದಾರೆ. ಇದರಿಂದಲೇನಾದರೂ ಜನರು ಚಳುವಳಿ ಎಬ್ಬಿಸಬಹುದು. ಈ ಪ್ರಕಾರವಾಗಿ ಜನರಲ್ಲಿ ಮನೋವೃತ್ತಿ ಬರಬೇಕಾದರೆ ನಿಮ್ಮ ಧೋರಣೆ ಅಷ್ಟು ಸರಿಯಾಗಿಲ್ಲ ವ್ಯಾಪಾರಸ್ಥರ ಮೇಲೆ ಹಾಗೂ ಪೇಟೆಯೊಳಗೆ, ಜನರ ಮೇಲೆ ವಿಶ್ವಾಸವನ್ನುಂಟು ಮಾಡುವ ರೀತಿಯಲ್ಲಿ ನೋಡಿದರೆ ನಿಮ್ಮ ಸರಕಾರ ನಡೆಯುತ್ತಿದೆ ಎನಿಸುತ್ತಿಲ್ಲ. ಜನರು ಸರಕಾರದಲ್ಲಿ ಅವಿಶ್ವಾಸವನ್ನು ತೋರಿಸುತ್ತಿದ್ದಾರೆಂದೇ ಭಾವಿಸಿಯಾದರೂ ಕಾನೂನು ಮಾಡಿದರೆ ಅದರಿಂದೇನೋ ಪ್ರಯೋಜನವಾಗಲಿಕ್ಕಿಲ್ಲ. ಇವತ್ತು ಪ್ರತಿಯೊಂದಕ್ಕೂ ನಿರ್ಬಂಧವಿದೆಯೆಂದೂ ಹೇಳಿದರೂ ಪೇಟೆಯೊಳಗೆ ಸಕ್ಕರೆ ಸಿಗುತ್ತದೆ. ಎಲ್ಲಿಂದ ಅದು ಬಂತು? ಕೆಲವು ಕಾರ್ಡಿನವರು ಅದನ್ನು ಕೊಂಡು ಕಾಳಸಂತೆ ವ್ಯಾಪಾರ ಮಾಡುತ್ತಿದ್ದಾರೆ. ಈ ರೀತಿ ಮಾಡಬೇಕಾಗಿದ್ದರೆ ಎಷ್ಟು ರೇಶನ್ ಕಾರ್ಡುಗಳನ್ನು

ಯಾವ ರೀತಿಯಲ್ಲಿ ಹಂಚಿದ್ದೀರಿ, ಹೊರಗಿನ [illegible] ಯಾರು? ಎಂಬ ಪ್ರಶ್ನೆ [illegible]. ತಹಶೀಲ್ದಾರರಿಗೆ ಅನೌಪಚಾರಿಕ ಪತ್ರದ ಬಗ್ಗೆ [illegible] ಪ್ರಸ್ತಾಪಿಸಿದ್ದು [illegible] ಜಾಗದ ಬಗ್ಗೆ ಯಾವ ಒಂದು [illegible] ಸ್ಪಷ್ಟತೆಯಿಲ್ಲ. [illegible] ಬಂದರ ಏನೂ [illegible]? ಎಂದು [illegible]

[illegible] ತಿಳಿಸಿದರು [illegible]

[illegible] ಯೋಜನಾಗಿದ್ದು.

[illegible] ಶ್ರೀ ಎಸ್. ಎಸ್. ಶೆಟ್ಟರ [illegible] ಆರ್. ಎಂ. ಪಾಟೀಲರು [illegible] 1965ರ [illegible] ನಡೆಯಬೇಕು ಎಂಬ [illegible] ಉತ್ತರಿಸಿದರು.

ಶ್ರೀ ಎಸ್. ಎಸ್. ಶೆಟ್ಟರ : ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆಗೆ ಚುನಾವಣೆ ನಡೆಸುವುದಕ್ಕೆ ಮೈಸೂರು ಸರಕಾರ ಶ್ರೇಷ್ಠ ನ್ಯಾಯಾಲಯದಲ್ಲಿ ವಚನಬದ್ಧವಾಗಿದೆಯೇ ?

ಶ್ರೀ ಆರ್. ಎಂ. ಪಾಟೀಲ : ಯಾಚಿಕೆಯೊಂದರಲ್ಲಿ ರಾಜ್ಯ ಸರಕಾರ ಆ ರೀತಿ ವಚನವಿತ್ತಿತ್ತು. ಆದರೆ ಭಾರತ ಸರಕಾರ ನಂತರ ಆಪತ್‌ಸ್ಥಿತಿ ಕ್ರಮಗಳನ್ನು ಘೋಷಿಸಿತು. ಅದಕ್ಕನುಗುಣವಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡುವ ವಿಧೇಯಕ ತರಲಾಯಿತು. ಆ ವಿಧೇಯಕ ಪಾಸಾಗಿ ಕಾಯ್ದೆಯಾಗಿ ಜಾರಿಗೆ ಬಂದಿದೆ ಈ ಕಾಯ್ದೆ ರದ್ದಾಗುವ ತನಕ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲಿಕ್ಕಾಗದು.

ಶ್ರೀಎಸ್. ಎಸ್. ಶೆಟ್ಟರ : ಈ ಮಹಾನಗರ ಪಾಲಿಕೆಗೆ ಸದ್ಯಕ್ಕೆ ಚುನಾವಣೆ ನಡೆಸಲಾರದಂಥ ವಾತಾವರಣವೇನಾದರೂ ಮೈಸೂರು ರಾಜ್ಯದಲ್ಲಿದೆಯೇ ? ನಿಮಗೆ ಹಾಗನಿಸುವುದೇ ?

ಶ್ರೀ ಆರ್. ಎಂ. ಪಾಟೀಲ : ಚುನಾವಣೆ ನಡೆಸಲಿಕ್ಕೆ ಪ್ರತಿಕೂಲವಾದ ಪರಿಸ್ಥಿತಿ ಇದೆ ಎಂಬುದನ್ನು ನಾನು ಸಂಪೂರ್ಣವಾಗಿ ನಿರಾಕರಿಸುತ್ತೇನೆ. ಕಾಯ್ದೆ ನಿಯಮಾವಳಿಗನುಸಾರ ಚುನಾವಣೆಗಳನ್ನು ನಡೆಸಬೇಕಾಗುತ್ತದೆ. ಈಗ ಸದ್ಯ ಜಾರಿಯಲ್ಲಿರುವ ಕಾಯ್ದೆಯಡಿ ಚುನಾವಣೆಗಳನ್ನು ನಡೆಸುವುದು ಸಾಧ್ಯವಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ: ಸಚಿವರು ವಿವರಿಸಿದಂತೆ ಪರಿಸ್ಥಿತಿಯಲ್ಲಿ ಚುನಾವಣೆಯನ್ನು ನಡೆಸಲು ಬರುವಂತೆ ಕಾಯ್ದೆಗೆ ತಿದ್ದುಪಡಿ ಮಾಡಲು ಸರಕಾರವೇನಾದರೂ ಯೋಚಿಸುತ್ತಿದೆಯೇ ?

ಆರ್. ಎಂ. ಪಾಟೀಲ : ಆಪತ್‌ಸ್ಥಿತಿ ಕ್ರಮ ಕೇಂದ್ರದಿಂದ ಹಿಂತೆಗೆದುಕೊಳ್ಳಲ್ಪಟ್ಟ ನಂತರವೇ ಕಾಯ್ದೆ ರದ್ದತಿ ಸಾಧ್ಯ.

ಶ್ರೀ ಎಚ್. ಸಿದ್ದವೀರಪ್ಪ: ಈ ಕರಾಳ ಶಾಸನವಿರುವ ತನಕ ಅಥವಾ ಈ ಕಾಯ್ದೆಗೆ ತಿದ್ದುಪಡಿಯಾಗುವ ತನಕ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸಕೂಡದೆಂದೇನಾದರೂ ಆಪತ್ ಸ್ಥಿತಿ ಜಾರಿಯ ಕಾಯ್ದೆಯಲ್ಲಿ ಇದೆಯೇ?

ಶ್ರೀ ಆರ್. ಎಂ. ಪಾಟೀಲ : ಕಾಯ್ದೆಯು ಕರಾಳ ಅಥವಾ ಧವಳವಾಗೇನೂ ಇರದು .ಯಾವುದೇ ಕಾಯ್ದೆ ಕಾಯ್ದೆಯಷ್ಟೇ. ಭಾರತ ಸರಕಾರ ಮಾಡಿರುವ ಆಪತ್‌ಸ್ಥಿತಿ ಘೋಷಣೆಗನುಸಾರ ರಾಜ್ಯ ಸರಕಾರ ಈ ಕಾಯ್ದೆಯನ್ನು ಮಾಡಿದೆ. ಆಪತ್ ಸ್ಥಿತಿ ಕ್ರಮಗಳನ್ನು ಹಿಂತೆಗೆದುಕೊಂಡ ನಂತರವೇ ಕಾಯ್ದೆ ರದ್ದತಿ ಅಥವಾ ತಿದ್ದುಪಡಿಯನ್ನು ರಾಜ್ಯ ಸರಕಾರ ಮಾಡಲು ಸಾಧ್ಯ.

ಶ್ರೀ ಎಚ್. ಸಿದ್ದವೀರಪ್ಪ: ನನ್ನ ಪ್ರಶ್ನೆಗೆ ಸರಿಯಾದ ಉತ್ತರವಿದಲ್ಲ. ಆಪತ್ ಸ್ಥಿತಿ ಊರ್ಜಿತದಲ್ಲಿರುವ ತನಕ ರಾಜ್ಯದಲ್ಲಿಯ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಕೂಡದು ಎಂದು ಆಪತ್ ಸ್ಥಿತಿ ಕಾಯ್ದೆಯಲ್ಲಿ ಹೇಳಲಾಗಿದೆಯೇ? ಹೇಗೆ ಎಂಬ ಈ ವಿಶಿಷ್ಟ ಪ್ರಶ್ನೆಗೆ ನಾನು ತಮ್ಮ ನೇರ ಉತ್ತರ ಬಯಸುತ್ತೇನೆ.

ಶ್ರೀ ಆರ್. ಎಂ. ಪಾಟೀಲ : ಈ ಪ್ರಶ್ನೆಗೆ ವಿಶಿಷ್ಟ ಉತ್ತರ ಕೊಡಬೇಕೆಂದೇನೂ ಇಲ್ಲ, ಆಪತ್ ಸ್ಥಿತಿ ಜಾರಿ ಅವಧಿಯಲ್ಲಿ ಕಾಯ್ದೆ, ಸುವ್ಯವಸ್ಥೆ ಹಾಗೂ ಶಾಂತಿ ಪಾಲನೆಯ ಪ್ರಶ್ನೆಯೂ ಇರುತ್ತದೆ.

ಸಭಾಧ್ಯಕ್ಷರು : ಈ ಕಾಯ್ದೆಯ ನಿಬಂಧನೆಗಳು ಪ್ರತಿಯೊಬ್ಬರಿಗೂ ತಿಳಿದೇ ಇವೆ.

ಶ್ರೀ ಎಚ್. ಸಿದ್ದವೀರಪ್ಪ: ಚುನಾವಣೆ ನಡೆಸುವುದಕ್ಕೆ ಪ್ರತಿಕೂಲ ಪರಿಸ್ಥಿತಿಗಳೇನೂ ಇಲ್ಲವೆಂಬ ತಮ್ಮ ಮೊದಲಿನ ಹೇಳಿಕೆಯನ್ನು ಸಚಿವರು ಹೇಗೆ ಬದಲಿಸಲು ಸಾಧ್ಯ ? 1967 ರಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು ಹೋಗಿವೆ ಆದರಲ್ಲಿ ಯಾರದೇ ತಲೆ ಒಡೆದಿಲ್ಲ, ಹೇಗಾದರೂ ನಾವು ಕಾಯ್ದೆಗೆ ಗುಲಾಮರಲ್ಲ, ರಾಜ್ಯದ ಜನತೆಯ ಹಿತರಕ್ಷಣೆಗಾಗಿಯೇ ಕಾಯ್ದೆ ತರುವುದು.

ಶ್ರೀ ಆರ್. ಎಂ. ಪಾಟೀಲ : ಎಲ್ಲಿಯವರೆಗೆ ಕಾಯ್ದೆ ಇರುವುದೋ ಅಲ್ಲಿಯ ತನಕ ಅದನ್ನು ನಾವೆಲ್ಲ ಪಾಲಿಸಲೇಬೇಕು.

ಶ್ರೀ ಎಸ್. ಎಸ್. ಶೆಟ್ಟರ : ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಪ್ರಸಕ್ತ ಸದಸ್ಯರ ಅವಧಿ ವಿಸ್ತರಣೆ ಸಂಯೋಜನೆಯನ್ನು ರಾಜ್ಯ ಸರಕಾರ ಪ್ರಸಿದ್ದಿಸಿದೆಯೇ ?

ಶ್ರೀ ಆರ್. ಎಂ. ಪಾಟೀಲ :ಕಾಯ್ದೆಯಲ್ಲೇ ಈ ರೀತಿ ಅವಕಾಶ ನೀಡಲಾಗಿದೆ ಹೀಗಾಗಿ ಪ್ರಸಕ್ತ ಸದಸ್ಯರೇ ಮುಂದುವರಿಯುತ್ತಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ : ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸಲು ಎಮರ್ಜನ್ಸಿಯ ತೊಂದರೆಯಿರದೇ ನಿಜವಾಗಿಯೂ ಕಾನೂನಿನ ತೊಂದರೆ ಇದೆ ಎನ್ನುವುದಾಗಿದ್ದರೆ ಇದೇ ಕಾಯ್ದೆಯನ್ನು ಏತಕ್ಕಾಗಿ ಮುಂದುವರಿಸಬೇಕು ? ಸೂಕ್ತ ತಿದ್ದುಪಡಿ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ : ಇದು ಒಂದೇ ಅಡಚಣೆ, ಭಾರತ ಸರಕಾರ ಆಪತ್ ಸ್ಥಿತಿ ಕ್ರಮಗಳನ್ನು ಹಿಂತೆಗೆದುಕೊಳ್ಳುವ ವಿಚಾರ ಮಾಡುತ್ತಿದೆ.

ಶ್ರೀ ಎಸ್. ಶಿವಪ್ಪ : ಮೈಸೂರ ರಾಜ್ಯದಲ್ಲಿ ಈಚೆಗೆ ಮಹಾಚುನಾವಣೆಗಳು ನಡೆದಾಗ ಯಾವ ಎಮರ್ಜನ್ಸಿಯ ತೊಂದರೆಯೂ ಇಲ್ಲದಂತೆ ಯಾವ ಆತಂಕವೂ ಇಲ್ಲದಂತೆ ನಡೆಯಿತು. ಆದರೆ ಈಗ ಸ್ಥಳೀಯ ಸಂಸ್ಥೆಗಳ ಚುನಾವಣೆ ಮಾಡುವುದಕ್ಕೆ ಕಾನೂನಿನ ತೊಂದರೆ ಬಂದಿದೆ. ಇದಕ್ಕಾಗಿ ಇದನ್ನು ತಿದ್ದುಪಡಿ ಮಾಡಬೇಕೆಂದು ಕೇಂದ್ರ ಸರಕಾರಕ್ಕೇನಾದರೂ ಬರೆದಿದ್ದೀರಾ ?

ಶ್ರೀ ಆರ್. ಎಂ. ಪಾಟೀಲ : ಕೇಂದ್ರ ಸರಕಾರಕ್ಕೆ ಬರೆಯುವುದು ಅವಶ್ಯವೇನಿಲ್ಲ, ಕೇಂದ್ರ ಸರಕಾರದವರಿಗೂ ಬೇಕಾದಷ್ಟು ಆತುರತೆಯಿದೆ. ನಮಗೂ ಆತುರತೆಯಿದೆ.

ಶ್ರೀ ಎಸ್. ಎಸ್. ಶೆಟ್ಟರ : ಯಾವುದೇ ಸ್ಥಳೀಯ ಸಂಸ್ಥೆ ಚುನಾವಣೆ ನಡೆಸದಿರುವುದರಿಂದ ಈ ಕಾರ್ಪೊರೇಶನಿನ ಕ್ಷೇತ್ರದಲ್ಲಿಯ ರಾಜಕೀಯ, ಸಾಮಾಜಿಕ ವಾತಾವರಣ ಕೆಟ್ಟು ಆರ್ಥಿಕ ಸಮಸ್ಯೆಗಳು ಉಲ್ಬಣಗೊಂಡಿವೆಯೆಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ : ನನ್ನ ಸ್ನೇಹಿತರು ಹೇಳುವಂತೆ ಪರಿಣಾಮಗಳಾಗಿಲ್ಲ.

ಹೆಚ್ಚಿದ ಕರಭಾರ

ಜಗತ್ತಿಗೆ ಪಾಠವನ್ನು ಕಲಿಸಿದಂಥ ಮಹಾತ್ಮಾ ಗಾಂಧೀಜಿಯವರ ಕಾಲ ಹೋಯಿತು. ಜಗತ್ತೇ ಬಂದು ಇವತ್ತು ಬುದ್ಧಿ ಕಲಿಸಿದರೂ ಬುದ್ಧಿ ಕಲಿಯದಂಥ ಅವರ ಶಿಷ್ಯರ ಕಾಲ ಬಂತು. ಈ ರೀತಿ ಹೇಳಿದರೆ ಸತ್ಯಕ್ಕೆ ದೂರವಾಗಲಿಕ್ಕಿಲ್ಲ. ಆ ಒಂದು ನಿರ್ಣಯಕ್ಕೆ ಈ ಸರಕಾರ ಬಂದಿದೆ . ಆ ಒಂದು ನಿರ್ಣಯವೆಂದರೆ ಮದ್ಯಪಾನ ನಿರೋಧವನ್ನು ಸಡಿಲಿಸುವುದು. ಈ ಕಾನೂನನ್ನು ತೆಗೆದುಹಾಕುವುದು. ಇದರಿಂದ ಬರುವ ದುಡ್ಡನ್ನು ಯೋಜನೆಗಳಿಗೆ ಉಪಯೋಗ ಮಾಡುವುದು. ಸರಕಾರದ ಯೋಜನೆಯಾಗಿದೆ ಎಂದು ಹೇಳಿದ ಶ್ರೀ ಎಸ್. ಎಸ್. ಶೆಟ್ಟರ ಅವರು ವಿವಿಧ ತೆರಿಗೆಗಳ ಭಾರ ಹೆಚ್ಚಿರುವಾಗ ಅಂಥದನ್ನು ಕಡಿಮೆ ಮಾಡುವ ವಿಚಾರ ಸರಕಾರಕ್ಕಿಲ್ಲ.

ಈಗ ಅನೇಕ ಸಾಮಾನ್ಯ ಜನರ ಮೇಲೆ ಸೇಲ್ಸ್ ಟ್ಯಾಕ್ಸ್, ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬೀಳುತ್ತಿದೆ. ಈ ಭಾರವನ್ನು ಅವರು ತಡೆಯಲಾರರು. ಅದನ್ನು ಇಳಿಸಬೇಕೆಂದು ನಾವು ಇಲ್ಲಿ ಅನೇಕ ಸಲ ಚರ್ಚೆಗಳನ್ನು ಮಾಡಿದ್ದೇವೆ. ಇಂತಹ ಚರ್ಚೆಗಳು ನಡೆದರೂ ಸಹ ಈ ಭಾರಗಳು ಮಾತ್ರ ಇಳಿಯಲಿಲ್ಲ. ಈಗ ಕುಡಿಯುವಂಥ ಚಟವಿಲ್ಲದವರಿಗೆ ಈ ಪ್ರೊಹಿಬಿಶನ್ ಹೋಗುತ್ತದೆ ಎಂದರೆ ವ್ಯಸನವಾಗುತ್ತದೆ. ಈ ಬಜೆಟ್‌ನಲ್ಲಿ ಹೇಳಿದಂಥ ಕೆಲವು ಅಂಶಗಳನ್ನು ಅಂದರೆ ಎಕ್ಸೈಜ್ ಡ್ಯೂಟಿ ಮತ್ತು ಇತರ ಅಂಕಿ ಸಂಖ್ಯೆಗಳನ್ನು ಪರಿಶೀಲನೆ ಮಾಡಿ ನೋಡಿದರೆ ಹೋದ ವರ್ಷ ಏನು ಅಂಕಿ ಸಂಖ್ಯೆಗಳು ಇದ್ದುವೋ ಈ ಸಾಲಿನಲ್ಲೂ ಅಷ್ಟೇ ಇದೆ. ಈ ಪ್ರೊಹಿಬಿಶನ್ ತೆಗೆಯುವದರಿಂದ ಎಷ್ಟು ಹಣ ಬರಬಹುದು ಎಂಬುದು ಈ ಬಜೆಟ್‌ನಿಂದ ತಿಳಿಯುತ್ತಿಲ್ಲ. ಈ ಒಂದು ಚಿತ್ರವನ್ನು ನಮ್ಮ ಆರ್ಥಿಕ ಮಂತ್ರಿಗಳು ಕೊಟ್ಟಿದ್ದಾರೆ. ಅದು ಅಂದಾಜಿನ ಮೇಲೆ ಎಷ್ಟು ಬರಬಹುದೆಂಬ ಮಾತನ್ನು ಸ್ಪಷ್ಟವಾಗಿ ತಿಳಿಸುವುದು ಸಾಧ್ಯವಿಲ್ಲವೆನ್ನುವುದು ಗೊತ್ತಾಗುತ್ತದೆ. ನನ್ನ ದೃಷ್ಟಿಯಲ್ಲಿ ನಾಲ್ಕು ಕೋಟಿ ಅಥವಾ ನಾಲ್ಕೂವರೆ ಕೋಟಿ ರೂಗಿಂತ ಮಿಗಿಲಾಗಿ ಬರಬಹುದು ಇದರಿಂದ ಬರುವ ಆದಾಯದಿಂದ ಜನರ ಭಾರವೇನೂ ಎಳ್ಳಷ್ಟೂ ಕಡಿಮೆಯಾವುದಿಲ್ಲ.

ಸೇಲ್ಸ್‌ಟ್ಯಾಕ್ಸ್ ಮತ್ತು ಅಗ್ರಿಕಲ್ಚರಲ್ ಇನ್‌ಕಮ್ ಟ್ಯಾಕ್ಸ್‌ಗಳನ್ನು ಸಾಕಷ್ಟು ಇಳಿಸಿದ್ದರೆ ಜನಸಾಮಾನ್ಯರಿಗೆ ತೆರಿಗೆಯ ಭಾರ ಕಡಿಮೆಯಾಗುತ್ತಿತ್ತು. ಈ ಸೇಲ್ಸ್ ಟ್ಯಾಕ್ಸ್ ಹಾಕುವುದರಿಂದ ಅನೇಕ ಸಣ್ಣ ಸಣ್ಣ ಉದ್ಯಮಿಗಳು ತಮ್ಮ ಕೈಗಾರಿಕೆಯನ್ನು ನಡೆಸಲು ಸಾಧ್ಯವಾಗದೇ ಬಂದ್ ಮಾಡಿದ್ದಾರೆ. ಆಹಾರ ಧಾನ್ಯದ ಮೇಲೆ ಸೇಲ್ಸ್‌ಟ್ಯಾಕ್ಸ್ ಹಾಕಿದ್ದಾರೆ. ನಮ್ಮ ನೆರೆಹೊರೆಯ ರಾಜ್ಯಗಳು ನಮ್ಮ ಕೂಡ ಎಷ್ಟೊಂದು ಸ್ಪರ್ಧೆ ಮಾಡುತ್ತಿವೆಯೆಂದರೆ, ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುವ ವಸ್ತುಗಳು ಬೇರೆ ರಾಜ್ಯಕ್ಕೆ ಹೋದರೆ ಅಲ್ಲಿ ಮಾರಾಟವಾಗುತ್ತಿಲ್ಲ, ಗದುಗಿನಿಂದ, ಹುಬ್ಬಳ್ಳಿಯಿಂದ ರೆಡಿಮೇಡ್ ಬಟ್ಟೆಗಳನ್ನು ಮಹಾರಾಷ್ಟ್ರಕ್ಕೆ ಕಳಿಸುತ್ತಿದ್ದರು. ಅದು ಈಗ ನಿಂತು ಹೋಗಿದೆ, ಏಕೆಂದರೆ ಅದರ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಿರುವುದೇ ಕಾರಣ. ಬೇರೆ ರಾಜ್ಯಗಳಲ್ಲಿ ಈ ರೀತಿ ಟ್ಯಾಕ್ಸ್ ಹಾಕುವುದಿಲ್ಲ. ಆದ್ದರಿಂದ ಈ ಬಗ್ಗೆ ಸರಿಯಾದ ಕ್ರಮವನ್ನು ಸರಕಾರದವರು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಇನ್ನು ಸಾಲದ ಬಗ್ಗೆ ಹೇಳುವುದಾದರೆ, ಅನೇಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಸಾಲ ಕೊಡುವ ಬಗ್ಗೆ ಸರಕಾರದವರು ಜಾಹೀರು ಮಾಡಿದ್ದಾರೆ. ಕೆಲವು ವಿಚಾರಗಳನ್ನು ನೋಡಿದರೆ ಆನಂದವಾಗುತ್ತದೆ. ಮತ್ತೆ ಕೆಲವು ಕಡೆ

ನೋಡಿದರೆ ಸಾಕಷ್ಟು ಆನಂದವಾಗಲಿಕ್ಕಿಲ್ಲವೆಂದು ಹೇಳುತ್ತೇನೆ. ಮನೆಗಳನ್ನು ಕಟ್ಟುವ ಬಗ್ಗೆ ಅನೇಕ ಯೋಜನೆಗಳನ್ನು ಮಾಡಿದ್ದಾರೆ. ಎಲ್.ಆಯ್.ಸಿಯಿಂದ ಹಣವನ್ನು ಪಡೆದು ಈ ಜಾಬಿಗೆ ತೊಡಗಿಸಿದ್ದಾರೆ. ಮನೆಗಳನ್ನು ಕೊಳ್ಳಲು ಸಾಕಷ್ಟು ಜನರಿಗೆ ಹೋದ ವರ್ಷ ಹಣವನ್ನು ಕೊಟ್ಟಿದ್ದರೂ ಈ ಸಾಲಿನಲ್ಲಿ ಹೆಚ್ಚು ಹಣವನ್ನು ಕೊಟ್ಟಿಲ್ಲ.

ಈ ಪ್ರಕಾರ ಅನೇಕ ವಿಧವಿಧವಾದ ರೀತಿಯಲ್ಲಿ ಮನೆ ಕಟ್ಟಿಸುವುದಕ್ಕಾಗಿ ಹಣದ ಸಾಲವನ್ನು ತೆಗೆದಿರಿಸಲಾಗಿದೆ. ಎಷ್ಟೋ ಹರಿಜನರಿಗೆ ಮತ್ತು ಗಿರಿಜನರಿಗೆ ಮನೆಗಳನ್ನು ಕಟ್ಟಿಸುವಂಥ ಯೋಜನೆ ಏನಿದೆ? ಅದಕ್ಕೆ ಒದಗಿಸಿರುವ ಹಣ ನಮ್ಮ ರಾಜ್ಯಕ್ಕೆ ಸಾಕಾಗುವುದಿಲ್ಲವೆಂದು ಹೇಳುತ್ತೇನೆ. ನಮ್ಮ ನೆರೆಯ ರಾಜ್ಯವಾದ ಮದ್ರಾಸಿನಲ್ಲಿ 6 ಕೋಟಿ ರೂಗಳನ್ನು ಈ ಒಂದು ಯೋಜನೆಗಾಗಿ ತೆಗೆದಿಟ್ಟಿದ್ದಾರೆ. ಅವರಿಗಾಗಿ ಬೇಕಾದಷ್ಟು ಮನೆಗಳನ್ನು ಕಟ್ಟಿಸುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಈ ಬಾರಿಗೆ ಇಟ್ಟಿರುವ ಹಣ ಸಾಕಾಗುವುದಿಲ್ಲ ಏಕೆಂದರೆ ಮನೆಯ ಅಭಾವ ನಮ್ಮಲ್ಲಿ ಸಾಕಷ್ಟು ಇದೆ. ಮನೆ ಕಟ್ಟಿಕೊಳ್ಳಲು ಸಾಲ ಕೊಡುವುದಕ್ಕೆ ಏನು ಒಂದು ನಿಯಮವಿದೆ ಅದು ಸಾಮಾನ್ಯರಿಗೆ ಸರಿಯಾಗಿ ತಿಳಿಯುತ್ತಿಲ್ಲ. ಸರಳ ರೀತಿಯಲ್ಲಿ ಅದು ಎಲ್ಲರಿಗೂ ತಿಳಿಯುವಂತೆ ಮಾಡಬೇಕಾಗಿತ್ತು. ಈ ಬಗ್ಗೆ ಅನೇಕ ವಿಧಾನಗಳನ್ನು ಮಾಡಿರುವುದು ಸರಿಯಲ್ಲ. ಇದರಿಂದ ಮನೆ ಕಟ್ಟಬೇಕೆನ್ನುವವರಿಗೆ ಅನುಕೂಲವಾಗಲಿ, ಲಾಭವಾಗಲಿ ಆಗುತ್ತಿಲ್ಲ.

ಕೆಲವು ಪಟ್ಟಣಗಳಲ್ಲಿರುವ ಹೌಸಿಂಗ್ ಸೊಸೈಟಿಗಳು ಏನಿವೆ, ಅವುಗಳಿಗೆ ಸಾಲಕ್ಕಾಗಿ ಅರ್ಜಿಯನ್ನು ಹಾಕಿಕೊಂಡಾಗ ಅವರು ಕೊಟ್ಟಿರುವ ಉತ್ತರವೆಂದರೆ ಹಳ್ಳಿಗಳಲ್ಲಿ ಮನೆಯನ್ನು ಕಟ್ಟುವುದಾದರೆ ಹಣವನ್ನು ಕೊಡುತ್ತೇವೆ. ಪಟ್ಟಣಗಳಲ್ಲಿ ಮನೆ ಕಟ್ಟುವ ಹಾಗಿದ್ದರೆ ಹಣ ಕೊಡುವುದಿಲ್ಲವೆಂದು. ಸರಕಾರದವರು ಈ ಬಗ್ಗೆ ಏನು ವ್ಯವಸ್ಥೆ ಮಾಡಿದ್ದಾರೆ ? ಅದು ತೊಡಕಿನಿಂದ ಕೂಡಿರುವುದರಿಂದ ಎಲ್ಲರಿಗೂ ಹಣ ಸಿಗುತ್ತಿಲ್ಲ, ಹೀಗಾಗಬಾರದು. ಹಳ್ಳಿಗಳಲ್ಲಿ ಅಥವಾ ಪಟ್ಟಣಗಳಲ್ಲಿ ಎಲ್ಲೇ ಆಗಲಿ ಸಾಮಾನ್ಯವರ್ಗದ ಜನರು ಮನೆ ಕಟ್ಟಿಕೊಳ್ಳಲು ಅನುಕೂಲ ಮಾಡಿಕೊಡಬೇಕು. ಇದರಲ್ಲಿ ವ್ಯತ್ಯಾಸವಿರಬಾರದು. ಸ್ವಲ್ಪ ತಾರತಮ್ಯ ಬೇಕಾದರೆ ಮಾಡಬಹುದು ಅನೇಕ ತಾರತಮ್ಯಗಳನ್ನು ಸೃಷ್ಟಿಸಿ ಜನರಿಗೆ ತಿಳಿಯದಂತೆ ಗೊಂದಲವೆಬ್ಬಿಸಬಾರದು.

ಇನ್ನು ತಕಾವಿ ಸಾಲಗಳನ್ನು ಸರಿಯಾಗಿ ಹಂಚಬೇಕು, ಭ್ರಷ್ಟಾಚಾರ ನಿಲ್ಲಿಸಬೇಕು.

ಶ್ರೀ ಎಸ್. ಎಸ್. ಶೆಟ್ಟರ : ಹುಬ್ಬಳ್ಳಿ ಕೆ. ಎಂ. ಸಿ ಆಸ್ಪತ್ರೆಯಲ್ಲಿ ಎಕ್ಸರೇ ಫಿಲ್ಮ್ಸ ಹಾಗೂ ಔಷಧಿಗಳ ಕೊರತೆ ಕುರಿತು ಸರಕಾರಕ್ಕೆ ದೂರುಗಳು ಬಂದಿವೆಯೇ ?

ಆರೋಗ್ಯ ವಸತಿ ಇಲಾಖೆ ಮಂತ್ರಿ ಕೆ ಪುಟ್ಟಸ್ವಾಮಿ : ಇಲ್ಲ

ಶ್ರೀ ಎಸ್. ಎಸ್. ಶೆಟ್ಟರ : ಹುಬ್ಬಳ್ಳಿ ಕೆ. ಎಂ. ಸಿ ಆಸ್ಪತ್ರೆಯಲ್ಲಿರುವ ಮೂರು ಎಕ್ಸರೇ ಯಂತ್ರಗಳ ಬಗ್ಗೆ ಮೇಲಿಂದ ಮೇಲೆ ದೂರಲಾಗಿದ್ದು, ಸರಕಾರದ ಗಮನಕ್ಕೆ ಬಂದಿವೆಯೇ ?

ಶ್ರೀ ಕೆ. ಪುಟ್ಟಸ್ವಾಮಿ : ಸದಸ್ಯರ ಪ್ರಶ್ನೆ ಎಕ್ಸರೇ ಪಿಲ್ಮ್ಸಗಳ ಬಗೆಗಿದ್ದು ಈಗ ಯಂತ್ರಗಳ ಬಗ್ಗೆ ಕೇಳುತ್ತಿದ್ದಾರೆ. ಆ ಯಂತ್ರಗಳು ಮೇಲಿಂದ ಮೇಲೆ ಕೆಡುತ್ತಲಿವೆ.

ಶ್ರೀ ಸಿದ್ದಯ್ಯ ಕಾಶೀಮಠ : ಈ ಆಸ್ಪತ್ರೆಗೆ ಪ್ರತಿವರ್ಷ ಎಷ್ಟು ಎಕ್ಸರೇ ಪಿಲ್ಮ್ಸ್ ಹಾಗೂ ಎಷ್ಟು ಪ್ರಮಾಣದ ಔಷಧಿಗಳನ್ನು ಪೂರೈಸಲಾಗುತ್ತಿದೆ ?

ಕೆ. ಪುಟ್ಟಸ್ವಾಮಿ : ಸಾಕಷ್ಟು ಪ್ರಮಾಣದಲ್ಲಿ ಔಷಧಿ ಹಾಗೂ ಬೇಕಾದಷ್ಟು ಎಕ್ಸರೇ ಫಿಲ್ಮ್ಸ್‌ಗಳನ್ನು ಪೂರೈಸಲಾಗುತ್ತಿದೆ.

ಶ್ರೀ ಎ. ಆರ್. ಬದರಿನಾರಾಯಣ : ಆಸ್ಪತ್ರೆಗಳಿಗೆ ಪೂರೈಸುವ ಔಷಧಿ ಮೊದಲಾದವುಗಳು ಅವುಗಳಲ್ಲಿಯ ಬೇಡಿಕೆಯಿರುಮಷ್ಟು ಪ್ರಮಾಣದಲ್ಲಿ ಪೂರೈಸಲ್ಪಡುತ್ತಿರುವ ಬಗ್ಗೆ ಸರಕಾರಕ್ಕೆ ತೃಪ್ತಿಯಿದೆಯೇ?

ಸಭಾಧ್ಯಕ್ಷರು : ಇದು ತೀರಾ ಸಾಮಾನ್ಯ ಸ್ವರೂಪದ ಪ್ರಶ್ನೆ.

ಅಜೀಜ್ ಸೇಟ್ : 1967 ಮಾರ್ಚ, ಎಪ್ರೀಲ್, ಮೇ ತಿಂಗಳುಗಳಲ್ಲಿ ಎಷ್ಟೆಷ್ಟು ಔಷಧಿಗಳನ್ನು ಈ ಆಸ್ಪತ್ರೆಗೆ ಪೂರೈಸಲಾಗಿದೆಯೆಂಬ ವಿವರ ನೀಡುವಿರಾ ?

ಶ್ರೀ ಕೆ. ಪುಟ್ಟಸ್ವಾಮಿ : ಕಾಲಾವಕಾಶ ಬೇಕು.

ಶ್ರೀ ಎಸ್. ಎಸ್. ಶೆಟ್ಟರ : ಹುಬ್ಬಳ್ಳಿ ಕೆ. ಎಂ. ಸಿ ಆಸತ್ರೆಗೆ ಬೇಕಾಗುವಂಥ ಔಷಧಿಗಳಿಗಾಗಿ ಬೇಡಿಕೆ ಸಲ್ಲಿಸುವರಾರು ? ಎಂಬುದನ್ನು ನಾನು ತಿಳಿದುಕೊಳ್ಳಬಹುದೇ ?

ಶ್ರೀ ಕೆ.ಪುಟ್ಟಸ್ವಾಮಿ : ಬಹುಶಃ ಆಸ್ಪತ್ರೆಯ ಡೀನ್‌ರು

ಶ್ರೀ ಸಿದ್ದಯ್ಯ ಕಾಶೀಮಠ : ಎಕ್ಸರೇ ಫಿಲ್ಮಗಳು ಇಲ್ಲದಿರುವುದರಿಂದ ಕೆ. ಎಂ. ಸಿ ಆಸ್ಪತ್ರೆಯಲ್ಲಿ ಡಾಕ್ಟರುಗಳು ಬೇರೆ ಕಡೆಯಿಂದ ಎಕ್ಸರೆ ಫಿಲ್ಮ್ಸ್‌ಗಳನ್ನು ತರುವಂತೆ ಹೇಳುತ್ತಿದ್ದಾರೆ. ಅದನ್ನು ನಿವಾರಣೆ ಮಾಡುವುದಕ್ಕೆ ಏನಾದರೂ ತೀವ್ರ ಕ್ರಮ ಕೈಗೊಳ್ಳುವಿರಾ ?

ಶ್ರೀ ಕೆ. ಪುಟ್ಟಸ್ವಾಮಿ : ಎಕ್ಸರೇ ಫಿಲ್ಮಗಳು ಲಭ್ಯವಿರುವುದಾಗಿ ಈಗಾಗಲೇ ಉತ್ತರಿಸಿದ್ದೇನೆ. 1966 ಜುಲೈ ನಿಂದ ನವಂಬರ್ ಈ ಅವಧಿಯಲ್ಲಿ ರೂಪಾಯಿಯ ಅಪಮೌಲ್ಯದಿಂದಾಗಿ ತೊಂದರೆಯಾಗಿತ್ತು. ಆ ಅವಧಿಯಲ್ಲಿ ಮಾತ್ರ ಎಕ್ಸರೇ ಫಿಲ್ಮಗಳ ಕೊರತೆಯುಂಟಾಗಿರಬಹುದು ಈಗ ಸಾಕಷ್ಟು ಪ್ರಮಾಣದಲ್ಲಿ ಪೂರೈಸಲಾಗುತ್ತಿದೆ.

ಗಾಂಧಿ ತತ್ವದ ಕೊಲೆ

ಶ್ರೀ ಎಸ್. ಎಸ್. ಶಿಟ್ಟರ : ಮದ್ಯಪಾನ ನಿರೋಧ ರದ್ದತಿ ವಿಷಯದಲ್ಲಿ ಕೊಡಲಿಯ ಕಾವು ಕುಲಕ್ಕೆ ಮೂಲ ಎನ್ನುವಂತೆ ಇವತ್ತು ಗಾಂಧೀ ತತ್ವ ಕಾಂಗ್ರೆಸ್ಸಿನವರಿಂದಲೇ ಕೊಲೆಯಾಗುತ್ತಿದೆ ಎಂಬುದನ್ನು ನೋಡಿ ದುಃಖವಾಗುತ್ತದೆ. ಇವತ್ತು ಈ ಕಾಂಗ್ರೆಸ್ಸಿಗರಿಂದಲೇ ಈ ಕಾಯ್ದೆಯ ಬದಲಾವಣೆಯೇನು ಆಗುತ್ತಿದೆ ಅದರಿಂದ ಇವರಿಗೆ ಕಾಂಗ್ರೆಸ್ಸಿಗರೆನ್ನಬೇಕೋ ಅನ್ನಬಾರದೋ ಎನ್ನುವ ಸಂಶಯ ಬರುತ್ತಿದೆ. ಇದರಲ್ಲಿ ಬರುವ ಇನ್ನೊಂದು ಮುಖ್ಯವಾದ ವಿಷಯವೆಂದರೆ ಈ ಕಾನೂನು ಯಾವುದನ್ನು ಜಾರಿಯಲ್ಲಿ ತರುತ್ತೇವ್ರೋ ಆದಕ್ಕಾಗಿ ಜನರ ಸುಖದುಃಖಗಳನ್ನು ಅಭಿಪ್ರಾಯಗಳನ್ನು ತಿಳಿದುಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಜನರ ಅಭಿಪ್ರಾಯ ದುಡಿಯತಕ್ಕ ಜನರ ಅಭಿಪ್ರಾಯ ತಿಳಿದುಕೊಂಡಿದ್ದಾರೋ ಅಥವಾ ಸೆರೆ ಮಾರಲಿಕ್ಕೆ ಯಾರಿಗೆ ಅನುಕೂಲವಾಗುವುದೋ ಅಂಥವರ ಅಭಿಪ್ರಾಯ ತೆಗೆದುಕೊಂಡಿದ್ದಾರೋ ? ಯಾರ ಅಭಿಪ್ರಾಯ ತೆಗೆದುಕೊಂಡು ಈ ಕಾಯ್ದೆ ತರಬೇಕೆಂದು ವಿಚಾರ ಮಾಡಿದರೋ ಯಾವ ವಿಚಾರ ಮಾಡಿದರೋ ಎನ್ನುವ ಸಂದಿಗ್ಧ ಪ್ರಶ್ನೆ ಇಂದು ಕಾಣಿಸುತ್ತಿದೆ.

ಇನ್ನು ಕಳ್ಳಭಟ್ಟಿಯವರ ಬೆಂಬಲ ಇದಕ್ಕೇ ಸ್ವಲ್ಪಮಟ್ಟಿಗೆ ಇರಲಿಕ್ಕೇ ಬೇಕೆನ್ನಿಸುತ್ತಿದೆ. ಭಟ್ಟಿ ನಡೆಸತಕ್ಕ ದೃಶ್ಯವನ್ನು ನೋಡಿದಾಗ ಯಾವ ರೀತಿಯಿಂದ ಇವರಿಗೆ ಪಾರಾಗಲಿಕ್ಕೆ ಬರುತ್ತದೆನ್ನುವ್ರುದನ್ನು ನೋಡಿದರೆ ಅವರು ಕೂಡ ಸ್ವಲ್ಪ ಮಟ್ಟಿಗೆ ಬೆಂಬಲಿಸಬಹುದು.

ಹುಬ್ಬಳ್ಳಿಯಲ್ಲಿ ಕುಡಿದರೆ ಅವನನ್ನು ಹಿಡಿಯುತ್ತಾರೆ. ಬೆಂಗಳೂರಲ್ಲಿ ಕುಡಿದರೆ ಹಿಡಿಯದೇ ಬಿಡುತ್ತಾರೆ. ಹೀಗೆ ವಿಚಿತ್ರ ಕಾಯ್ದೆಯಿದೆ. ಬೆಂಗಳೂರಲ್ಲಿ ಕುಡಿ ಹುಬ್ಬಳ್ಳಿಯಲ್ಲಿ ಹಿಡಿ ಈ ರೀತಿ ಕಾನೂನು ವಿಚಿತ್ರತರವಿದ್ದು ಒಂದು ಕಡೆ ಕುಡಿದವನು ಮತ್ತೊಂದು ಭಾಗಕ್ಕೆ ಓಡಿದರೆ ಹಿಡಿಯುವುದಕ್ಕೆ ಬರುವುದಿಲ್ಲ. ಕಳ್ಳಭಟ್ಟಿಯ ವಿಷಯವೂ ಹೀಗೆಯೇ ಬರುತ್ತದೆ.

ಒಂದನೇ ಕಲಮಿನಲ್ಲಿ ಯಾವಾಗ ನೋಟಿಫಿಕೇಶನ್ ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟಪಡಿಸಿಲ್ಲ. ಕೆಲವು ಭಾಗಗಳಿಗೆ ಮಾಡುತ್ತೇವೆಂದು ಹೇಳುವಾಗ ಯಾವ ಭಾಗಗಳಿಗೆ ನೋಟಿಫಿಕೇಶನ್ ಮಾಡುವುದಿಲ್ಲ ಎನ್ನುವುದಕ್ಕೆ ಲಿಸ್ಟ ಕೊಟ್ಟು ಕಾನೂನಿನೊಳಗೆ ಸ್ಪಷ್ಟಗೊಳಿಸಿಲ್ಲ. ನಾವು ಒಂದು ಭಾಗ ತೆಗೆದುಕೊಂಡರೆ ಅದಕ್ಕೆ ಹತ್ತಿದಂಥ ಕೆಲವು ಭಾಗಗಳಲ್ಲಿ ಅಪರಾಧ ಮಾಡಿದವನು ಓಡಿಹೋದರೆ ಅರ್ಧ ಫರ್ಲಾಂಗ್, ಹತ್ತು ಹೆಜ್ಜೆಯೊಳಗೆ ಅಪರಾಧಿ ಓಡಿಹೋಗಿ ನಿರಪರಾಧಿಯಾಗಬಹುದು. ಇಂಥ ವಿಚಿತ್ರ ಪ್ರಸಂಗ ಬರುತ್ತದೆ.

ಈಗಾಗಲೇ ಪೊಲೀಸರನ್ನು ಸಿಕ್ಕಾಪಟ್ಟೆ ಟೀಕೆ ಮಾಡಿದೆವು ಸ್ವಲ್ಪ ಮಟ್ಟಿಗೆ ಅವರ ತಪ್ಪೂ ಇರಬಹುದು ಕಾನೂನುಗಳನ್ನು ಜಾರಿಯಲ್ಲಿ ತರಬೇಕಾದರೆ ಎಷ್ಟು ಕಷ್ಟದಾಯಕ ಪರಿಸ್ಥಿತಿಯಿರುತ್ತದೆ ಮತ್ತು ಲಂಚ ತಿನ್ನುವವರಿಗೆ ಎಷ್ಟು ಆಸ್ಪದ ಸಿಕ್ಕುತ್ತದೆ ಎನ್ನುವಂಥದ್ದು ಈ ಉದಾಹರಣೆಯಿಂದ ಗೊತ್ತಾಗುತ್ತದೆ. ನಾಳೆ ಈ ಕಾನೂನನ್ನು ಜಾರಿಯಲ್ಲಿ

ಇಫೆಕ್ಟಿವ್ ಆಗಿ ತರಲಿಕ್ಕೆ ಸಾಧ್ಯವಿಲ್ಲ. ಹುಬ್ಬಳ್ಳಿ ತಾಲೂಕಿನಲ್ಲಿ ಈ ಕಾನೂನು ಜಾರಿಯಲ್ಲಿಲ್ಲ ಹುಬ್ಬಳ್ಳಿ ಶಹರದಲ್ಲಿ ಜಾರಿಯಲ್ಲಿದೆ ಎಂದು ವಿಚಾರ ಮಾಡಿ ನೋಡೋಣ. ಒಂದು ಗ್ರಾಮದವರು ಕುಡಿಯಬಹುದು ಇನ್ನೊಂದು ಗ್ರಾಮದವರು ಕುಡಿಯಲಿಕ್ಕಿಲ್ಲ ಎಂದು ಹೇಳಿದಾಗ ಎಷ್ಟು ರೀತಿಯಿಂದ ಜನರು ಅದರ ದುರುಪಯೋಗ ಪಡೆಯಬಹುದು ಎನ್ನುವುದನ್ನು ಕೇಳಿದರೆ ಗೋಪಾಲಗೌಡರಿಗೆ ನ್ಯಾಯ ಅನ್ನಿಸಬಹುದು. ಭಟ್ಟಿಸೆರೆ ಮಾಡುವವರು ಬೆಂಬಲಿಸಬಹುದು. ಕುಡಿಯುವವರೂ ಬೆಂಬಲಿಸಬಹುದು. ಇದಕ್ಕೆ ಅವ್ಯಾವಹಾರಿಕವಾದ ಒಂದು ಕಾನೂನನ್ನು ಪಾಸು ಮಾಡಿದೆವು ಎಂದಾಗುತ್ತದೆ. ಕಾನೂನು ಮಾಡುವಾಗ ಪೂರ್ತಿ ವಿಮರ್ಶೆಮಾಡಿ ನೋಡೋಣ.

ಕೆಟ್ಟ ಪದಾರ್ಥಗಳನ್ನು ಕುಡಿದು ಶರೀರ ಹಾಳು ಮಾಡಿಕೊಂಡು ಶರೀರ ಸುಖವನ್ನು ಕೆಡಿಸಿಕೊಳ್ಳುವುದಕ್ಕಿಂತ ಪ್ರೊಹಿಬಿಶನ್ ಸ್ಕ್ರಾಪ್ ಮಾಡುವುದು ಒಳ್ಳೆಯದು ತತ್ವಶಃ ಈ ಪ್ರಕಾರವೂ ಮಾತನಾಡಲಿಕ್ಕೆ ಬರುತ್ತದೆ. ಮತ್ತೊಂದು ದೃಷ್ಟಿಯಿಂದಲೂ ಮಾತನಾಡಲಿಕ್ಕೆ ಬರುತ್ತದೆ. ಮಾತನಾಡುವಾಗ ವಾದವಿವಾದಗಳನ್ನು ಯಾವ ದೃಷ್ಟಿಯಿಂದಲಾದರೂ ಬೆಂಬಲಿಸಬಹುದು. ಅದಕ್ಕೆ ಕೊನೆಯಿಲ್ಲ. ಇವತ್ತು ಏನು ಸರಕಾರಕ್ಕೆ ಅಧಿಕಾರ ಕೊಡುತ್ತೇವೆ ಒಂದು ನೋಟಿಫಿಕೇಶನ್ ಹೊರಡಿಸುವ ಅಧಿಕಾರ ಕೊಡುತ್ತೇವೆ. ಆದರಿಂದ ಸರಕಾರ ಅದರ ದುರುಪಯೋಗ ತೆಗೆದುಕೊಳ್ಳಲಿಕ್ಕೆ ಬರುತ್ತದೆ. ಇವತ್ತು ಒಬ್ಬ ಯೋಗ್ಯ ಮಂತ್ರಿಯಿದ್ದರೆ ನಾಳೆ ಅವರೇ ಇರುತ್ತಾರೆಂದು. ಹೇಳಲಿಕ್ಕೆ ಬರುವುದಿಲ್ಲ. ಮಂತ್ರಿಸ್ಥಾನಕ್ಕೆ ಬೇರೆಯವರು ಬಂದರೆ ಲಂಚಕೋರ ಮಂತ್ರಿಗಳು ಬಂದರೆ ನನಗೆ ಇಷ್ಟು ದುಡ್ಡು ಕೊಟ್ಟರೆ ಹುಬ್ಬಳ್ಳಿ ಶಹರಕ್ಕೆ ನೋಟಿಫಿಕೇಶನ್ ಇಸ್ಸ್ಯೂ ಮಾಡುತ್ತೇನೆ ಎಂದು ಲಕ್ಷ ಎರಡು ಲಕ್ಷ ತೆಗೆದುಕೊಂಡು ಹತ್ತೆಂಟು ಕಡೆ ದುಡ್ಡು ಮಾಡಬಹುದು ಹುಬ್ಬಳ್ಳಿ. ದಾವಣಗೆರೆ, ಗದಗ ದೊಡ್ಡ ದೊಡ್ಡ ಶಹರುಗಳಿಗೆ ನೋಟಿಫಿಕೇಶನ್ ಅನ್ವಯಿಸಲಿಕ್ಕೆ ದುಡ್ಡು ಅಪೇಕ್ಷೆ ಮಾಡಬಹುದು. ಅದಕ್ಕೆ ನಾವು ಪಾಸಮಾಡಿದಂಥ ಕಾನೂನಿನಿಂದ ಕೊಟ್ಟಂಥ ಅಧಿಕಾರ ಈ ರೀತಿ ದುರುಪಯೋಗವಾದೀತು ಎನ್ನುವಂಥ ಮಾತನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಈಗ ನೋಟೀಫಿಕೇಶನ್ ಹೊರಡಿಸುವಂಥ ಅಧಿಕಾರವನ್ನು ನಾವು ಏನು ಸರಕಾರಕ್ಕೆ ಕೊಡುತ್ತೇವೋ ಅದರ ಜೊತೆಗೆ ಸರಕಾರಕ್ಕೇ ಒಂದು ದೊಡ್ಡ ಅಧಿಕಾರವನ್ನು ಕೊಡುತ್ತೇವೆ. ಯಾವ ಭಾಗ ಈ ಕಾಯ್ದೆಯಿಂದ ಮುಕ್ತವಾಗಬೇಕು ಯಾವ ಭಾಗ ಮುಕ್ತವಾಗಬಾರದು ಎಂಬ ಡಿಸ್ಕ್ರೀಶನರಿ ಪಾವರನ್ನು ಸರಕಾರಕ್ಕೆ ಕೊಡುತ್ತಿದ್ದೇವೆ ಎನ್ನಿಸುತ್ತದೆ. ಅದಕ್ಕೆ ಸ್ಪಷ್ಟವಾಗಿ ನಮ್ಮಲ್ಲಿ ಕೆಲವು ಸದಸ್ಯರು ಹೇಳಿದಂತೆ ಪ್ರೊಹಿಬಿಶನ್ ಬೇಡ ಎಂದರೆ ರಾಜ್ಯಕ್ಕೆಲ್ಲ ಅದೇ ರೀತಿ ಮಾಡೋಣ ಇಲ್ಲದಿದ್ದರೆ ಒಮ್ಮೆ ಒಪ್ಪಿಕೊಂಡಿದ್ದೇವೆ. ಅದರಿಂದ ಸುಖವಾಗಲಿ, ದುಃಖವಾಗಲಿ, ಕಷ್ಟವಾಗಲಿ ಗಾಂಧೀಜಿ ಹೇಳಿದ್ದಾರೆ. ಕಷ್ಟಪಟ್ಟು ತಂದಿದ್ದೇವೆ. ಆ ಕಾಯ್ದೆ ಜಾರಿಗೆ ತರುತ್ತೇವೆ ಎನ್ನುವ ನಿಶ್ಚಿತವಾದ ಪಾಲಿಸಿ ಅನುಸರಿಸಲು ದೃಢನಿರ್ಧಾರ ತೆಗೆದುಕೊಳ್ಳೋಣ.

ಪೋಲೀಸರ ದುರ್ಬಳಕೆ ಸಲ್ಲ !

ಜುಲೈ 12ರಂದು ಶ್ರೀ ಎಸ್. ಎಸ್. ಶೆಟ್ಟರರು ಪೊಲೀಸ ಇಲಾಖೆಯ ಬಗ್ಗೆ ಮಾತನಾಡಿ ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಸಹ ಪೊಲೀಸ ಆಯುಕ್ತರ ಅಗತ್ಯವಿದೆ ಎಂದು ಸದ್ಯದ ಅಗತ್ಯತೆಗನುಸಾರ ಪೊಲಿಸರ ಬಲ ಹೆಚ್ಚಿಸಬೇಕೆಂದು ಕೇಳಿಕೊಂಡರು.

ಪೊಲೀಸರು ಸಮಾಜದ ಕೈಯೊಳಗಿನ ಒಂದು ಸಾಧನ. ಸಮಾಜದ ಸೇವೆಗಾಗಿ ಅವರಿರುತ್ತಾರೆ. ಆದರೆ ಸಮಾಜದ ವಿರುದ್ಧ ಬಳಸಲಿಕ್ಕಾಗಿ ಸರಕಾರದ ಕೈಯಲ್ಲಿರುವ ಅಸ್ತ್ರ ಅವರಲ್ಲವೆಂದು ತಿಳಿಯಬೇಕು.

ಸರಕಾರವು ನಿಸ್ಸಂದೇಹವಾಗಿ ಅವರನ್ನು ಬಳಸಬಹುದು ಆದರೆ ಸದ್ಯದ ವ್ಯವಸ್ಥೆಯಲ್ಲಿಯ ಹಾಗೆ ಸರಕಾರದಿಂದ ಅವರ ದುರುಪಯೋಗವಾಗಕೂಡದು ಸದ್ಯದ ಅವರ ಸಂಬಳ ಹಾಗೂ ಸವಲತ್ತುಗಳು ನಿಸ್ಸಂದೇಹವಾಗಿಯೂ ಯೋಗ್ಯವಾದುದಿಲ್ಲ. ಕೆಳದರ್ಜೆ ಪೋಲೀಸ ಅಧಿಕಾರಿಗಳ ಹಾಗೂ ಸಿಬ್ಬಂದಿಯ ಸಂಬಳ ಸವಲತ್ತುಗಳು ತೀರ ಕಮ್ಮಿಯಾಗಿವೆ. ಎಲ್ಲದಕ್ಕೂ ಕೇವಲ ಅವರನ್ನೇ ಭ್ರಷ್ಟರೆಂದು ದೂಷಿಸುತ್ತಕೂಡುವುದು ಸರಿಯೆನಿಸದು ಭ್ರಷ್ಟಾಚಾರ ನಿವಾರಣೆಗಾಗಿ ಅವರಿಗೆ ಮೊದಲಿಗೆ ಉತ್ತಮ ವೇತನ ಹಾಗೂ ಉತ್ತಮ ಕಾರ್ಯಸ್ಥಿತಿ ಸವಲತ್ತುಗಳನ್ನು ಒದಗಿಸಬೇಕು. ಸದ್ಯದ ಪೊಲೀಸ ಬಲ ತೀರಕಡಿಮೆ ಪ್ರಮಾಣದ್ದು ಸಮಾಜದ ಸುರಕ್ಷತೆಗೆ ಅವರ ಬಲವನ್ನು ಯೋಗ್ಯಪ್ರಮಾಣದಲ್ಲಿ ಹೆಚ್ಚಿಸಬೇಕು.

ಬೆಂಗಳೂರ ಮಹಾನಗರ ಸಭೆಯಂತೆ ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯೂ ಸಹ ಕಾರ್ಪೊರೇಶನ್ನಾಗಿ ಪರಿವರ್ತಿತವಾಗಿರುವುದರಿಂದ ಅನೇಕ ಸಮಸ್ಯಗಳಿವೆ ಹೀಗಾಗಿ ಕಾರ್ಪೊರೇಶನ ಪ್ರತ್ಯೇಕ ಘಟಕವೆಂದು ಕಾಣಿಸಿ ಪೊಲೀಸ್ ಆಯುಕ್ತರನ್ನು ನೇಮಕ ಮಾಡಿ ಸಿಬ್ಬಂದಿ ಹಾಗೂ ಅಧಿಕಾರಿವರ್ಗವನ್ನು ಸೂಕ್ತ ಪ್ರಮಾಣದಲ್ಲಿ ಹೆಚ್ಚಿಸಬೇಕು.

ಅಸಂಘಟಿತ ಕಾರ್ಮಿಕರು

ಕಾರ್ಮಿಕ ಸಮಸ್ಯೆ ವಿಷಯದಲ್ಲಿ ಹೇಳಬೇಕೆಂದರೆ ಕೃಷಿ ಕಾರ್ಮಿಕರನ್ನು ನಮ್ಮ ಸರಕಾರ ಎಂದಿನಿಂದಲೂ ನಿರ್ಲಕ್ಷಿಸುತ್ತ ಬಂದಿದೆ. ಕಾರ್ಖಾನೆಗಳಲ್ಲಿ ಮಾಲಿಕರು ಕಾರ್ಮಿಕ ಕಾಯ್ದೆ ನಿಯಮಗಳನ್ನು ಗಾಳಿಗೆ ತೂರಿ ಚಿಕ್ಕಮಕ್ಕಳನ್ನು ಅತ್ಯಂತ ಕಡಿಮೆ ವೇತನಕ್ಕೆ ದುಡಿಸಿಕೊಳ್ಳುತ್ತ ಶೋಷಣೆ ಮಾಡುತ್ತಿದ್ದಾರೆ. ಕಲಿಯುವ, ಆಟವಾಡುವ ಅವರ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ. ಅವರ ಬಾಲ್ಯ ನಶಿಸಿ ಹೋಗುತ್ತಿದೆ. ಆದರೆ ಸರಕಾರ ಇದನ್ನು ತಡೆಯಲು ಪರಿಣಾಮಕಾರಿ ಕ್ರಮ ಕೈಕೊಳ್ಳುತ್ತಿಲ್ಲ, ಹೀಗೆ ಕಾರ್ಮಿಕರ ಹಿತರಕ್ಷಣೆಯಲ್ಲಿ ವಿಫಲಗೊಂಡರೆ ಇಂದು ನಕ್ಸಲಬಾರಿಯಲ್ಲಿ ನಡೆದಂಥ ಹಿಂಸಾತ್ಮಕ ಚಳವಳಿ ನಾಳೆ ನಮ್ಮಲ್ಲಿಯೂ ನಡೆದು ನಮ್ಮ ಸರಕಾರಕ್ಕೂ ತಲೆಶೂಲೆಯುಂಟಾದೀತೆಂದು ನನಗನಿಸುತ್ತಿರುವುದನ್ನು ಹೇಳಬಯಸುತ್ತೇನೆ. ಆದ್ದರಿಂದ ನಾವು ಈಗಲೇ ಎಚ್ಚತ್ತು ಕ್ರಮ ಕೈಕೊಳ್ಳುವುದು ಅತ್ಯಗತ್ಯ.

ಬೆಂಗಳೂರು ಮಹಾನಗರದಲ್ಲಿ ಈಗ ಇಂಟಕ್ ನೆಲಕಚ್ಚಿದೆ. ಅನೇಕ ದುಷ್ಟಶಕ್ತಿಗಳು ಕಾರ್ಮಿಕ ಆಂದೋಲನದಲ್ಲಿ ನುಸುಳಿಕೊಂಡಿವೆ. ಕಾರ್ಮಿಕ ಕಾಯ್ದೆ ನಿಯಮಗಳನ್ನು ಸರಿಯಾಗಿ ಜಾರಿಗೆ ತರುವಲ್ಲಿ ಆಗಿರುವ ವಿಫಲತೆಯಿಂದಲೇ ಹೀಗಾಗತೊಡಗಿದೆ ಎಂದು ನನಗೆ ಮಾಹಿತಿ ದೊರೆತಿದೆ. ಅಸಂಘಟಿತ ಕಾರ್ಮಿಕರ ಪ್ರಶ್ನೆಯೂ ಬಲಿಯತೊಡಗಿದೆ. ಕಾರ್ಮಿಕ ಸಂಘಟನೆಯೊಂದಿದ್ದರೆ ಕಾರ್ಮಿಕರು ತಮ್ಮ ಸಂಘಟನೆಯನ್ನು ಒಗ್ಗಟ್ಟನ್ನು ಪ್ರದರ್ಶಿಸಿ ಸಂಘಟಿತ ಆಂದೋಲನದಿಂದ ತಮ್ಮ ಸಮಸ್ಯಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಆದರೆ ಕೆಲವು ಚಿಕ್ಕಪುಟ್ಟ ಮನೆಗಳಲ್ಲಿ ಕೆಲಸಮಾಡುವ ಕಾರಕೂನರು, ಕೆಲಸಗಾರರು ಸಂಘಟಿತ ಗುಂಪುಗಳಾಗಿ ಇರುವುದಿಲ್ಲ ಅಂಥವರ ಹಿತರಕ್ಷಣೆ ಸಹ ಸರಕಾರದ ಕರ್ತವ್ಯವಾಗಿರುತ್ತದೆ. ಅವರು ಎಂಟುಗಂಟೆ ಮಿತಿಗೊಳಪಟ್ಟು ಕೆಲಸ ಮಾಡುತ್ತಾರೋ ಇಲ್ಲವೇ ಮಾಲಿಕರು ಅವರನ್ನು ಹೆಚ್ಚಿಗೆ ದುಡಿಸಿಕೊಂಡು ಶೋಷಿಸುತ್ತಾರೋ ಹೇಗೆ ಎಂಬುದನ್ನು ನೋಡಿ ಶೋಷಕರ ಮೇಲೆ ಕ್ರಮ ಕೈಕೊಳ್ಳುವುದು ನ್ಯಾಯ ಒದಗಿಸಬೇಕಾದುದು ಅತ್ಯವಶ್ಯ, ನೀವು ಇಂಥವುಗಳ ಕಡೆಗೆ ಗಮನಕೊಡದೇ ಅವರಿಗೆ ತಮ್ಮನ್ನು ಶೋಷಣೆಮಾಡಲಾಗುತ್ತಿದೆ ಎಂಬ ಭಾವನೆ ಉಂಟಾದರೆ ಮುಂದೆ ಒಂದಾನೋಂದು ದಿನ ಅವರೇ ಸಿಡಿದೆದ್ದು ಸಮಸ್ಯಯಾದರೂ ಪ್ರಶ್ನೆ ಉಲ್ಬಣಗೊಂಡರೆ ಪೋಲೀಸರು ಅವರನ್ನು ನಿಯಂತ್ರಿಸಲಾರರು ಆದ್ದರಿಂದ ಸರಕಾರ ಇವೆಲ್ಲವನ್ನೂ ಲಕ್ಷ್ಯಕ್ಕೆ ತೆಗೆದುಕೊಳ್ಳಲಿ ಎಂದು ನನ್ನ ನಮ್ರ ವಿನಂತಿ.

ಸೆರೆಮನೆಯ ಆಡಳಿತದ ವಿಷಯಕ್ಕೆ ಬಂದರೆ ಅಲ್ಲಿ ಕೈದಿಗಳಿಗೆ ಒದಗಿಸಲಾಗುತ್ತಿರುವ ಆಹಾರದ ಗುಣಮಟ್ಟದ ಕನಿಷ್ಠತೆ ಹಾಗೂ ಅವರ ಆರೋಗ್ಯದ ಕಡೆಗೆ ನಿರ್ಲಕ್ಷದಂಥ ದೂರುಗಳಿವೆ. ಕೈದಿಗಳ ಅಪರಾಧಿ ಮನೋವೃತ್ತಿ ಬದಲಿಸಲು ಅವರನ್ನು ಹೊಣೆಗಾರ ನಾಗರಿಕರನ್ನಾಗಿ ತಿದ್ದಲು ಕ್ರಮ ತೆಗೆದುಕೊಳ್ಳುವುದು ಅವರಿಗೆ ವೃತ್ತಿ ಪ್ರಾವೀಣ್ಯತೆ ಒದಗಿಸುವುದು ಅತ್ಯಗತ್ಯ. ಸರಕಾರ ಈ ವಿಷಯದಲ್ಲಿ ವಿಫಲವಾಗಿದೆ.

ಜೈಲಿನಿಂದ ಅಪರಾಧಿ ಮುಕ್ತನಾಗಿ ಹೊರಬಂದಂತೆಯೆ ಆತನಿಗೆ ಜೈಲು ಯೋಗ್ಯವಾದುದಲ್ಲ. ತಾನು ಪುನಃ ಜೈಲು ವಾಸಕ್ಕೆ ಬರದಂತೆ ಉತ್ತಮವಾಗಿ ಬಾಳಬೇಕು ಎಂಬ ಮನಸ್ಸುಳ್ಳವನಾಗಿ ಪರಿವರ್ತಿತನಾಗಬೇಕು. ಜೈಲು ವಾಸದಿಂದ ಆತನು ಸುಧಾರಿಸಿರಬೇಕು. ಆದರೆ ಈಗ ಹಾಗಿಲ್ಲ. ಜೈಲು ತುಂಬಾ ಕೆಟ್ಟದಾಗಿದ್ದು ಆತನು ಪುನಃ ಆದೇ ಜೇಡರಬಲೆಗೆ ಬೀಳುವ ನಿರಂತರ ಅಪರಾಧಿಯಾಗಿ ರೂಪುಗೊಳ್ಳುತ್ತಾನೆ.

ಪ್ರಾಥಮಿಕ ಶಿಕ್ಷಣದಲ್ಲಿ ಶುಲ್ಕ ಬೇಡ

ಮೈಸೂರ ಕಂಪಲ್ಸರಿ ಪ್ರೈಮರಿ ಎಜ್ಯುಕೇಶನ್ ಆ್ಯಕ್ಟ 1960 ಇದು ಜಾರಿಯಲ್ಲಿ ಬಂದ ಮೇಲ ಮೊದಲು ಇದ್ದಂತಹ ಶಿಕ್ಷಣ ಕ್ಷೇತ್ರಗಳಲ್ಲಿ ಬದಲಾವಣೆಗಳಾದುವು. ಮುಂಬಯಿ ಕರ್ನಾಟಕ ಕ್ಷೇತ್ರದಲ್ಲಿ ಇರತಕ್ಕ ಕಾನೂನು ಎಂದರೆ ಮುಂಬಯಿ ಪ್ರೈಮರಿ ಎಜ್ಯುಕೇಶನ್ ಆ್ಯಕ್ಟದಲ್ಲಿರುವ ಕಾಲಂ ನಂಬರ 52 ಹಾಗೂ ಅದರ ವಿಭಾಗದ ನಂಬರ (6) ಇವುಗಳನ್ನು ಮಾತ್ರ ಬದಲಾಯಿಸಿ ಉಳಿದವುಗಳನ್ನು ಹಾಗೆಯೇ ಇಟ್ಟರು ಮತ್ತು ಮೈಸೂರಿನಲ್ಲಿ ಮೊದಲಿಗೆ ಯಾವ ಕಾನೂನುಗಳಿದ್ದವೋ ಅವುಗಳನ್ನು ಬದಲಾಯಿಸಲಾಯಿತು. ಇದರ ಮುಖ್ಯವಾದ ಉದ್ದೇಶ ವೇನೆಂದರೆ ಯಾವ ಪ್ರೈಮರಿ ಎಜ್ಯುಕೇಶನ್ ಫೀ ವಸೂಲು ಮಾಡುವುದರಲ್ಲಿ ಬದಲಾವಣೆಯಾಯಿತು. ಇದರ ಕಾಲಂ (11)ರಲ್ಲಿ ಹೀಗಿದೆ.

'ರಾಜ್ಯ ಸರಕಾರ. ಸ್ಥಳೀಯ ಸಂಸ್ಥೆ ಅಥವಾ ಶಾಲಾ ಮಂಡಳಿ ಇವುಗಳ ಆಡಳಿತಕ್ಕೊಳಪಟ್ಟ ಶಾಲೆಗಳಿಗೆ ಹೋಗುವ ಬಾಲಕ ಬಾಲಿಕೆಯರಿಂದ ಶಿಕ್ಷಣ ಶುಲ್ಕ ವಸೂಲು ಮಾಡಬಾರದು.

ಆದರೆ ಖಾಸಗಿ ಕ್ಷೇತ್ರಗಳಲ್ಲಿ ಯಾವ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುತ್ತಿದ್ದರೋ ಅಂತಹ ಸಂಸ್ಥೆಗಳು ಇನ್ನೂ ಪ್ರೈಮರಿ ವರ್ಗದವರಿಂದ ಫೀಗಳನ್ನು ವಸೂಲು ಮಾಡುವುದು ಕಂಡುಬರುತ್ತದೆ. ಹೀಗೆ ಫೀಗಳನ್ನು ವಸೂಲು ಮಾಡುತ್ತಿರುವುದನ್ನು ಸರಕಾರದ ಗಮನಕ್ಕೆ ತಂದಿದ್ದಾರೋ ಇಲ್ಲವೋ ಗೊತ್ತಿಲ್ಲ, ಪ್ರೈಮರಿ ಎಜ್ಯುಕೇಶನ್ ಉಚಿತವಾಗಿ ದೊರೆಯಬೇಕೆಂದು ಇದ್ದರೂ ಇಂತಹ ಅನೇಕ ಸಂಸ್ಥೆಗಳವರು ಹಣವನ್ನು ಫೀ ರೂಪದಲ್ಲಿ ಇನ್ನೂ ವಸೂಲು ಮಾಡುತ್ತಿರುವುದು ತುಂಬಾ ಖೇದಕರ ಸಂಗತಿ. ಇದು ನಿಲ್ಲಬೇಕು. ಇನ್ನು ಮುಂಬಯಿ ಕರ್ನಾಟಕ ಕ್ಷೇತ್ರದಿಂದ ನಮ್ಮ ಮೈಸೂರು ರಾಜ್ಯಕ್ಕೆ ಏಕೀಕರಣವಾದಾಗ ಸೇರಿದ ನಾಲ್ಕು ಜಿಲ್ಲೆಗಳಲ್ಲಿ ಅಲ್ಲಿರತಕ್ಕ ಸಂಸ್ಥೆಗಳು ಮುನಿಸಿಪಲ್ ಸೆಸ್, ಕಾರ್ಪೊರೇಶನ್ ಸೆಸ್ ಇತ್ಯಾದಿಗಳನ್ನು ಕೊಡಬೇಕೆಂದು ವಸೂಲಿ ಮಾಡುತ್ತಿದ್ದಾರೆ. ಇದರಲ್ಲಿರುವ ಮುಖ್ಯವಾದ ಅಂಶವೆಂದರೆ ಕಲಮು 42 ಹೀಗಿದೆ.

ಅಧಿಕೃತ ನಗರಸಭೆಯೊಂದು ಸಲ್ಲಿಸಿದ ಶಾಲಾ ಯೋಜನೆಯು 28ನೇ ಕಲಮಿನಡಿ ಮಂಜೂರಿ ಹೊಂದಿದ್ದರೆ ರಾಜ್ಯ ಸರಕಾರ ಆ ಯೋಜನೆಯ ಹೆಚ್ಚಿನ ರಿಕರಿಂಗ ಹಾಗೂ ನಾನ್ ರಿಕರಿಂಗ ವೆಚ್ಚದಲ್ಲಿ ಅರ್ಧದಷ್ಟನ್ನು ಭರಿಸುತ್ತದೆ. ಆದರೆ ಅದು ನಗರಸಭೆಯ ಅಂದಾಜು ಮಾಡಿರುವ ಒಟ್ಟು ವೆಚ್ಚದ ಅರ್ಧವನ್ನು ಮೀರಕೂಡದು.

ಹೀಗೆ ಅರ್ಧದಷ್ಟು ಅಂಶದ ವೆಚ್ಚವನ್ನು ಸರಕಾರ ಪ್ರೈಮರಿ ಎಜ್ಯುಕೇಶನ್ನಿಗಾಗಿ ಇಲ್ಲಿ ಪೂರೈಸಬೇಕು. ಇನ್ನುಳಿದ ಅರ್ಧದಷ್ಟನ್ನು ಕಾರ್ಪೊರೇಶನ್ ಹಾಗೂ ಲೋಕಲ್ ಬೋರ್ಡುಗಳವರು ತಮ್ಮ ಉತ್ಪನ್ನದಿಂದ ಕೊಡಬೇಕಾಗಿದೆ. ಹೀಗಾಗಿ ಇಲ್ಲಿರುವ ವಿದ್ಯಾಸಂಸ್ಥೆಗಳಿಗೆ ಬಹಳ ಅನ್ಯಾಯಗಳಾಗುತ್ತಿವೆ ಮತ್ತು ತಮ್ಮ ಉತ್ಪನ್ನದಲ್ಲಿ ಇಲ್ಲಿಯ ಮುನಿಸಿಪಾಲಿಟಿಗಳು ಕೊಡಲು ಕೆಲವು ಬದಲಾವಣೆಗಳನ್ನು ಮಾಡಿರುವುದರಿಂದ ಪ್ರೈಮರಿ ಎಜ್ಯುಕೇಶನ್ ವೆಚ್ಚವನ್ನು ಕೊಡಲಿಕ್ಕಾಗದೇ ಅವನ್ನು ಜನರ ಮೇಲೆ ಹೊರಿಸುತ್ತಿದ್ದಾರೆ. ಇದರಿಂದ ಉಚಿತವಾದ ಶಿಕ್ಷಣ ಇಲ್ಲಿಯ ಬಾಲಕ ಬಾಲಿಕೆಯರಿಗೆ ದೊರೆಯುತ್ತಿಲ್ಲ. ಎಂಬುದನ್ನು ಸರಕಾರದ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಹೊಸದಾಗಿ ಬಂದಿರುವ ಗ್ರ್ಯಾಂಟ್ ಇನ್ ಏಡ್ ಕೊಡನಲ್ಲಿ ಸರಕಾರದವರಿಗೆ ಒಂದು ಡಿಸ್‌ಕ್ರಿಶನರಿ ಪಾವರನ್ನು ಕೊಟ್ಟಿರುವುದರಿಂದ ಕೆಲವು ಕಡೆಗಳಲ್ಲಿ ಶಿಕ್ಷಣಕ್ಕಾಗಿ ಎಷ್ಟು ಹಣವನ್ನು ಕೊಡಬೇಕೆಂದು ಇದೆಯೋ ಅದನ್ನು ಕೊಡುತ್ತಿಲ್ಲ. ಹೀಗಾಗಿ ಪ್ರೈಮರಿ ಶಿಕ್ಷಣಕ್ಕಾಗಿ ಕೆಲವು ಕಡೆ ಈಗಾಗಲೇ ಹೆಲ್ತ್ ಸೆಸ್ ಸ್ಪೋರ್ಟ್ಸ ಸೆಸ್ ಇತ್ಯಾದಿ ಫೀಜುಗಳನ್ನು ವಸೂಲು ಮಾಡುತ್ತಿದ್ದಾರೆ ಇದು ಸರಕಾರದ ಗಮನಕ್ಕೆ ಬಂದಂತೆ ಕಾಣುವುದಿಲ್ಲ. ಇದರಿಂದ ಕೆಲವು ಜನರ ಮೇಲೆ ವಿದ್ಯಾಭ್ಯಾಸದ ಹೆಚ್ಚಿನ ಭಾರ ಬೀಳುತ್ತದೆ. ಇನ್ನು ಕೆಲವು ಕಡೆ ಶಿಕ್ಷಣ ಯಾವ ರೀತಿಯಾಗಿದೆ ಎಂದರೆ ಚನ್ನಾಗಿ ಆಳವಾಗಿ ಅಭ್ಯಾಸ ಮಾಡಿದ ಹಾಗೂ ನುರಿತ ಉಪಾಧ್ಯಾಯರುಗಳಿಲ್ಲದೇ ಶಿಕ್ಷಣದ ಮಟ್ಟ ದಿನೇ ದಿನೇ ಕಡಿಮೆಯಾಗುತ್ತಿದೆ. ಯಾವಾಗಲೂ ಆಳವಾಗಿ ಹಾಗೂ ಅಭ್ಯಾಸ ಮಾಡಿರುವ ನುರಿತ ಉಪಾಧ್ಯಾಯರುಗಳಿದ್ದರೆ ವಿದ್ಯಾರ್ಥಿಗಳೂ ಚನ್ನಾಗಿ ಕಲಿಯಲು ಅವಕಾಶವಾಗುತ್ತದೆ. ಅಂಥವರನ್ನು ಆಡಳಿತದವರು ಹೊಂದಿ ಕೆಲಸ ಮಾಡಿದರೆ ಶಿಕ್ಷಣದ ಮಟ್ಟ ಹೆಚ್ಚುತ್ತದೆ. ಇದರ ಬಗ್ಗೆ ನೋಡಿದರೆ ಈ ಸಾರಿಯೂ ಬಜೆಟನಲ್ಲಿ ಏನೂ ಇಲ್ಲ. ಶಿಕ್ಷಕರ ತರಬೇತಿಗಾಗಿ ಟ್ರೈನಿಂಗ್ ಇನಸ್ಟಿಟ್ಯೂಶನ್‌ಗಳಿಗಾಗಿ ಸರಕಾರ ಇಲ್ಲಿಯವರೆಗೂ ಹಣ ಖರ್ಚು ಮಾಡದೇ ಇರುವುದು ಬಹಳ ವಿಷಾದಕರ ಸಂಗತಿ. ಇನ್ನೊಂದು ಸಂಗತಿಯೆಂದರೆ ಟ್ರೇನ್ಡ್ ಹಾಗೂ ಅನ್‌ಟ್ರೇನ್ಡ್ ಉಪಾಧ್ಯಾಯರುಗಳು ಇಲ್ಲಿದ್ದಾರೆ. ಅವರ ಪಗಾರ ಕೂಡ ಬಹಳ ಕಡಿಮೆ ಅಲ್ಲದೇ ಅವರಿಗೆ ತಮ್ಮ ಖರ್ಚಿನಿಂದ ತರಬೇತಿ ಪಡೆಯಲು ಸಾಧ್ಯವಾಗುತ್ತಿಲ್ಲ. ಯಾಕೆಂದರೆ ಈಗ ಅವರು ಜೀವನ ಸಾಗಿಸುವುದೇ ಕಷ್ಟವಾಗಿದೆ ಮತ್ತು ಇದರಿಂದಾಗಿ ಶಿಕ್ಷಣದ ಮಟ್ಟವು ಕಡಿಮೆಯಾಗುತ್ತ ಹೋಗುತ್ತದೆ. ಇವರ ಜೀವನ ಮಟ್ಟವನ್ನು ಸುಧಾರಿಸಲು ಅನುಕೂಲ ಮಾಡದೇ ಇರುವುದರಿಂದ ಪ್ರೈವೇಟ ಟ್ಯೂಶನ್‌ಗಳಿಗೆ ಎನ್‌ಕರೇಜ್ ಮಾಡಿದಂತಾಗುತ್ತದೆ. ಅನೇಕ ಕಡೆ ಇರುವ ಶಾಲೆಗಳಲ್ಲಿ ಹುಡುಗರ ಕಡೆಗೆ ದುರ್ಲಕ್ಷ್ಯವಾಗುತ್ತಿದೆ.

ಶಾಲೆಗಳಲ್ಲಿ ಆಗಬೇಕಾದಂತಹ ವಿಷಯಗಳಿಗೆ ಶಿಕ್ಷಕರು ಸರಿಯಾದ ಗಮನ ಕೊಡುತ್ತಾ ಇಲ್ಲ. ಇದರಿಂದ ಶಿಕ್ಷಕರಿಗೆ ಆಪಾದನೆ ಮಾಡಿ ಪ್ರಯೋಜನವಿಲ್ಲ ಅವರಿಗೆ ಕೊಡುವಂಥಹ ಪಗಾರದ ವಿಷಯದಲ್ಲಿ ಸರಕಾರದವರನ್ನು ದೂಷಿಸಬೇಕಾಗಿದೆ. ಈಗ ಅನೇಕ ಸ್ಕೂಲ್ ಬೋರ್ಡು ಇರತಕ್ಕ ಕಡೆಗಳಲ್ಲಿ ಈ ಲೋಕಲ್ ಸೆಲ್ಫ್ ಗವರ್ನಮೆಂಟನ ಚುನಾವಣೆ ಆಗದೇ ಸ್ಕೂಲ್ ಬೋರ್ಡ ಕಮಿಟಿಗಳು ಕೂಡ ಹೊಸದಾಗಿ ಬಂದಿಲ್ಲ. ಹೀಗಿದ್ದರಿಂದ ಎಷ್ಟೋ ಕಡೆ ಕಟ್ಟಡಗಳು ಸರಿಯಾಗಿಲ್ಲದೇ ಬಹಳ ತೊಂದರೆಯಾಗಿದೆ. ಹೊಸದಾಗಿ ಕಟ್ಟುವಂಥವುಗಳು ಅರ್ಧಕ್ಕೆ ನಿಂತಿವೆ. ಇಂಥವುಗಳಲ್ಲಿ ಹುಬ್ಬಳ್ಳಿ-ಧಾರವಾಡಗಳಲ್ಲಿ ಅನೇಕ ಶಾಲೆಗಳು ಅರ್ಧಕ್ಕೇ ನಿಂತಿವೆ. ಅವು ಪೂರ್ಣವಾಗಿಲ್ಲ. ಅಂಥ ಕಡೆಯ ಶಾಲೆಗಳಲ್ಲಿ ಫ್ಯಾಕ್ಟರಿಗಳಲ್ಲಿ ಶಿಫ್ಟ ವ್ಯವಸ್ಥೆ ಮಾಡಿದಂತೆ ಶಿಫ್ಟ ಬೇಸಿಸ್ ಮೇಲೆ ಶಾಲೆ ನಡೆಸುತ್ತಿದ್ದಾರೆ ಮತ್ತು ಅಲ್ಲಿಯ ವಾತಾವರಣವು ಶಾಲೆಗೆ ಅನುಗುಣವಾಗಿಲ್ಲ.

ಶಾಲೆಯ ಪಕ್ಕದಲ್ಲಿ ಮಾರ್ಕೆಟ್. ಸುತ್ತಮುತ್ತಲು ಅಂಗಡಿ ಹಾಗೂ ಅಸ್ವಚ್ಛ. ಅನಾರೋಗ್ಯಕರ ಸ್ಥಿತಿಯಿದೆ. ಇನ್ನು ಹುಬ್ಬಳ್ಳಿಯಲ್ಲಿಯ ಕೇಂದ್ರ ಸರಕಾರದ ಸೆಂಟ್ರಲ್‌ಸ್ಕೂಲ್‌ಗೆ ಕಟ್ಟಡವಿಲ್ಲ. ಚಿಕ್ಕ ಕಟ್ಟಡದಲ್ಲಿ ಅದಕ್ಕೆ ಜಾಗ ಕೊಟ್ಟು ಆ ಶಾಲೆ ಹಾಗೂ ಸರಕಾರಿ ಪ್ರಾಥಮಿಕ ಶಾಲೆ ಎರಡೂ ಶಿಫ್ಟ ಮೇಲೆ ನಡೆಸಬೇಕಾಗಿದೆ. ಇದು ಬಹಳ ಖೇದಕರವಾದ ಸಂಗತಿ.

ಮುಖ್ಯವಾದಂಥ ಪ್ರೈಮರಿ ವಿದ್ಯಾಭ್ಯಾಸ ಏಕರೂಪವಾಗಿಲ್ಲ ಇದಲ್ಲದೆ ಪ್ರೀ ಪ್ರೈಮರಿ ಎಜ್ಯುಕೇಶನ್ನನ್ನು ಬಹಳ ಅಲಕ್ಷ ಮಾಡಿದ್ದಾರೆ.

ಪ್ರಾಥಮಿಕ ಪೂರ್ವ ಶಿಕ್ಷಣ

ಮೂರು ವರ್ಷದಿಂದ ಆರು ವರ್ಷದವರೆಗೆ ಮಕ್ಕಳು ತಮ್ಮ ಸ್ವಭಾವವನ್ನು ರೂಪಿಸಿಕೊಳ್ಳುವಂತಹ ಸಮಯ ಅವರಿಗೆ ನಿರ್ದಿಷ್ಟವಾದ ಉತ್ತಮ ಸ್ವಭಾವ ಬರಬೇಕಾದರೆ ಅಂಥ ಉತ್ತಮ ಪರಿಸರದಲ್ಲಿ ಅವರು ಬೆಳೆದುಬರುವುದು ಅಗತ್ಯ. ಆದರೆ ಅಂಥ ಉತ್ತಮ ವಾತಾವರಣದಲ್ಲಿ ಚಿಕ್ಕ ಮಕ್ಕಳು ಬೆಳೆಯದೇ ಕಂಪಲ್ಸರಿ ಪ್ರೈಮರಿ ಎಜ್ಯುಕೇಶನ್ನಿಗೆ ಅವರು ಬರುತ್ತಿರುವುದರಿಂದ ತುಂಬಾ ಕಷ್ಟವಾಗುತ್ತದೆ. ಆದರ ಸಲುವಾಗಿ ನಾವು ಪ್ರಿ ಪ್ರೈಮರಿ ಪೂರ್ವಪ್ರಾಥಮಿಕ ಶಿಕ್ಷಣಕ್ಕೆ ಯೋಗ್ಯ ವ್ಯವಸ್ಥೆ ಮಾಡಬೇಕು ಅದಕ್ಕೂ ಸರಿಯಾದ ವ್ಯವಸ್ಥೆ ಮಾಡದೇ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ನಾವು ಮರೆತೇಬಿಟ್ಟಿದ್ದೇವೆ.

ಇನ್ನು ಪಠ್ಯಪುಸ್ತಕಗಳ ವಿಷಯ ಇದು ಯಾವಾಗ ರಾಷ್ಟ್ರೀಕರಣವಾಯಿತೋ ಅಲ್ಲಿಂದ ಇದರಲ್ಲಿ ಅನೇಕ ಲೋಪದೋಷಗಳುಂಟಾಗಿವೆ. ಮುದ್ರಣದಲ್ಲೂ ಅನೇಕ ಲೋಪದೋಷಗಳಿವೆ. ಇದರ ಬಗ್ಗೆ ಪರಿಷತ್ತಿನಲ್ಲೂ ಚರ್ಚೆಯಾಗಿದೆ. ಶಿಕ್ಷಣಮಂತ್ರಿಯವರು ಈ ವಿಚಾರದಲ್ಲಿ ಸಾಕಷ್ಟು ಕ್ರಮ ತೆಗೆದುಕೊಳ್ಳಲಿದ್ದಾರೆಂಬುದು ಸಂತೋಷ. ಶಿಲಾಂಗ ಪಟ್ಟಣ ಎಲ್ಲಿದೆಂದು ನಮ್ಮ ವರಿಗೆ ಗೊತ್ತಿದೆಯೋ ಇಲ್ಲವೋ ಬಹಳ ವಿಚಿತ್ರವಾಗಿ ಪಠ್ಯಪುಸ್ತಕದಲ್ಲಿ ಮುದ್ರಣವಾಗಿದೆ. ಈ ಪಠ್ಯ ಪುಸ್ತಕವನ್ನು ಬಹಳ ಸೂಕ್ಷ್ಮವಾಗಿ ನೋಡಬೇಕು. ಮಕ್ಕಳಿಗೆ ಶುದ್ಧವಾದ ಬರಹಗಳಿರಬೇಕು ಮತ್ತು ಕನ್ನಡ ಪಠ್ಯಪುಸ್ತಕಗಳಲ್ಲಿ ಇಂಗ್ಲೀಷ ಅಂಕಿಗಳಿವೆ. ಕನ್ನಡ ಅಂಕಿಗಳಿಲ್ಲ ಇದು ಒಂದು ವಿಚಿತ್ರವಾದ ಸಂಗತಿ. ಮಕ್ಕಳಿಗೆ ಚಿಕ್ಕವಯಸ್ಸಿನಲ್ಲಿ ಕನ್ನಡದ ಅಭಿಮಾನ ಬರಬೇಕಾದರೆ ಅಂಕಿಗಳನ್ನು ಕನ್ನಡದಲ್ಲೇ ಮುದ್ರಿಸಬೇಕು.

ಅದೇ ರೀತಿ ಶಿಕ್ಷಕರ ವ್ಯವಹಾರ ಹಾಗೂ ಜೀವನದ ರೀತಿಯನ್ನು ನೋಡಿದರೆ ಇವತ್ತಿನ ದಿವಸ ಅವರು ರಾಜಕೀಯಕ್ಕೆ ಹೆಚ್ಚು ಗಮನ ಕೊಡುತ್ತಲಿದ್ದಾರೆ ಇದು ಬಹಳ ಖೇದಕರ ಸಂಗತಿ.

ಎಷ್ಟೋ ಸ್ಕೂಲ ಬೋರ್ಡಗಳಿಂದ ಹಿಡಿದು ಹಳ್ಳಿಯವರೆಗೆ ನೋಡಿದರೆ ವಾತಾವರಣ ಅಷ್ಟು ಒಳ್ಳೆಯದಾಗಿಲ್ಲಾ ಅವರನ್ನು ಸೆನ್ಸಸ್ ಹಾಗೂ ಇನ್ನಿತರ ಕೆಲಸಗಳಿಗೆ ಉಪಯೋಗಿಸಿಕೊಳ್ಳುವುದರಿಂದ ಮಕ್ಕಳಿಗೆ ಕಲಿಸುವುದರಲ್ಲಿ ತೊಂದರೆಯಾಗುತ್ತಿದೆ. ಆದ್ದರಿಂದ ಅವರಿಗೆ ಕಲಿಸುವ ಕೆಲಸ ಒಂದನ್ನೆ ವಹಿಸಬೇಕು.

ವಿಶ್ವವಿದ್ಯಾಲಯಗಳಿಗೂ ಸ್ವಾಯತ್ತಾಧಿಕಾರ ಇರತಕ್ಕದ್ದು ಮಂಗಳೂರಿನಲ್ಲಿ ಬೇರೆಯೊಂದು ವಿಶ್ವವಿದ್ಯಾಲಯ ಮಾಡಬೇಕೆಂಬ ಸೂಚನೆಯನ್ನು ನಾನು ಸ್ವಾಗತಿಸುತ್ತೇನೆ.

ಕಾಮಗಾರಿಗಳಲ್ಲಿ ನಿಧಾನ

ಲೋಕೋಪಯೋಗಿ ಇಲಾಖೆ ಯೋಜನೆ ಬಗ್ಗೆ ಮಾತಾಡುತ್ತಾ ನೀರಾವರಿಯ ಕೆಲವು ಯೋಜನೆಗಳ ಸಲುವಾಗಿ ರಸ್ತೆಗಳ, ಕೆಲವು ಬ್ರಿಜ್‌ಗಳ ಕೆಲಸಗಳನ್ನು ಬಂದು ಮಾಡಿದರು ಅಡ್ಡಿಯಿಲ್ಲಾ, ಆದರೆ ನೀರಾವರಿ ಯೋಜನೆಗಳು ಯಶಸ್ವಿಯಾಗಬೇಕೆಂದು ಕೆಲವರು ಹೇಳಿದ್ದಾರೆ. ಆದರೊಳಗೆ ಈ ರಾಜಭವನದ ಕಟ್ಟಡದ ಸಲುವಾಗಿ ರೂ. 6,00,000 ಗಳನ್ನು ಮಂಜೂರ ಮಾಡಲಾಗಿದ್ದು ಉಂಟು. ಇದಲ್ಲದೆ ಅನೇಕ ಟ್ರಾವೆಲರ್ಸ್ ಬಂಗಲೇ ಮತ್ತು ಹುಬ್ಬಳ್ಳಿ, ಗದಗ ಮೊದಲಾದ ಪಟ್ಟಣಗಳಲ್ಲಿ ಇಂಥಹ ಪ್ರವಾಸಿಕರ ಬಂಗಲೆಗಾಗಿ ಕಟ್ಟಡಗಳ ರಿಪೇರಿಯ ಸಲುವಾಗಿ ಬಹಳ ಹೇರಳವಾಗಿ ದುಡ್ಡನ್ನು ಉಳಿಸಿಕೊಳ್ಳಲಾಗಿದೆ. ಇದಲ್ಲದೇ ಅನೇಕ ಬೇರೆ ವಿಚಾರಗಳನ್ನು ನೋಡಿದರೆ ಬೇರೆ ಅತುತ್ತಮವಾದ ಕೆಲಸಗಳಿಗೆ ಈ ಹಣವನ್ನು ಉಪಯೋಗಿಸಬಹುದಾಗಿತ್ತು ಎನ್ನುವ ಮಾತು ತಿಳಿಸಲಿಚ್ಛಿಸುತ್ತೇನೆ. ಈಗ ಹುಬ್ಬಳ್ಳಿ ಧಾರವಾಡ ಕಾರ್ಪೊರೇಶನ್ ಸಲುವಾಗಿ ಒಳಚರಂಡಿ ಯೋಜನೆಯ ಸಲುವಾಗಿ ಸರಕಾರದವರು ಬಹಳ ಹೇರಳವಾಗಿ ದುಡ್ಡನ್ನು ಖರ್ಚು ಮಾಡಿದ್ದಾರೆ. ಈ ಯೋಜನೆ ಯಶಸ್ವಿಯಾಗಬಹುದೇ, ಆಗಲಾರದೇ ಎಂಬುದು ಬಹಳ ಸಂಶಯಾಸ್ಪದ ಸಂಗತಿ. ಎಷ್ಟೋ ಕಡೆ ಪೈಪುಗಳನ್ನು ಆಗೆದು ಹೂಳಲಾದ ಮೇಲೆ ಪುನಃ ಎಬ್ಬಿಸಿ ಹೊರತೆಗೆದು ಅಸಮಂಜಸವಾದ ಕೆಲಸಗಳಿಗೆ ವ್ಯರ್ಥ ಹಣ ಖರ್ಚು ಮಾಡಲಾಯಿತು. ಈ ರೀತಿ ಮಾಡುವ ಧೋರಣೆಯು ಬಹಳ ಖೇದಕರ ಸಂಗತಿ. ಇವತ್ತು ಯಾವುದೇ ಯೋಜನೆಯನ್ನು ತೆಗೆದುಕೊಂಡು ದುಡ್ಡು ಖರ್ಚು ಮಾಡಬಹುದು ಆದರೆ ದುಡ್ಡು ಖರ್ಚು ಮಾಡುವ ಪೂರ್ವದಲ್ಲಿ ಯೋಜನೆಗಳನ್ನು ಸಿದ್ಧ ಮಾಡುವವರು ಯಾರು? ಸಿದ್ಧ ಮಾಡುವ ತಜ್ಞರು ಯಾರು ? ಇವುಗಳಿಗೆಲ್ಲಾ ಹೊಂದಾಣಿಕೆಯಿದ್ದಂತೆ ಕಾಣುವುದಿಲ್ಲ.

ಈ ಪಿ.ಡಬ್ಲ್ಯು.ಡಿಯವರು ಕೆಲವು ಕೆಲಸಗಳನ್ನು ತೆಗೆದುಕೊಳ್ಳುತ್ತಾರೆ. ರೋಡುಗಳ ಎರಡೂಬದಿಗೆ ಹೊಂದಿ ಕಟ್ಟಡಗಳನ್ನು ಕಟ್ಟಬಾರದು ಎಂದು ಒಂದು ನಿರ್ಣಯವಾಗಿದೆ. ಆದರೆ ಈ ನಿರ್ಣಯ ತೆಗೆದುಕೊಂಡ ಮೇಲಿನ ಯಾವ ರೀತಿ ಕಟ್ಟಡಗಳೂ ಕೆಲವು ಕಡೆ ಬರುತ್ತೇವೆ ಎಂಬುದನ್ನು ನೋಡಿದರೆ ಬಹಳ ವಿಚಿತ್ರವಾಗಿ ಕಾಣುತ್ತದೆ. ಇವುಗಳಿಗೆಲ್ಲಾಕ್ಕು ಪರ್ಮಿಟ್ ಕೊಟ್ಟಿದ್ದಾರೆ ? ಈಗ ಹುಬ್ಬಳ್ಳಿಯಲ್ಲಿ ಒಂದು ದೊಡ್ಡ ಧಾರ್ಮಿಕ ಕಟ್ಟಡ ಬರುತ್ತಿದೆ. ಪಿ.ಡಬ್ಲ್ಯೂ.ಡಿ.ಯವರ ನಿರ್ಣಯದ ಪ್ರಕಾರ ರಸ್ತೆಯ ಪಕ್ಕದಲ್ಲಿ ಅದಕ್ಕೆ ಹೊಂದಿ ಕಟ್ಟಡವಿರಬಾರದು ಎಂದಿದೆ ಕಳೆದ ನಾಲ್ಕು ವರ್ಷಗಳಲ್ಲಿ ಇದರ ಬಗ್ಗೆ ಹೈಕೋರ್ಟಗೆ ರಿಟ್ ಹಾಕಿ ಅದು ಕೂಡಾ ನಿಮ್ಮಲ್ಲಿ ಆಗಿದೆ. ಪಿ.ಡಬ್ಲ್ಯೂ.ಡಿ.ಯವರು ಯಾವ ತಕರಾರು ಮಾಡಿದರೂ ಕೂಡಾ ಈ ಮಾಸ್ಕ ಪುನಃ ಏಳುತ್ತಿದೆ. ನಾನು ಧಾರ್ಮಿಕ ವಿಚಾರದ ವಿರುದ್ಧವಾಗಿ ಹೇಳುತ್ತಾ ಇಲ್ಲ ಆದರೆ ನಾವು ಕಾರ್ಯಗತ ಮಾಡತಕ್ಕ ಕೆಲಸದಲ್ಲಿ ಅಡ್ಡಿ ಏಕೆ ಬರುತ್ತದೆ ? ಇಂದು ರಸ್ತೆಯ ಮಧ್ಯದಲ್ಲಿ ಕಟ್ಟಡಗಳು ಬಂದದ್ದನ್ನು ನಾನು ನೋಡಿದ್ದೂ ಉಂಟು, ಆದ್ದರಿಂದ ಯಾವುದೇ ಪಟ್ಟಣ, ಯಾವುದೇ ರಸ್ತೆ ಇದೆಲ್ಲಾ ಸುಧಾರಣೆಯಾಗಬೇಕಾದರೆ ಇದಕ್ಕೆ ನಿರ್ದಾಕ್ಷಿಣ್ಯವಾಗಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಬೇಕು.

ಇನ್ನೂ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಕೆಲವು ಪ್ರಾಜೆಕ್ಟುಗಳಲ್ಲಿ ಬಹಳ ಸಾವಧಾನವಾಗಿ ಕೆಲಸವಾಗುತ್ತದೆ. ಈ ಮಾತನ್ನು ಮಾನ್ಯ ಮಂತ್ರಿಗಳು ಗಮನದಲ್ಲಿ ಇಟ್ಟುಕೊಳ್ಳಬೇಕಾದ ಸಂಗತಿಯಾಗಿದೆ. ಒಮ್ಮೆ ಪ್ರಾರಂಭವಾಗುವ ಪ್ರಾಜೆಕ್ಟುಗಳು ಅನೇಕ ವರ್ಷಗಳಾದರೂ ಸಹ ಕೆಲಸಗಳು ಪೂರ್ತಿಯಾಗುತ್ತಿಲ್ಲ ಮೂರು ತಿಂಗಳಿಗೆ ಆರು ತಿಂಗಳಿಗೆ ಕೆಲಸ ಮುಗಿಯಬೇಕೆಂದು ಆದೇಶವಿದ್ದರೂ ಸಹ ಅವು ಮುಗಿಯುತ್ತಿಲ್ಲ. ಆ ಕೆಲಸ ಮಾಡುವವರು ಯಾರು ಎಂಬುದೂ ಸಾರ್ವಜನಿಕರಿಗೆ ತಿಳಿಯುವುದಿಲ್ಲ. ಈ ಪ್ರಕಾರ ನಿಧಾನವಾಗಿ ಕೆಲಸಗಳು ನಡೆಯುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ಹೇಳಬೇಕಾಗಿದೆ. ಇವತ್ತಿನ ದಿವಸ ನಾಗಾರ್ಜುನ ಸಾಗರದ ಡ್ಯಾಂ ಕೆಲಸ ಪ್ರಗತಿಪಥದಲ್ಲಿ ನಡೆಯುತ್ತಿದೆ. ಈ ಬಗ್ಗೆ ನಮ್ಮ ಮೈಸೂರ ಸರಕಾರದ ಮಂತ್ರಿಮಂಡಲದವರು ಯಾವ ಒಂದು ನಿರ್ಣಯವನ್ನೂ ಸಹ ಇದುವರೆಗೆ ತೆಗೆದುಕೊಂಡಿಲ್ಲ. ಅಲ್ಲದೇ ಇದಕ್ಕೆ ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯವರಾಗಲಿ ಅಥವಾ ಸಂಬಂಧಪಟ್ಟ ಬೇರೆಯವರೇ ಆಗಲಿ ಈ ಬಗ್ಗೆ ಯಾವ ಒಂದು ನಿರ್ಣಯ ತೆಗೆದುಕೊಳ್ಳಲು ಮುಂದುರೆಯುತ್ತಿಲ್ಲ. ಮಂತ್ರಿಮಂಡಲದವರು ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ವಿಳಂಬ ಮಾಡುತ್ತಿರುವುದನ್ನು ನೋಡಿದರೆ ಆದಕ್ಕೆ ಮಂತ್ರಿಮಂಡಳದವರೇ ಹೆಚ್ಚಿಗೆ ಹೊಣೆಯಾಗಿದ್ದಾರೆಂದು ಹೇಳಬೇಕಾಗಿದೆ. ದುಡ್ಡಿನ ಅಭಾವವಿದೆಯೆಂದು ಹೇಳುತ್ತಾರೆ. ಈ ವಿಚಾರದಲ್ಲಿ ಆ ರೀತಿಯ ನೆಪ ಹೇಳುವುದಕ್ಕೆ ಬರುವುದಿಲ್ಲ.

ಬೇರೆ ರಾಜ್ಯಗಳವರು ಈ ರೀತಿಯ ನೆಪ ಹೇಳದೇ ದೊಡ್ಡ ದೊಡ್ಡ ಯೋಜನೆಗಳನ್ನು ಆರಂಭಿಸಿದ್ದಾರೆ. ಆದರೆ ನಮ್ಮ ಸರಕಾರಕ್ಕೆ ಈ ದುಡ್ಡಿನ ಬಿಕ್ಕಟ್ಟಿನ ಪ್ರಸಂಗ ಬಂದಿದೆ ಎಂದು ಹೇಳುವುದಾದರೆ ಮಂತ್ರಿಮಂಡಲದ ಒಂದು ಧೋರಣೆಯಲ್ಲಿ ನೀತಿ ನಿರ್ಧಾರಗಳಲ್ಲಿ ಏನೋ ಒಂದು ತೊಡಕು ಇದೆ ಎಂದು ಕಾಣುತ್ತದೆ. ನಾಗಾರ್ಜುನ ಸಾಗರದ ಡ್ಯಾಮನ್ನು ಕಟ್ಟುವುದರಲ್ಲಿ ಆಂಧ್ರ ಸರಕಾರದವರು ಪ್ರಗತಿಪಥದಲ್ಲಿದ್ದಾರೆ. ಮಾನ್ಯಮಂತ್ರಿಗಳು ಈ ಬಗ್ಗೆ ಯಾವ ಧೋರಣೆಯನ್ನು ಅನುಸರಿಸಬೇಕೆಂದಿದ್ದಾರೆ ಎಂಬ ಬಗ್ಗೆ ಸಭೆಗೆ ತಿಳಿಸಿದ್ದರೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ನಾವೆಲ್ಲರೂ ಚರ್ಚೆಯನ್ನು ಮುಗಿಸಿದ ಮೇಲೆ ಅವರು ಹೇಳಿಕೆ ಕೊಟ್ಟರೆ ಆ ಬಗ್ಗೆ ಮಾತನಾಡುವುದಕ್ಕೆ ನಮಗೆ ಅವಕಾಶವಿರುವುದಿಲ್ಲವೆಂದು ಹೇಳಬೇಕಾಗುತ್ತದೆ.

ಒಟ್ಟಿನಲ್ಲಿ ಲೋಕೋಪಯೋಗಿ ಶಾಖೆಯವರು ಕೈಗೊಂಡಿರುವ ಕೆಲಸಗಳನ್ನು ನೋಡಿದರೆ ಸಾರ್ವಜನಿಕರಿಗೆ ತೃಪ್ತಿಯಾಗುವಂತೆ ತೀವ್ರ ಗತಿಯಿಂದ ಮುಂದುವರೆಯುತ್ತಿಲ್ಲ. ಈ ಬಗ್ಗೆ ಸಾರ್ವಜನಿಕರಿಂದ ಟೀಕೆ ಟಿಪ್ಪಣಿಗಳು ಬಹಳವಾಗಿ ಬರುತ್ತಿವೆ. ಎಷ್ಟೋ ಕಂಟ್ರಾಕ್ಟರುಗಳು ಬಹಳ ದುಡ್ಡನ್ನು ಮಾಡಿಕೊಂಡಿದ್ದಾರೆ. ಸರಕಾರವನ್ನು ಟೀಕಿಸೋಣವೋ ಅಥವಾ ಸರಕಾರದ ಕೈಕೆಳಗೆ ಕೆಲಸ ಮಾಡುತ್ತಿರುವ ಕಾಂಟ್ರ್ಯಾಕ್ಟರರನ್ನು ಟೀಕಿಸೋಣವೋ ಎಂಬುದನ್ನು ಹೇಳಲಿಕ್ಕೆ ಬರುವುದಿಲ್ಲ. ಚಪ್ಪಾಳೆಯಾಗಬೇಕಾದರೆ ಎರಡು ಕೈಗಳು ಸೇರಿಯೇ ಆಗಬೇಕಾಗುತ್ತದೆಂಬುದು ನಿಜ ಸಂಗತಿ ಅನೇಕ ಪ್ರಾಜೆಕ್ಟುಗಳಲ್ಲಿ ನಡೆಯುವ ಕೆಲಸಗಳನ್ನು ನೋಡಿದರೆ ಅಲ್ಲಲ್ಲಿ ಲೇಬರ ಡಿಸ್‌ಪ್ಯೂಟ್ಸ ಬಹಳವಾಗಿ ನಡೆಯುತ್ತಿವೆ. ಈ ರೀತಿಯಾಗುವದರಿಂದ ಒಂದು ದೊಡ್ಡ ಆತಂಕವುಂಟಾಗಿದೆ. ಹುಬ್ಬಳ್ಳಿಯಲ್ಲಿ ಈ ರೀತಿ

ನಡೆಯುವುದನ್ನು ನೋಡುತ್ತಿದ್ದೇನೆ. ದಿನಗೂಲಿ ಮೇಲೆ ಕೆಲವರನ್ನು ಕೆಲಸಕ್ಕೆ ತೆಗೆದುಕೊಂಡು ಇಷ್ಟಬಂದಾಗ ಕೆಲಸದಿಂದ ತೆಗೆದುಹಾಕುತ್ತಾರೆ. ಇಂತಹ ಅನ್ಯಾಯಗಳನ್ನು ಪ್ರತಿಭಟಿಸಿ ಕೂಲಿಗಳು ಕೆಲವು ಕಡೆ ಎರಡು ಮೂರು ದಿನಗಳವರೆಗೆ ಕೆಲಸ ಮಾಡದೇ ನಿಲ್ಲಿಸಿದಂತೆ ಕೆಲಸಗಳು ಕುಂಠಿತವಾಗುವುದಕ್ಕೆ ಇವೆಲ್ಲಾ ಕಾರಣಗಳಾಗಿವೆ ಆಗಬೇಕಾದಂತಹ ಕೆಲಸಗಳಲ್ಲಿ ಅಚ್ಚುಕಟ್ಟುತನವೂ ಸಹ ಹಾಳಾಗುತ್ತದೆಂದು ನನ್ನ ನಿದರ್ಶನಕ್ಕೆ ಬಂದಿದೆ. ಯೋಜನೆಗಳು ತ್ವರಿತಗತಿಯಲ್ಲಿ ಸಾಗುತ್ತಿರುವಾಗ ಇಂಥ ಲೇಬರ ಡಿಸ್‌ಪ್ಯೂಟ್ಸಗಳು ನಿಧಾನತೆಯುಂಟು ಮಾಡುತ್ತವೆ. ಈ ಬಗ್ಗೆ ಎಷ್ಟೋ ಕೋರ್ಟ ಅವಾರ್ಡಗಳಾದರೂ ಸಹ ಸರಕಾರದವರು ಅವುಗಳನ್ನು ಜಾರಿಗೆ ತಂದಿಲ್ಲ. ಈ ಪ್ರಕಾರ ಅನೇಕ ದೊಡ್ಡ ಯೋಜನೆಗಳು ಮುಂದುವರಿಯುವುದಕ್ಕೆ ಅಡಚಣೆಯಾಗಿದೆನ್ನಬಹುದು.

ದಿನಗೂಲಿಗಳ ಪ್ರಶ್ನೆ

ಇನ್ನೂ ಎಷ್ಟೋ ಕಡೆಗಳಲ್ಲಿ ನಿರುದ್ಯೋಗ ಪ್ರಾಪ್ತವಾಗಿದೆ ಕೆಲವು ಜನರನ್ನು ದಿನಗೂಲಿಗಳೆಂದು ಕೆಲಸಕ್ಕೆ ತೆಗೆದುಕೊಂಡು ಕೆಲ ದಿನಗಳ ನಂತರ ಬಿಡಿಸುತ್ತಾರೆ ಇಂಥವರ ನಿರುದ್ಯೋಗ ಒಂದು ದೊಡ್ಡ ಸಮಸ್ಯೆಯಾಗುತ್ತಲಿದೆ. ಕೆಲದಿನ ಇವರಿಗೆ ಕೆಲಸ ಸಿಗುತ್ತದೆ ಮತ್ತೆ ಇವರ ನಿರುದ್ಯೋಗ ಸಮಸ್ಯೆ ತಲೆದೋರುತ್ತದೆ. ಕೆಲಸಗಳಿರುವ ಕಡೆಗೆ ಜನರು ಬರುತ್ತಾರೆ. ಕೆಲಸಗಳು ಮುಗಿದ ಮೇಲೆ ಮತ್ತೆ ಅದೇ ತೊಂದರೆ ಉದ್ಭವಿಸುತ್ತದೆ. ನಮ್ಮ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಬಹಳವಾಗಿದೆ. ಇದನ್ನು ಪರಿಹರಿಸಬೇಕೆಂಬುದನ್ನು ಮಂತ್ರಿಗಳ ಗಮನಕ್ಕೆತರುತ್ತಿದ್ದೇನೆ.

ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬಡಜನರು ಪುಟ್‌ಪಾಥಗಳ ಮೇಲೆ ಮಲಗುತ್ತಾರೆ. ಪ್ರಾಣಿಗಳು ಮಲಗುವುದನ್ನು ನಾವು ನೋಡುತ್ತಿದ್ದೇವೆ. ನಾವು ಅನೇಕ ಪ್ರವಾಸಿಕರ ಬಂಗ್ಲೆಗಳನ್ನು ಕಟ್ಟುತ್ತಿದ್ದೇವೆ. ಬಡಜನರು ಇಳಿದುಕೊಳ್ಳುವ ಧರ್ಮ ಶಾಲೆಗಳು ಈಗ ಮಾಯವಾಗುತ್ತಿವೆ. ಹುಬ್ಬಳ್ಳಿಯಲ್ಲಿದ್ದ ಒಂದು ಶಾಲೆಯನ್ನು ಧರ್ಮದ ದವಾಖಾನೆಗೆ ಕೊಟ್ಟರು ಮತ್ತೊಂದು ಧರ್ಮ ಶಾಲೆಯನ್ನು ಸರಕಾರೀ ಕಚೇರಿಗಾಗಿ ಕೊಟ್ಟರು, ಹೀಗೆ ಇರುವ ಧರ್ಮ ಶಾಲೆಗಳು ಸಹ ಮಾಯವಾಗುತ್ತವೆ.

ಲೋಕೋಪಯೋಗಿ ಶಾಖೆಯವರು ಬಡ ಜನತೆಗಾಗಿ ಮಲಗಲು ತಂಗು ಮನೆಗಳನ್ನು ಕಟ್ಟಿಸುವುದಕ್ಕೆ ವ್ಯವಸ್ಥೆಯಿತ್ತು. ಈಗ ಕಡಿಮೆಯಾಗಿದೆ ಬಡಜನರು ಪುಟ್‌ಪಾಥಗಳಲ್ಲಿ ಮಲಗುವುದನ್ನು ನೋಡಲು ಅಸಹ್ಯವೆನಿಸುತ್ತದೆ. ಆದ್ದರಿಂದ ಸರಕಾರದವರು ಬಡವರಿಗಾಗಿ ತಂಗು ಮನೆಗಳನ್ನು ಕಟ್ಟಿಸಬೇಕು ಎಂದು ಸೂಚಿಸುತ್ತೇನೆ.

ಟೆನೆನ್ಸಿಯ ದೋಷಗಳು

25ನೇ ಜುಲೈ 1967

ಒಕ್ಕಲುತನದ ಅಭಿವೃದ್ಧಿಗೂ ಹಾಗೂ ಭೂಮಿಯ ಒಡೆತನಕ್ಕೂ ಒಂದು ಸಂಬಂಧ ಇರುತ್ತದೆ. ಒಕ್ಕಲುತನದ ಅಭಿವೃದ್ಧಿ ಆಗಬೇಕು ಎಂದರೆ ಯಾವುದೇ ಭೂಮಿಯನ್ನು ಉಳುತ್ತಾರೋ ಅವರೇ ಅದರ ಒಡೆಯರು ಎಂಬ ತತ್ವವನ್ನು ಒಪ್ಪಿದ್ದೇವೆ. ಆದರೆ ಈ ಆದರ್ಶವನ್ನು ಕಾನೂನುಗತ ಮಾಡುವಲ್ಲಿ ಕೆಲವು ಲೋಪ ದೋಷಗಳಾಗಿವೆ. ಟೆನೆನ್ಸಿ ಕಾಯ್ದೆಯನ್ನು ಜಾರಿಯಲ್ಲಿ ತಂದರೂ ಕೂಡಾ ಅನೇಕ ದೃಷ್ಟಿಯಲ್ಲಿ ಇನ್ನೂ ಅನೇಕ ವ್ಯಾಜ್ಯಗಳು ಕೋರ್ಟಿನಲ್ಲಿ ಉಳಿದಿದೆ. ಹೀಗಾಗಿ ಉಳುವವರನ್ನು ಭೂಮಾಲಿಕರನ್ನಾಗಿಸುವಲ್ಲಿ ಸರಕಾರ ಹಿಂದೆ ಮುಂದೆ ನೋಡುತ್ತಿದೆಂದು ವಿಷಾದ ಪಡಬೇಕಾಗಿದೆ. ಭೂಮಿಯಲ್ಲಿ ಬಿತ್ತಲು ಬೇಕಾಗುವ ಬೀಜಕ್ಕಾಗಿ ಬೇರೆಯವರನ್ನು ಅವಲಂಬಿಸಿದ್ದೇವೆ. ವಿದೇಶವನ್ನೇ ಅವಲಂಬಿಸಿದ್ದೇವೆ. ಇದು ರೈತನಿಗೆ ಅಷ್ಟೇ ಅಲ್ಲ, ಮೈಸೂರು ಸಂಸ್ಥಾನಕ್ಕೆ ಅಷ್ಟೇ ಅಲ್ಲ, ಇಡೀ ದೇಶಕ್ಕೆ ಈ ರೀತಿ ಆಗಿದೆ. ಪ್ರಮುಖವಾಗಿ ಒಕ್ಕಲುತನ ಉದ್ಯೋಗ ಎನ್ನುವುದು ಎಲ್ಲಾ ದೃಷ್ಟಿಯಿಂದಲೂ ಬಹಳ ಹಿಂದೆ ಬೀಳುತ್ತ ಇದೆ. ನಮ್ಮ ಬೇಡಿಕೆಗಳನ್ನು ದೊರಕಿಸುವುದರಲ್ಲಿ ನಿಷ್ಫಲವಾಗಿದ್ದೇವೆ. ಅನೇಕ ದೃಷ್ಟಿಯಲ್ಲಿ ಇದನ್ನು ವಿಚಾರ ಮಾಡಿದಾಗ ಒಂದು ಸಂಗತಿಯನ್ನು ಯಳಂದೂರಿನ ಕೆಲವರು ನಮ್ಮ ದೃಷ್ಟಿಗೆ ತಂದುಕೊಟ್ಟರು. ಅಲ್ಲಿ ಲಿಫ್ಟ್ ಇರಿಗೇಶನ್‌ಗೆ ಬಹಳ ತೊಂದರೆ ಆಗುತ್ತದೆ. ಟಿ. ನರಶಿಪುರದಲ್ಲಿ ಈಗ ಇರುವುದನ್ನು ಸ್ವಲ್ಪ ಬದಲಾವಣೆ ಮಾಡಿ ಅಲ್ಲಿರತಕ್ಕ ಸೌಕರ್ಯವನ್ನು ಹೆಚ್ಚು ಮಾಡಬೇಕು ಎಂದು ನಮ್ಮ ನಜರಿಗೆ ತಂದರು ಲಿಫ್ಟ್ ಇರಿಗೇಶನ್ ಸ್ಕೀಮನ್ನು ಸಣ್ಣ ನೀರಾವರಿ ಯೋಜನೆಯಲ್ಲಿ ಬೆಳೆಸಬೇಕು ಎನ್ನುವ ಯೋಜನೆ ಹೇಳಿದರು. ಅನೇಕ ಕಡೆಗಳಲ್ಲಿ ಸೂಕ್ತವಾದ ಸಲಹೆಗಳನ್ನು ರೈತರು ಕೊಡುತ್ತಿದ್ದಾರೆ. ಅವರಿಗೆ ಆಗ ತಕ್ಕ ತೊಂದರೆಗಳನ್ನು ಹೇಳುತ್ತಾ ಇದ್ದಾರೆ. ಎನ್ನುವ ಮಾತನ್ನು ಹೇಳಬೇಕಾಗಿದೆ. ಇನ್ನೂ ಅನೇಕ ಕಡೆ ಬೇರೆ ನೀರಾವರಿಗಳೂ ಇವೆ.

ಈಗ ಹುಬ್ಬಳ್ಳಿ ತಾಲೂಕಿನಲ್ಲಿ ರೈತ ತಾನು ಬೆಳೆದಂಥ ಬೆಳೆಯನ್ನು ಮನೆಯವರೆಗೂ ತರಬಹುದೆಂಬುದು ಸ್ವಾತಂತ್ರ್ಯವುಳಿದಿಲ್ಲ, ಕಳವು ಆಗುವ ಭಯವಿದೆ. ಇದರ ಬಗ್ಗೆ ಅನೇಕ ಮನವಿಗಳನ್ನು ಮುಖ್ಯಮಂತ್ರಿಗಳಿಗೂ ಸಂಬಂಧಪಟ್ಟ ಮಂತ್ರಿಗಳಿಗೂ ಕೊಟ್ಟು ಹೇಳಿದಾಗ್ಯೂ ಕೂಡಾ ಸರಿಯಾದ ಪರಿಹಾರ ಸಿಕ್ಕಿಲ್ಲ. ಇದಕ್ಕೆ ಅನೇಕ ಅಡಚಣೆಗಳೂ ಇವೆ. ಮೋಟರ ವೆಹಿಕಲ್ಸ್ ಆ್ಯಕ್ಟ ಇದಕ್ಕೆ ಸಂಬಂಧಿಸಿದಂತೆ ಇದೆ. ಅದರ ಪ್ರಕಾರ ಕಂಭಾರ ಹೆಚ್ಚಿದೆಂದು ಅನೇಕ ರೈತ ಸಂಘಗಳು ಮನವಿ ಮಾಡಿಕೊಂಡಿವೆ ಮಿನಿಸ್ಟರ್ ಫಾರ್ ಟುರಿಂಗ ಆ್ಯಂಡ್ ಟ್ರಾನ್ಸಪೋರ್ಟ ಅವರು ವಿಚಾರ ಮಾಡುತ್ತೇನೆ ಎಂದು ಹೇಳಿದ್ದರೂ ಕೂಡ ಇನ್ನೂ ಸರಿಯಾದ ಪರಿಹಾರ ಕೊಟ್ಟಿಲ್ಲ. ಒಕ್ಕಲುತನವು ನಮ್ಮ ದೇಶದಲ್ಲಿ ಮುಖ್ಯ ಉದ್ಯೋಗ, ಈ ಉದ್ಯೋಗದ ಮೇಲೆ ಹೆಚ್ಚಿನ ಒತ್ತಡವಿದೆ. ನೂರಕ್ಕೆ 70 ರಷ್ಟು ಜನರು ಈ ಉದ್ಯೋಗವನ್ನೇ ಅವಲಂಬಿಸಿದ್ದಾರೆ. ಇವತ್ತಿನ ದಿವಸ ಶಾಸ್ತ್ರೀಯವಾಗಿ ಮತ್ತು ಸಂಶೋಧನೆಗಳನ್ನು ಅನುಸರಿಸಿ ಭೂಮಿಯನ್ನು ಉಳಬೇಕಾದರೆ ವೈಯಕ್ತಿಕವಾಗಿ ಸಣ್ಣ ಪುಟ್ಟ ಹಿಡುವಳಿದಾರರಿಗೆ ಅಷ್ಟರ ಮಟ್ಟಿಗೆ ಶಾವಾಗಿಯೋ ಸ್ವತಂತ್ರ್ಯ ರೀತಿಯಿಂದ ಒಕ್ಕಲುತನ ಉದ್ಯೋಗವನ್ನು ಮಾಡಲಿಕ್ಕೆ ಸಾಧ್ಯವೇ ಎಂದು ನೋಡಿದರೆ ಇವತ್ತು ಕಾಂಗ್ರೆಸ್ ಸರಕಾರ ಮೋಸ ಮಾಡುತ್ತಾ ಇದೆ ಎಂದು ಹೇಳಬೇಕಾಗುತ್ತದೆ. ಇನ್ನು ಒಂದು ತೊಡಕಿನ ಕಾರಣವಿದೆ. ಸರಕಾರದವರೇ

ತಮ್ಮ ಕೈಯಲ್ಲಿ ಭೂಮಿಯನ್ನು ಕೈಯಲ್ಲಿ ತೆಗೆದುಕೊಂಡು ವಿಶಾಲ ಪ್ರಮಾಣದಲ್ಲಿ ಸಾಗುವಳಿ ಮಾಡಿದರೆ ಇನ್ನೂ ಸುಧಾರಣೆಯಾದೀತೋ ಏನೋ ಆಗಲಿಕ್ಕಿಲ್ಲ. ಒಕ್ಕಲುತನಕ್ಕೆ ಬೇಕಾಗುವ ಬೀಜ ಮತ್ತು ಗೊಬ್ಬರವನ್ನು ಒದಗಿಸುತ್ತಿದ್ದಾರೆ. ಸರಕಾರದವರು ಆರು - ಆರೂವರೆ ರೂಗಳಿಗೆ ಕೊಂಡು ಹತ್ತು ರೂಗಳಿಗೆ ಮಾರುತ್ತಾ ಇದ್ದಾರೆ. ಇದರಿಂದ ಯೋಗ್ಯ ಬೆಳೆಗೆ ಶಕ್ತಿಯುತ ಬೀಜಗಳನ್ನು ಒದಗಿಸಿದಂತೆ ಆಗಲಿಲ್ಲ. ಇದರಲ್ಲೂ ಲಾಭ ಅಪೇಕ್ಷಿಸುತ್ತಿದ್ದಾರೆ. ಯೋಗ್ಯ ಸರಬರಾಜು ಎಂದು ಇದನ್ನು ತಿಳಿಯಲು ಸಾಧ್ಯವಿಲ್ಲ. ಹಾಗೆ ಒಕ್ಕಲುತನ ಉದ್ಯಮವನ್ನು ದುರ್ಲಕ್ಷಿಸಲಾಗಿದೆ.

ಕೈಗಾರಿಕೆ ಉದ್ಯಮಗಳಲ್ಲಿ ಕನ್ನಡ ಜನರಿಗೆ ಸಾಕಷ್ಟು ನೌಕರಿಗಳು ಸಿಕ್ಕುತ್ತಿಲ್ಲ. ಮದ್ರಾಸಿನವರಿಗೆ, ಮರಾಠಿಗಳಿಗೆ, ಬಂಗಾಲಿ, ತೆಲುಗು, ತಮಿಳು, ಮಲೆಯಾಳ ಜನರಿಗೆ ನೇಮಕಗಳಾದ ಕನ್ನಡಿಗರ ನೇಮಕಗಳಾಗುತ್ತಿಲ್ಲ. ಹೊರದೇಶಗಳವರೊಡನೆ ಫಾರೆನ್ ಕೋಲ್ಯಾಬೋರೇಶನ್ನಿನಲ್ಲಿ ನಡೆಯುವ ಕೈಗಾರಿಕೆಗಳಲ್ಲಿ ನಡೆಯುವ ದುಃಖಕರ ಸಂಗತಿ ಹೇಳಬೇಕಾಗಿದೆ. ಮೈಸೂರ ಲ್ಯಾಂಪ್ ಫ್ಯಾಕ್ಟರಿಯಲ್ಲಿ ಕಾರ್ಮಿಕ ಮುಖಂಡರು ಹೇಳುವ ಪ್ರಕಾರ ಹೆಚ್ಚಿನ ಪ್ರಮಾಣದಲ್ಲಿ ರಾಮಟೇರಿಯಲ ವೇಸ್ಟ ಕಚ್ಚಾಮಾಲು ನಷ್ಟ ಆಗುತ್ತಾ ಇದೆ. ಅಲ್ಲಿರುವ ಫಾರೆನ್ ತಜ್ಞರಿಗೆ ಏನೂ ತಿಳಿಯದಿದ್ದರೂ ನಮ್ಮ ಜನರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ಅವರ ಜೀವನಕ್ಕೆ ತೊಂದರೆ ಕೊಡುತ್ತಾ ಇದ್ದರೆ. ಇಲ್ಲಿ ತಯಾರಾದಂಥ ಕಚ್ಚಾ ಹಾಗೂ ಕೆಲಸಕ್ಕೆ ಬಾರದಂಥ ಪ್ರೊಡಕ್ಟಿಗೆ ಮೈಸೂರ ಲ್ಯಾಂಪವರ್ಕ, ಎಂದು ಹೆಸರನ್ನು ಹಾಕುತ್ತಾರೆ. ಒಳ್ಳೇ ಉತ್ಪಾದನೆಗೆ ಫಾರೆನ್ ಕನ್ಸರ್ನ ಎನ್ನುತ್ತಾರೆ. ಇದರಿಂದ ನಮಗೆ ಧಕ್ಕೆಯಾಗಿದೆ. ನಷ್ಟವಾಗಿದೆ ವಿವರಗಳನ್ನು ನಿಮಗೆ ಹೇಳಿದ್ದೇನೆ. ಕಾರ್ಮಿಕರು ಹೇಳುವುದನ್ನು ಕೇಳಿ ಸಂತಾಪವಾಗುತ್ತದೆ.

ದ್ರಾವಿಡರು, ತೆಲುಗರು, ತಮಿಳರು, ಬಂಗಾಲಿಗಳು ನಮ್ಮ ದೇಶದಲ್ಲಿ ಒಂದು ಉದ್ದಿಮೆ ಮಾಡಿದರೆ ಆದರೂ ಸಂತೋಷ ಪಡುವ ಪ್ರಶ್ನೆ ಬಂದಾಗ ಇಂತಹ ಹೊರಗಿನಿಂದ ವಿದೇಶೀ ಕಂಪನಿ ಒಂದು ನಮ್ಮ ಉದ್ಯಮದಲ್ಲಿ ಕೈ ಹಾಕಿ ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವಂಥ ಪರಿಸ್ಥಿತಿ ನೋಡಿ ತುಂಬಾ ದುಃಖವಾಗುತ್ತದೆ.

ಇನ್ನು ಪಬ್ಲಿಕ ಸೆಕ್ಟರದಲ್ಲಿ ಇದಕ್ಕೆ ಮಹತ್ವ ಕೊಟ್ಟು ಅನೇಕ ಫ್ಯಾಕ್ಟರಿಗಳಲ್ಲಿ ಅನೇಕ ಉದ್ಯಮಗಳನ್ನು ಪ್ರಾರಂಭಿಸಲಿಕ್ಕೆ ಸಾಧ್ಯವಿಲ್ಲ. ಎನ್ನುವ ಮಾತು ಇವತ್ತು ಕಂಡುಬರುತ್ತದೆ. ಅನೇಕ ಖಾಸಗೀ ಜನರು ಮುಂದು ಬರುತ್ತಿದ್ದಾರೆ ಅವರಿಗೆ ರಾಮಟೇರಿಯಲ್ ಸಿಕ್ಕುತ್ತಾ ಇಲ್ಲ. ಕಬ್ಬಿಣ ಮತ್ತು ಉಕ್ಕು ಇದರ ಮೇಲೆ ಇದ್ದಂಥ ಬೆಲೆ ನಿಯಂತ್ರಣ ಹೋಗಿ ಬೆಲೆ ಹೆಚ್ಚಾಗಿದೆ. ಈಗಾಗಲೇ ಇದ್ದಂಥ ಅನೇಕ ಉದ್ದಿಮೆಗಳು ಬಂದ್ ಆಗುವಂಥ ಪರಿಸ್ಥಿತಿಯಿದೆ.

ಹೀಗಾಗಿ ಹುಬ್ಬಳ್ಳಿ-ಬೆಂಗಳೂರು ಇತರ ಕಡೆಗಳಲ್ಲಿ ತೆರೆದಂಥ ಇಂಡಸ್ಟ್ರಿಯಲ್ ಎಸ್ಟೇಟ್ಸ ಹಾಳಾಗುತ್ತಾ ಇವೆ. ಮೊನ್ನೆ ತಾನೆ ಮುಖ್ಯ ಮಂತ್ರಿಗಳಿಗೆ ಹುಬ್ಬಳ್ಳಿ ಇಂಡಸ್ಟ್ರಿಯಲ್ ಎಸ್ಟೇಟಿನವರು ಒಂದು ಮನವಿಯನ್ನು ಸಲ್ಲಿಸಿ ಬಹಳ ಮನದಟ್ಟಾಗುವಂತೆ ಹೇಳಿದ್ದಾರೆ. ಅಲ್ಲಿ ಒಂದು ಉದ್ದಿಮೆಯನ್ನು ಪ್ರಾರಂಭಿಸಬೇಕಾದರೆ ಸ್ಟಾಲ್ ಅಂಗಡಿ ದೊರಕುವುದೂ ಕಷ್ಟವಾಗಿದೆ ಎನ್ನುವ ಮಾತನ್ನು ಹೇಳಿದರು ಯಾವ ಉದ್ದಿಮೆಗಳಿಗೆ ಆಗಲೀ ಆಕ್ಟ್ರಾಯ್, ಸೇಲ್ಸ ಟ್ಯಾಕ್ಸ ಕಡಿಮೆ ಮಾಡದೇ ನೀರಿನ ಬೆಲೆ ವಿದ್ಯುತ್ ಬೆಲೆ ಎಲ್ಲವನ್ನೂ ಏರಿಸಿದರೆ ಅದರಿಂದ ಉದ್ದಿಮೆಗಳು ಬೆಳೆಯುವುದಕ್ಕೆ ತೊಂದರೆ ಆದೀತು ಎನ್ನುವುದನ್ನು ಮುಖ್ಯಮಂತ್ರಿಗಳು ತಿಳಿಯದೇ ಹೋದರೆ ಅದೊಂದು ದೊಡ್ಡ ಪ್ರಮಾದ ಮುಖ್ಯವಾಗಿ ಜನರಲ್ ಎಡ್ಮಿನಿಸ್ಟ್ರೇಶನ್ ವಿಷಯವಾಗಿ ಕೆಲ ಮಾತುಗಳನ್ನು ಹೇಳಬೇಕು. ಇವತ್ತು ಸರಕಾರದಲ್ಲಿ

ವಿಶ್ವಾಸವಿಡಬೇಕೋ, ಇಡಬಾರದೆ ಎಂಬ ಸಂದೇಹ ಬರುವಂಥ ಸ್ಥಿತಿ ನಿರ್ಮಾಣವಾಗಿದೆ. ಸರಕಾರ ಅಂದರೇನು ಎಷ್ಟರ ಮಟ್ಟಿಗೆ ನಮ್ಮ ತೊಂದರೆಗಳನ್ನು ನಿವಾರಿಸಬಲ್ಲದು. ಯಾರನ್ನು ಬೇಡಿದರೆ ಪರಿಹಾರ ಸಿಕ್ಕೀತು ಎಂಬ ಪ್ರಶ್ನೆ ಈಗ ಬಂದಿದೆ. ತಹಶೀಲ್ದಾರರ ಹತ್ತಿರ ಹೋದರೆ ಅಸಿಸ್ಟಂಟ ಕಮೀಶ್ನರರ ಹತ್ತಿರ ಹೋಗಿ ಎಂದು ಹೇಳುತ್ತಾರೆ. ಅಸಿಸ್ಟಂಟ ಕಮೀಶ್ನರರ ಹತ್ತಿರ ಹೋದರೆ ಡೆಪ್ಯುಟಿ ಕಮೀಶ್ನರರ ಕಡೆಗೆ ಹೋಗುವಂತೆಹೇಳುತ್ತಾರೆ. ಇದರಿಂದ ಜನತೆ ಯಾವ ಅಧಿಕಾರಿಯಲ್ಲಿ ಹೋಗಿ ಕೊಳಬೇಕೋ ಒಂದೂ ಗೊತ್ತಾಗುವುದಿಲ್ಲ. ನಮ್ಮ ದಿನನಿತ್ಯದ ತೊಂದರೆಗಳನ್ನು ಸರಿಯಾಗಿ ಕೇಳುವವರೇ ಇಲ್ಲದಂತಾಗಿದೆ. ಅವರಿಗೆ ಸ್ವಾತಂತ್ರ್ಯವಿದೆಯೋ ಅಧಿಕಾರವಿದೆಯೋ ಅಥವಾ ನಿಜವಾಗಿ ಜನತೆಗೆ ಪರಿಹಾರ ಕೊಡಲು ಶಕ್ತಿಯಿದೆಯೋ ಇಲ್ಲವೋ ಒಂದೂ ಗೊತ್ತಾಗುವುದಿಲ್ಲ. ತಮ್ಮ ಆಫೀಸಿನಲ್ಲಿ ಒಬ್ಬ ಹೆಡ್ ಗುಮಾಸ್ತನಿಗೆ ಸರಿಯಾದ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಒಬ್ಬ ಆಯ್.ಎ.ಎಸ್. ಡೆಪ್ಯುಟಿ ಕಮೀಶನ್ನರರೇ ಸ್ಪಷ್ಟವಾಗಿ ಒಂದು ಸಾರೆ ಹೇಳಿದರು. ಅವರ ಮೇಲೆ ಬಿಗಿಯಾದ ರಾಜಕೀಯ ಶಕ್ತಿ ಒತ್ತಡ ಬಂದರೆ ಆಗ ಅವರ ಆಡಳಿತದ ಶಕ್ತಿ ಏನಿದೆ ಅದನ್ನು ನಿರ್ದಾಕ್ಷಿಣ್ಯವಾಗಿ ಉಪಯೋಗಿಸುವುದಕ್ಕೆ ಖಂಡಿತವಾಗಿ ಆಗುವುದಿಲ್ಲವೆಂದು ಬಹಳ ವಿಷಾದವಾಗಿ ಹೇಳುತ್ತಾ ಇದ್ದಾರೆ. ಎಲ್ಲಾ ಶಕ್ತಿಗಳು ಮೇಲಿನಿಂದ ಬರುತ್ತವೆ. ಆದ್ದರಿಂದ ನಮಗೆ ನ್ಯಾಯವಾದುದಕ್ಕೆ ಪ್ರೋತ್ಸಾಹವನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಸಣ್ಣ-ಪುಟ್ಟ ಕೆಲಸಗಳಿಗಾಗಿ ರೈತರು ಇನ್ನಲ್ಲಿಗೆ ಹೋಗಬೇಕೆಂದು ಬಹಳ ವಿಷಾದ ಪಡುವ ಸಂದರ್ಭಗಳೇ ಜಾಸ್ತಿಯಾಗಿವೆ. ಜನತೆಯೂ ಸಹ ಈ ವಿಚಾರದಲ್ಲಿ ತುಂಬಾ ಅಸಮಾಧಾನವಾಗಿದ್ದಾರೆ. ಇಂತಹ ವಿಷಾದಕರ ಸಂಗತಿ ಜನರಲ್ ಎಡ್ಮಿನಿಸ್ಟ್ರೇಶನ್‌ದಲ್ಲಿ ಇರಕೂಡದು.

ದೊಡ್ಡ ಪಟ್ಟಣಗಳಲ್ಲಿರುವ ತೊಂದರೆಗಳನ್ನು ಹೇಳಲು ಇಷ್ಟಪಡುತ್ತೇನೆ. ಅವು ಇನ್ನೂವರೆಗೂ ಹಿಂದೆ ಇದ್ದಂತೆಯೇ ಇವೆ ಕಾಂಗ್ರೆಸ್ ಆಡಳಿತದಲ್ಲಿ ಯಾವ ಸುಧಾರಣೆಗಳೂ ಆಗಿಲ್ಲ. ಆ ಕಡೆ ಲಕ್ಷ್ಯ ಕೊಟ್ಟಿಲ್ಲಾ ಎಂದು ಹೇಳಬೇಕಾಗಿದೆ.

ಎರಡು ತಿಂಗಳ ಹಿಂದೆ ಹುಬ್ಬಳ್ಳಿಯಲ್ಲಿ ಒಂದು ಘಟನೆ ನಡೆಯಿತು. ಒಬ್ಬ ಹೆಣ್ಣುಮಕ್ಕಳು ಗಟಾರದಲ್ಲಿ ಬಿದ್ದು ಸತ್ತಳು. ಅದರ ಬಗ್ಗೆ ಪೋಲಿಸರನ್ನು ಕೇಳಿದಾಗ ಮಳೆ ಬಹಳ ಬಂದು ಗಟಾರ ತುಂಬಿದಾಗ ಕಾಲು ಜಾರಿ ಬಿದ್ದು ಸತ್ತಳು ಎಂದು ಹೇಳಿದರು. ಕಾರ್ಪೋರೇಶನ್ ಅಧಿಕಾರಿಗಳನ್ನು ಕೇಳಿದರೆ ತಮ್ಮಲ್ಲಿ ಹಣವಿಲ್ಲ. ಆದ್ದರಿಂದ ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳಿದರು. ಹೀಗೆ ಪರಿಸ್ಥಿತಿಯಿರುವಾಗ ಗಟಾರಗಳ ಬಗ್ಗೆ ಒಳಚರಂಡಿ ಯೋಜನೆಯ ಬಗ್ಗೆ ತಕ್ಕ ಕಾರ್ಯಕ್ರಮ ಕೈಕೊಂಡಿಲ್ಲದಿರುವುದು, ಅವ್ಯವಸ್ಥೆಯಿರುವುದು ಬಹಳ ವಿಷಾದ ಕರ ಇದನ್ನು ಒಂದಲ್ಲ ಅನೇಕ ರೀತಿಯಲ್ಲಿ ನೋಡಬಹುದು ಕೊಳಚೆ ಪ್ರದೇಶಗಳ ಸುಧಾರಣೆಗೆ ವಿಕಾಸಕ್ಕೆ ಯಾವ ಕ್ರಮ ಕೈಕೊಳ್ಳಲಾಗಿದೆಂಬುದನ್ನು ನೋಡಿದರೆ ವಿಷಾದವೆನಿಸುತ್ತದೆ. ಮೇಲಿಂದ ಮೇಲೆ ಎರಡು ಮೂರು ವರ್ಷಗಳ ಕೆಳಗೆ ಕಾಲರಾ ಬೇನೆ ಬಂದು ಅನೇಕರು ಸತ್ತರು. ಗದಗ ಮುಂತಾದ ದೊಡ್ಡ ಪಟ್ಟಣಗಳಲ್ಲಿ ಕಾಲರಾ ಜಾಸ್ತಿಯಾಗಿದೆ. ಇದನ್ನು ಸುಧಾರಿಸಬೇಕು ಇದಕ್ಕೆ ಲಕ್ಷ್ಯ ಕೊಡಬೇಕು ಉತ್ತಮವಾದ ವಾಸದ ಮನೆಗಳನ್ನು ಸರಕಾರ ಕಟ್ಟಿ ಒದಗಿಸಬೇಕು. ಪಟ್ಟಣಗಳಲ್ಲಿ ಬಡವರಿಗೆ ಮನೆ ಕಟ್ಟಿಸಿಕೊಡಲು ಕೆಲವು ಹೌಸಿಂಗ್ ಸೊಸೈಟಿಗಳು ಮುಂದೆ ಬಂದಿವೆ. ಆದರೆ ಅವಕ್ಕೆ ಪ್ರೋತ್ಸಾಹ ದೊರೆತಿಲ್ಲ. ಸೊಸೈಟಿಯವರು ಎಷ್ಟೋ ಕಡೆ ತಮ್ಮ ನಿರ್ಣಯ ಮಾಡಿ ಹಣವನ್ನು ಕೆಲವು ಬ್ಯಾಂಕುಗಳಲ್ಲಿಟ್ಟು

ರಜಿಸ್ಟರೇಶನ್‌ಗೆ ಕಳುಹಿಸಿದಾಗ ಯಾವುದೋ ಒಂದು ಟೆಕ್ನಿಕಲ್ ತೊಂದರೆ ಒಡ್ಡಿದ್ದಾರೆ. ಒಂದು ಸೊಸೈಟಿ ರಜಿಸ್ಟರ್ ಆಯಿತು ಆದರೆ ಅದಕ್ಕೆ ಭೂಮಿ ಒದಗಿಸಲು ಇನ್ನೂ ಸಾಧ್ಯವಾಗಿಲ್ಲ. ಭೂಮಿಯ ಬೆಲೆ ಅತ್ಯಂತ ಹೆಚ್ಚಾಗಿರುವದರಿಂದ ಅದನ್ನು ಕೊಡುವವರೆಗೆ ಯಾವ ಕೆಲಸವೂ ಆಗುವುದಿಲ್ಲವೆಂದು ಕಾರ್ಪೊರೇಶನ್ ಹೇಳಿದೆ. ಕಾರ್ಪೊರೇಶನ್ನಿನವರಿಗೆ ಭೂಮಿಯನ್ನು ಕೊಳ್ಳಲು ಸಾಧ್ಯವಿಲ್ಲ. ಸರಕಾರದವರಿಗೆ ಹಣ ಕೊಡುವುದಕ್ಕೆ ಸಾಧ್ಯವಿಲ್ಲ. ಎಷ್ಟೋ ಸಾರೆ ಹೀಗಾಗಿ ರಜಿಸ್ಟರ್ ಆದ ಸೊಸೈಟಿಗಳು ಮನೆಗಳನ್ನು ಕಟ್ಟದೇ ಸುಮ್ಮನೇ ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ದೊಡ್ಡಪಟ್ಟಣಗಳಲ್ಲಿ ವಸತಿ ಸೌಕರ್ಯಗಳನ್ನು ಏರ್ಪಡಿಸುವುದು ಯಾರಾದರೂ ಇಬ್ಬರು ಮಾಡುವ ಕೆಲಸವಲ್ಲ. ಹತ್ತಿಪ್ಪತ್ತು ಜನರು ನಿಂತು ಮಾಡುವಂಥ ಕೆಲಸವೂ ಇದಲ್ಲ. ಇದಕ್ಕೇ ಕೋಆಪರೇಟಿವ್ ಡಿಪಾರ್ಟಮೆಂಟಿನವರು ಹಾಗೂ ನಗರಾಡಳಿತ ಶಾಖೆಯವರು ಇಬ್ಬರೂ ಸೇರಿ ಯೋಜಿಸಿ ಕಾರ್ಯ ಮಾಡಿದರೆ ಈ ಕೆಲಸ ಸಾಧ್ಯ ಸರ್ಕಾರೀ ಭೂಮಿ ಇದ್ದರೆ ಸುಲಭವಾಗಿ ಕೊಡಬಹುದು. ಭೂಮಿ ಬೇರೆ ಖಾಸಗೀಯವರದ್ದು ಇದ್ದರೆ ಅದರಲ್ಲಿ ಕೆಲಸದ ಪ್ರಗತಿ ಸಾಧ್ಯವಿಲ್ಲ. ಕೊಳಚೆ ನಿರ್ಮೂಲನಕ್ಕೆ ಒಂದು ಕಾನೂನು ಮಾಡಿದರೂ ಹೈಕೋರ್ಟಿನವರು ಅದನ್ನು ರದ್ದು ಮಾಡಿದರು ಈಗ ಈ ಕಾನೂನಿಗೆ ಸೂಕ್ತ ತಿದ್ದುಪಡಿ ತಂದು ಜನರಿಗೆ ಹಿಂಸೆ ಆಗದಂತೆ ಅವರಿಗೆ ಉತ್ತಮ ಮನೆ ಕಟ್ಟಿಕೊಳ್ಳುವುದಕ್ಕೆ ಮುಂದೆ ಬಂದು ಕೊಳಚೆ ನಿರ್ಮೂಲನೆ ಮಾಡಬೇಕು.

ಕರಭಾರ ಅತ್ಯಂತ ಹೆಚ್ಚಾಗಿದೆ ನೀರು ತೊಟ್ಟಿಗೆ ಕಸದ ತೊಟ್ಟಿಗೆ ಎಂದು ಹುಬ್ಬಳ್ಳಿ ಧಾರವಾಡ ಕಾರ್ಪೊರೇಶನ್ನಿವರು ಕರವನ್ನು ವಸೂಲು ಮಾಡುತ್ತಿದ್ದಾರೆ. ಇದು ಅತ್ಯಂತ ಭಾರವಾಗಿದೆ. ಇದಕ್ಕಾಗಿ ಪ್ರತಿ ಮನೆಗೂ ಶೇಕಡಾ ನಾಲ್ಕರಂತೆ ಕರವನ್ನು ಹಾಕುತ್ತಾರೆ. ನೀರಿನ ಸೌಕರ್ಯವೇನೂ ಇರುವುದಿಲ್ಲ. ಇದರಿಂದಾಗಿ ಸಣ್ಣ ಸಣ್ಣ ಮನೆಗಳಲ್ಲಿ ಮನೆಗಳಿಗೂ ಎಂಟು ಹತ್ತು ರೂ. ಕೊಡಬೇಕಾಗುತ್ತದೆ ಸಾರ್ವಜನಿಕ ನಲ್ಲಿಗಳನ್ನು ಕತ್ತರಿಸಿ ಹಾಕಿ ಬಿಟ್ಟಿದ್ದಾರೆ. ಬಹಳ ಜನರು ಬಡವರು ನೀರು ಇಲ್ಲದೇ ಒದ್ದಾಡಬೇಕಾಗಿದೆ. ಬೆಳಗಾಂವಿ ಗದಗ ಹೀಗೆ ಅನೇಕ ಪಟ್ಟಣಗಳಲ್ಲಿ ನೀರಿನ ತಾಪತ್ರಯ ಬಹಳವಾಗಿದೆ. ಅದರ ಕಡೆಗೆ ಗಮನ ಕೊಟ್ಟಿಲ್ಲ. ರೋಗರುಜಿನಗಳು ಹೆಚ್ಚಾಗುತ್ತಿವೆ. ಜನರು ಅನಾಹುತಗಳಿಗೆ ತುತ್ತಾಗುತ್ತಿದ್ದರೆ.

ಇನ್ನು ಕಾರ್ಪೊರೇಶನ್ನಿನಲ್ಲಿ ನಡೆಯತಕ್ಕಂಥ ಆಡಳಿತದ ಬಗ್ಗೆ ಹೇಳಬೇಕೆಂದರೆ ಅಲ್ಲಿ ಇನ್ನೂ ಚುನಾವಣೆಯಾಗಿಲ್ಲ. ಸರಕಾರದವರು ಅಲ್ಲಿಯ ಆಡಳಿತಕ್ಕಾಗಿ ಕೆಲವರನ್ನು ನಾಮಕರಣ ಮಾಡಿದ್ದಾರೆ. ನಾಮಕರಣಗೊಂಡ ಸದಸ್ಯರು ಇವತ್ತು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಈ ಮಾತನ್ನು ಪದೇ ಪದೇ ಸರಕಾರದ ಗಮನಕ್ಕೆ ತರುತ್ತಿದ್ದೇನೆ. ಆದುದರಿಂದ ಸರಕಾರದವರು ಕೂಡಲೇ ಚುನಾವಣೆಗಳನ್ನು ನಡೆಸಬೇಕು. ಸರಕಾರದ ಕೈಯಲ್ಲೇ ಇದು ಉಂಟು ಆದರೂ ಲಕ್ಷ್ಯ ಕೊಡುತ್ತಿಲ್ಲ. ಕಾರ್ಪೊರೇಶನ್ ಹಾಗೂ ಗ್ರಾಮ ಪಂಚಾಯತಿಗಳಿಗೆ ಚುನಾವಣೆಗೆ ನಡೆಸದಿರುವುದು ಖೇದಕರ.

ಹುಬ್ಬಳ್ಳಿ ಎ.ಪಿ.ಎಂ.ಸಿ. ಹಾಗೂ ಕುಂದಗೋಳ ಎ.ಪಿ.ಎಂ.ಸಿ.ಗೆ 19 ವರ್ಷಗಳಿಂದ ಚುನಾವಣೆಯೇ ನಡೆದಿಲ್ಲ. ಜನರು ಎಷ್ಟೊಂದು ಸಹನೆಯಿಂದ ನಡೆಸಿಕೊಳ್ಳುತ್ತಿದ್ದರೆಂಬುದನ್ನು ತಿಳಿದುಕೊಳ್ಳಬಹುದು. ಈ ಚುನಾವಣೆ ನಡೆಸುವುದಕ್ಕೆ ಯಾವುದೋ ತಾಂತ್ರಿಕ ದೋಷವಿದೆಂದು ಹೇಳುತ್ತಾ ಇದ್ದಾರೆ.

ಸಹಕಾರ ಚಳುವಳಿ ಬಗ್ಗೆ ಹೇಳಬೇಕೆಂದರೆ ಆದು ಅಷ್ಟೊಂದು ಯಶಸ್ವಿಯಾಗಿ ನಡೆಯುತ್ತಾ ಇಲ್ಲ ಸರಕಾರ ಸಹಕಾರ ಆಂದೋಲನ ಯಶಸ್ವಿಗಾಗಿ ಯೋಗ್ಯವಾತಾವರಣ ನಿರ್ಮಾಣ ಮಾಡದೇ ಆದನ್ನು ಕೇವಲ ಒಂದು ಸರಕಾರೀ ಡಿಪಾರ್ಟಮೆಂಟ್ ಎಂದು ತಿಳಿದು ಕೆಲಸ ಮಾಡುವುದಕ್ಕೆ ಹೊರಟರೆ ಅದರಿಂದ ಸಹಕಾರ ಆದಂದೋಲನ ಬೆಳೆಯದು ಜನತೆಯ ಸಹಕಾರ ಹಾಗೂ ಸರಿಯಾದ ಮನೋಭಾವವಿರಬೇಕಾದುದು ಅತ್ಯವಶ್ಯ.

ಹುಲಕೋಟೆಯಲ್ಲಿ ಒಂದು ಕ್ಯಾಟಲ್‌ಫೀಡ್ ಪ್ರೊಸೆಸಿಂಗ್ ಸೊಸೈಟಿಯಿದೆ. ಇದಕ್ಕೆ ಸರಕಾರದ ಯಾವದೇ ಸಹಾಯವಿಲ್ಲದೇ ಆರು ಲಕ್ಷರೂ ಬಂಡವಾಳವನ್ನು ತಾನಾಗೇ ಮಾಡಿಕೊಂಡಿದೆ. ಇದು ತುಂಬಾ ಅಭಿನಂದನೀಯ. ಅಂಥಾದ್ದಕ್ಕೆ ಸರಕಾರ ಪ್ರೋತ್ಸಾಹ ಕೊಟ್ಟರೆ ಅದು ಇನ್ನು ಮುಂದಕ್ಕೆ ಬರುತದೆ. ಆದರೆ ಇವೊತ್ತು ಈ ರಾಜಕೀಯದ ಒಂದು ವಾತಾವರಣದಿಂದ ಎಲ್ಲವೂ ಹಾಳಾಗುತ್ತದೆ ಎಂದು ಬಹಳ ದುಃಖದಿಂದ ಹೇಳಬೇಕಾಗಿದೆ. ಪ್ರತಿಯೊಂದು ಸಹಕಾರ ಚಳುವಳಿ ನಡೆಯಬೇಕಾದರೆ ಮೂಲವಾಗಿ ಸಹಕಾರದ ವಾತಾವರಣ ಬೇಕಾಗುತದೆ. ಇಂದು ಸರಕಾರ ಮಾಡುವ ಪ್ರತಿಯೊಂದು ಸಂಸ್ಥೆಯಲ್ಲಿ ಹೋರಾಟ, ಸ್ಪರ್ಧೆ, ರಾಜಕೀಯ ಕಲಹ ಇವುಗಳಿರುವುದು ಮಿಸ್ ಅಪ್ರೊಪ್ರಿಯೇಶನ್ನಿಗೆ ಕಾರಣವಾಗಿದೆ ಇದರಿಂದ ಅದು ಮುಚ್ಚಲು ಕಾರಣವಾಗಿದೆ.

ಕೆ. ಸಿ. ಟಿ. ಮಿಲ್

ಎರಡು ಲಕ್ಷರೂಗಳವರೆಗೆ ಕೆಲ ಹುದ್ದೆಗಳನ್ನು ಹಣಕಾಸು ಉಳಿಕೆ ಕ್ರಮವೆಂದು ರದ್ದುಪಡಿಸಿದ್ದಾಗಿ ಅರ್ಥಮಂತ್ರಿಗಳು ಹೇಳಿದ್ದಾರೆಯಾದರೂ ಹಣವಿನಿಯೋಗ ವಿಧೇಯಕದಲ್ಲಿ ಹಾಗೆ ಖರ್ಚನ್ನು ಕಡಿಮೆ ತೋರಿಸಿಲ್ಲವೆಂದು ಶ್ರೀಎಸ್. ಎಸ್. ಶೆಟ್ಟರರು ಸರಕಾರದ ಗಮನಕ್ಕೆ ತಂದುದಕ್ಕೆ ಆಯವ್ಯಯವನ್ನು ಒಹು ಮುಂಚೆ ತಯಾರಿಸಲಾಗಿದ್ದು ನಂತರ ಉಳಿಕೆ ಕ್ರಮ ತೆಗೆದುಕೊಂಡಿದ್ದರಿಂದ ಅವರ ಸೇರ್ಪಡೆಯಾಗಿಲ್ಲವೆಂದು ಸಭಾಧ್ಯಕ್ಷರೇ ತಮಗೆ ಪರಿಶೀಲನೆಯಿಂದ ಗೊತ್ತಾಗಿದೆ ಎಂದು ವಿವರ ನೀಡಿದರು.

ಹುಬ್ಬಳ್ಳಿಯಲ್ಲಿಯ ಸಹಕಾರಿ ಜವಳಿ ಗಿರಣಿ (ಕೆ.ಸಿ.ಟಿ) ಬಗ್ಗೆ ತನಿಖೆ ನಡೆಸಲು ಸರಕಾರ ಕ್ರಮ ತೆಗೆದುಕೊಂಡಿದೆಯೇ ಎಂದು ಕೇಳಿದ್ದಕ್ಕೆ ಅಭಿವೃದ್ಧಿ ಹಾಗೂ ಸಹಕಾರ ಮಂತ್ರಿ ಕ್ರಮ ತೆಗೆದುಕೊಂಡಿರುವುದಾಗಿ ಉತ್ತರಿಸಿದರು.

ಶ್ರೀ ಎಸ್. ಎಸ್. ಶೆಟ್ಟರ : ಸರಕಾರ ವಿಚಾರಣೆ ನಡೆಸಿದ ಬಳಿಕ ಹುಬ್ಬಳ್ಳಿ ಕೆ.ಸಿ.ಟಿ ಮಿಲ್ಸ್ ಆಡಳಿತ ವ್ಯವಹಾರ ಹಾಗೂ ಗಿರಣಿ ನಡೆದಿರುವ ಕುರಿತು ಸಮಾಧಾನಗೊಂಡಿದೆಯೇ?

ಮಂತ್ರಿ ಪಿ. ಎಂ. ನಾಡಗೌಡ : ಹೌದು ಪೂರ್ಣ ತೃಪ್ತಿಯೆನಿಸಿದೆ.

ಶ್ರೀ ಎಸ್. ಎಸ್. ಶೆಟ್ಟರ : ಕೆಲವು ಕೆಲಸದ ಪಾಳಿಗಳನ್ನು ಬಂದ ಮಾಡಲಾಗಿದೆ. ಹೀಗಾಗಿ ಅನೇಕರನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಎಂಬುದು ನಿಜವಲ್ಲವೇ ?

ಮಂತ್ರಿ, ನಾಡಗೌಡ : ಹೌದು, ಅದು ನಿಜವಿದೆ.

ಶ್ರೀ ಎಸ್. ಎಂ. ಗುರಡ್ಡಿ : ಹುಬ್ಬಳ್ಳಿ ಕೆ.ಸಿ.ಟಿ ಮಿಲ್ ಈ ಗಿರಣಿ ನಷ್ಟದಲ್ಲಿ ನಡೆಯುತ್ತಾ ಇದೆ. ಗುಲಬರ್ಗಾದ ಮಿಲ್ಲಿನ ಗತಿ ಯಾವ ಪ್ರಕಾರವಾಗಿ ಆಯಿತೋ ಅದೇ ರೀತಿ ಇದಕ್ಕೂ ಮಾಡಬೇಕೆಂದು ಮನಸ್ಸು ಮಾಡಿದ್ದೀರಾ ?

ಮಂತ್ರಿ, ನಾಡಗೌಡ : ಹೌದು ನಷ್ಟವಾದದ್ದು ಖರೆ ಇದೆ, ಆದರೆ ಈಗ ನಷ್ಟ ಆಗುವುದಿಲ್ಲ ಹಿಂದ ಹಳೇ ಮಿಲ್ ಇತ್ತು ಸುಟ್ಟು ಹೋಗಿತ್ತು ಅಂತಾ ಆ ಮಿಲ್ಲನ್ನು ತೆಗೆದುಕೊಳ್ಳುವ ಪ್ರಸಂಗ ಬಂದು ಎರಡುಸಾವಿರ ಜನರಿಗೆ ಕೆಲಸ ಕೊಡುವ ಸಲುವಾಗಿ ಈ ಪ್ರಕಾರ ಮಾಡಿದ್ದೇವೆ. ಈಗ ಅದನ್ನು ಎಂಡನೆಯವರಿಗೆ ಕೊಡಬೇಕೆಂಬ ವಿಚಾರವಿಲ್ಲ, ಈಗಿನ ಪ್ರಕಾರ ತಿಂಗಳಿಗೆ 25-30 ಸಾವಿರ ರೂ ಲಾಭವಿದೆ.

ಶ್ರೀ ಕೆ. ಎಚ್. ಪಾಟೀಲ : ಈ ಸಹಕಾರಿ ಗಿರಣಿ ಪ್ರಾರಂಭಿಸಿದ್ದು ಹೇಳಿದ್ದೀರಿ. ಇದು ಸಹಕಾರಿ ರಂಗದೊಳಗಿಂದ ಹತ್ತಿಯನ್ನು ಖರೀದಿ ಮಾಡದೇ ಹೊರಗೆ ಖರೀದಿ ಮಾಡಿದ್ದರಿಂದ ಭಾರೀ ಲುಕ್ಸಾನವಾಗಿದೆ ಎಂದು ಆಡಿಟ್ ತಪಾಸಣೆ ಮೂಲಕ ತಿಳಿಯ ಬಂದಿದೆಯೇ ?

ನಾಗನಗೌಡ : ಹಾಗೆ ಅವರಲ್ಲಿ ಬಂದಿಲ್ಲ

ಶ್ರೀ ಎಸ್. ಶಿವಪ್ಪ : ಹುಬ್ಬಳ್ಳಿ ಕೆ. ಸಿ.ಟಿ ಮಿಲ್ ನ ಬಗ್ಗೆ ವಿಚಾರಣೆ ನಡೆಸಿದ್ದು ಸರಕಾರ ಮಿಲ್ ಚನ್ನಾಗಿ ನಡೆದಿರುವುದರ ಬಗ್ಗೆ ತೃಪ್ತಿಯುಂದಿದೆಯೆಂದು ಸಚಿವರು ತಿಳಿಸಿದ್ದಾರೆ. ಅನೇಕರನ್ನು ಕೆಲಸದಿಂದ ತೆಗೆದುಹಾಕಲಾಗಿದೆಯೆಂದು ಅವರು ಹೇಳಿದ್ದಾರೆ. ಸಚಿವರಿಗೆ ಮಿಲ್ಲಿನ ಬಗ್ಗೆ ತೃಪ್ತಿಯಾಗಿದೆ ಎಂಬುದರ ಅರ್ಥವೇನು?

ನಾಗನಗೌಡ : ಮಾನ್ಯ ಶಿವಪ್ಪನವರು ತಪ್ಪು ತಿಳಿದುಕೊಂಡರು ಸಾವಿರಾರು ಕೆಲಸಗಾರರು ಹೊರಬಂದಿಲ್ಲ ಹೊರಬಂದವರು 680 ಮಾತ್ರ ನೀವಿಂಗ್ ಸೆಕ್ಷನ್ ಬಂದ ಮಾಡಲಾಗಿತ್ತು. ಈಗ ಪರಿಪತಿಸಿದ್ದು ಮಿಲ್ ಚನ್ನಾಗಿ ನಡೆಯುತ್ತಿದೆ.

ಶ್ರೀ ಎಸ್. ಎಸ್. ಶೆಟ್ಟರ : ವಿಜಾಪೂರ ಜಿಲ್ಲೆ ಬಾದಾಮಿ ತಾಲೂಕಿನ ಕರೂರ ಗ್ರಾಮದಲ್ಲಿ ಕಾಲರಾ ಮಾರಿಬೇನೆ ಪಿಡುಗು ಹಬ್ಬಿದೆ ಎಂದು ಆರೋಗ್ಯಮಂತ್ರಿಗಳ ಲಕ್ಷ್ಯಕ್ಕೆ ತರಬಯಸುತ್ತೇನೆ.

ಆರೋಗ್ಯ ಗೃಹನಿರ್ಮಾಣ ಮಂತ್ರಿ, ಕೆ ಪುಟ್ಟಸ್ವಾಮಿ : 1967 ಜುಲೈ 6 ರಂದು ಕರೂರಿನಲ್ಲಿ ಕಾಲರಾ ಕಾಣಿಸಿಕೊಂಡಿದೆ 20 ಪ್ರಕರಣಗಳು ವರದಿಯಾಗಿದ್ದು ಏಳು ಜನರು ಸತ್ತಿದ್ದಾರೆ. ಕಾಲರಾ ಪೀಡಿತ ಪ್ರದೇಶ ರಹವಾಸಿಗಳಿಗೆ ಕಾಲರಾ ಪ್ರತಿಬಂಧಕ ಮದ್ದನ್ನು ಚುಚ್ಚಲು ಕ್ರಮ ಕೈಕೊಂಡಿದ್ದು 4680 ಜನರಿಗೆ ಇಲ್ಲಿಯ ತನಕ ಮದ್ದನ್ನು ಚುಚ್ಚಲಾಗಿದೆ.

1967 ಜುಲೈ ಮೊದಲವಾರದಿಂದ ವಿಜಾಪೂರ ಜಿಲ್ಲೆಯಲ್ಲಿ ಕಾಲರಾ ಪಿಡುಗು ಶುರುವಾಗಿದ. ಜಿಲ್ಲಾ ಆರೋಗ್ಯಾಧಿಕಾರಿಗಳು ಕೂಡಲೇ ಪಿಡುಗು ನಿಯಂತ್ರಣಕ್ಕೆ ತ್ವರಿತ ಕ್ರಮಗಳನ್ನು ಕೈಗೊಂಡಿದ್ದಾರೆ.

1) ರೋಗಿಗಳಿಗೆ ಪ್ರತ್ಯೇಕವಾಗಿರಿಸಿ ವೈದ್ಯಕೀಯ ಚಿಕಿತ್ಸೆ ಕೊಡಲಾಗುತ್ತಿದೆ.

2) ಮನೆಗಳಲ್ಲಿ ಇತರರಿಗೆ ಹಾಗೂ ವಸ್ತುಗಳಿಗೆ ರೋಗಿಗಳ ರೋಗಾಣುಗಳ ಸಂಪರ್ಕ ಬರದಂತೆ ಎಚ್ಚರ ವಹಿಸಲಾಗುತ್ತಿದೆ.

3) ರೋಗಪೀಡಿತ ಪ್ರದೇಶಗಳಲ್ಲಿಯ ಜನರಿಗೆ ಕಾಲರಾ ಪ್ರತಿಬಂಧಕ ಮದ್ದನ್ನು ಚುಚ್ಚಲಾಗುತ್ತಿದೆ.

4) ಕೆರೆ, ಬಾವಿ, ಜಲಾಶಯ ಹಾಗೂ ಎಲ್ಲಿ ಬಳಕೆ ಜಲಗಳಲ್ಲಿ ಕ್ಲೋರಿನ್ ಮಿಶ್ರಣಗೊಳಿಸಿ ಸ್ವಚ್ಛತೆಗೆ ಕ್ರಮ ಕೈಕೊಳ್ಳಲಾಗುತ್ತಿದೆ.

5) ಸ್ವಚ್ಛವಾದ ಆಹಾರ ಪದಾರ್ಥ ವಿತರಣೆಯಾಗುವ ರೀತಿ, ಉಪಾಹಾರ ಗೃಹ, ಖಾನಾವಳಿಗಳಲ್ಲಿ ಕ್ರಮ ಜಾರಿಗೊಳಿಸಲಾಗಿದೆ.

6) ಕೀಟನಾಶಕಗಳನ್ನು ಸಿಂಪಡಿಸಿ ನೊಣಗಳ ಹಾವಳಿ ನಿವಾರಣೆ ಕ್ರಮ ಕೈಕೊಳ್ಳಲಾಗಿದೆ.

7) ಕರಪತ್ರ ಹಾಗೂ ಭಿತ್ತಿಪತ್ರಗಳ ಮೂಲಕ ಕಾಲರಾ ನಿಯಂತ್ರಣ ಕ್ರಮ ಸ್ವಚ್ಛತಾಕ್ರಮ ಇವುಗಳ ಬಗ್ಗೆ ಪ್ರಚಾರ ಮಾಡಲಾಗುತ್ತಿದೆ.

ಕಾಲರಾ ಪ್ರತಿಬಂಧಕ ಚುಚ್ಚುಮದ್ದು, ಔಷಧಿ, ಪಿಡುಗು ತಡೆ ಸಾಧನಗಳು ಸಾಕಷ್ಟು ಪ್ರಮಾಣಗಳಲ್ಲಿದ್ದು ಈಗ ಪಿಡುಗು ನಿಯಂತ್ರಣದಲ್ಲಿದೆ.

ಶ್ರೀ ಎಸ್. ಎಸ್. ಶೆಟ್ಟರ : ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿಯ ನೋಂದಾಯಿತ ಉದ್ದಿಮೆಗಳಿಗೆ ಫೆರಸ್, ನಾನ್ ಫೆರಸ್ ಕಚ್ಚಾಸರಕುಗಳನ್ನು ಪ್ರಮಾಣದಂತೆ ಪೂರೈಸಲಾಗಿದೆಯೇ ?

ಉದ್ದಿಮೆ ಉಪಮಂತ್ರಿ, ಎ. ಪಿ. ಅಪ್ಪಣ್ಣ : ಪೂರೈಸಲಾಗಿದೆ.

ಶ್ರೀ ಎಸ್. ಎಸ್. ಶೆಟ್ಟರ : ಧಾರವಾಡ ಜಿಲ್ಲೆಯಲ್ಲಿ 1949 ರಿಂದ ಗೃಹರಕ್ಷಕದಳದವರಿಗೆ ಗುಂಡು ಹಾರಿಸುವಿಕೆ ತರಬೇತಿ ನೀಡಲು ಹಣವನ್ನು ಮಂಜೂರಿಮಾಡಲಾಗಿದೆಯಾದರೂ ತರಬೇತಿಯನ್ನೇಕೆ ನೀಡುತ್ತಿಲ್ಲ.

ಗೃಹಮಂತ್ರಿ, ಎಂ. ವ್ಹಿ. ರಾಮರಾವ್ : ತರಬೇತಿ ಕಾರ್ಯಕ್ರಮ ಮುಗಿದಿಲ್ಲ, ಜಿಲ್ಲಾ ಕಮಾಂಡೆಂಟರುಗಳಿಗೆ ತರಬೇತಿಯ ಬಗ್ಗೆ ಗುಂಡುಗಳ ವ್ಯರ್ಥ ಹಾಳಾಗದಂತೆ ತಡೆದು ತರಬೇತಿ ನೀಡಲು ಆದೇಶಿಸಲಾಗಿದೆ.

1949 - 50 ರಲ್ಲಿ ಧಾರವಾಡ ಜಿಲ್ಲೆಯಲ್ಲಿ ತರಬೇತಿ ಶಿಬಿರಗಳನ್ನು ಸಂಘಟಿಸಲಾಗಿತ್ತು, ನಂತರ ಹಿಂದಿನ ಮುಂಬಯಿ ಸರಕಾರ ಅದನ್ನು ಸ್ಥಗಿತಗೊಳಿಸಿತ್ತು, ರಾಜ್ಯ ಪುನರ್ಘಟನೆಯ ನಂತರ ತರಬೇತಿ ಸಾಧನ, ತರಬೇತಿಗಾರರ ಕೊರತೆಯ ಕಾರಣ, ತರಬೇತಿ ಸಂಘಟಿಸಲ್ಪಟ್ಟಿಲ್ಲ.

ರೈತರಿಗೆ ರಕ್ಷಣೆ

ಶ್ರೀ ಎಸ್. ಎಸ್. ಶೆಟ್ಟರ : ಬೆಳೆಗಳಿಗೆ ಕೀಟ ನಾಶಕಗಳನ್ನು ಸಿಂಪಡಿಸುವ ಕುರಿತು ಈ ಕಾಯ್ದೆಯ ಹಿಂದಿರುವ ಮೂಲ ನೀತಿಯನ್ನೇ ನಾನು ವಿರೋಧಿಸುತ್ತೇನೆ. ಈ ಕಾಯ್ದೆಯ 15ನೇ ಕಲಮು ಕೆಲವೊಂದು ತಪ್ಪುಗಳನ್ನೆಸಗುವ ಅಧಿಕಾರಿಗಳಿಗೆ ರಕ್ಷಣೆ ನೀಡುತ್ತದೆ. ಬೆಳೆ, ಸಸಿ ಅಥವಾ ಕೃಷಿ ಉತ್ಪನ್ನಗಳಿಗೆ ಹತ್ತುವ ಕೀಟ ಬಾಧೆ ಹಾಗೂ ರೋಗಗಳನ್ನು ನಿಯಂತ್ರಿಸಲು ಜನರು ಸಾಮಾನ್ಯವಾಗಿ ಸರಕಾರದೊಂದಿಗೆ ಎಲ್ಲ ರೀತಿಯ ಸಹಕಾರ ನೀಡುವುದಿಲ್ಲವೆಂದು ಜನರನ್ನು ಈ ದಿಶೆಯಲ್ಲಿ ಸಂಘಟಿಸಲು ಕಾಯ್ದೆ ಅಗತ್ಯವೆಂದು ಕೆಲವರು ಹೇಳಿದ್ದಾರೆ. ಕೆಲವೊಮ್ಮೆ ಹಣ ಸಹಾಯವನ್ನು ಸರಿಯಾಗಿ ಸಕಾಲಕ್ಕೆ ಒದಗಿಸಲಾಗುತ್ತಿಲ್ಲ ಇಂಥ ಅನೇಕ ಉದಾಹರಣೆಗಳಿವೆ ಪ್ರತಿಬಂಧಕ ಹಾಗೂ ಕೀಟ ರೋಗ ನಾಶಕಗಳನ್ನು ಏನೇ ತೆಗೆದುಕೊಂಡರೂ ಅವುಗಳ ಪರಿಣಾಮವನ್ನು ಭೂಮಿಯುಳ್ಳ ರೈತರೇ ಅನುಭವಿಸಬೇಕಾಗುತ್ತದೆ. ಬರೀ ರೈತರಷ್ಟೇ ಹೀಗೆ ದುಷ್ಪರಿಣಾಮಗಳನ್ನು ಅನುಭೋಗಿಸುವಂತಾಗಬಾರದು. ತಪ್ಪು ಮಾಡಿದ ಅಧಿಕಾರಿಗಳನ್ನು ಹೊಣೆಗಾರರೆಂದು ಹಿಡಿದು ನಿರ್ಲಕ್ಷ್ಯಕ್ಕಾಗಿ ಅವರಿಗೂ ಶಿಕ್ಷೆಯಾಗಬೇಕು ತಪ್ಪುಗಳು ಅರಿಯದೇ ಸಂಭವಿಸಿದವುಗಳಾಗಿದ್ದರೆ, ಉದ್ದೇಶಪೂರ್ವಕವಿಲ್ಲದೇ ಹೋಗಿದ್ದರೆ ಅಂಥವುಗಳನ್ನು ಕ್ಷಮಿಸಬಹುದು. ಆದರೆ 15ನೇ ಕಲಮು ಅಧಿಕಾರಿಗಳಿಗೆ ಅವರ ತಪ್ಪುಗಳನ್ನೆಲ್ಲ ಕ್ಷಮಿಸಿಬಿಡುವುದಕ್ಕೆ ಅವಕಾಶ ನೀಡುತ್ತಿದೆ. ಬೆಳೆ ಅಥವಾ ಕೃಷಿ ಉತ್ಪನ್ನಗಳ ನಾಶವಾಗದೆ ಅಂಥ ಹೊಣೆಗಾರಿಕೆಯನ್ನು ಪೂರ್ಣವಾಗಿ ಅಧಿಕಾರಿಗಳ ನಿರ್ಲಕ್ಷ ಹಾಗೂ ಕರ್ತವ್ಯಚ್ಯುತಿಯನ್ನು ಗಮನಿಸಿ ಅಂಥವರ ತಲೆಗೆ ಕಟ್ಟುವ ರೀತಿ ಈ ಕಲಮಿನಲ್ಲಿಲ್ಲ, ಬೆಳೆ ಹಾಗೂ ಕೃಷಿ ಉತ್ಪನ್ನಗಳ ಮೇಲೆ ಆಗುವ ಮಿಡತೆ, ಕೀಟ ಹಾಗೂ ರೋಗಗಳನ್ನು ತಡೆಗಟ್ಟಲು ರೈತರು ಕ್ರಮ ತೆಗೆದುಕೊಳ್ಳಲೇಬೇಕೆಂದು ಈ ಕಲಮು ಮೀರಿಸುತ್ತದೆ, ಅಧಿಕಾರಿಗಳಲ್ಲಿ ಸಹ ಈ ವಿಷಯದಲ್ಲಿ ಜವಾಬ್ದಾರಿ ಹೊರಿಸುವಂತೆ ಕಾಯ್ದೆಯಲ್ಲಿರಬೇಕಿತ್ತು ಇದು ಕಾಯ್ದೆಯಲ್ಲಿನ ದೋಷ, ಎಂಟನೇ ಕ್ಲಾಜಿನಲ್ಲಿ ತನಗಾದ ಹಾನಿಯ ಬಗ್ಗೆ ಮೇಲ್ಮನವಿ ಮಾಡಿಕೊಳ್ಳಲು ಭೂಮಾಲಿಕರಿಗೆ ರೈತರಿಗೆ ಅವಕಾಶ ನೀಡಲಾಗಿದೆ. ಆದರೆ ರೈತರಿಗೆ ನೋಟೀಸನ್ನು ನೀಡುವ ಅಧಿಕಾರಿಗೆಯೇ ಆತನು ಈ ಮೇಲ್ಮನವಿ ಸಲ್ಲಿಸಬೇಕೆಂದರುತ್ತದೆ. ಈ ರೀತಿಯ ಮೇಲ್ಮನವಿಯಲ್ಲಿ ಅಧಿಕಾರಿಯು ಸರಿಯಾಗಿ ನ್ಯಾಯ ಒದಗಿಸುವುದು ಸಾಧ್ಯವೇ ಇಲ್ಲವೆಂದು ನನ್ನ ಅಭಿಪ್ರಾಯ, ರೈತರಿಗೆ ಅಧಿಕಾರಿಯು ತನ್ನ ಕರ್ತವ್ಯಚ್ಯುತಿ ಹಾಗೂ ನಿರ್ಲಕ್ಷವನ್ನು ಒಪ್ಪಿಕೊಂಡು ಪರಿಹಾರವನ್ನು ಒದಗಿಸಲು ಸಾಧ್ಯವೇ ಇಲ್ಲ, ಆದ್ದರಿಂದ ಇಂಥ ಮೇಲ್ಮನವಿ ವಿಚಾರಿಸಲು ಪ್ರತ್ಯೇಕ ಅಧಿಕಾರಿಯಿರಬೇಕು ಹೆಚ್ಚಿನ ಅಧಿಕಾರವುಳ್ಳ ಉಚ್ಚಾಧಿಕಾರಿ ಆತನಾಗಿರಬೇಕು ಹೀಗಿಲ್ಲವಾದರೆ ಮೇಲ್ಮನವಿಯ ಅವಕಾಶವೇ ನಿರರ್ಥಕವೆನಿಸುತ್ತದೆ.

ನೊಟಿಫಿಕೇಶನ್ ನೀಡಿಕೆ, ಅಪೀಲು ಮೇಲ್ಮನವಿ ಸಲ್ಲಿಕೆ ವಿಷಯಗಳಿಗೆ ಸಂಬಂಧಿಸಿದಂತೆ ಕೆಲವು ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆಯಾದರೂ ಅವುಗಳು ಕಾಯ್ದೆಬದ್ಧತೆ ಹೊಂದಿದವುಗಳಿಲ್ಲವಾಗಿರುವುದು ತುಂಬಾ ವಿಚಿತ್ರವಾಗಿದೆ. ಇಂತಹ ಅಧಿಕಾರಗಳುಳ್ಳವರು ಎಲ್ಲ ವಿಷಯಗಳನ್ನು ಮೂಲತಃ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅವರ ನಿರ್ಣಯಗಳು ಸಮರ್ಪಕವೋ, ಸಮರ್ಥನೀಯವೋ ಎಂಬುದನ್ನು

ನಿರ್ಣಯಿಸುವುದಕ್ಕೆ ಅವಕಾಶವಿಲ್ಲ. ಒಂದು ವೇಳೆ ಅಧಿಕಾರಿಗಳ ನಿರ್ಣಯಗಳು ದೋಷಯುಕ್ತವಿದ್ದರೆ ಈ ಕಾಯ್ದೆಯ ಉದ್ದೇಶವೇ ವಿಫಲಗೊಳ್ಳುತ್ತದೆ.

ಶ್ರೀ ಎಸ್. ಎಸ್. ಶೆಟ್ಟರ : ಹುಬ್ಬಳ್ಳಿ-ಧಾರವಾಡಗಳನ್ನು ಒಂದುಗೂಡಿಸಿ ಮಹಾನಗರ ಪಾಲಿಕೆ ರಚಿಸುವುದಕ್ಕೆ ಮೊದಲು ಎರಡೂ ನಗರಗಳ ಪ್ರತ್ಯೇಕ ನಗರ ಪಾಲಿಕೆಗಳ ಲೋಕನಿಯುಕ್ತ ಆಡಳಿತ ಮಂಡಳಿಗಳನ್ನು ರದ್ದುಪಡಿಸಲಾಗಿತ್ತೆಂಬುದು ನಿಜವೇ ? ಹಾಗೂ ಆ ಎರಡೂ ನಗರ ಪಾಲಿಕೆಗಳನ್ನು ರದ್ದುಪಡಿಸಿದ್ದೇಕೆ ?

ಆರ್. ಎಂ. ಪಾಟೀಲ ನಗರಾಡಳಿತ ಮಂತ್ರಿ : ಹೌದು ಆ ಎರಡೂ ನಗರ ಪಾಲಿಕೆಗಳು ಸಾರ್ವಜನಿಕ ಸೇವೆಯ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ವಿಫಲವೆಂದು ಕಂಡು ಬಂದಿದ್ದರಿಂದ ರದ್ದುಪಡಿಸಲಾಗಿತ್ತು.

ಶ್ರೀ ಎಸ್. ಎಸ್. ಶೆಟ್ಟರ : ಮಹಾನಗರ ಪಾಲಿಕೆ ರಚನೆಯ ನಂತರ ಎರಡೂ ನಗರಗಳಲ್ಲಿ ಪರಿಸ್ಥಿತಿ ತೀರ ಕೆಟ್ಟಿದೆ ಬದಲಾಗಿಲ್ಲ ಕಾರಣವೇನು ?

ಮಂತ್ರಿ ಆರ್. ಎ. ಪಾಟೀಲ : ಕೆಟ್ಟಿಲ್ಲ, ಎರಡೂ ನಗರಗಳಲ್ಲಿ ಸುಧಾರಣೆಯಾಗಿದೆ.

ಶ್ರೀ ಎಸ್. ಎಸ್. ಶೆಟ್ಟರ : ಮಹಾನಗರ ಪಾಲಿಕೆ ರಚನೆಯಾಗುವುದಕ್ಕೆ ಮೊದಲಿಗೆ ಇದ್ದಂಥ ಕೊಳಚೆ ಪ್ರದೇಶಗಳು ಈಗಲೂ ಇವೆ. ಅವುಗಳಲ್ಲಿ ಸುಧಾರಣೆ ತರಲು ನಾಗರಿಕ ಸೌಲಭ್ಯಗಳನ್ನು ಒದಗಿಸಲು ಕ್ರಮಗಳನ್ನು ಕೈಕೊಂಡಿಲ್ಲ, ಏನೂ ಪ್ರಯತ್ನ ಮಾಡಲಾಗಿಲ್ಲ.

ಶ್ರೀ ಆರ್. ಎಂ. ಪಾಟೀಲ : ಕೊಳಚೆಗಳೆಲ್ಲವೂ ನಿರ್ಮೂಲಗೊಳಿಸಲ್ಪಟ್ಟಿಲ್ಲ, ಆದರೆ ಕೊಳೆಗೇರಿಗಳಲ್ಲಿ ಸುಧಾರಣೆಗಳನೇಕವನ್ನು ತರಲಾಗಿದೆ.

ಶ್ರೀ ಎಸ್. ಗೋಪಾಲಗೌಡ : ಈಗ ನಗರಸಭೆಗಳನ್ನು ರದ್ದುಗೂಳಿಸಿ ಕಾರ್ಪೊರೇಶನ್ ನಡೆಸುತ್ತಿದ್ದೀರಿ ಇದಕ್ಕೆ ಯಾವಾಗ ಚುನಾವಣೆ ಮಾಡುತ್ತೀರಿ. ಮತ್ತು ಈಗ ಎಷ್ಟರಮಟ್ಟಿಗೆ ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳು ನಡೆದಿವೆ ಎನ್ನುವುದನ್ನು ತಿಳಿಸುವುದಕ್ಕೆ ಸಾಧ್ಯವೇ ? ಮತ್ತು ಚುನಾವಣೆ ಯಾವಾಗ ಸಾಧ್ಯ ?

ಶ್ರೀಆರ್. ಎಂ. ಪಾಟೀಲ : ಈ ಪ್ರಶ್ನೆ ಬಹಳ ಪ್ರಶ್ನೆಗಳೊಳಗೆ ಅಡಕವಾಗಿದೆ ಆದರೆ ಈ ಚುನಾವಣೆಗಳನ್ನು ಆದಷ್ಟು ತೀವ್ರವಾಗಿ ಮಾಡಬೇಕೆಂಬ ಇಚ್ಛೆ ಸರಕಾರಕ್ಕಿದೆ. ಆದರೆ ಚುನಾವಣೆಗಳ ಮುಂದೂಡಿಕೆ ಕಾಯ್ದೆ ರದ್ದಾಗಬೇಕಾಗಿದೆ. ಅದಕ್ಕೆ ಎಮರ್ಜನ್ಸಿ ಲೀಫ್ಟ್ ಮಾಡಬೇಕಾಗುತ್ತದೆ. ಈಗಾಗಲೇ ನಾನಿದನ್ನು ಹೇಳಿದ್ದುಂಟು.

ಶ್ರೀ ಎಸ್. ಎಸ್. ಶೆಟ್ಟರ : ನಿವೇಶನಗಳನ್ನು ಕಾನೂನುರೀತ್ಯಾ ಕೊಡಲ್ಪಟ್ಟು ಹೊಂದಿದ ನಿವೇಶನ ಧಾರಕರು ತಮ್ಮ ತಮ್ಮ ನಿವೇಶನಗಳ ಭದ್ರತೆ ಆಧರಿಸಿ ಗೃಹಮಂಡಳಿಯ ಗೃಹ ನಿರ್ಮಾಣದ ಸಾಲಗಳನ್ನು ಪಡೆದುಕೊಳ್ಳಲು ಸಾಧ್ಯವಾಗುವುದಕ್ಕಾಗಿ ಕೂಡಲೇ ಅವುಗಳ ಮಾರಾಟದ ಒಡಂಬಡಿಕೆ ಹಾಗೂ ಕೆಲವು ನಿರ್ದಿಷ್ಟ ಅವಧಿಗೆ ಅವುಗಳನ್ನು ಬೇರೆಯವರಿಗೆ ಯಾವುದೇ ರೀತಿಯಲ್ಲಿ ಹಸ್ತಾಂತರ ಮಾಡದಿರುವ ಕರಾರು ನಿಯಮ ಶರತ್ತುಗಳನ್ನು ವಿಧಿಸುವುದು ಅಗತ್ಯವೆಂದು ಧ್ಯೇಯೋದ್ದೇಶಗಳು ಕಾರಣಗಳು ಎಂಬ ಭಾಗದಲ್ಲಿ ಹೇಳಲಾಗಿದೆ. ಮೂರನೇ ಕ್ಲಾಜಿನ

ಸಬ್ ಕ್ಲಾಸ್ (ಎ.ಬಿ) ಇದು ಮಂಡಳಿಯು ಸಾಲ ಪಡೆದುಕೊಂಡಂಥವರ ಸ್ಥಿರ ಚರಾಸ್ತಿಗಳನ್ನು ಮಾರಲು ಅಡವಿಸ ಮೇಲೆ ಹಾಗೂ ಬೇರೆ ರೀತಿ ಮುಂದೆ ವ್ಯವಹಾರ ಮಾಡಬಹುದು ಎಂದು ವಿಧಿಸುತ್ತದೆ. ಸಬ್ ಕ್ಲಾಜ್ (ವಿ) ಹಾಗೂ ಇನ್ನೊಂದು ಸಬ್ ಕ್ಲಾಜ್ ಇವು ನಿವೇಶ ಮಾರಾಟದ ವಿಧಾನ, ಒತ್ತೆಯ ಪ್ರಕಾರ ಹಾಗೂ ಇತರ ಹಸ್ತಾಂತರ ಕುರಿತ ನಿಯಂತ್ರಣಗಳನ್ನೇ ಹೇಳುತ್ತವೆ ಹೀಗಾಗಿ ನಿಯಮಗಳ ರಚನೆಯಾದ ಬಳಿಕ ಗೃಹ ಮಂಡಳಿಯ ಅಧಿಕಾರಗಳು ಸರಕಾರದ ನಿಯಂತ್ರಣಕ್ಕೆ ಒಳ ಪಡುತ್ತವೆ. ಈ ವಿಧೇಯಕದಲ್ಲಿ ಕಾಯ್ದೆಯ ಅಧಿಕಾರ ವ್ಯಾಪ್ತಿಯ ಬಗ್ಗೆ ಅಡಿ ಟಿಪ್ಪಣಿಯೂ ಇಲ್ಲ. ಈ ತಿದ್ದುಪಡಿಯೂ ಅಂಗೀಕೃತವಾದರೆ ಸರಕಾರವು ಮಾರಾಟ ಒತ್ತೆ ಹಾಗೂ ಇತರ ವರ್ಗಾವಣೆ ವಿಷಯದಲ್ಲಿ ಮಂಡಳಿಯ ಅಧಿಕಾರಗಳನ್ನೆಲ್ಲವನ್ನು ನಿಯಂತ್ರಿಸುವ ನಿಯಮಗಳನ್ನು ರಚಿಸಲು ಸಾಧ್ಯವಿದೆಂಬುದು ನನ್ನ ಅಭಿಪ್ರಾಯ. ಹೀಗಾಗಿ ತಿದ್ದುಪಡಿಯ ಮೂಲೋದ್ದೇಶವೇ ವಿಫಲಗೊಳ್ಳುತ್ತದೆ. ರಾಜ್ಯ ಸರಕಾರಕ್ಕೆ ಯಾವ ಯಾವ ಅಧಿಕಾರಗಳನ್ನು ಕೊಡಲಾಗುತ್ತದೆಂಬುದರ ಸ್ಪಷ್ಟ ಉಲ್ಲೇಖಗಳಿಲ್ಲದೇ ಈ ತಿದ್ದುಪಡಿಯನ್ನು ಅಂಗೀಕರಿಸುವುದು ಅಪಾಯಕಾರಿ ಆದುದರಿಂದ ನಾನಿದನ್ನು ವಿರೋಧಿಸುತ್ತೇನೆ.

ಶ್ರೀ ಬಿ.ಪಿ.ಗಂಗಾಧರ : ಈ ವಿಧೇಯಕವನ್ನು ವಾಪಸು ಮಾಡಿಸಿಕೊಳ್ಳುವಲ್ಲಿ ಸರಕಾರ ತನ್ನ ಜಾಣತನ ಪ್ರದರ್ಶಿಸುತ್ತಿದೆ. ಹೊಸ ಹೊಸ ವಸತಿ ಬಡಾವಣೆ ಯೋಜನೆಗಳು ಬಂದಿವೆ. ನಿವೇಶನಗಳನ್ನೆಲ್ಲ ವಿಶೇಷವಾಗಿ ಕಾಂಗ್ರೆಸ್ಸಿನವರಿಗೆ, ಸದಸ್ಯರುಗಳಿಗೆ, ಅವರ ಬೆಂಬಲಿಗರಿಗೆಯೇ ಕೊಡಲಾಗಿದೆ ಎಂಬುದು ನಮ್ಮ ಅನುಭವಕ್ಕೆ ಬಂದ ಸಂಗತಿ. ಈ ರೀತಿಯ ನಿವೇಶನ ವಿತರಣೆಯನ್ನು ಕೂಡಲೇ ನಿಲ್ಲಿಸಿ ಸ್ವಂತ ಮನೆಯಿಲ್ಲದ ಬಡವರ, ಹಾಗೂ ಅರ್ಹ ವ್ಯಕ್ತಿಗಳ ಯಾದಿಗಳನ್ನು ತಯಾರಿಸಿ ಯೋಗ್ಯವಾದವರಿಗೆ ನಿವೇಶನಗಳನ್ನು ವಿತರಿಸಬೇಕು ಎಂದು ಸರಕಾರಕ್ಕೆ ಸೂಚನೆ ಹಾಗೂ ಎಚ್ಚರಿಕೆ ನೀಡುತ್ತೇನೆ.

ಶ್ರೀ ಆರ್. ಎಂ. ಪಾಟೀಲ : ನೀಡಲಾದ ಸಲಹೆಗಳನುಸಾರ ಅರ್ಹ ವ್ಯಕ್ತಿಗಳಿಗೆಯೇ ನಿವೇಶನಗಳನ್ನು ವಿತರಿಸಲಾಗಿದೆ ಸಾಮಾನ್ಯ ಜನರಿಗೆ ಬಡಜನರಿಗೆಯೇ ನಿರ್ಮಾಣಗಳನ್ನು ಒದಗಿಸಲಾಗಿದೆ. ಸಾಮಾನ್ಯ ಜನರಿಗೆ ಪ್ರತಿಶತ 60 ರಷ್ಟು ಕೇಂದ್ರ ಸರಕಾರೀ ನೌಕರರಿಗೆ ಪ್ರತಿಶತ 15 ರಂತೆ ರಾಜ್ಯ ಸರಕಾರೀ ನೌಕರರಿಗೆ ಪ್ರತಿಶತ 15ರಂತೆ ಹಾಗೂ ಪರಿಶಿಷ್ಟ ಜಾತಿ ಜನಾಂಗ ಮೊದಲಾದವರಿಗೆ ಪ್ರತಿಶತ 5 ರಂತೆ ನಿವೇಶನಗಳನ್ನು ವಿತರಿಸಲಾಗಿದೆ. ಹೀಗಾಗಿ ಎಲ್ಲ ನಿವೇಶನಗಳನ್ನು ನಿಯಮಗಳನ್ನೆಲ್ಲ ಕಟ್ಟುನಿಟ್ಟಾಗಿ ಪಾಲಿಸಿಯೇ ವಿತರಣೆ ಮಾಡಲಾಗಿದೆ. ಟ್ರಸ್ಟ ಮಂಡಳಿಯ ವಿಳಂಬದ ಕಾರಣದಿಂದಾಗಿ ನಿವೇಶನಗಳ ವಿತರಣೆಯಲ್ಲಿ ಸಮಸ್ಯೆಗಳು ಉಂಟಾಗಿ ರೆನ್ಯೂ ಸೈಟುಗಳ ಧಾರಕನೇಕರು ನಿವೇಶನಗಳನ್ನು ಪಡೆದುಕೊಂಡವರಾಗಿದ್ದಾರೆಂದು. ಮಾನ್ಯ ಸದಸ್ಯ ಶಾಮಣ್ಣ ಹೇಳುತ್ತಾರೆ. ಇಂಥ ಯೋಜನೆಗಳ ಅನುಷ್ಠಾನದಲ್ಲಿ ಬರುವ ತೊಂದರೆಗಳು ಅವರಿಗೂ ಗೊತ್ತುಂಟು ಭೂಸ್ವಾಧೀನದ ಪೂರ್ವಭಾವೀ ನೋಟಿಫಿಕೇಶನ್ ಹಂತದಿಂದ ಹಿಡಿದು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವವರೆಗೆ ಜನರು ನ್ಯಾಯಾಲಯಕ್ಕೆ ಹೋಗಿ ವ್ಯಾಜ್ಯಗಳನೆಬ್ಬಿಸುವುದುಂಟು ಇಂಥ ವ್ಯಾಜ್ಯಗಳ ಕಾರಣದಿಂದಾಗಿ ವಿಳಂಬ ಅನಿವಾರ್ಯವೆನಿಸುತ್ತದೆ. ಇಂಪ್ರೂವ್‌ಮೆಂಟ್ ಟ್ರಸ್ಟ ಬೋರ್ಡ ಸಾಮಾನ್ಯ ಜನತೆಯ ಅಗತ್ಯಗಳನ್ನು ಪೂರೈಸಲು ಆತುರತೆಯಿಂದ ಕಾರ್ಯತತ್ಪರನೇನೋ ಇದೆಯಾದರೂ ಅದನ್ನು ಸಾಧಿಸುತ್ತಿಲ್ಲವೆಂದರೂ ನಿಜ. ಆಸ್ತಿ ಒಡೆತನ ವಿಷಯದಲ್ಲಿ ಕಾಯ್ದೆಗಳು ಬೇರೆ

ಕಾಯ್ದೆಗಳಿಗಿಂತಲೂ ಹೆಚ್ಚು ಸಂಕೀರ್ಣ ಹಾಗೂ ಗೊಂದಲಮಯವಿರುವುದೇ ನಮ್ಮ ಮುಖ್ಯ ಸಮಸ್ಯೆಯಾಗಿದೆ. ಭೂಸ್ವಾಧೀನ ಕ್ರಮಗಳಿಂದ ಬಾಧಿಸಲ್ಪಡುವ ಪಟ್ಟಭದ್ರ ಹಿತಾಸಕ್ತಿಗಳು ಸ್ವಾಭಾವಿಕವಾಗಿಯೇ ವ್ಯಾಜ್ಯ ಕ್ಕಿಳಿಯುತ್ತಾರೆ. ಇಂಥ ತೊಂದರೆ ಹಾಗೂ ಬಿಕ್ಕಟ್ಟುಗಳನ್ನು ಎದುರಿಸಿ ಬೋರ್ಡ ಕೆಲಸಮಾಡಬೇಕಾಗಿದೆ.

ರೆವೆನ್ಯೂ ಸೈಟುಗಳ ಧಾರಕರ ವಿನಂತಿಗಳನ್ನು ಮಾನ್ಯ ಮಾಡಿದ್ದಾದರೆ ಅದರಿಂದ ನಮಗೆ ಎಂದೂ ಬಿಡಿಸಲು ಸಾಧ್ಯವಾಗದಿರುವ ಜಟಿಲ ಪ್ರಶ್ನೆಗಳು ಉದ್ಭವಿಸುತ್ತವೆ ಎಂಬುದು ಶಾಮಣ್ಣನವರಿಗೂ ಗೊತ್ತು ರೆವೆನ್ಯೂ ಭೂಮಿಗಳ ಧಾರಕರು ಅನೇಕ ವಿಧವಾಗಿದ್ದಾರೆ ನಿಜವಾಗಿಯೂ ರೆವೆನ್ಯೂ ಸೈಟುಗಳನ್ನು ಹೊಂದಿದಂಥವರೋ ಇಲ್ಲವೇ ಲಾಭಗಿಟ್ಟಿಸುವ ಉದ್ದೇಶದಿಂದ ಗಿಟ್ಟಿಸುವುದಕ್ಕಾಗಿಯೇ ರೆವೆನ್ಯೂ ಭೂಮಿಗಳನ್ನು ಹೊಂದಿದವರೆಂದು ಹೇಳಿಕೊಳ್ಳುವಂಥವರೋ ಎಂಬುದನ್ನು ನಾವರಿಯವು.

ಹೀಗಾಗಿ ನಿವೇಶನಗಳ ವಿತರಣೆಯಲ್ಲಿ ನಾವು ತುಂಬಾ ಎಚ್ಚರಿಕೆವಹಿಸಬೇಕಾಗುತ್ತದೆ. ಇದರ ಬಗ್ಗೆ ತನಿಖೆ ವಿಚಾರಣೆ ನಡೆಸಬೇಕಾಗುತ್ತದೆ. ಸರಕಾರದಿಂದ ಈ ವಿಷಯದಲ್ಲಿ ಭರವಸೆಗಳನ್ನು ಪಡೆಯಲು ಹಾತೊರೆಯುವುದಕ್ಕಿಂತ ನಮ್ಮ ಸ್ನೇಹಿತರು ಯೋಜಿತ ನಗರಾಭಿವೃ ಸಾಧಿಸುವ ದಿಶೆಯಲ್ಲಿ ತಮಗೆ ಗೊತ್ತಿರುವ ಎಲ್ಲ ಸತ್ಯಸಂಗತಿ ಮಾಹಿತಿಗಳನ್ನು ಸರಕಾರಕ್ಕೆ ನೀಡಿ ಸಹಕರಿಸಲಿ.

ಸ್ಕೂಲ್ ಬೋರ್ಡಗಳಿಗೆ ಚುನಾವಣೆಗಳಲ್ಲಿ ನಿಮ್ಮ ಪಕ್ಷದ ಸದಸ್ಯರು ಆರಿಸಿ ಬರಲಾರರೆಂದೇ ಸದಸ್ಯರ ನಾಮಕರಣ ಮಾಡಿರುವಿರಿ. ಸ್ಕೂಲ್ ಬೋರ್ಡ ಎನ್ನುವ ಹೆಸರನ್ನೇ ತೆಗೆದುಹಾಕಿಬಿಡಿ ಎಂದು ವಿರೋಧಿ ಸದಸ್ಯರು ಸರಕಾರವನ್ನು ತರಾಟೆಗೆ ತೆಗೆದುಕೊಳುತ್ತ ಶಾಲಾನೌಕರರಿಗೆ ತ್ರಿವಿಧ ಲಾಭವನ್ನು ವಿಸ್ತರಿಸುವ ಉದ್ದೇಶದ ವಿಧೇಯಕವನ್ನು ಟೀಕಿಸುತ್ತಿದ್ದಾಗ ಸಭಾಧ್ಯಕ್ಷರು ಈಗ ಇಡೀ ಕಾಯ್ದೆಯನ್ನು ರದ್ದುಪಡಿಸುವ ಸೂಚನೆ ನಮ್ಮ ಮುಂದಿಟ್ಟು ತ್ರಿವಿಧಲಾಭ ಯೋಜನೆಯನ್ನು ಶಾಲಾ ನೌಕರರೆಲ್ಲರಿಗೂ ವಿಸ್ತರಿಸುವುದ ಮಾತ್ರ ವಿಧೇಯಕದ ಉದ್ದೇಶವೆಂದು ಸ್ಪಷ್ಟಪಡಿಸಿದರು.

ಶ್ರೀ ಕೆ. ಎಚ್. ಪಾಟೀಲ : ಜಿಲ್ಲಾ ಶಾಲಾ ಮಂಡಳಿಯ ಪ್ರತಿಯೊಬ್ಬ ನೌಕರನಿಗೂ ರಾಜ್ಯ ಸರಕಾರ ಆದೇಶಿಸಬಹುದು ಎಂಬ ವಿಧೇಯಕದಲ್ಲಿಯ ಭಾಗವನ್ನು ಕುರಿತಂತೆ ಶಾಲಾ ಮಂಡಳಿ ನೌಕರರು ಎಂದು ಏಕೆ ಕರೆಯುತ್ತಾರೆ ಎಂಬುದರ ವ್ಯಾಖ್ಯೆ ಮಾಡುತ್ತೇನೆ. ಅದನ್ನು ಬಿಟ್ಟು ನಾನು ಹೋಗುವುದಿಲ್ಲ.

ಶ್ರೀ ಬಿ. ಪಿ. ಗಂಗಾಧರ : ತ್ರಿವಿಧ ಲಾಭ ಯೋಜನೆಯನ್ನು ಅವರಿಗೆ ವಿಸ್ತರಿಸಲಾಗುವುದೋ ಅಥವಾ ಇಲ್ಲವೋ ಎಂಬುದನ್ನು ಕುರಿತಂತೆ ಯೋಜನೆಯ ವ್ಯಾಪ್ತಿಯನ್ನು ವಿವರಿಸಲಿ. ನನ್ನ ಸ್ನೇಹಿತರು ಬೇರೆ ವಿಷಯಗಳನ್ನು ತರುತ್ತಲಿದ್ದಾರೆ. ನಮ್ಮಲ್ಲನೇಕರಿಗೆ ಇದು ಗೊತ್ತಿಲ್ಲ. ಆದ್ದರಿಂದ ಈ ವಿಷಯಗಳ ಬಗ್ಗೆ ಮಾತ್ರ ಪ್ರಸ್ತಾಪಿಸಿ ಮಾಹಿತಿ ನೀಡಬೇಕೆಂದು ನಿಮ್ಮ ಮುಖಾಂತರ ವಿನಂತಿಸುತ್ತೇನೆ.

ಸಭಾಧ್ಯಕ್ಷರು : ಮಾನ್ಯ ಸದಸ್ಯರು ತಮ್ಮ ಸ್ನೇಹಿತರ ಬಗ್ಗೆ ನನಗಿಂತ ಚನ್ನಾಗಿ ತಿಳಿದುಕೊಂಡಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ : ನನ್ನ ಸ್ನೇಹಿತರಿಗೆ ತಿಳಿದಿರಲಿಕ್ಕಿಲ್ಲ, ಅದರಲ್ಲಿಯ ಅನೇಕ ಸಮಸ್ಯೆಗಳನ್ನು ತಿಳಿಸಲಿಕ್ಕೆ ಈ ಸಂದರ್ಭವನ್ನು ಉಪಯೋಗ ಮಾಡಿಕೊಂಡಿದ್ದೇನೆ. ಅದಕ್ಕೆ ಈ ಬಿಲ್ಲಿನಲ್ಲಿರತಕ್ಕ ಮೂಲ ಉದ್ದೇಶವನ್ನು ಅರ್ಥಮಾಡಿಕೊಳ್ಳಲು ನನ್ನ ಸ್ನೇಹಿತರು ಹೆಚ್ಚು ಪ್ರಯತ್ನಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೂ ಹೆಚ್ಚು ಅನುಕೂಲವಾಗುವಂತೆ ಈ ವಿಧೇಯಕವನ್ನು ತರಬೇಕಿತ್ತು. ಸರಿಯಾದ ರೀತಿಯಲ್ಲಿ ಇನ್‌ಶೂರೆನ್ಸ್ ಸ್ಕೀಂ ತರುವುವಕ್ಕೆ ಪ್ರಯತ್ನ ಮಾಡಬೇಕು. ಉಪಾಧ್ಯಾಯರ ಮಕ್ಕಳಿಗೆ ಯೋಗ್ಯ ಶಿಕ್ಷಣ ಸೌಕರ್ಯ ದೊರೆಯುವಂತೆ ಅವಕಾಶ ಮಾಡಬೇಕು. ಮತ್ತು ತೀವ್ರವಾಗಿ ಸ್ಕೂಲ್ ಬೋರ್ಡ ಎಂಬುದು ಮಾಯವಾಗುವಂತೆ ಪ್ರೈಮರಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ತಿದ್ದುಪಡಿ ಮಸೂದೆ ಬೇಗ ತರಬೇಕು. ಇದೆಲ್ಲಾ ಮಾಡುವಂತೆಯೂ ಮತ್ತು ರಾಜ್ಯಕ್ಕೆ ಬೇಕಾಗಿರುವ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಪಟ್ಟ ಒಳ್ಳೆಯ ಮಸೂದೆಯನ್ನು ತರಲು ವಿದ್ಯಾ ಇಲಾಖೆಗೆ ದೇವರು ಸಮೃದ್ಧಿಯನ್ನು ಕೊಡಲಿ

ಶ್ರೀ ಎಸ್. ಎಸ್. ಶೆಟ್ಟರ : ಈ ತಿದ್ದುಪಡಿ ವಿಧೇಯಕದಲ್ಲಿ ಸೂಚಿತ ತ್ರಿವಿಧ ಲಾಭ ಯೋಜನೆಯನ್ನು ಸ್ವಾಗತಿಸಬೇಕಾದರೂ ಇವತ್ತು ಹಳೆಯ ಮೈಸೂರ ಪ್ರದೇಶ, ಮುಂಬೈ ಕರ್ನಾಟಕ ಹಾಗೂ ಇತರ ಪ್ರದೇಶಗಳಲ್ಲೆಲ್ಲಾ ಒಂದೇ ರೀತಿಯ ಪ್ರೈಮರಿ ಶಿಕ್ಷಣವನ್ನು ಮಾಡಬೇಕಾದ ಪ್ರಮೇಯವಿದೆ. ಧಾರವಾಡ, ವಿಜಾಪೂರ, ಬೆಳಗಾಂವ, ಕಾರ್‍ವಾರ್ ಜಿಲ್ಲೆಗಳಲ್ಲಿ ಇರುವ ಕಾನೂನೇ ಬೇರೆ ಹಳೇ ಮೈಸೂರಿನಲ್ಲಿರುವುದೇ ಬೇರೆ. ತಿದ್ದುಪಡಿ ತರುವ ಅವಶ್ಯಕತೆಯಿದ್ದರೆ ಒಂದೇ ರೀತಿಯಾದ ಕಾನೂನು ತಂದು ಎಲ್ಲರಿಗೂ ಒಂದೇ ಬೆನಿಫಿಟ್ ಸಮನಾಗಿ ದೊರೆಯುವಂತೆ ಕಾನೂನನ್ನು ತರಬೇಕಾಗಿತ್ತು ವಿರೋಧ ಪಕ್ಷದವರಿಗೆ ಈ ಅಭಿಲಾಷೆಯಿದೆ. ಈ ಪ್ರಕಾರ ತಿದ್ದುಪಡಿ ತಂದಿದ್ದರೆ ಬಹಳ ಸಂತೋಷವಾಗುತ್ತಿತ್ತು ಯಾವ ಬೆನಿಫಿಟ್ ಗಾಗಿ ಒಂದು ಕೇವಲ ಸಣ್ಣ ತಿದ್ದುಪಡಿ ಮಾಡಿದರೆ ಅದರಿಂದ ಬೆನಿಪಿಟ್ ಆದರೂ ಇನ್ನೂ ಅನೇಕ ವಿಚಾರಗಳಲ್ಲಿ ತರಬೇಕಾಗಿದ್ದ ತಿದ್ದುಪಡಿ ತರದಿರುವುದರಿಂದ ವಿಷಾದ ಸೂಚಿಸಿ ಈ ತಿದ್ದುಪಡಿ ವಿಧೇಯಕವನ್ನು ತಾತ್ವಿಕ ರೀತಿಯಿಂದ ವಿರೋಧಿಸದೇ ಇದ್ದರೂ ರೂಪಾಂತರ ಏನಿದೆಯೋ ಅದನ್ನು ಬಹಳ ಬಲವಾಗಿ ವಿರೋಧಿಸುತ್ತೇನೆ.

ಶ್ರೀ ಬಿ. ಪಿ. ಗಂಗಾಧರ : ವಿಧೇಯಕವನ್ನು ಬೆಂಬಲಿಸುತ್ತ ನಾನು ಇಂಥ ಲಾಭ ಯೋಜನೆಗಳು ರಾಜ್ಯದೊಳಗಿನ ಎಲ್ಲ ಶಿಕ್ಷಕರಿಗೂ ಅನ್ವಯಿಸಬೇಕು ಎಂದು ಸೂಚಿಸುತ್ತೇನೆ. ವಿಧೇಯಕವನ್ನು ತರುವಲ್ಲಿ ಸರಕಾರ ಈಗಾಗಲೇ ತುಂಬಾ ವಿಳಂಬಮಾಡಿದೆ. ರಾಜ್ಯದಲ್ಲಿಯ ಎಲ್ಲ ಶಾಲೆಗಳಲ್ಲಿ ನೌಕರರಿಗೆ ತ್ರಿವಿಧ ಲಾಭ ಯೋಜನೆಯ ಲಾಭ ಸಿಗುವಂತೆ ಮಾಡದೇ ಸರಕಾರ ಇನ್ನೊಂದು ತಪ್ಪುಮಾಡುತ್ತಲಿದೆ. ಸರಕಾರಿ ಪ್ರಾಥಮಿಕ ಶಿಕ್ಷಣ ಕಾಯ್ದೆಯನ್ನು ಈ ಮೊದಲೇ ತಿದ್ದಿ ಜಾರಿಗೆ ತರದೇ ಮಾಡಿದ ತಪ್ಪಿನಿಂದಾಗಿ ಅನೇಕ ಶಿಕ್ಷಕ ಶಿಕ್ಷಕಿಯರು ಈ ಎಲ್ಲ ವರ್ಷಗಳಲ್ಲಿ ತುಂಬಾ ಹಾನಿಯನ್ನು ಅನುಭವಿಸಿದ್ದಾರೆ. ಅವರು ಸರಕಾರವನ್ನು ಶಪಿಸುತ್ತಿರಬಹುದು, ಸರಕಾರ ತನಗೆ ಬೇಕಾಗಿ ಸ್ವ-ಇಚ್ಛೆಯಿಂದ ಈ ವಿಧೇಯಕವನ್ನು ಸರಕಾರದ ಮುಂದೆ ತಂದಿಲ್ಲ ಶಿಕ್ಷಕರ ನೌಕರರ ಒತ್ತಾಯಕ್ಕೆ ಮಣಿದು ಈಗಾದರೂ ತಂದಿದೆಯಲ್ಲಾ, ಆದ್ದರಿಂದ ನಾನು ಸ್ವಾಗತಿಸುತೇನೆ.

ಶಿಕ್ಷಣ ಮಂತ್ರಿ ಎಸ್. ಆರ್. ಕಂಠಿ : ಒಬ್ಬ ಸದಸ್ಯರನ್ನು ಹೊರತುಪಡಿಸಿ ಎಲ್ಲರೂ ವಿಧೇಯಕವನ್ನು ಮೆಚ್ಚಿ ಸ್ವಾಗತಿಸಿದ್ದಾರೆ. ನನಗೆ ಸಂತಸವೆನಿಸುತ್ತದೆ. ಸರಕಾರದ ಸಹಾಯಧನ ಪಡೆದ ಶಿಕ್ಷಣ ಸಂಸ್ಥೆಗಳ ಶಿಕ್ಷಕರನ್ನು ನೌಕರರನ್ನು ಸರಕಾರಿ ಶಿಕ್ಷಕರಿಗೆ ಸರಿಯೆಂದು ಮಾಡುವುದೇ ಈ ವಿಧೇಯಕದ ಉದ್ದೇಶವಾಗಿದೆ.

ಶ್ರೀ ಕೆ. ಎಚ್. ಪಾಟೀಲ : ನಾನೊಂದು ವಿದಿಬಿಂದುವನ್ನು ಎತ್ತುತ್ತೇನೆ. ಸಂಸದೀಯ ವ್ಯವಹಾರಗಳ ಸಚಿವರು ಮತ್ತು ಒಮ್ಮೆ ತಪ್ಪು ಹೇಳಿಕೆ ನೀಡುತ್ತಿದ್ದಾರೆ ಒಬ್ಬನನ್ನು ಹೊರತುಪಡಿಸಿ ಎಲ್ಲ ಸದಸ್ಯರು ವಿಧೇಯಕವನ್ನು ಬೆಂಬಗಲಿಸಿದ್ದಾರೆಂದು ಸಚಿವರು ಹೇಳುವುದು ತಪ್ಪು. ಶೆಟ್ಟರ ಅವರು ವಿಧೇಯಕವನ್ನು ವಿರೋಧಿಸಿದ್ದಾರೆ. ವಿರೋಧಿಸುವುದಕ್ಕೆ ಅವರು ಕಾರಣಗಳ ನೀಡಿರಬಹುದು ಆದ್ದರಿಂದ ಒಬ್ಬರನ್ನುಳಿದು ಎಲ್ಲರೂ ವಿಧೇಯಕವನ್ನೂ ಬೆಂಬಲಿಸಿದ್ದಾರೆಂದು ಹೇಳುವುದು ತಪ್ಪು.

ಸಭಾಧ್ಯಕ್ಷರು : ನಾನು ರೂಲಿಂಗ್ ಕೊಡುತ್ತೇನೆ. ಈ ಎಲ್ಲ ದಿನಗಳಲ್ಲಿ ಕಲಾಪಗಳಲ್ಲಿ ಭಾಗವಹಿಸಿವಂಥ ಶ್ರೀ ಪಾಟೀಲರು ಸಚಿವರು ತಪ್ಪು ಹೇಳಿಕೆ ನೀಡಿದ್ದರೆ ಕ್ರಿಯಾಲೋಪ ಎತ್ತಬಹುದೆಂದು ತಿಳಿದುಕೊಂಡಿದ್ದಾರೆ. ಅವರು ಮತ್ತೆ ಹೀಗೆ ಮಾಡದಿರಲಿ ಲೋಪವೊಂದೂ ಇಲ್ಲ.

ಶ್ರೀ ಅಜೀಜ ಸೇಟ : ಅನ್ಯಾಯ ನಡೆಯುತ್ತಿದೆಂದು ಸರಕಾರದ ಗಮನಕ್ಕೆ ತರಲು ನಮಗೆ ಇರುವ ಮಾರ್ಗವಿದು

ಶ್ರೀ ಎಸ್. ಆರ್. ಕಂಠಿ : ಶ್ರೀ ಶೆಟ್ಟರ ಅವರು ಈ ವಿಧೇಯಕವನ್ನು ಸರಿಯಾದ ರೀತಿಯಲ್ಲಿ ಸಮರ್ಥಿಸಿ ಕೆಲವು ಸಲಹೆಗಳನ್ನು ನೀಡಿರುವುದೇನೆಂದರೆ ನಾನು ತಿಳಿದುಕೊಂಡಿದ್ದೇನೆ. ಶ್ರೀ ಕೆ. ಎಚ್. ಪಾಟೀಲರು ಈ ವಿಧೇಯಕವನ್ನು ವಿರೋಧಿಸಿರುವರು. ಅವರ ವಿರೋಧವಾದರೂ ವಿಧೇಯಕದಲ್ಲಿ ಅನೇಕನಾದ ಉತ್ತಮಾಂಶಗಳೇಗಿಲ್ಲ. ಆದರೆ ಅವರು ಪ್ರಸ್ತಾಪಿಸಿರುವ ಅನೇಕ ಆಕ್ಷೇಪಗಳು ವಿಧೇಯಕಕ್ಕೆ ಸಂಬಂಧಿಸಿದುವುಗಳೇ ಅಲ್ಲ. ಪಾಟೀಲರ ಎಲ್ಲ ವಾದಗಳಿಗೂ ನಾನು ಪ್ರತಿವಾದ ಒಡ್ಡಬಹುದು. ಆದರೆ ನಾನು ಹಾಗೆ ಮಾಡುವುದಿಲ್ಲ.

ಇದೇ ಕಾಲಕ್ಕೆ ಜಿಲ್ಲಾ ಸ್ಕೂಲ ಬೋರ್ಡಗಳ ರದ್ದತಿಗೆ ಸರಕಾರ ಯೋಚಿಸುತ್ತಿಲ್ಲ. ಸ್ಕೂಲ್ ಬೋರ್ಡಗಳನ್ನು ರದ್ದು ಮಾಡಲು ಸರಕಾರಕ್ಕೆ ಸಾಧ್ಯವೇ ಇಲ್ಲ. ಕಾಯ್ದೆ ಮೂಲಕವೇ ಅವುಗಳನ್ನು ರದ್ದು ಮಾಡಬೇಕಾಗುತ್ತದೆ. ಈ ಸರಕಾರವು ಮುಂದಿನ ಪ್ರಾಥಮಿಕ ಶಿಕ್ಷಣ ಕಾಯ್ದೆಯನ್ನು ರದ್ದುಪಡಿಸದೇ ಸ್ಕೂಲ್ ಬೋರ್ಡಗಳು ರದ್ದಾಗಲು ಸಾಧ್ಯವೇ ಇಲ್ಲ.

ಶ್ರೀ ಎಸ್.ಎಸ್.ಶೆಟ್ಟರ : ಮೈಸೂರ ಶಾಪ ಆ್ಯಂಡ್ ಕಮರ್ಶಿಯಲ್ ಎಸ್ಟಾಬ್ಲಿಶಮೆಂಟ್ ಆ್ಯಕ್ಟನ್ನು ರಾಜ್ಯದಲ್ಲಿಯ ಹೊಟೆಲ್ ಮತ್ತಿತರ ವಾಣಿಜ್ಯ ಘಟಕಗಳಿಗೆ ಅನ್ವಯಿಸಲಾಗಿದೆಯೇ?

ಗೃಹ-ಕಾರ್ಮಿಕ ಮಂತ್ರಿ ಎಂ.ವ್ಹಿ.ರಾಮರಾಯ ಹೌದು ಅನ್ವಯಿಸಲಾಗಿದೆ.

ಶ್ರೀ ಎಸ್.ಎಸ್.ಶೆಟ್ಟರ : ನಾನು ನನ್ನ ಪರವಾಗಿ ಹಾಗೂ ಶ್ರೀ ಬೋಳ ರಘುರಾಮ್ ಶೆಟ್ಟಿ ಎಸ್. ಚಂದ್ರಕಾಂತ ಎಸ್. ಲೋಕಯ್ಯ ನಾಯಕ, ಎಂ. ಎಸ್. ಕೃಷ್ಣನ್, ವ್ಹಿ. ಎಸ್.ಪಾಟೀಲ, ಎಸ್.ಗೋಪಾಲಗೌಡ, ಇವರ ಪರವಾಗಿ ಎನ್. ಜಿ. ಎ. ಎಫ್. ಕೆಲಸಗಾರರ ಆಸ್ನ ಸತ್ಯಗ್ರಹದ ಕಡೆಗೆ ಗೃಹ ಹಾಗೂ ಕಾರ್ಮಿಕ ಶಾಖೆ ಮಂತ್ರಿಗಳ ಗಮನ ಸೆಳೆಯ ಬಯಸುತ್ತೇನೆ.

ಗೃಹ-ಕಾರ್ಮಿಕ ಮಂತ್ರಿ ಎಂ. ವ್ಹಿ. ರಾಮರಾಯ್, ಬೆಂಗಳೂರಿನ ನ್ಯೂ ಗವ್ನರ್ನಮೆಂಟ್ ಇಲೆಕ್ಟ್ರಿಕ್ ಫ್ಯಾಕ್ಟರಿ ಲಿಮಿಟೆಡ್. ಎನ್.ಜಿ.ಇ.ಎಫ್‌ನಲ್ಲಿ ಎಂಪ್ಲಾಯೀಜ್ ಯೂನಿಯನ್ ಹಾಗೂ ವರ್ಕರ್ಸ್ ಯೂನಿಯನ್ ಹೀಗೆ ಎರಡು ಕಾರ್ಮಿಕ ಸಂಘಟನೆಗಳಿವೆ. ಎಂಪ್ಲಾಯೀಜ್ ಯೂನಿಯನ್ ಹಳೆಯದಿದ್ದು ಆಡಳಿತ ವರ್ಗದ ಮಾನ್ಯತೆ ಪಡೆದಿದೆ.

ಸಾರಿಗೆ ಸೌಲಭ್ಯ ಹಾಗೂ ಮಧ್ಯಂತರ ಪರಿಹಾರ ಈ ಎರಡು ಬೇಡಿಕೆಗಳನ್ನು ವರ್ಕರ್ಸ ಯೂನಿಯನ್ ಮಂಡಿಸಿದೆ.

ಕೆಲಸಗಾರರು ಹದಿನೈದು ಮೈಲುಗಳಷ್ಟು ದೂರದ ಅಂತರದಲ್ಲಿದಯೂ ಬೇರೆ ಬೇರೆ ಭಾಗಗಳಿಂದ ಫ್ಯಾಕ್ಟರಿಗೆ ಕೆಲಸಕ್ಕಾಗಿ ಬರುತ್ತಾರೆ ಅವರಿಗೆ ಸಾರಿಗೆ ಸೌಲಭ್ಯಗಳನ್ನು ಒದಗಿಸುವುದು ಅತ್ಯಗತ್ಯವೆಂದು ಮೊದಲ ಬೇಡಿಕೆಯಿದೆ ನೇಮಕ ಮಾಡಿಕೊಳ್ಳುವುದಕ್ಕೆ ಮೊದಲೇ ಫ್ಯಾಕ್ಟರಿ ಆಡಳಿತವು ಕೆಲಸಗಾರರಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುವುದಿಲ್ಲವೆಂದು ಸ್ಪಷ್ಟಪಡಿಸಿದ್ದಿದೆ. ಮತ್ತು ಇಂಥ ಸೌಲಭ್ಯಗಳನ್ನು ಒದಗಿಸಲು ಆಡಳಿತದ ಕಡೆ ಅಷ್ಟೊಂದು ಹಣವಿಲ್ಲ, ಹೆಚ್ಚಾಗಿ ಎಲ್ಲ ಕಾರ್ಮಿಕರೆಲ್ಲರೂ ಸಿಟಿ ಬಸ್‌ಗಳ ಮುಖಾಂತರ ಕೆಲಸಕ್ಕಾಗಿ ಬರುತ್ತಾರೆ. ಅಲಸೂರಿನಿಂದ ಎನ್. ಜಿ. ಇ. ಎಫ್. ಫ್ಯಾಕ್ಟರಿಯವರೆಗೆ ಬಸ್‌ಗಳ ಓಡಾಟದ ಏರ್ಪಾಟು ಮಾಡುವಂತೆ ಆಡಳಿತವು ಎಂ.ಎಸ್.ಆರ್.ಟಿ ಸಿಗೆ ಈಗಾಗಲೇ ಮನವಿ ಮಾಡಿಕೊಂಡಿದೆ ಆದ್ದರಿಂದ ಸಾರಿಗೆ ಸೌಲಭ್ಯದ ಬೇಡಿಕೆಯನ್ನು ಒಪ್ಪಲು ಸಾಧ್ಯವಿಲ್ಲವೆಂದು ಆಡಳಿತ ತಿಳಿಸಿದೆ.

ಎಂಜಿನೀಯರಿಂಗ್ ಉದ್ದಿಮೆಗಳ ನೌಕರರ ವೇತನ ಮಂಡಳಿಯಿಂದ ಶಿಫಾರಸಾಗಿರುವ ಮಧ್ಯಂತರ ಪರಿಹಾರ ನೀಡಿಕೆ ಜಾರಿಗೊಳಿಸಲ್ಪಟ್ಟಿಲ್ಲ, ಕೂಡಲೇ ಮಧ್ಯಂತರ ಪರಿಹಾರ ಬಟವಡೆಯಾಗಬೇಕೆಂಬುದು ಯೂನಿಯನ್ನಿನ ಎರಡನೆಯ ಬೇಡಿಕೆ. ಈ ಬೇಡಿಕೆ ವಿಷಯದಲ್ಲಿ ಕಾರ್ಮಿಕರ ಇನ್ನೊಂದು ಸಂಘ ಎಂಪ್ಲಾಯೀಜ್ ಯೂನಿಯನ್ ದೊಡನೆ ಫ್ಯಾಕ್ಟರಿಯ ಆಡಳಿತ ಒಡಂಬಡಿಕೆ ಮಾಡಿಕೊಂಡಿದೆ. ಆ ಒಡಂಬಡಿಕೆಯನ್ವಯ ವೇತನ ಮಂಡಳಿಯ ಅಂತಿಮ ಶಿಫಾರಸುಗಳನ್ನು ಕುರಿತು ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕೆಂದಿದೆ. ವೇತನ ಮಂಡಳಿಯ ಸದ್ಯದ ಶಿಫಾರಸ್ಸು ಕೇವಲ ಮಧ್ಯಂತರ ಪರಿಹಾರಕ್ಕೆ ಸಂಬಂಧಿಸಿದ್ದಿದೆ. ಈಗಾಗಲೇ ನೌಕರರಿಗೆ ಹೆಚ್ಚಿನ ತುಟ್ಟಿಭತ್ತೆಯನ್ನು ನೀಡಲಾಗಿದ್ದು ಅದನ್ನು ನಂತರ ಮಧ್ಯಂತರ ಪರಿಹಾರ ಅಥವಾ ವೇತನ ಮಂಡಳಿಯ ಅಂತಿಮ ಶಿಫಾರಸ್ಸಿನ ಮೇರೆಗೆ ಕೊಡಲಾಗುವ ವೇತನ ಹೆಚ್ಚಳದೊಂದಿಗೆ ಹೊಂದಿಸಿ ಸರಿಪಡಿಸಬೇಕೆಂಬ ಕರಾರಿಗೆ ನೌಕರರು ಬದ್ಧರಾಗಿರುತ್ತಾರೆ. ಅನೇಕ ಪ್ರಕರಣಗಳಲ್ಲಿ ನೌಕರರಿಗೆ ಕನಿಷ್ಟ ಎಂದೂ ಹಾಗೂ ಅದಕ್ಕೂ ಹೆಚ್ಚಿನ ಲಾಭ ನೀಡಲಾಗಿದೆಯೆಂದು ಆಡಳಿತ

ನಗರ ಸ್ಪಷ್ಟಪಡಿಸಿದೆ. ಮತ್ತೆ ಮಧ್ಯಂತರ ಪರಿಹಾರ ನೀಡುವುದು ಯೋಗ್ಯವೆನಿಸದೆಂದು ಆಡಳಿತ ವರ್ಗದ ನಿಯಮವಿದೆ. ದಿ : 7-8-1967 ರಂದು ಸಂಧಾನ ಮಾತುಕತೆಗಳು ನಡೆದಿವೆ. ಮಾತುಕತೆ ಈಗ ಮುಂದುವರೆದಿದೆ.

ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಕಾರ್ಯದರ್ಶಿಯಾಗಿ ಆಯ್ಕೆಗೊಂಡ ಪ್ರಯುಕ್ತ ರಾಜ್ಯ ಗೃಹ ಮಂತ್ರಿ ಸ್ಥಾನಕ್ಕೆ ಶ್ರೀ ರಾಮರಾವ್ ಅವರು ತಮ್ಮ ರಾಜೀನಾಮೆ ಸಲ್ಲಿಸಿದ್ದಾರೆನ್ನಲಾಗಿದ್ದು, ಅವರಂತೆಯೇ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಪದವನ್ನು ಅಲಂಕರಿಸಿರುವ ಶ್ರೀ ಎಸ್.ನಿಜಲಿಂಗಪ್ಪನವರು ಸಹ ರಾಜ್ಯದ ಮುಖ್ಯಮಂತ್ರಿಹುದ್ದೆಗೆ ರಾಜೀನಾಮೆ ನೀಡಲೆಂಬ ಇತರ ಸದಸ್ಯರ ಅಭಿಪ್ರಾಯಕ್ಕೆ ಧ್ವನಿಗೂಡಿಸುತ್ತ ಶ್ರೀ ಎಸ್.ಎಸ್. ಶೆಟ್ಟರ್ ಅವರು ವಿಧಾನಸಭೆಯಲ್ಲಿ ದಿ. 20-2-1968ರಂದು ವಿಧಿಬಿಂದುವನ್ನೆತ್ತಿದರು.

ರಾಜ್ಯದ ಮಂತ್ರಿ ಮಂಡಲವು ವಿಧಾನಸಭೆಗೆ ಇಡೀಯಾಗಿ ಸಾಮೂಹಿಕವಾಗಿ ಹೊಣೆಗಾರವಿರುತ್ತದೆಂಬ ಸಂವಿಧಾನದ 164 (2)ನೇ ಕಲಂನ ವಿಧಿಯನ್ನು ಶ್ರೀ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿ ಪದಕ್ಕೆ ರಾಜೀನಾಮೆ ನೀಡದೆಯೇ ಉಲ್ಲಂಘಿಸಿದ್ದಾರೆಂದು ಶೆಟ್ಟರ್ ಅವರು ಉಲ್ಲೇಖಿಸಿದರು.

ಇಬ್ಬರು ಅಖಿಲ ಭಾರತ ಕಾಂಗ್ರೆಸ್ ನಲ್ಲಿ ಅಧಿಕಾರ ಸ್ಥಾನ ಹೊಂದಿದ್ದಾರೆ. ಶ್ರೀ ರಾಮರಾವ್ ಅವರು ಗೃಹ ಮಂತ್ರಿಹುದ್ದೆಗೆ ರಾಜೀನಾಮೆ ನೀಡಿರುವಾಗ ಅವರಂತೆಯೇ ನಿಜಲಿಂಗಪ್ಪನವರೂ ಅದೇ ತತ್ವ ಆಧರಿಸಿ ಮುಖ್ಯಮಂತ್ರಿ ಸ್ಥಾನಕ್ಕ ರಾಜೀನಾಮೆಯನ್ನೇಕೆ ಸಲ್ಲಿಸಿಲ್ಲವೆಂದವರು ಪ್ರಶ್ನಿಸಿದರು.

ರಾಮರಾವ್‌ರು ಎರಡು ತಿಂಗಳ ಹಿಂದೆಯೇ ಗೃಹ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರೆಂಬುದು ಇನ್ನೊಂದು ಪ್ರಶ್ನೆ. ಅವರು ವಿಧಾನಸಭೆಗೂ ಬಂದಿಲ್ಲ, ಅವರು ಆಗಲೇ ರಾಜೀನಾಮೆ ಸಲ್ಲಿಸಿದ್ದರೋ? ರಾಜೀನಾಮೆಯನ್ನು ರಾಜ್ಯಪಾಲರ ಬಳಿಗೆ ಸ್ವೀಕೃತಿಗಾಗಿ ಕಳುಹಿಸಲಾಗಿತ್ತೋ ಹೇಗೆ? ಎಂಬುದು ನನಗೆ ಗೊತ್ತಿಲ್ಲ. ಎರಡು ತಿಂಗಳ ಹಿಂದೆಯೇ ಅವರು ರಾಜೀನಾಮೆ ನೀಡಿದ್ದಾಗಿದ್ದರೆ ಮತ್ತೆ ಹೇಗೆ ಗೃಹ ಮಂತ್ರಿ ಹುದ್ದೆಯಲ್ಲಿರಲು ಸಾಧ್ಯ? ಅವರಿಗೆ ಮಂತ್ರಿ ಪದದ ಹೊಣೆಗಾರಿಕೆ ಏನಾದರು ಉಂಟೆ? ಅಥವಾ ಯಾವುದೇ ಹೊಣೆಗಾರಿಕೆ ಅವರ ಮೇಲಿಲ್ಲವೇ? ಹೇಗೆಂಬುದನ್ನು ಈಗ ಪರಿಶೀಲಿಸಬೇಕಾಗುತ್ತದೆ. ಮಧುಗಿರಿ ಪ್ರಕರಣವು ಹಾಗೂ ಇತ್ತೀಚಿನ ಎಲ್ಲ ಘಟನೆಗಳು ಸಚಿವ ಸಂಪುಟದ ಸಾಮೂಹಿಕ ಹೊಣೆಗಾರಿಕೆ ಎಂದಾದರೆ ರಾಮರಾವ್ ಅವರು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧಿಕಾರ ಪದ ಹೊಂದಿದ ನಿಮಿತ್ತ ಸಲ್ಲಿಸಲಾದ ರಾಜೀನಾಮೆ ಸ್ವೀಕರಿಸಲಾಗಿದೆ ಎಂಬುದು ಅವರನ್ನು ಮಧುಗಿರಿ ಪ್ರಕರಣ ಹಾಗೂ ಇತರ ಘಟನೆಗಳ ವಿಷಯದಲ್ಲಿ ರಕ್ಷಿಸಿಕೊಳ್ಳುವ ಕವಚವೆನಿಸಿದೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾದುದರ ಪ್ರಯುಕ್ತ ಅವರು ನೀಡಲಾದ ರಾಜೀನಾಮೆ ಸ್ವೀಕರಿಸಲಾಗುತ್ತಿದೆ ಎಂಬ ಕಾರಣ ಹೇಳಿರುವದು ಅವರನ್ನು ಅಂಥ ಆರೋಪಗಳಿಂದ ರಕ್ಷಿಸಿದಂತಾಗುತ್ತದೆ. ಇಲ್ಲವಾದರೆ ಅವರನ್ನು ಮಧುಗಿರಿ ಘಟನೆಗಳಿಗೆ ಹೊಣೆಗಾರರೆಂದು ಸದನವು ಪರಿಗಣಿಸಬಹುದಿತ್ತು. ಆದರೆ ಈ ಸಂದರ್ಭದಲ್ಲಿ ಮಧುಗಿರಿ ಘಟನೆ ಸೇರಿದಂತೆಯೇ ಎಲ್ಲ ವಿದ್ಯಮಾನಗಳಿಗೆ ಇಡೀ ಸಚಿವ ಸಂಪುಟವೇ ಜಂಟಿಯಾಗಿ ಹೊಣೆಯಾಗಿರುತ್ತದೆ ಎಂದು ಹೇಳ ಬಯಸುತ್ತೇನೆ. ಶ್ರೀ ರಾಮರಾವ್ ಒಬ್ಬರೇ ರಾಜೀನಾಮೆ ಕೊಟ್ಟರೆ ಸಾಲದು

ಅದು ಕೂಡ ಅವರು ಈ ಸದನಕ್ಕೆ ಅರಿವಿಲ್ಲದ ರೀತಿಯಲ್ಲಿ ರಾಜೀನಾಮೆ ಸಲ್ಲಿಸಿರುವದು ಸರಿಯಾದುದಲ್ಲ. ಈ ಸಂದರ್ಭಗಳಲ್ಲಿ ರಾಮರಾವ್ ಅವರು ಹಠಾತ್‌ನೇ ಸದನದಿಂದ ಹೊರಗೆ ಹೋಗಿ ತಮ್ಮ ಹೊಣೆಯನ್ನು ತಪ್ಪಿಸಿಕೊಳ್ಳಲು ಸಾಧ್ಯವೇ? ಅವರ ರಾಜೀನಾಮೆಯನ್ನು ಸ್ವೀಕರಿಸುವಂತೆ ಮುಖ್ಯಮಂತ್ರಿಗಳು ಶಿಫಾರಸ್ಸು ಮಾಡಿರುವರೋ ಹೇಗೆಂಬುದನ್ನು ವಿವರಿಸಲಿ.

ಎಸ್.ಆರ್.ಕಂಠಿ : ಮಾನ್ಯ ಸದಸ್ಯರು ಇಲ್ಲಿ ಎರಡು ಪ್ರಶ್ನೆಗಳನ್ನೆತ್ತಿದ್ದಾರೆ. ಗೃಹಮಂತ್ರಿಗಳ ರಾಜೀನಾಮೆಗೆ ಸಂಬಂಧಿಸಿದ್ದೊಂದು. ಗೃಹ ಮಂತ್ರಿಗಳು ತಾವು ರಾಜೀನಾಮೆ ನೀಡುವೆವೋ ಅಥವಾ ಇಲ್ಲವೋ ಎಂಬ ಬಗ್ಗೆ ಸದನಕ್ಕೆ ಮಾಹಿತಿ ನೀಡುವುದಕ್ಕೆ ಬದ್ಧರಾಗಿಲ್ಲ. ಅವರು ರಾಜೀನಾಮೆಯನ್ನು ನೀಡಿದ್ದಾರೆ ಹಾಗೂ ರಾಜ್ಯಪಾಲರು ಅದನ್ನು ಅಂಗೀಕರಿಸಿದ್ದಾರೆ.

ಸರಕಾರದ ಯಾವುದೇ ಖಾತೆಯ ಕಾರ್ಯನಿರ್ವಹಣೆ ಸಂಬಂಧಿಸಿದಂತೆ ಎಲ್ಲ ಸಚಿವರ ವೈಯಕ್ತಿಕ ಹಾಗೂ ಸಚಿವ ಸಂಪುಟದಲ್ಲಿಯ ಎಲ್ಲರ ಸಾಮೂಹಿಕ ಜವಾಬ್ದಾರಿ ಇರುತ್ತದೆ ಎಂಬ ಶ್ರೀ ಶೆಟ್ಟರ್ ಹೇಳಿಕೆಯನ್ನು ನಾನು ಸಮ್ಮತಿಸುತ್ತೇನೆ. ನಾವು ಯಾರೂ ನಮ್ಮ ಹೊಣೆ ಹಾರಿಸಿಕೊಳ್ಳುತ್ತಿಲ್ಲ. ಸರ್ಕಾರದ ವಿವಿಧ ಖಾತೆಗಳಲ್ಲಿ ಏನೇನು ಕೆಲಸ ನಡೆಯುತ್ತಿದೆ ಎಂಬುದನ್ನು ನಾವು ಹೇಳಲು ಶಕ್ತರಿದ್ದೇವೆ. ನಮ್ಮ ಮುಖ್ಯಮಂತ್ರಿಗಳು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ. ಅವರು ರಾಜ್ಯದ ಮುಖ್ಯಮಂತ್ರಿ ಹಾಗೂ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಈ ಎರಡೂ ಹುದ್ದೆಗಳಲ್ಲಿರುವುದೇನೂ ತಪ್ಪಿಲ್ಲ. ವಿರೋಧ ಪಕ್ಷಗಳ ಸದಸ್ಯರ ಮನಸ್ಸಿಗನುಗುಣವಾಗಿ ಇದು ಇರದೇ ಇರಬಹುದು. ಆದರೂ ನಿಜಲಿಂಗಪ್ಪನವರು ಎರಡೂ ಹುದ್ದೆಗಳಲ್ಲಿ ಮುಂದುವರಿಯಲು ಸಾಧ್ಯವಿದೆ. ಆದ್ದರಿಂದ ವಿರೋಧ ಪಕ್ಷದ ಸದಸ್ಯರು ಈ ವಿಷಯದಲ್ಲಿ ಮೂಗು ತೂರಿಸುವದು ಬೇಡವೆಂದು ನನ್ನ ಮನವಿ. ಯಾಕೆಂದರೆ ಅಧಿಕಾರಾರೂಢ ಪಕ್ಷದ ವಿಷಯವಿದು. ಪಕ್ಷವು ಈ ವಿಷಯವನ್ನು ನಿಭಾಯಿಸಲು ಸಮರ್ಥವಿದೆ. ವಿರೋಧ ಪಕ್ಷಗಳವರು ತಾಳ್ಮೆಯಿಂದಿರಬೇಕೆಂದು ವಿನಂತಿಸುತ್ತೇನೆ. ರಾಜ್ಯದ ಹಿತಕ್ಕನುಗುಣವಾಗಿಯೇ ಎಲ್ಲವೂ ರೂಪುಗೊಳ್ಳುತ್ತವೆ.

ಶ್ರೀ ಎಸ್. ಶಿವಪ್ಪ : ರಾಜ್ಯದ ಮುಖ್ಯಮಂತ್ರಿಯು ಈ ರಾಜ್ಯದ ವಿಧಾನಸಭೆಗೆ ಜವಾಬ್ದಾರರಾಗಿರಬೇಕಾಗುತ್ತದೆ. ಈ ಮುಖ್ಯಮಂತ್ರಿ ಪದವಿಯನ್ನು ತಮ್ಮ ಪಕ್ಷದ ಅಧಿಕಾರಿಯು ಹಾಗೆ ಉಪಯೋಗಿಸಿಕೊಳ್ಳಲು ಅವರಿಗೆ ಅಧಿಕಾರವಿದೆ ಎಂದು ನೀವು ಹೇಳುತ್ತಿರುವಿರಿ. ಆ ಹಕ್ಕು ನಿಮಗೆ ಇಲ್ಲ. ಇಲ್ಲಿ ನಮ್ಮ ಮುಖ್ಯಮಂತ್ರಿಗಳು ಯಾರಿದ್ದಾರೋ ಅವರಿಗೆ ನಾವು ಸಂಬಳ ಕೊಡುತ್ತಾ ಇದ್ದೇವೆ. ಅಲೋವನ್ಸುಗಳನ್ನು ಕೊಡುತ್ತೇವೆ. ಇವತ್ತು ಆ ಮುಖ್ಯಮಂತ್ರಿ ಪದವಿಯನ್ನು ಅಲಕ್ಷ್ಯ ಮಾಡಿ ತಮ್ಮ ಪಕ್ಷದ ಮುಂದುವರಿಕೆಗೆ ದೆಹಲಿಯಲ್ಲಿ ಕಾಲ ಕಳೆಯಲಿಕ್ಕಲ್ಲ. ಮುಖ್ಯಮಂತ್ರಿ ಸ್ಥಾನದಲ್ಲಿರಲಿಕ್ಕೆ ಅವರು ಲಾಯಕ್ಕಿಲ್ಲ. ಅವರಿಗೆ ಅಂಥ ಹಕ್ಕೂ ಇಲ್ಲ. ಮುಖ್ಯಮಂತ್ರಿ ಕಚೇರಿಯನ್ನು ಕಾಂಗ್ರೆಸ್ ಕಚೇರಿಯನ್ನಾಗಿ ಮಾಡುವುದಕ್ಕೆ ಅವರಿಗೆ ಯಾವ ಹಕ್ಕೂ ಇಲ್ಲ.

ಫೆಬ್ರುವರಿ ದಿ. 26ರಂದು ಸದಾಶಿವ ಶೆಟ್ಟರು ಸಂವಿಧಾನದ 163 ಹಾಗೂ 166ನೇ ಕಲಂಗಳಡಿ ವಿಧಿ ಬಿಂದುವನ್ನೆತ್ತುತ್ತ ಸದನದಲ್ಲಿ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರ ಗೈರು ಹಾಜರಿಗೆ ತೀವ್ರವಾಗಿ ಆಕ್ಷೇಪಿಸಿದರು.

ಸಚಿವ ಸಂಪುಟವು ರಾಜ್ಯಪಾಲರಿಗೆ ಸಲಹೆ, ಮಾರ್ಗದರ್ಶನ ನೀಡಿ ನೆರವಾಗಬೇಕೆಂದು 163ನೇ ಕಲಂ ಹೇಳುತ್ತದೆ. ರಾಜ್ಯದ ಆಡಳಿತ ವ್ಯವಹಾರಗಳು ನಡೆಯುವುದಕ್ಕೆ ಯೋಗ್ಯವಾದ ನಿಯಮಾವಳಿಗಳನ್ನು ರಾಜ್ಯಪಾಲರು ರೂಪಿಸುವರು. ಮಂತ್ರಿಗಳಿಗೆ ಅವರವರ ಕರ್ತವ್ಯ ಜವಾಬ್ದಾರಿಗಳನ್ನು ವಹಿಸಿಕೊಡುವರು. ಸಂವಿಧಾನದಡಿ ರಾಜ್ಯಪಾಲರು ತಮ್ಮ ವಿವೇಚನೆಯಂತೆ ಆದೇಶಿಸುವರೆಂದು 166 (3) ನೇ ಕಲಂ ಹೇಳುತ್ತದೆ. ಮುಖ್ಯಮಂತ್ರಿಗಳು ಈ ದಿನ ಸದನದಲ್ಲಿ ಗೈರು ಹಾಜರಿರುವರು. ಅವರ ಕರ್ತವ್ಯ ಹಾಗೂ ಹೊಣೆಗಾರಿಕೆಯನ್ನು ಬೇರೆ ಕೆಲ ಮಂತ್ರಿಗಳು ನೋಡಿಕೊಳ್ಳಬೇಕಾಗುತ್ತದೆ. ಮುಖ್ಯಮಂತ್ರಿಗಳ ಗೈರು ಹಾಜರಿಯಲ್ಲಿ ಅವರ ಕರ್ತವ್ಯ ಹೊಣೆಗಾರಿಕೆಗಳನ್ನು ನೋಡಿಕೊಳ್ಳಬೇಕಾದ ಗೃಹಮಂತ್ರಿಗಳೂ ರಾಜೀನಾಮೆ ಇತ್ತಿದ್ದಾರೆ. ಒಬ್ಬ ಮಂತ್ರಿಯ ಕರ್ತವ್ಯ ಹೊಣೆಗಾರಿಕೆಯನ್ನು ಇನ್ನೊಬ್ಬ ಮಂತ್ರಿಯು ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ ನಿಯಮಾವಳಿಗಳನ್ನೇನಾದರೂ ರಚಿಸಲಾಗಿದೆಯೇ ಹೇಗೆ ಎಂಬುದನ್ನು ಸಂಸದೀಯ ಕಲಾಪಗಳ ಇಲಾಖೆ ಮಂತ್ರಿಗಳೇನಾದರೂ ತಿಳುವಳಿಕೆ ನೀಡಬಹುದೇ?

ಉಪಾಧ್ಯಕ್ಷರು : ಶ್ರೀ ಎಸ್.ಎಸ್. ಶೆಟ್ಟರ್ ಅವರು ಎತ್ತಿರುವ ವಿಧಿ ಬಿಂದುವಿನ ವಿಷಯದಲ್ಲೇ ಚರ್ಚೆ ನಡೆದಿದ್ದು, ಈಗ ಎತ್ತಲಾದ ಬೇರೆ ವಿಧಿ ಬಿಂದುವಿನಲ್ಲಿಯೂ ಅದೇ ವಿಷಯವಿರುವುದರಿಂದ ನಾನು ಅವರ ವಿಧಿ ಬಿಂದುವನ್ನು ಎತ್ತಿ ಹಿಡಿಯುತ್ತಿಲ್ಲ.

ಸದಸ್ಯರು ಈ ವಿಷಯದ ಚರ್ಚೆ ಬಯಸುವರಾದರೆ ಒಂದು ಠರಾವನ್ನು ತರಬಹುದು. (ಹಲವಾರು ಸದಸ್ಯರು ವಿಧಿ ಬಿಂದುವನ್ನು ಸಮರ್ಥಿಸಲು ಎದ್ದು ನಿಂತರು) ವಿಷಯ ಪಟ್ಟಿಯಲ್ಲಿಯಂತೆಯೇ ಕಲಾಪ ಮುಂದುವರಿಯುವುದಕ್ಕೆ ಅವಕಾಶ ನೀಡಿ ಎಂದು ಮಾನ್ಯ ಸದಸ್ಯರನ್ನು ಕೇಳಿ ಕೊಳ್ಳುತ್ತೇನೆ. ಔಪಚಾರಿಕ ಠರಾವು ಒಂದು ಪಕ್ಷ ಇರದಿದ್ದರೂ ಈಗಾಗಲೇ ವಿವರವಾದ ಚರ್ಚೆಯಾಗಿದೆ. ಈಗ ಉಳಿದಿರುವ ಒಂದೇ ಒಂದು ಮಾರ್ಗವೆಂದರೆ ವಿಷಯ ಪಟ್ಟಿಯಂತೆ ಕಲಾಪ ಮುಂದುವರಿಸಿಕೊಂಡು ಹೋಗೋಣವೋ ಅಥವಾ ಈ ವಿಷಯಕ್ಕೆ ಸಂಬಂಧಿಸಿದಂತೆ ಠರಾವು ಮಂಡನೆಗೆ ಹಾಗೂ ಚರ್ಚೆಗೆ ಅವಕಾಶ ನೀಡಬೇಕೋ ಎಂಬುವನ್ನು ಕುರಿತು ಸದನದ ಅಭಿಪ್ರಾಯ ಪಡೆದು ಅದರಂತೆ ನಡೆಯುವುದಾಗಿದೆ.

ಶ್ರೀ ಎಚ್. ಏಕಾಂತಯ್ಯ : ಔಪಚಾರಿಕ ಠರಾವು ಒಂದರ ಮಂಡನೆಯ ಮೂಲಕ ಈ ವಿಷಯದ ಚರ್ಚೆ ನಡೆಯಬೇಕೆಂದು ನೀವು ಬಯಸುವಿರಾದರೆ ಅದನ್ನು ಯಾರೂ ಆಕ್ಷೇಪಿಸಲಾರರು. ಇಂಥದೊಂದು ಠರಾವಿನ ಬಗ್ಗೆ ಸಂಪೂರ್ಣ ಚರ್ಚೆ ನಡೆಯದೇ ಇರುವುದಕ್ಕೆ ಅವಕಾಶ ನೀಡಿರೆಂದು ಮಾತ್ರ ನಾನು ಸ್ಪಷ್ಟಪಡಿಸ ಬಯಸುತ್ತೇನೆ.

ಉಪಾಧ್ಯಕ್ಷರು : ಶ್ರೀ ಪಾಟೀಲ್ ಸಿದ್ದೀರಪ್ಪನವರೇ, ಮುಖ್ಯಮಂತ್ರಿಗಳು ಬಂದು ಸ್ಟೇಟ್‌ಮೆಂಟ್ ಕೊಡುವವರೆಗೂ ಮುಂದಿನ ಕಾರ್ಯಕಲಾಪಗಳು ನಡೆಯ ಕೂಡದೆಂದು ಮಾನ್ಯ ಸದಸ್ಯರು ಹೇಳುತ್ತಾರೆ. ಆ ಪದ್ಧತಿಯನ್ನು ಒಪ್ಪುತ್ತೀರಾ? ಇದು ಸರಿಯೇ? ಅದನ್ನು ಮಾಡುವುದಾದರೂ ಯಾವ ಕಾನೂನು ಪ್ರಕಾರ, ಯಾವ ರೂಲ್ಸ್ ಪ್ರಕಾರ ಮಾಡಬೇಕು ಹೇಳಿ.

ಶ್ರೀ ಎಚ್. ಸಿದ್ದವೀರಪ್ಪ: ಈಗ ಯಾವ ಕಾನೂನು, ರೂಲ್ಸು ಇದೆ. ಅದನ್ನು ಪಾಂಡವರು ವನವಾಸಕ್ಕೆ ಹೋಗಬೇಕಾದರೆ ಬನ್ನಿಮರದ ಮೇಲೆ ಯಾವ ರೀತಿ ಶಸ್ತ್ರಾಸ್ತ್ರ ಕಟ್ಟಿಟ್ಟಿದ್ದರೋ ಅದೇ ರೀತಿ ಸ್ವಲ್ಪ ದಿವಸ ಕಟ್ಟಿಡಬೇಕು. ಏಕೆಂದರೆ ಕಾನೂನು ಈಗ ಯಾವುದೂ ನಡೆಯುತ್ತಿಲ್ಲವೆಂಬುದನ್ನು ತಮಗೆ ತೋರಿಸಿಕೊಡುತ್ತೇನೆ. ತಾವು ಕಾನೂನು ಪ್ರಕಾರ ರಾಜ್ಯಭಾರ ಮಾಡುತ್ತಿಲ್ಲ. ಹೊರಗಡೆ ಮಾತ್ರ ಕಾನೂನು ಚೌಕಟ್ಟನ್ನು ತೋರಿಸುತ್ತೀರಿ. ಆದಕ್ಕೇ ಸರ್ಕಾರ ಇಲ್ಲ. ಈ ಸರ್ಕಾರ ಕುಸಿದು ಬಿದ್ದಿದೆ ಎಂದು ಹೇಳುತ್ತ ಇದ್ದೇವೆ. ಆದ್ದರಿಂದ ಕುಸಿದು ಬಿದ್ದಿರುವ ಈ ಸರ್ಕಾರಕ್ಕೆ ಮುರಿದ ಕಾಲು ಕಟ್ಟಿಸಿ ನಿಲ್ಲಿಸುವುದರಲ್ಲಿ ಏನೂ ಪ್ರಯೋಜನವಿಲ್ಲ. ನಮ್ಮ ಅಭಿಪ್ರಾಯದಲ್ಲಿ ರಾಜ್ಯದಲ್ಲಿ ಹಾಗೂ ಹೊರಗಡೆಯೂ ಸಹ ಅಭಿಪ್ರಾಯವಿರುವುದು ಮತ್ತು ಎಲ್ಲ ತಜ್ಞರು ಸಹ ಹೇಳುತ್ತಾ ಇರುವದು 'ಮೈಸೂರು ರಾಜ್ಯಾಡಳಿತದಲ್ಲಿ ಹಾಫ್ ಚೀಫ್ ಮಿನಿಸ್ಟರ್' ಇದ್ದಾರೆ. ಇಂಡಿಯಾದಲ್ಲಿ ಹಾಫ್ ಕಾಂಗ್ರೆಸ್ ಪ್ರೆಸಿಡೆಂಟ್ ರಿದ್ದಾರೆ. ಈ ರೀತಿಯಾಗಿ ಅವರು ಎರಡೂ ಕಡೆಯು ಇದ್ದಾರೆಂದು ದೊಡ್ಡ ದೊಡ್ಡ ಪತ್ರಿಕೆಗಳವರೂ ಹೇಳಿದ್ದಾರೆ. ಬೇಕಾದರೆ ಅದನ್ನು ನಿದರ್ಶನವಾಗಿ ತಂದು ಹೇಳುತ್ತೇನೆ. ಫಾರ್ಮಲ್ ಮೋಷನ್ ಮೂವ್ ಮಾಡಬೇಕೆಂದರೆ ಮೂವ್ ಮಾಡುತ್ತೇವೆ.

ಉಪಾಧ್ಯಕ್ಷರು : ಈಗ ಮುಂದಿನ ಕಲಾಪಗಳನ್ನು ನಡೆಸುವುದಕ್ಕೆ ಸಭೆಯ ಒಪ್ಪಿಗೆಯನ್ನು ಕೇಳುತ್ತೇನೆ. ಇದು ಇತ್ಯರ್ಥವಾಗುವವರೆಗೂ ಚರ್ಚೆ ಮಾಡುವದು ಬೇಡ ಎನ್ನುವುದಾದರೆ ಅದಕ್ಕೆ ಸಭೆಯ ಒಪ್ಪಿಗೆ ಪಡೆಯಬೇಕಾಗುತ್ತದೆ.

ಶ್ರೀ ಕೆ.ಎಚ್. ರಂಗನಾಥ : ತಾವು ತಂದು ಚರ್ಚೆ ನಡೆಸುವುದಾದರೆ ಸದನದ ಅಭಿಮತ ಪಡೆಯುವ ಪ್ರಶ್ನೆಯೇ ಉದ್ಭವಿಸದು.

ಉಪಾಧ್ಯಕ್ಷ : ಕಲಾಪ ಮುಂದುವರೆಸುವ ವಿಷಯದಲ್ಲಿ ನಾನು ಸದನದ ಅಭಿಮತ ಪಡೆಯಲೇ ಬೇಕಾಗುತ್ತದೆ.

ಶ್ರೀ ಕೆ.ಎಚ್.ರಂಗನಾಥ : ಮುಖ್ಯಮಂತ್ರಿಗಳ ಸಂಚಾರ ಕಾರ್ಯಕ್ರಮ ಪ್ರಸಿದ್ಧಿಸುವ ಅಧಿಕಾರ ಮುಖ್ಯಮಂತ್ರಿಗಳ ಕಾರ್ಯಾಲಯಕ್ಕಿರುತ್ತದೆ. ಕಾರ್ಯಾಲಯವು ಮುಖ್ಯಮಂತ್ರಿಗಳ ಸಂಚಾರ ಕಾರ್ಯಕ್ರಮ ಹೇಗೋ ಹಾಗೆಯೇ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಕಾರ್ಯಕ್ರಮವನ್ನು ಪ್ರಕಟಿಸಬೇಕಾಗುತ್ತದೆ. ಹೀಗೆ ಮಾಡುವದು ಕಾಯ್ದೆಗನುಸಾರವೇ?

ಉಪಾಧ್ಯಕ್ಷ : ಈಗ ಕಲಾಪ ಮುಂದುವರೆಸಿಕೊಂಡು ಹೋಗುವ ವಿಷಯ ಮಾತ್ರ ನಮ್ಮ ಮುಂದಿದೆ.

ಶ್ರೀ ಕೆ.ಎಚ್. ರಂಗನಾಥ : ಅದರಂತೆಯೂ ಸರಿ, ಆದರೆ ಅದಕ್ಕೂ ಮೊದಲಿಗೆ .....

ಶ್ರೀ ಎಸ್. ಶಿವಪ್ಪ : ನಾವು ಕೇಳುತ್ತಿರುವದು ಒಂದು ಮೂಲಭೂತವಾದ ಪ್ರಶ್ನೆ. ಈ ದಿವಸ ಮುಖ್ಯಮಂತ್ರಿಯ ಕಚೇರಿ ಕಾಂಗ್ರೆಸ್ ಕಚೇರಿಯಾಗಿದೆ. ಇದು ಸರಿಯೆನ್ನುವುದಾಗಿ ಯಾವ ಕಾನೂನಿನಲ್ಲಿ ಅಡಕವಾಗಿದೆ. ಈ ದಿವಸ ಈ ಸಾರ್ವಜನಿಕ ಕಚೇರಿಯಾದ ವಿಧಾನಸೌಧವೂ ಒಂದು ಕಾಂಗ್ರೆಸ್ ಕಚೇರಿಯಾಗಿ

ಪರಿವರ್ತನೆಯಾಗಿವೆ. ಇಂಥ ವಿಚಾರಕ್ಕೆ ಸಭೆಯು ತನ್ನ ಅನುಮತಿ ಕೊಡಲು ಸಾಧ್ಯವೇ? ಎಂಬುದನ್ನು ಅಧ್ಯಕ್ಷರು ಗಮನಕ್ಕೆ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು : ಮುಖ್ಯಮಂತ್ರಿಗಳು ಸಭೆಗೆ ಬಂದ ಮೇಲೆ ಅವರು ಹೇಳಿಕೆ ಕೊಡುವ ಹಾಗೆ ಮಾಡೋಣ. ಆದರೆ ನಾನೀಗ ಕಲಾಪಗಳನ್ನು ಮುಂದುವರಿಸಬೇಕೋ ಅಥವಾ ಬೇಡವೋ ಎಂಬುದನ್ನು ತಿಳಿಯಲು ಸಭೆಯ ಅನುಮತಿ ಕೇಳಬೇಕೆಂದಿದ್ದೇನೆ. ಸದನದ ಅಭಿಮತ ಪಡೆಯುತ್ತೇನೆ.

ಸೇವಾ ನಿವೃತ್ತರಿಗೆ ತುಟ್ಟಿ ಭತ್ಯೆ ಕೊಡುಗೆ ಹೆಚ್ಚಿಸುವಂತೆ ಮೈಸೂರು ರಾಜ್ಯ ಪಿಂಚಣಿದಾರ ಸಂಘ ಕೋರಿದ್ದು, ಪಿಂಚಣಿ ಪುನರ್ ವಿಮರ್ಶೆಯನ್ನು ವೇತನ ಆಯೋಗಕ್ಕೆ ಒಪ್ಪಿಸಲಾಗಿದೆ ಎಂದು ಅರ್ಥಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಅವರು ಶ್ರೀ ಶೆಟ್ಟರ್ ಅವರ ಪ್ರಶ್ನೆಗೆ ಉತ್ತರಿಸುತ್ತ ತಿಳಿಸಿ ಪಿಂಚಣಿದಾರರಿಗೆ ವೈದ್ಯಕೀಯ ಪರಿಹಾರ ಒದಗಿಸುವುದನ್ನು ಕುರಿತು ಸಹ ವೇತನ ಆಯೋಗಕ್ಕೆ ವಹಿಸಲಾಗಿದೆ. ಅದರ ಶಿಫಾರಸ್ಸು ಬಂದ ನಂತರ ನಿಭಾಯಿಸಲಾಗುವುದೆಂದರು.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಸೇರ್ಪಡೆ ಮಾಡಲಾದ 12 ಹಳ್ಳಿಗಳಲ್ಲಿಯ ಕೃಷಿಕರಿಗೆ ಕೃಷಿ ಸಂಬಂಧದ ಸಾಧನ ಸಲಕರಣೆಗಳ ಸಹಾಯವನ್ನು ಹುಬ್ಬಳ್ಳಿ ತಾಲೂಕ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಂದ ಪಡೆಯಲಿಕ್ಕೆ ಸಾಧ್ಯವಿಲ್ಲವಾದರೂ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಕ್ಷೇತ್ರದಲ್ಲಿಯ ಸಹಕಾರಿ ಸಂಘಗಳಿಗೆ 325 ಟನ್ ಗೊಬ್ಬರ, 3 ಹೈಬ್ರಿಡ್ ಬೀಜ ಇತರ 18 ಸೊಸೈಟಿಗಳಿಗೆ 750 ಟನ್ ಗೊಬ್ಬರ ವಿತರಿಸಲಾಗಿದ್ದು, ಅದನ್ನು ಎಲ್ಲ ರೈತರಿಗೆ ಹಂಚಲಾಗಿದೆ ಎಂದು ಸಹಕಾರ ಮಂತ್ರಿ ಪಿ.ಎಂ. ನಾಡಗೌಡರು ಶ್ರೀ ಎಸ್.ಎಸ್. ಶೆಟ್ಟರ್ ಪ್ರಶ್ನೆಗೆ ಉತ್ತರಿಸಿದರು.

ಶಿಕ್ಷಣ ಇಲಾಖೆಯ ಶಿಕ್ಷಕೇತರ ಸಿಬ್ಬಂದಿಯ ಬಡ್ತಿ ರದ್ದತಿಯಾಗುವುದಿಲ್ಲವೆಂಬ ಭರವಸೆಯನ್ನು ಶ್ರೀ ಶೆಟ್ಟರು ಶಿಕ್ಷಣ ಮಂತ್ರಿ ಕೆ.ವಿ. ಶಂಕ್ರೆಗೌಡರಿಂದ ಪಡೆದರು.

ಶ್ರೀ ಶೆಟ್ಟರು 58ನೇ ನಿಯಮದಲ್ಲಿ ನಿಲುವಳಿ ಸೂಚನೆಯನ್ನು ಮಂಡಿಸಿದ ಬಳಿಕ ಸಭಾಧ್ಯಕ್ಷರು ನಿಲುವಳಿ ಸೂಚನೆ ಸಂಬಂಧದಲ್ಲಿ ಅನೇಕರು ಮಾತಾಡುವವರಿದ್ದು 15 ನಿಮಿಷಗಳಿಗೆ ಮಿಕ್ಕಿ ಯಾರೂ ಮಾತಾಡ ಕೂಡದೆಂದು ಕಾಲ ಮಿತಿ ವಿಧಿಸಿದರು.

ಭಾಷಾ ಸಮಸ್ಯೆ

ಶ್ರೀ ಎಸ್.ಎಸ್. ಶೆಟ್ಟರು ಭಾಷಾ ಪ್ರಶ್ನೆಯ ಸಂಬಂಧವಾಗಿ ವಿದ್ಯಾರ್ಥಿ ಸಮುದಾಯದಲ್ಲಿ ಸಂಭವಿಸಿದ ಅಶಾಂತಿಯನ್ನು ಸಮಾಜ ವಿರೋಧಿ ವ್ಯಕ್ತಿಗಳು ದುರುಪಯೋಗಪಡಿಸಿಕೊಂಡು ತೊಂದರೆ ಉಂಟು ಮಾಡಿದ್ದಾರೆಂಬ ರಾಜ್ಯಪಾಲರ ಭಾಷಣದಲ್ಲಿಯ ಉಲ್ಲೇಖವನ್ನು ಪ್ರಸ್ತಾಪಿಸಿ ರಾಜ್ಯಪಾಲರ ಹೇಳಿಕೆಯೂ ರಾಜಕೀಯ ದೃಷ್ಟಿಯಿಂದ ಬಹಳ ಮಹತ್ವದ್ದು.

ಇವತ್ತಿನ ದಿವಸ ನಮ್ಮ ರಾಜ್ಯದ ಮುಖ್ಯಮಂತ್ರಿಗಳ ಹೇಳಿಕೆ ಯಾವ ಪತ್ರಿಕೆಗಳಲ್ಲಿ ಪ್ರಕಟವಾಗಿದೆಯೋ ಅವುಗಳನ್ನು ಅನುಲಕ್ಷಿಸಿ ಈ ವಿಷಯವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕಾಗಿದೆ. ಸುದೈವದಿಂದಲೋ, ದುರ್ದೈವದಿಂದಲೋ ನಮ್ಮರಾಜ್ಯದ ಮುಖ್ಯಮಂತ್ರಿಯವರು ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ಆಗಿದ್ದಾರೆ. ನಮ್ಮ ರಾಜ್ಯದ ಆಡಳಿತ ಇವತ್ತಿನ ದಿವಸ ಎರಡು ಕುದುರೆಗಳನ್ನು ಸವಾರಿ ಮಾಡತಕ್ಕ ಒಬ್ಬ ಮನುಷ್ಯನ ಸ್ಥಿತಿ ಹೇಗೆ ಇದೆಯೋ ಆ ರೀತಿಯಾಗಿದೆ ಎಂದು ತಿಳಿದುಕೊಂಡು ಈ ಭಾಷಾ ಪ್ರಶ್ನೆಯ ಬಗ್ಗೆ ಮಾತನಾಡಬೇಕಾಗುತ್ತದೆ.

ಎರಡು ಕುದುರೆಗಳನ್ನು ಸವಾರಿ ಮಾಡತಕ್ಕ ಮನಷ್ಯ ಎಂದೂ ಸುಖಿಯಾಗಲಾರ. ಇವತ್ತಿನ ದಿವಸ ನಮ್ಮ ಮುಖ್ಯಮಂತ್ರಿಯವರು ಭಾಷಾ ಪ್ರಶ್ನೆಯ ಬಗ್ಗೆ ಕೊಟ್ಟಿರುವ ಹೇಳಿಕೆ ವಿಚಿತ್ರವಾಗಿದೆ. ಅವರು ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಿ ಈ ಹೇಳಿಕೆಯನ್ನು ಕೊಟ್ಟರೋ ಅಥವಾ ಈ ರಾಜ್ಯದ ಮುಖ್ಯಮಂತ್ರಿಗಳೆಂದು ತಿಳಿದುಕೊಂಡು ಹೇಳಿಕೆಯನ್ನು ಕೊಟ್ಟರೋ ಅವರು ಯಾವ ರೀತಿಯಿಂದ ವಿಚಾರ ಮಾಡಿ ಹೇಳಿಕೆ ಕೊಟ್ಟರೋ ಎಂಬುದನ್ನು ಅವರೇ ಹೇಳಿದರೆ ಒಳ್ಳೆಯದು. ನಾವು ಹೇಳುವದು ಸರಿಯೆನಿಸದು. ಭಾಷಾ ಪ್ರಶ್ನೆಯನ್ನು ಸುಲಭವಾದ ರೀತಿಯಿಂದ ಬಿಡಿಸುವುದಕ್ಕೆ ಅವರು ಪ್ರಯತ್ನ ಮಾಡಬೇಕಾಗಿದೆ. ಈ ವಿದ್ಯಾರ್ಥಿ ಚಳುವಳಿಯನ್ನು ಇಷ್ಟು ಸಣ್ಣದನ್ನಾಗಿ ಅವರು ಅವರು ಏಕೆ ತೆಗೆದುಕೊಂಡರು? ಇದು ಅತ್ಯಂತ ಖೇದಕರ ಸಂಗತಿ. ಆದಕ್ಕಾಗಿಯೇ ರಾಜ್ಯಪಾಲರು ಹೇಳಿರಬಹುದು. ದುಷ್ಟ ಶಕ್ತಿಗಳು ಇಂಥ ಒಂದು ವಿದ್ಯಾರ್ಥಿ ಚಳುವಳಿಯನ್ನು ತಮ್ಮ ಕೆಲಸಗಳಿಗೆ ಉಪಯೋಗಿಸಿದವೆಂದು! ಇನ್ನು ಇದನ್ನು ಪ್ರಸ್ತಾಪ ಮಾಡಿ ಯಾರೂ ಇದರ ಬಗ್ಗೆ ಹೆಚ್ಚಿನ ಬೆಳಕನ್ನು ನೀಡಬೇಕಿಲ್ಲ.

ಈ ದುಷ್ಟಶಕ್ತಿಗಳು ಯಾರು? ರಾಜ್ಯದಲ್ಲಿ ಯಾರು ಈ ಪ್ರಕಾರ ದುಷ್ಟಶಕ್ತಿಯನ್ನು ಹರಡಿ ನಮ್ಮ ಆಡಳಿತದಲ್ಲಿ ಒಂದು ದೊಂಬಿಯನ್ನು ಎಬ್ಬಿಸಿದ್ದಾರೆ. ಇದನ್ನೆಲ್ಲಾ ಆಲೋಚನೆ ಮಾಡಬೇಕಾಗಿದೆ. ಇದಕ್ಕೆ ಹಿನ್ನೆಲೆ ಏನಿದೆ? ಇದರಿಂದ ಪ್ರಜಾಪ್ರಭುತ್ವಕ್ಕೆ ಯಾವ ಗಂಡಾಂತರ ತಂದೊದಗಿಸಬಹುದು ಎನ್ನುವ ಪ್ರಯತ್ನವಿದೆ. ಇದನ್ನೆಲ್ಲ ನಮ್ಮ ಆಡಳಿತಗಾರರು ಯೋಚಿಸಬೇಕಿದೆ.

ಬಹಳ ವಿಚಿತ್ರವಾದ ಸಂಗತಿಯೆಂದರೆ ಇವತ್ತು ನಮ್ಮಲ್ಲಿರತಕ್ಕ ಎರಡೂ ವಿಶ್ವವಿದ್ಯಾಲಯಗಳ ಜವಾಬ್ದಾರಿಯನ್ನು ಹೊತ್ತಂತಹ ಜನರು ಕಾಲೇಜುಗಳನ್ನು ಮುಚ್ಚಿ ಬಿಡತಕ್ಕ ಒಂದು ಪ್ರಯತ್ನ ಮಾಡಿದ್ದಾರೆ. ಕಾಲೇಜುಗಳನ್ನು ಮುಚ್ಚುವುದರಿಂದ ವಿದ್ಯಾರ್ಥಿ ಚಳುವಳಿ ಹೆಚ್ಚಾಗಬಹುದೇ? ಅಥವಾ ಕುಗ್ಗಬಹುದೇ? ಇದನ್ನೆಲ್ಲಾ ಅವರು ವಿಚಾರ ಮಾಡಿ ನಿರ್ಧಾರ ತೆಗೆದುಕೊಂಡರೇ? ಇದು ವಿಚಾರ ಮಾಡತಕ್ಕ ಮಾತಾಗಿದೆ.

ವಿದ್ಯಾರ್ಥಿಗಳು ಚಳುವಳಿಯನ್ನು ಸ್ಥಗಿತಗೊಳಿಸಿದ ಹೊರತು ಕಾಲೇಜನ್ನು ತೆರೆಯಲಾರೆವು ಎನ್ನುವಂತಹ ನಿರ್ಧಾರ ನಿರ್ಣಯ ವೃತ್ತಪತ್ರಿಕೆಗಳಿಂದ ತಿಳಿದುಬರುತ್ತದೆ. ವಿದ್ಯಾರ್ಥಿಗಳು ಚಳುವಳಿಯನ್ನು ಸ್ಥಗಿತಗೊಳಿಸುವುದಕ್ಕೂ ಕಾಲೇಜುಗಳನ್ನು ತೆರೆಯುವುದಕ್ಕೂ ಏನೋ ಸಂಬಂಧವಿದೆಯೇನೋ ಎನ್ನುವ ಆಪತ್ತೆ ಇದೆ.

ಈ ಚಳುವಳಿಯನ್ನು ಸರ್ಕಾರ ಅಥವಾ ಜವಾಬ್ದಾರಿಯನ್ನು ಹೊತ್ತಂತಹ ವಿಶ್ವವಿದ್ಯಾಲಯದ ಅಧಿಕಾರ ವರ್ಗ ಮತ್ತು ವಿದ್ಯಾರ್ಥಿಗಳ ಮುಖಂಡರು ಎಲ್ಲರೂ ಸೇರಿ ಇದನ್ನು ಯಾವ ದಿಶೆಗೆ ಒಯ್ಯುತ್ತಿದ್ದಾರೆ? ಎನ್ನುವುದನ್ನು ಸರ್ಕಾರ ಪರಿಶೀಲಿಸಿ ನೋಡಬೇಕಾಗಿದೆ. ಈ ಚಳುವಳಿ ಏತಕ್ಕೋಸ್ಕರ ನಡೆಯುತ್ತಿದೆ. ಈ ಚಳುವಳಿಯ ಹಿನ್ನೆಲೆ ಏನು? ಈ ಚಳುವಳಿಯಿಂದ ಏನು ಸಾಧಿಸಬೇಕಾಗಿದೆ. ಈ ಚಳುವಳಿಯನ್ನು ಪ್ರಾರಂಭಿಸಿದವರ ಮನಸ್ಸಿನಲ್ಲಿ ಏನಿತ್ತು? ಈ ಚಳುವಳಿಯನ್ನು ಮಾಡುವುದರಿಂದ ಏನು ಸಾಧನೆ ಮಾಡಬಹುದು. ಇದನ್ನೆಲ್ಲಾ ಸರ್ಕಾರ ಪರಿಶೀಲಿಸಲಿಲ್ಲ.

ಇವತ್ತು ಭಾಷಾ ಸಮಸ್ಯೆಯ ಒಂದು ಕಲ್ಪನೆಯನ್ನು ವಿದ್ಯಾರ್ಥಿಗಳಿಗೆ ಸರಿಯಾಗಿ ಕೊಡುವಂತಹ ಜವಾಬ್ದಾರಿಯನ್ನು ವಿಶ್ವವಿದ್ಯಾಲಯಗಳ ಅಧಿಕಾರಿಗಳೂ ಮಾಡಲಿಲ್ಲ. ಮುಖ್ಯಮಂತ್ರಿಗಳೂ ಮಾಡಲಿಲ್ಲ. ವಿದ್ಯಾಮಂತ್ರಿಗಳೂ ಮಾಡಲಿಲ್ಲ ಎನ್ನುವಂತಹ ಖೇದಕರ ಸಂಗತಿಯನ್ನು ನಾನು ಚಿತ್ರಿಸುತ್ತಿದ್ದೇನೆ.

ಏಕೆಂದರೆ ಅಫೀಸಿಯಲ್ ಲ್ಯಾಂಗ್ವೇಜ್ ಅಮೆಂಡ್‌ಮೆಂಟ್ ಬಿಲ್ ಆಫ್ 1967ರ ಅಧಿಕೃತ ಭಾಷಾ ತಿದ್ದುಪಡಿ ವಿಧೇಯಕ ಏನು ಹೇಳುತ್ತದೆ? ವಿದ್ಯಾರ್ಥಿಗಳು ಸರ್ಕಾರದ ಮುಂದೆ ಯಾವ ಒಂದು ಬೇಡಿಕೆ ಇಟ್ಟು ತಮ್ಮ ಹೋರಾಟ ಚಳುವಳಿಗಳನ್ನು ನಡೆಸುತ್ತಿದ್ದಾರೆ. ಎರಡನ್ನೂ ಒಂದಕ್ಕೊಂದು ಪರಿಶೀಲಿಸಿ ನೋಡಿದರೆ ಚಳುವಳಿಯ ಅರ್ಥವೇ ವಿಚಿತ್ರವಾಗಿ ಕಾಣುತ್ತದೆ.

ನಾನು ಈವಿಷಯದಲ್ಲಿ ಕೆಲವು ಮಾಹಿತಿಯನ್ನು ಸಂಗ್ರಹ ಮಾಡುತ್ತಿರುವಾಗ ಕೆಲವು ಹಸ್ತಪತ್ರಿಕೆಗಳು, ಹ್ಯಾಂಡ್‌ಬಿಲ್ ಗಳು ನಮ್ಮ ಕಣ್ಣೆದುರಿಗೆ ಬಂದವು. ಪೊಲೀಸಿನವರು ವಿದ್ಯಾರ್ಥಿ ಚಳುವಳಿಯೆಂದು ಯಾವುದನ್ನು ಕರೆಯುತ್ತಾರೋ ಅದರಲ್ಲಿ ದುಷ್ಟ ಶಕ್ತಿಗಳು ಸೇರಿಕೊಂಡಿರುವುದರಿಂದ ನಾನು ವಿದ್ಯಾರ್ಥಿ ಚಳುವಳಿ ಎಂದೆನ್ನಲು ಸಿದ್ಧನಿಲ್ಲ. ವಿದ್ಯಾರ್ಥಿ ಚಳುವಳಿ ಎಂದು ತಿಳಿದುಕೊಂಡು ಯಾವುದನ್ನು ಕರೆಯಲಾಗುತ್ತಿದೆಯೋ ಅಂಥ ಚಳುವಳಿಯನ್ನು ಪರಿಣಾಮಕಾರಿಯಾಗಿ ಮಾಡಲು ಒಂದು ವಿಧಾನವನ್ನು ಈ ಕರ ಪತ್ರದಲ್ಲಿ ಬರೆದಿರುತ್ತಾರೆ. ಪೊಲೀಸನವರು ಜೀಪಿನಲ್ಲಿ ಯಾವುದೋ ಒಂದು ಕಡೆಯಿಂದ ಚಳುವಳಿಗಾರರನ್ನು ಬೆನ್ನಟ್ಟುತ್ತಿರುವಾಗ ಆ ಜೀಪನ್ನು ಯಾವ ರೀತಿ ಉರುಳಿಸಬೇಕೆಂಬುದನ್ನು ಅದರಲ್ಲಿ ಬರೆದಿತ್ತು. ಯಾವುದಾದರೂ ಒಂದು ಸ್ಫೋಟಕ ದ್ರವ್ಯವನ್ನು ಒಗೆಯತಕ್ಕ ರೀತಿ. ಯಾವ ರೀತಿ ಬೆಂಕಿ ಹಚ್ಚಬೇಕು ಎನ್ನುವಂತಹ ಸಂಗತಿಯನ್ನು ಕರ ಪತ್ರಗಳಲ್ಲಿ ಬರೆಯಲಾಗಿದೆ. ಕರ ಪತ್ರಗಳ ರೀತಿಯಲ್ಲಿ ಇಷ್ಟೊಂದು ವಿಚಾರಗಳನ್ನು, ವಿಧ್ವಂಸಕತೆಯನ್ನು ಹಂಚಿದರೂ ಸಹ ಪೊಲೀಸ ಖಾತೆಯವರು ಇದರ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯತನದಿಂದ ನಡೆದುಕೊಂಡಿದ್ದೇಕೆ? ಪೊಲೀಸರೇ ಈ ಪ್ರಕಾರದ ಚಳುವಳಿ ಆಗಬಹುದೆಂಬ ಊಹೆ ಮಾಡಿ ಸೂಕ್ತ ಕ್ರಮಗಳನ್ನು ಯೋಜಿಸದೇ ಹೋದಾಗ ಆಡಳಿತ ಏನನ್ನು ಮಾಡಿತು. ಈಪ್ರಕಾರವಾಗಿ ಭಾಷಾ ಪ್ರಶ್ನೆಯನ್ನು ಸಂಕುಚಿತ ಭಾವನೆಗೆ ಪರಿವರ್ತನಗೊಳಿಸುವಂಥ ಪ್ರಯತ್ನ ದೇಶದಲ್ಲಿ ನಡೆದಾಗ ಅಂಥದನ್ನು ತಡೆದ ಸರಿಯಾದ ಚಳುವಳಿಕೆ ಹೇಳುವ ಹೊಣೆ ಯಾರ ಮೇಲಿತ್ತು? ಎಂಬ ಪ್ರಶ್ನೆ ಏಳುತ್ತದೆ.

ಇವತ್ತು ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರ ಮೇಲೆ ದೊಡ್ಡ ಜವಾಬ್ದಾರಿ ಇದೆ. ರಾಜ್ಯದ ಮುಖ್ಯಮಂತ್ರಿಗಳಾಗಿಯೂ ಅವರ ಮೇಲೆ ದೊಡ್ಡ ಜವಾಬ್ದಾರಿ ಇದೆ. ಮೊಟ್ಟಮೊದಲನೆಯದಾಗಿ ರಾಷ್ಟ್ರ, ರಾಷ್ಟ್ರದ ಕಲ್ಪನೆ, ರಾಷ್ಟ್ರದಲ್ಲಿ ಐಕ್ಯ ಬರಬೇಕಾಗಿದೆ. ರಾಷ್ಟ್ರಭಾಷಾ ವಿಚಾರವಾಗಿ ಮಹಾತ್ಮ ಗಾಂಧೀಜಿಯವರ ಕಾಲದಿಂದಲೂ ಹೇಳಿಕೊಂಡ ಬಂದಂತಹ ಶಿಸ್ತಿನ ಪಕ್ಷದ ಅಧ್ಯಕ್ಷ ಸ್ಥಾನವನ್ನು ಅವರು ವಹಿಸಿಕೊಂಡು ಅವರೇ ಇವತ್ತಿನ ದಿವಸ ಹಿಂದೀಯ ಬಗ್ಗೆ ಏನು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ಅವರೇ ನೋಡಿಕೊಳ್ಳಬೇಕಾಗಿದೆ ಎಂದು ನನಗನಿಸುತ್ತದೆ. ಇವತ್ತು ಭಾಷಾ ವಿಷಯದಲ್ಲಿ ಗೊಂದಲವಾಗಿರುವುದಕ್ಕೆ ಅವರು ಕೊಟ್ಟಂತಹ ಹೇಳಿಕೆಯಲ್ಲಿಯೇ ಒಂದು ಮಹತ್ವದ ಅಂಶವಿದೆ.

ಪೊಲೀಸರು ಗೋಲಿಬಾರ್ ಮಾಡುವಾಗ ಅದಕ್ಕೆ ಮುಂಚೆ ಕೆಲವು ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಗೋಲಿಬಾರ್‌ಗೆ ಮೊದಲು ಯಾವ ರೀತಿ ಮುನ್ಸೂಚನೆಗಳನ್ನು ಕೊಡಬೇಕೆಂಬ ನಿಯಮಗಳಿವೆ. ಜನರಿಗೆ ಹೊರಟು ಹೋಗಲು ವಿನಂತಿಸಬೇಕು. ನಂತರ ಚದುರಿಸುವ ಪ್ರಯತ್ನ ಮಾಡಬೇಕು ಎಂದು ನಿಯಮವಿದೆ. ಆದರೆ ಜನರನ್ನು ಬೆನ್ನಟ್ಟಿ ಹಿಂಸಿಸಿ ಕೊಂದು ಕೊಂದರೆ ಮಾಡಬೇಕೆಂದಿಲ್ಲ. ಪೊಲೀಸರು ಗುಂಡು ಹಾರಿಸಿದಾಗ ಪೇಟೆಗೆ ಹೋಗುತ್ತಿದ್ದ ಹೆಣ್ಣುಮಗಳಿಗೆ ಗುಂಡು ಬಡಿದು ಆಕೆ ಸತ್ತಳು. ಏನೂ ಅರಿಯದಂತಹ ಜನ, ಯಾವುದೂ ತಿಳಿಯದಂತಹ ಜನರಿಗೆ ಹೀಗೆ ಕೊಂದರೆಯಾದರೆ ಅದರ ಹೊಣೆಯಾರದು? ಪರಿಹಾರ ಧನ ಕೊಟ್ಟಮಾತ್ರಕ್ಕೆ ಹೋದ ಜೀವ ಮರಳಿ ಬರುವುದಿಲ್ಲ. ಪೇಟೆಗೆ ಹೋದ ಹೆಣ್ಣುಮಕ್ಕಳು, ರಸ್ತೆಯಲ್ಲಿ ತಿರುಗಾಡುವ ಮುಗ್ಧಮಕ್ಕಳು... ಹೀಗೆ ಗುಂಡಿಗೆ ಆಹುತಿಯಾಗುತ್ತಾರೆ. ದೊಡ್ಡ ಚಳುವಳಿಯೂ ಆಯ್ತು, ಕೆಲ ಜೀವಗಳು ಹತರಾದರು. ಇದಕ್ಕೆ ಕಾರಣ ಹೊರಗಿನವರೆಂದು ಹೇಳುತ್ತಾರೆ. ಈ ಗೋಲಿಬಾರ್‌ನ ಬಗ್ಗೆ ವಿಚಾರಣೆ ನಡೆಯಲಿ ಎಂದು ಆಗ್ರಹ ಪಡಿಸುತ್ತಿರುವ ಹಾಗೆಯೇ ಮುಖ್ಯಮಂತ್ರಿ ನಿಜಲಿಂಗಪ್ಪನವರು ಸರ್ಕಾರ ಎಲ್ಲ ಕೇಸುಗಳನ್ನು ವಿಥ್‌ಡ್ರಾ ಮಾಡುತ್ತದೆ (ಹಿಂದೆ ತೆಗೆದುಕೊಳ್ಳುತ್ತದೆ) ಎಂದು ಹೇಳಿಕೆ ನೀಡಿದ್ದಾರೆ. ನೊಂದವರಿಗೆ ಪರಿಹಾರ ನೀಡುವುದಾಗಿಯೇನೋ ಅವರು ಹೇಳಿರುವುದು ಅಭಿನಂದನೀಯ. ಆದರೆ ಪರಿಹಾರ ನೀಡಿದ ಮಾತ್ರಕ್ಕೆ ಹೋದ ಜೀವ ಮರಳಿ ಬಂದಂತಾದೀತೇ? ಹೀಗೆ ಆಡಳಿತ ಜಟಿಲವಾಗುತ್ತ ನಡೆದಿದೆ. ಚಳುವಳಿ ಮಾಡಲಿಕ್ಕೆ ಯಾರು ಪ್ರಚೋದನೆ ಕೊಟ್ಟರು ಎಂದು ಪ್ರಶ್ನಿಸಿದರೆ ಈಗ ಮುಖ್ಯಮಂತ್ರಿ ನಿಜಲಿಂಗಪ್ಪನವರ ಕಡೆಗೆಯೇ ಬೆರಳು ಮಾಡಿ ತೋರಿಸುವ ಅನಿವಾರ್ಯತೆ ಇದೆ.

ಮುಖ್ಯಮಂತ್ರಿಗಳ ನಿರ್ಲಕ್ಷ್ಯತನ, ಆಡಳಿತದಲ್ಲಿಯ ಶೈಲಿ, ಪೊಲೀಸರನ್ನು ಬಿಟ್ಟು ಚಳುವಳಿ ಹತ್ತೋಟಿಗೆ ತರಲು ಮಾಡಿದ ವಿಧಾನ ಇದನ್ನೆಲ್ಲಾ ನೋಡಿದರೆ ಅವರು ಒಂದು ರೀತಿ ಆಟವಾಡಿಸುವುದಕ್ಕೆ ಹೊರಟಿದ್ದಾರೆಂದು ಭಾಸವಾಗುತ್ತದೆ. ಈಗ ಇದು ಸ್ಪಷ್ಟವಾಗಿದೆ.

ಈಗ ವಿದ್ಯಾರ್ಥಿಗಳ ಪರೀಕ್ಷೆಗೆ ಕಾಲ ಸಮೀಪಿಸುತ್ತಿದೆ. ಪರೀಕ್ಷೆಗಳಿಗೆ ಹಣ ಕಟ್ಟಿದ್ದಾರೆ. ಇಂಥ ಕಾಲದಲ್ಲಿ ಕಾಲೇಜುಗಳನ್ನುಬಂದ್ ಮಾಡಿದರೆ ಹೇಗೆ? ಯಾವ ಆಧಾರದ ಮೇಲೆ ಬಂದ್ ಮಾಡುವಿರಿ? ಅದಕ್ಕೆ ಯಾವ ಕಾನೂನಿದೆ? ಯಾವ ಅಧಿಕಾರವಿದೆ? ಅದರಿಂದ ಸಾಧಿಸುವದೇನು? ಕಾಲೇಜುಗಳನ್ನು ಬಂದ್ ಮಾಡಿ ಹುಡುಗರನ್ನು

ಹೊರಗಡೆಗೆ ಕಳುಹಿಸಿದರೆ ಅವರು ಉದ್ಯೋಗವಿಲ್ಲದೇ ರಸ್ತೆಗಳಲ್ಲಿ ತಿರುಗಾಡುತ್ತ ಚಳುವಳಿ ಮಾಡುವುದಕ್ಕೆ ಅವಕಾಶವಾಗುವುದಿಲ್ಲವೇ? ಇದನ್ನೆಲ್ಲಾ ಯೋಚನೆ ಮಾಡಬೇಕಲ್ಲವೇ? ಇಂಥ ಪ್ರಸಂಗಗಳಿಂದ ಶಾಂತಿ ಭಂಗಕ್ಕೆ ಅವಕಾಶವಾಗುತ್ತದಲ್ಲವೇ?

ಚರ್ಚೆ ಮಾಡಿ ಅನೇಕ ವಿಷಯಗಳನ್ನು ತೀರ್ಮಾನಿಸಲು ಸಾಧ್ಯವೆಂದು ರಾಜ್ಯಪಾಲರು ಹೇಳುತ್ತಾರೆ. ಅದಕ್ಕೆ ಅವಕಾಶ ಒದಗಿಸಿದ್ದೀರಾ? ಇವೆಲ್ಲ ಮಾಡದೇ ಇಂದು ಗೋಲಿಬಾರ್ ಮಾಡುವಂಥ ಪರಿಸ್ಥಿತಿಗೆ ಕಾರಣರಾದಿರಿ. ಚರ್ಚಿಸಿ ಒಂದು ನಿರ್ಣಯಕ್ಕೆ ಬರಲು ಏನು ಕ್ರಮ ಕೈಗೊಂಡಿರಿ? ಪ್ರಜಾಪ್ರಭುತ್ವದಲ್ಲಿ ಜನರ ರಕ್ಷಣೆ ಮಾಡುವದು ಹೀಗೆಯೇ ಏನು?

ಅಧಿಕೃತ ಭಾಷಾ ಕಾಯ್ದೆ ಪರಿಶೀಲನೆಯ ವೇಳೆಯಲ್ಲಿ ಹಿಂದೀಯನ್ನು ಯಾರ ಮೇಲೂ ಒತ್ತಾಯವಾಗಿ ಹೇರುವುದಿಲ್ಲ ಎಂದು ಪಂಡಿತ್ ನೆಹರು ಆಶ್ವಾಸನೆಯನ್ನಿತ್ತಿದ್ದರು. ಅದನ್ನು ಪೂರ್ಣ ಮಾಡಲಾಗಿದೆಯೇ? ಅಥವಾ ಹಿಂದೀಯನ್ನು ಎಲ್ಲರ ಮೇಲೂ ಒತ್ತಾಯವಾಗಿ ಹೇರಲ್ಪಟ್ಟಿದೆಯೇ? ಇಂಗ್ಲೀಷ್ ಬೇಕಾದವರಿಗೆ ಅದಕ್ಕೆ ಅವಕಾಶ ಕೊಡಲು ವ್ಯವಸ್ಥೆ ಮಾಡಿದೆಯೇ? ಅಥವಾ ಅದರ ವಿರುದ್ಧ ಕಾರ್ಯಾಚರಣೆ ಇದೆಯೇ? ಎಂಬುದನ್ನು ವಿಚಾರ ಮಾಡಬೇಕು.

ಈ ವಿಷಯದಲ್ಲಿ ಮುಖ್ಯವಾಗಿ ತಪ್ಪಿತಸ್ಥರು ನಮ್ಮ ಮುಖ್ಯಮಂತ್ರಿ. ಮತ್ತು ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರಾದ ನಿಜಲಿಂಗಪ್ಪನವರೆ. ಅದಕ್ಕಾಗಿ ನಿಲುವಳಿ ಸೂಚನೆ ತರಲಾಗಿದೆ. ಈ ದಿವಸ ಎರಡು ಸ್ಥಾನಗಳನ್ನು ಒಬ್ಬರೇ ಆಕ್ರಮಿಸಿಕೊಂಡಿದ್ದಾರೆ. ಇಡೀ ಭಾರತದ ಜುಟ್ಟು ಅವರ ಕೈಯಲ್ಲಿದೆ. ಭಾಷೆಯ ಪ್ರಶ್ನೆ ಇಡೀ ದೇಶಕ್ಕೆ ಸಂಬಂಧಪಟ್ಟಿದೆ. ಅದನ್ನು ಸುಲಭ ರೀತಿಯಿಂದ ಬಿಡಿಸದೇ ಜಟಿಲ ಮಾಡುತ್ತಿದ್ದಾರೆ. ಚಳುವಳಿ ಬೇರೆ ಪ್ರಾಂತಗಳಿಗೆ ಹರಡುವ ಭಯವಿದೆ. ಆದ್ದರಿಂದ ನಿಜಲಿಂಗಪ್ಪನವರ ಈ ರೀತಿಯನ್ನು ಖಂಡಿಸುತ್ತೇನೆ.

ಶ್ರೀ ವಾಟಾಳ ನಾಗರಾಜ್ : ವಿದ್ಯಾರ್ಥಿಗಳು ತಮಗೆ ಭಾಷೆಯ ಹೊರೆ ಹೆಚ್ಚಾಗಿದೆ ಎಂದು ಹೇಳಿ ಹೋರಾಟ ನಡೆಸುತ್ತಿರುವಾಗ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳಾಗಲಿ, ವಿದ್ಯಾ ಮಂತ್ರಿಗಳಾಗಲಿ ಸಂಧಾನವನ್ನು ನಡೆಸಿ ವಿದ್ಯಾರ್ಥಿಗಳೊಂದಿಗೆ ಮಾತನಾಡಿ ಗೊಂದಲಕ್ಕೆ ಅವಕಾಶವಾಗದಂತೆ ಮಾಡಬಹುದಿತ್ತು. ಆದರೆ ಆಡಳಿತ ಸರ್ಕಾರದಿಂದ ಪೋಲೀಸರ ಕೈಗೆ ಹೋಗಿ ಅಧಿಕಾರ ಅವರಲ್ಲಿ ಕೇಂದ್ರೀಕೃತವಾಗಿದೆ. ರಾಜ್ಯದ ರಾಜ್ಯದ ಪೋಲೀಸರ ಕೈಲಿ ಆಡಳಿತವೆಲ್ಲ ಹೋಗಿದೆ. ಅವರನ್ನು ಕೇಳುವವರೇ ಇಲ್ಲ. ಅವರು ಯಾರನ್ನು ಯಾವ ಗಳಿಗೆಯಲ್ಲೂ ಬೇಕಾದರೂ ಬಂದೂಕಿನಿಂದ ಹೊಡೆಯಬಹುದು. ಸಾಮಾನ್ಯ ಮನುಷ್ಯನಿಗೆ ಬೆಲೆ ಇಲ್ಲವಾಗಿದೆ. ಪರಿಸ್ಥಿತಿ ಹೀಗಿರುವುದರಿಂದ ಈಗ ಸರ್ಕಾರವೆಂಬುದೇ ಇಲ್ಲದಂತಾಗಿದೆ. ಈ ಸರ್ಕಾರ ರಾಜೀನಾಮೆ ಕೊಡಬೇಕು.

ನಿಜಲಿಂಗಪ್ಪನವರು ಮೈಸೂರಿಗೆ ಹೋದಾಗ ಒಂದು, ಚಾಮರಾಜರ ಬಳಿ ಇನ್ನೊಂದು, ಬೆಂಗಳೂರಲ್ಲಿ ಮತ್ತೊಂದು ಹೀಗೆ ಭಿನ್ನ ಭಿನ್ನ ಹೇಳಿಕೆ ಕೊಟ್ಟು ಗೊಂದಲ ಸೃಷ್ಟಿಸಿದ್ದಾರೆ. ಒಂದು ಸ್ಪಷ್ಟ ಹೇಳಿಕೆ ಕೊಟ್ಟು ವಿದ್ಯಾರ್ಥಿಗಳ ಮನಸ್ಸಿನಲ್ಲಿನ ಅನುಮಾನ ಪರಿಹರಿಸಿ ವಿದ್ಯಾರ್ಥಿಗಳ ಮುಷ್ಕರ ನಿಲ್ಲುವಂತೆ ಮಾಡಬೇಕಿತ್ತು. ಇನ್ನಾದರೂ ಹೀಗೆ ಮಾಡದಿದ್ದರೆ ನಾವು ಸೂಕ್ತಕ್ರಮ ಕೈಗೊಳ್ಳಬೇಕಾಗುತ್ತದೆ.

ನಮ್ಮ ರಾಜ್ಯ ಇದು ಕರ್ನಾಟಕ ರಾಜ್ಯ. ಕನ್ನಡ ರಾಜ್ಯ. ಕನ್ನಡ ಜನ ಇರತಕ್ಕ ರಾಜ್ಯ. ನಮಗೆ ಒಂದು ಕನ್ನಡ ಭಾಷೆ ಇದೆ ಎಂದು ತಿಳಿದುಕೊಂಡಿರತಕ್ಕ ಜನ ನಾವು. ಇಂಥ ಸಂದರ್ಭದಲ್ಲಿ ಕನ್ನಡ ಭಾಷೆಯನ್ನು ಅಧಿಕೃತವಾಗಿ ಎಲ್ಲ ಮಟ್ಟದಲ್ಲಿ ತರುವುದಕ್ಕೆ ಈ ಸರ್ಕಾರ ವಿಫಲವಾಗಿರುವುದೇ ಇವತ್ತಿನ ಚಳುವಳಿಯ ಮೊದಲ ಕಾರಣ. ಇವತ್ತು ಕನ್ನಡವನ್ನು ರಾಜ್ಯ ಭಾಷೆಯನ್ನಾಗಿ ಮಾಡಬೇಕೆಂದು ಬಾಯಲ್ಲಿ ಹೇಳತಕ್ಕ ನಮ್ಮ ರಾಜ್ಯ ಸರ್ಕಾರ ಕನ್ನಡ ಭಾಷೆಯ ಅಭಿವೃದ್ಧಿಗೆ ಕೃತಿಯಲ್ಲಿ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳುತ್ತಿಲ್ಲ. ಸರ್ಕಾರ ಈ ವಿಷಯದಲ್ಲಿ ಕಾಯ್ದೆ ಶಾಂತಿ ಪಾಲನೆಯಲ್ಲಿ ಪೂರ್ಣ ವಿಫಲಗೊಂಡಿದೆ.

ನನ್ನದಾದ ಚಿಕ್ಕಪೇಟೆ ಕ್ಷೇತ್ರದಲ್ಲಿ ಸರ್ಕಾರದ ಪೊಲೀಸನವರು ನಡು ಬೀದಿಯಲ್ಲಿ ಒಬ್ಬ ಹೆಣ್ಣು ಮಗಳನ್ನು ಗುಂಡಿಟ್ಟು ಕೊಂದರು. ಅವಳಿಗೆ ಸರ್ಕಾರ ಬೇಕಿಲ್ಲ, ಭಾಷೆ ಬೇಕಿಲ್ಲ, ಪ್ರಭುತ್ವ ಬೇಕಿಲ್ಲ, ಯಾವುದೂ ಬೇಕಾಗಿಲ್ಲ. 12 ಮಕ್ಕಳ ಆ ತಾಯಿ ತನ್ನ ಗಂಡನಿಗಾಗಿ ಚಹಾ ಪುಡಿ ತರುವುದಕ್ಕೆಂದು ಅಂಗಡಿಗೆ ಹೋದವಳು ಗುಂಡಿಗಾಹುತಿಯಾದಳು.

ಇವತ್ತಿನವರೆಗೂ ಸರ್ಕಾರ ತನ್ನ ಭಾಷಾ ನೀತಿಯನ್ನು ಹೇಳಿಲ್ಲ. ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡಿಲ್ಲ. ಈಗ ಚಳುವಳಿ ಮಾಡುವವರನ್ನು ನಿಲ್ಲಿಸಿ ಎಂದು ಒಬ್ಬ ಚಳುವಳಿಗಾರನಾಗಿ ನಾನೀಗ ಹೇಳಬೇಕಾಗಿದೆ. ಚಳುವಳಿ ನಡೆಯಲಿ ಎಂದು ಹೇಳುವ ಮನುಷ್ಯ ನಾನು. ಆದರೆ ಚಳುವಳಿಯಲ್ಲಿ ನ್ಯಾಯ, ಧರ್ಮ ಇರಬೇಕು. ಇವತ್ತು ಯಾರೋ ಚಳುವಳಿ ಮಾಡುತ್ತಾ ಅಂಥ ಗಲಾಟೆಯಾದ ತಕ್ಷಣ ಕಾಲೇಜುಗಳನ್ನು ಮುಚ್ಚಿದ್ದಾರೆ. ಇದರಿಂದ ಇವತ್ತು ಯಾರಿಗೆ ನಷ್ಟವಾಗಿದೆ? ನಮ್ಮ ರಾಜ್ಯದ ಬಡ ವಿದ್ಯಾರ್ಥಿಗಳಿಗೆ. ಅಂಥದ್ದರಲ್ಲಿ ವಿದ್ಯಾರ್ಥಿಗಳಲ್ಲಿ ಕಳಕಳಿಯ ಪ್ರಾರ್ಥನೆ ಮಾಡಿಕೊಳ್ಳುತ್ತ ಇದ್ದೇನೆ. ನಿಮ್ಮ ಪರೀಕ್ಷೆ ಕಾಲ ಸನ್ನಿಹಿತವಾಗುತ್ತ ಇದೆ. ಆದ್ದರಿಂದ ತಾವುಗಳೆಲ್ಲ ಕಾಲೇಜಿಗೆ ಹೋಗಿ ನಿಮ್ಮ ಯಾವುದೇ ಬೇಡಿಕೆ ಇದ್ದರೂ ಅದನ್ನು ನೋಡಿಕೊಳ್ಳುವದಕ್ಕೆ ಇಲ್ಲಿ ಶಾಸನ ಸಭೆ ಇದೆ. ಮತ್ತು ಹಿರಿಯರು ಇದ್ದಾರೆ ಅವರಿಗೆ ಬಿಡಿ.

ಈಗಿನ ಈ ವಿದ್ಯಾರ್ಥಿ ಚಳುವಳಿಗೆ ನೆರೆಯ ರಾಜ್ಯವಾದ ಮದ್ರಾಸ್ ಡಿಎಂಕೆ ಸರ್ಕಾರದ ಬೆಂಬಲವಿದೆ. ಚಿತಾವಣೆಯಿದೆ. ಡಿಎಂಕೆ ಸರ್ಕಾರ ತನಗೆ ಬೆಂಬಲ ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಅದಕ್ಕೆ ಮಾರ್ಗ ಮಾಡಿಕೊಡಬೇಡಿ. ಡಿಎಂಕೆ ಅವರಿಂದ ನನಗೆ ಒಂದು ಪತ್ರ ಬಂದಿದೆ. ನೀವು ಡಿಎಂಕೆ ಅವರನ್ನು ವಿರೋಧ ಮಾಡುತ್ತಿದ್ದೀರಿ ಅದಕ್ಕಾಗಿ ನಿಮ್ಮ ಕೊಲೆ ಮಾಡುತ್ತೇವೆಂದು ತಿಳಿಸಿದ್ದಾರೆ. ನಡು ಹಗಲಲ್ಲಿ ನನ್ನ ಕೊಲೆ ಮಾಡುವುದಾಗಿ ಆ ಪಕ್ಷದ ಧುರೀಣ ಕಟ್ಟಿಡಿಯಿಂದ ಪತ್ರ ಬರೆದು ಬೆದರಿಕೆ ಹಾಕಿದ್ದಾನೆ. ಇವತ್ತು ಮತ್ತೊಂದು ಕಾಗದ ಬಂದಿದೆ. ಅವರು ಏನು ಹೇಳ್ತಾರೆಂದರೆ ಪಾಲಿಟಿಷಿಯನ್ ರಾಜಾಜಿ, ಕೋದಂಡರಾಯರು, ಜನರಲ್ ಕಾರಿಯಪ್ಪ ಇವರೆಲ್ಲರೂ ನಿಮ್ಮವರೇ. ನಮ್ಮ ಚಳುವಳಿಗೆ ನೆರವು ಕೊಡದಿದ್ದರೆ ನಿಮ್ಮನ್ನು ನೇಣು ಹಾಕುತ್ತೇವೆ ಎಂದಿದ್ದಾನೆ.

ಇದೇ ರೀತಿ ಮೊನ್ನೆ ಇನ್ನೊಂದು ಪತ್ರ ಬಂದಿದೆ. ಈ ರೀತಿ ಡಿಎಂಕೆ ಪಾರ್ಟಿಯವರು ಕೊಲೆ ಬೆದರಿಕೆ ಹಾಕುತ್ತ ಇದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳೂ ಸಹ ಹೊರಗಿನವರ ಕೈವಾಡ ಇದೆ ಎಂದು ಹೇಳಿದರು. ಆದರೆ ಅವರು ಯಾರು? ಎಲ್ಲಿಂದ ಬಂದಿರತಕ್ಕವರು ಎಂಬುದನ್ನು ವಿವರವಾಗಿ ಸ್ಪಷ್ಟಪಡಿಸಲಿಲ್ಲ. ಅದಕ್ಕೆ ಏನು ಕಾರಣವೋ

ನನಗೆ ಅರ್ಥವಾಗಲಿಲ್ಲ. ವಿದ್ಯಾರ್ಥಿಗಳಿಗೆ ಒಂದು ಆದರ್ಶವಾದ ನಿಲುವು ಕೊಡಿ. ಆದರ್ಶ ಹೇಳಿಕೆ ನೀಡಿ. ವಿದ್ಯಾರ್ಥಿಗಳ ಮನಸ್ಸು ಇಂದು ಕಲುಷಿತವಾಗಿದೆ.

ಶ್ರೀ ಎಸ್.ಎಸ್. ಶೆಟ್ಟರು ರಾಜ್ಯಪಾಲರಿಗೆ ವಂದನೆ ಸಲ್ಲಿಸುವ ತಮ್ಮ ಭಾಷಣದಲ್ಲಿ ರಾಜ್ಯಪಾಲರು ವಿದ್ಯಾರ್ಥಿ ಚಳುವಳಿಗೆ ಸಮಾಜ ಘಾತುಕ ಶಕ್ತಿಗಳು ಕುಮ್ಮಕ್ಕು ಕೊಟ್ಟು ವಿದ್ಯಾರ್ಥಿಗಳ ಶೋಷಣೆ ಮಾಡುತ್ತಿರುವುದರ ಪ್ರಸ್ತಾಪವಿಲ್ಲದಿರುವುದನ್ನು ಕಾಯ್ದೆ ಶಾಂತಿ ಪಾಲನೆಯ ಭರವಸೆ ಹಾಗೂ ಭಾಷಾ ಸಮಸ್ಯೆ ಪರಿಹಾರಗಳನ್ನು ಸೂಚಿಸದಿರುವುದನ್ನು ವಿಶೇಷವಾಗಿ ಪ್ರಸ್ತಾಪಿಸಿ ಟೀಕಿಸಿದರು.

ಪ್ರಜಾಪ್ರಭುತ್ವದಲ್ಲಿ ಎದುರಾಗತಕ್ಕಂತಹ ಸಮಸ್ಯೆಗಳಿಗೆ ಪೋಲೀಸರ ಗೋಲಿಬಾರ್ ಪರಿಹಾರವಾಗಲಾರದೆಂದು ಒತ್ತಿ ಹೇಳುತ್ತ ರಾಜ್ಯಪಾಲರು ಈ ಬಗ್ಗೆಯಾಗಲೀ ಮುನ್ನೆಚ್ಚರಿಕೆಯಿಂದ ಕ್ರಮಗಳನ್ನು ಸರ್ಕಾರ ಕೈಗೊಂಡಿರುವ ಬಗ್ಗೆಯಾಗಲಿ ಪ್ರಸ್ತಾಪಿಸಲಿಲ್ಲ ಎಂದರು.

ಸಮಾಜ ಘಾತುಕ ಶಕ್ತಿಗಳನ್ನು ಎದುರಿಸಿ ದಮನ ಮಾಡುವ ಯೋಜನೆಯೇನೂ ಸರ್ಕಾರದ ಬಳಿ ಇದ್ದಂತಿಲ್ಲ. ನಿರುದ್ಯೋಗ ಸಮಸ್ಯೆ, ಔದ್ಯಮಿಕ ಹಿನ್ನಡೆ ಅಶಾಂತಿ, ಗ್ರಾಮೀಣ ಭಾಗಗಳಲ್ಲಿ ಅಗತ್ಯದ ವೈದ್ಯಕೀಯ ಸೇವೆ, ವಸತಿ ಸಮಸ್ಯೆ, ನೈರ್ಮಲ್ಯ, ಮದ್ಯಪಾನ ನಿರೋಧದ ನಂತರ ಉಂಟಾಗಿರುವ ದುಸ್ಥಿತಿ ಹೆಚ್ಚಿದ ತೆರಿಗೆ ಭಾರ ರಾಜ್ಯಕ್ಕೆ ಕೇಂದ್ರದ ನೆರವು, ಕನ್ನಡ ಭಾಷಿಕ ನೆಲೆಯ ರಾಜ್ಯದ ಪ್ರದೇಶಗಳನ್ನು ಕರ್ನಾಟಕದೊಳಕ್ಕೆ ತರುವ ವಿಚಾರ ಇಂಥದ್ದಾವುದೂ ರಾಜ್ಯಪಾಲರ ಭಾಷಣದಲ್ಲಿಲ್ಲವೆಂದರು.

ಹುಬ್ಬಳ್ಳಿ ಧಾರವಾಡ ನಗರದ ಕಟ್ಟಡದ ತೆರಿಗೆ

ಶ್ರೀ ಎಸ್.ಎಸ್. ಶೆಟ್ಟರ್ : ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಕಟ್ಟಡಗಳ ಭಾಡಿಗೆ ಮೌಲ್ಯ ಆಧರಿಸಿ ತೆರಿಗೆ ವಿಧಿಸುತ್ತಿದೆಯೇ. ರಾಜ್ಯದಲ್ಲಿಯ ಇತರ ಯಾವುದೇ ಮಹಾನಗರ ಪಾಲಿಕೆಯಲ್ಲಿಗಿಂತ ಇಲ್ಲಿಯ ತೆರಿಗೆ ಹೆಚ್ಚಿದೆಯೇ? ಮಹಾನಗರ ಪಾಲಿಕೆಯು ಕೊಳಚೆ ಪ್ರದೇಶಗಳಲ್ಲಿಯ ಸಣ್ಣ ಕಟ್ಟಡಗಳ ಬಾಡಿಗೆ ಮೌಲ್ಯ ಪ್ರಮಾಣವನ್ನು ಹೆಚ್ಚಿಸಲಿದೆಯೇ?

ನಗರಾಡಳಿತ ಮಂತ್ರಿ, ಆರ್.ಎಂ. ಪಾಟೀಲ : ಕಟ್ಟಡದ ರೇಟೆಬಲ್ ವ್ಯಾಲ್ಯೂದ ಶೇ. 14ರಷ್ಟು ಸಾಮಾನ್ಯ ತೆರಿಗೆ, ಶೇ. 4ರಷ್ಟು ನೀರಿನ ದರ, ಶೇ. 7ರಷ್ಟು ನೈರ್ಮಲ್ಯಕರ ಹೀಗೆ ಒಟ್ಟು ಶೇ. 25ರಷ್ಟು ತೆರಿಗೆಯನ್ನು ಆಕರಿಸಲಾಗುತ್ತಿದೆ. ರಾಜ್ಯದಲ್ಲಿಯ ಇನ್ನೊಂದು ಏಕಮೇವ ಮಹಾನಗರ ಪಾಲಿಕೆ ಬೆಂಗಳೂರಿನಲ್ಲಿಯಕ್ಕಿಂತ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ತೆರಿಗೆಗಳು ಹೆಚ್ಚಾಗಿವೆ. ಕೊಳಚೆ ಪ್ರದೇಶಗಳಲ್ಲಿಯ ಸಣ್ಣ ಕಟ್ಟಡಗಳ ಬಾಡಿಗೆ ಮೌಲ್ಯ ಹೆಚ್ಚಿಸಲು ಹು.ಧಾ.ಮಹಾನಗರ ಪಾಲಿಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ.

ಶ್ರೀ ಎಸ್.ಎಸ್. ಶೆಟ್ಟರ : ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು ಕಟ್ಟಡಗಳ ಮೇಲೆ ಅವುಗಳ ಭಾಡಿಗೆ ಮೌಲ್ಯದ ಶೇ. 25ರಷ್ಟು ತೆರಿಗೆ ವಿಧಿಸುತ್ತಿದೆ. ಅದು ರಾಜ್ಯದಲ್ಲಿಯ ಇನ್ನೊಂದು ಮಹಾನಗರ ಪಾಲಿಕೆಯಾಗಿರುವ ಬೆಂಗಳೂರಿನಲ್ಲಿಯಕ್ಕಿಂತಲೂ ಹೆಚ್ಚಿನದಾಗಿದೆಂದು ನೀವೇ ಒಪ್ಪಿಕೊಂಡಿದ್ದು ಈ ತೆರಿಗೆ ಪ್ರಮಾಣ ಕಡಿಮೆಗೊಳಿಸಲು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಸೂಚಿಸುವಿರಾ?

ಶ್ರೀ ಆರ್.ಎಂ.ಪಾಟೀಲ : ಇದು ಅನಗತ್ಯ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿಯ ತೆರಿಗೆ ಆಕರಣೆಯನ್ನು ನಾವು ಈಗಾಗಲೇ ಒಪ್ಪಿಕೊಂಡಿದ್ದೇವೆ.

ಶ್ರೀ ಎಸ್.ಎಸ್. ಶೆಟ್ಟರ್ : ರಾಜ್ಯದಲ್ಲಿಯ ಮಹಾನಗರ ಪಾಲಿಕೆಗಳಿಗೆ ಏಕರೂಪ ಕಾಯ್ದೆ ಜಾರಿಗೆ ತರಲು ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತಿದೆಯೇ?

ಶ್ರೀ ಆರ್.ಎಂ. ಪಾಟೀಲ : ಏಕ ರೂಪ ಮಹಾನಗರ ಪಾಲಿಕೆ ಕಾಯ್ದೆ ಮಾಡಲು ಸರ್ಕಾರ ಉದ್ದೇಶಿಸಿದೆ. ಆದರೆ ಅದಕ್ಕೆ ಸಮಯ ಹಿಡಿಯುತ್ತದೆ. ಕನಿಷ್ಟ ಎರಡು ವರ್ಷಗಳಾದರೂ ಬೇಕು.

ಶ್ರೀ ಎಂ.ಎಸ್.ಕೃಷ್ಣನ್ : ಹುಬ್ಬಳ್ಳಿ-ಧಾರವಾಡ ಕಾರ್ಪೋರೇಶನ್‌ನಲ್ಲಿ ಹಾಕಿರುವ ತೆರಿಗೆಗಳು ಬೆಂಗಳೂರು ಕಾರ್ಪೋರೇಶನ್‌ಕ್ಕಿಂತ ಬಹಳ ಹೆಚ್ಚಾಗಿವೆ. ಆಂದರೆ ಅಲ್ಲಿಯ ಜನರು ಜೀವನ ನಡೆಸುವುದೇ ಬಹಳ ಕಷ್ಟವಾಗಿರುವಂತೆ ಕಾಣುತ್ತದೆ. ಇದನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ಏನಾದರೂ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವದು ಸರಿಯಲ್ಲವೇ?

ಶ್ರೀ ಆರ್.ಎಂ. ಪಾಟೀಲ : ತೆರಿಗೆ ಇದು ಸಾಮಾನ್ಯವಾಗಿ ಅನೇಕ ಅಂಶಗಳನ್ನೇ ಆಧರಿಸಿರುತ್ತದೆ. ಬೆಂಗಳೂರುಮಹಾನಗರ ಪಾಲಿಕೆಗಿಂತ ಹೆಚ್ಚಿಗೆಯೆನೋ ಇರುವುದಾದರೂ ಬೆಂಗಳೂರಿನಲ್ಲಿಯ ತೆರಿಗೆ ಸೂಕ್ತವಾದ ಮಟ್ಟದ್ದೆಂದೆನೂ ಹೇಳಲಿಕ್ಕಾಗದು. ಹಲವಾರು ಅಂಶಗಳನ್ನು ಇದು ಆಧರಿಸಿರುತ್ತದೆ.ಮಹಾನಗರ ಪಾಲಿಕೆ ಹೊಂದಿರುವ ಸಿಬ್ಬಂದಿಯ ಪ್ರಮಾಣ ಹಾಗೂ ಕೈಗೊಳ್ಳಲಾದ ವಿಕಾಸ ಕಾರ್ಯಕ್ರಮಗಳ ಮೇಲೆ ತೆರಿಗೆ ಅವಲಂಬಿಸಿರುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್ : ಹುಬ್ಬಳ್ಳಿ-ಧಾರವಾಡಗಳಲ್ಲಿಯ ಜನತೆಯ ಜೀವನ ಮಟ್ಟವು ಇತರೆಡೆಗಳಲ್ಲಿಯಕ್ಕಿಂತ ಕಮ್ಮಿಯದೆಂದು ನೀವು ಒಪ್ಪುವಿರಾ? ಹೀಗಿದ್ದೂ ಶೇ. 25 ರಷ್ಟು ಏಕೆ ತೆರಿಗೆ ವಿಧಿಸಲಾಗುತ್ತಿದೆ?

ಶ್ರೀ ಆರ್.ಎಂ.ಪಾಟೀಲ : ತೆರಿಗೆ ವಿಧಿಸುವದಕ್ಕೆ ಜನತೆಯ ಜೀವನ ಮಟ್ಟವೂ ಒಂದು ಆಧಾರಭೂತ ಅಂಶವಷ್ಟೇ. ಆದರೆ ಬೆಂಗಳೂರಿನಲ್ಲಿಯ ಜನರ ಜೀವನ ಮಟ್ಟ ಹುಬ್ಬಳ್ಳಿ-ಧಾರವಾಡಗಳಲ್ಲಿಯವರಕ್ಕಿಂತ ಹೆಚ್ಚೆಂದು ಇದರ ಅರ್ಥವಲ್ಲ.

ಶ್ರೀ ಎಸ್.ಆರ್.ಬೊಮ್ಮಾಯಿ : ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯವರು ವಿಧಿಸಲಾಗುತ್ತಿರುವ ತೆರಿಗೆಯೂ ಇಡೀ ದೇಶದಲ್ಲಿಯೇ ಹೆಚ್ಚು ಇದೆ ಎಂಬುದಾಗಿ ಎಷ್ಟು ದೂರುಗಳು ಸರ್ಕಾರಕ್ಕೆ ಬಂದಿವೆ? ಬಂದಿದ್ದರೆ ಆ ಬಗ್ಗೆ ಯಾವ ಕ್ರಮ ತೆಗೆದುಕೊಂಡಿರುವಿರಿ?

ಶ್ರೀ ಆರ್.ಎಂ. ಪಾಟೀಲ : ಸಾಮಾನ್ಯವಾಗಿ ಇತರೆಡೆಗಿಂತ ಮುಂಬೈ-ಕರ್ನಾಟಕದ ನಗರ ಪಾಲಿಕೆಗಳಲ್ಲಿ ಅಂದಾಜಿಸುವ ರೇಟೆಬಲ್ ವ್ಯಾಲ್ಯೂ ಹೆಚ್ಚಿಗೆ ಇರುತ್ತದೆ. ಇದರರ್ಥ ಅದು ಹೆಚ್ಚಿನ ಪ್ರಮಾಣದ್ದು ಎಂದೇನೂ ಅಲ್ಲ. ವೆಚ್ಚ ಆದಾಯ, ಖರ್ಚುಗಳನ್ನು ಸರಿದೂಗಿಸಿಕೊಂಡು ಹೋಗಬೇಕಾಗಿರುತ್ತದೆ. ಆಯಾ ನಗರಗಳಲ್ಲಿಯ ಸಾರ್ವತ್ರಿಕ ಹಿತಾಸಕ್ತಿ ಕೆಲಸಗಳನ್ನು ನಿರ್ವಹಿಸಲು ತಕ್ಕುವ ವೆಚ್ಚಕ್ಕಾಗಿ ಅಷ್ಟು ಆದಾಯವನ್ನು ಕ್ರೋಢೀಕರಿಸಲೇಬೇಕಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ : ದೇಶದಲ್ಲೇ ಎಲ್ಲೆಡೆಗಿಂತ ಹುಬ್ಬಳ್ಳಿ-ಧಾರವಾಡಗಳಲ್ಲಿ ಹೆಚ್ಚಿನದ್ದಾಗಿದೆ. ಹುಬ್ಬಳ್ಳಿ-ಧಾರವಾಡದಲ್ಲಿಯದೇ ಅತೀ ಹೆಚ್ಚಿನದೆಂದೇನೂ ಹೇಳಲಿಕ್ಕಾಗದು. ಆದರೆ ಅತಿ ಹೆಚ್ಚು ತೆರಿಗೆ ಆಕರಿಸುವುದರಲ್ಲಿ ಹುಬ್ಬಳ್ಳಿ-ಧಾರವಾಡವೂ ಒಂದು ಎಂದಷ್ಟೇ ಹೇಳಬಹುದು. ಅತೀ ಹೆಚ್ಚು ತೆರಿಗೆ ಭಾರದ ಬೇರೆ ನಗರಗಳೂ ಉಂಟು. ಅಲ್ಲಿ ಇಲ್ಲಿಯಕ್ಕಿಂತ ಹೆಚ್ಚು ತೆರಿಗೆ ವಸೂಲು ಮಾಡಲಾಗುತ್ತದೆ. ಶೇ. 25ಕ್ಕಿಂತ ಹೆಚ್ಚು ತೆರಿಗೆ ವಿಧಿಸುವ ಸ್ಥಳಗಳನ್ನು ತಿಳಿಸುತ್ತೀರಾ?

ಶ್ರೀ ಆರ್.ಎಂ.ಪಾಟೀಲ : ಅಹಮ್ಮದಾಬಾದ್-ಹೈದ್ರಾಬಾದಗಳವರೆಂದು ಹೇಳಬಹುದು. ಅಲ್ಲಿ ಹೆಚ್ಚು ತೆರಿಗೆ ಇದೆಯಂತೆ. ಆದರೆ ನನ್ನ ಬಳಿ ವಿವರಗಳಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ, ಮೈಸೂರು ರಾಜ್ಯದಲ್ಲಿ ಅತಿ ಹೆಚ್ಚಿನ ತೆರಿಗೆ ಭಾರದ ನಗರಯಾವುದು?

ಶ್ರೀ ಆರ್.ಎಂ. ಪಾಟೀಲ : ಬೆಳಗಾವಿಯಲ್ಲಿ ಅತಿ ಹೆಚ್ಚೆಂದು ನನ್ನ ನಂಬುಗೆ.

ಶ್ರೀ ಎಸ್.ಎಸ್.ಶೆಟ್ಟರ : ಪ್ರತಿ ನಾಲ್ಕು ವರ್ಷಕ್ಕೆ ಒಂದುಸಾರಿ ಬಾಡಿಗೆ ಮೌಲ್ಯವನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯವರು ಹೆಚ್ಚು ಮಾಡುತ್ತ ನಡೆದಿದ್ದಾರೆ. ಸರ್ಕಾರದ ಗಮನಕ್ಕೆ ಈ ವಿಚಾರ ಬಂದಿದೆಯೇ?

ಶ್ರೀ ಆರ್.ಎಂ. ಪಾಟೀಲ : ಮನೆಗಳ ಸಂಖ್ಯೆ ಕಮ್ಮಿ, ನಗರಕ್ಕೆ ಬಂದು ರಹವಾಸಿಗಳಾಗುವವರ ಸಂಖ್ಯೆ ಹೆಚ್ಚು ಈ ಕಾರಣದಿಂದಾಗಿ ಬಾಡಿಗೆಗಳು ಹೆಚ್ಚುತ್ತವೆ. ಹುಬ್ಬಳ್ಳಿ-ಧಾರವಾಡಗಳಲ್ಲಿ ಅಷ್ಟೇ ಅಲ್ಲ ಇತರೆಡೆಗಳಲ್ಲೂ ಹೀಗೆಯೇ ಇದೆ. ನಾಲ್ಕು ವರ್ಷಗಳಿಗೊಮ್ಮೆ ಬಾಡಿಗೆ ಪ್ರಮಾಣ ಏರುತ್ತ ನಡೆದಂತೆಯೇ ತೆರಿಗೆ ಸಹ ಪುನರ್ ವಿಮರ್ಶೆಯಲ್ಲಿ ಹೆಚ್ಚುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್ : ತಾವು ಉತ್ತರ ಕೊಡುತ್ತ ಜನಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಬಾಡಿಗೆಯೂ ಸಹ ಜಾಸ್ತಿಯಾಗುತ್ತದೆಂದು ಹೇಳಿದಿರಿ. ಈಗ ವಿಧಿಸುತ್ತಿರುವ ಭಾಡಿಗೆ ಬಹಳ ಜಾಸ್ತಿ ಎಂದು ತಮಗೆ ತಿಳಿದಿಲ್ಲವೇ? ಆ ರೀತಿ ತಿಳಿದಿದ್ದರೆ ಬಾಡಿಗೆಯನ್ನು ಕಡಿಮೆ ಮಾಡಲು ಏನಾದರೂ ಕಾರ್ಯಕ್ರಮವನ್ನು ಕೈಗೊಳ್ಳುತ್ತಿದ್ದೀರಾ?

ಶ್ರೀ ಆರ್.ಎಂ. ಪಾಟೀಲ : ಬಾಡಿಗೆ ಹೆಚ್ಚು ಮಾಡಿದ್ದಾರೆಂದು ಜನರಿಂದ ದೂರುಗಳು ಬರುವ ಅವಶ್ಯಕತೆಯೇ ಇಲ್ಲ. ಕಾನೂನು ಪ್ರಕಾರ ಬಾಡಿಗೆಯನ್ನು ಹೆಚ್ಚು ಮಾಡಿದ್ದಾರೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಬಗ್ಗೆಯಾಗಲಿ, ಇಲ್ಲವೇ ಎಡ್ಮಿನಿಸ್ಟ್ರೇಶನ್ ಒಳಗಾಗಲಿ ಅವರು ಮಾಡತಕ್ಕಂತಹ ಸಣ್ಣ ಪುಟ್ಟ ಕೆಲಸ ಕಾರ್ಯಗಳಲ್ಲಿ ಸರ್ಕಾರದವರು ಕೈ ಹಾಕಲಿಕ್ಕೆ ಬರುವುದಿಲ್ಲ.

ಶ್ರೀ ಎಸ್.ಎಸ್. ಆರಕೇರಿ : ಹುಬ್ಬಳ್ಳಿ ಮತ್ತು ಧಾರವಾಡ ಪ್ರದೇಶಗಳು ಬೆಳಗಾವಿ, ಬೆಂಗಳೂರು ಪಟ್ಟಣಗಳಿಗೆ ಹೋಲಿಸಿದರೆ ಬಹಳ ಹಿಂದುಳಿದಿವೆ. ಔದ್ಯೋಗಿಕ ವಿಚಾರದಲ್ಲಿಯೂ ಹಿಂದುಳಿದಿವೆ. ನೀವು ಹೆಚ್ಚಿನ ತೆರಿಗೆ ಹಾಕುವುದರಿಂದ ಅಲ್ಲಿಯ ನಾಗರಿಕರಿಗೆ ಹೆಚ್ಚಿನ ಭಾರವಾಗುವುದಿಲ್ಲವೇ? ಈಬಗ್ಗೆ ಸರ್ಕಾರದವರು ತೆರಿಗೆ ಭಾರ ಕಡಿಮೆ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಆರ್.ಎಂ. ಪಾಟೀಲ : ಈ ಪ್ರಶ್ನೆ ಸರಿಯಾದ ಗ್ರಹಿಕೆ ಮೇಲೆ ರಚನೆಯಾದುದಲ್ಲ. ಧಾರವಾಡ ಜಿಲ್ಲೆ ಬಹಳ ಹಿಂದುಳಿದಿದೆ ಎಂಬುದನ್ನು ನಾನು ಒಪ್ಪುವುದಿಲ್ಲ. ಒಪ್ಪುವದು ಗೌರವವೂ ಅಲ್ಲ. ಮಾನ್ಯ ಸದಸ್ಯರು ಧಾರವಾಡ ಜಿಲ್ಲೆಯ ಬಗ್ಗೆ ತಪ್ಪು ತಿಳಿದುಕೊಂಡು ಪ್ರಶ್ನೆ ಕೇಳುವುದು ಸರಿಯಲ್ಲ. ಬರೀ ಕೈಗಾರಿಕೆಗಳಿಂದ ಒಂದು ನಾಡು, ಒಂದು ಪ್ರದೇಶ ಸುಧಾರಿಸುತ್ತದೆ ಎಂದು ಹೇಳುವದಕ್ಕಾಗುವುದಿಲ್ಲ. ಒಂದು ರಾಜ್ಯದ ಪ್ರಗತಿಯು ಆ ಪ್ರದೇಶದ ಜನರ ಇರುವಿಕೆ ಮೇಲೆ ಮತ್ತು ಸಂಸ್ಕೃತಿಯ ಮೇಲೆ ಅವಲಂಬಿಸಿರುತ್ತದೆ. ಧಾರವಾಡ ಜಿಲ್ಲೆಯ ಜನ ಶಿಸ್ತಿನಿಂದ ಕೂಡಿದವರು. ಇತರ ಜಿಲ್ಲೆಗಳಿಗೆ ಹೋಲಿಸಿದರೆ ಧಾರವಾಡ ಜಿಲ್ಲೆ ಯಾವ ರೀತಿಯೂ ಕಡಿಮೆಯದಿಲ್ಲ.

ಶ್ರೀ ಎಸ್.ಎಸ್. ಶೆಟ್ಟರ : ಮೈಸೂರು ಬಾಡಿಗೆ ನಿಯಂತ್ರಣ ಕಾಯ್ದೆ ರೀತ್ಯಾ ಯಾವುದೇ ಕಟ್ಟಡದ ಬಾಡಿಗೆಗಳನ್ನು ಏರಿಸಲು ಸಾಧ್ಯವಿಲ್ಲ. ಹೀಗಿದ್ದರೂ ತೆರಿಗೆಗಳನ್ನು ಹೆಚ್ಚಿಸುವ ಉದ್ದೇಶಕ್ಕಾಗಿ ರೇಟೆಬಲ್ ವ್ಯಾಲ್ಯೂವನ್ನು ಯಾಕೆ ಹೆಚ್ಚಿಗೆ ಮಾಡಿ ಅಂದಾಜಿಸಲಾಗುತ್ತಿದೆ.?

ಶ್ರೀ ಆರ್.ಎಂ. ಪಾಟೀಲ : ತೆರಿಗೆಗಳನ್ನು ಸಂದಾಯ ಮಾಡುವುದು ಜನರ ಸಾಮಾನ್ಯವಾದ ಸ್ವಭಾವ. ಹಳೆಯ ಮುಂಬೈ - ಕರ್ನಾಟಕ ಪ್ರದೇಶದಲ್ಲಿಯ ಧಾರವಾಡ, ಹುಬ್ಬಳ್ಳಿ, ಗದಗ, ಬೆಳಗಾವಿ ಮೊದಲಾದ ನಗರಗಳ ನಾಗರಿಕರು ಕ್ರಮ ಬದ್ಧವಾಗಿ ವೇಳೆಗೆ ಸರಿಯಾಗಿ ತೆರಿಗೆ ಸಂದಾಯ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡವರಾಗಿರುತ್ತಾರೆ. ಹೀಗಾಗಿ ಇಂಥಲ್ಲಿ ತೆರಿಗೆ ವಸೂಲಿ ತೊಂದರೆಯಿಲ್ಲ. ಈ ಭಾಗಗಳಲ್ಲಿ ವಿಕಾಸ ಯೋಜನೆಗಳನ್ನು ಕೈಗೊಳ್ಳುವುದಾದರೆ ತೆರಿಗೆ ಹೆಚ್ಚಿಸಿದರೂ ಜನರು ಕೊಡಲು ಹಿಂದೇಟು ಹಾಕುವವರಲ್ಲ.

ಶ್ರೀ ಸಿ.ಕೆ. ರಾಜಯ್ಯಶೆಟ್ಟಿ : ಶೇ. 25ರಂತೆ ತೆರಿಗೆ ಏರಿಸಿರುವುದರಿಂದ ಮನೆಗಳನ್ನು ಕಟ್ಟುವವರು ಮುಂದೆ ಬಾರದೆ ಮನೆಗಳ ಅಭಾವ ಉಂಟಾಗಿ ತೆರಿಗೆ ಕೂಡ ಸರಿಯಾಗಿ ವಸೂಲಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್.ಎಂ. ಪಾಟೀಲ : ನೂರಕ್ಕೆ ನೂರರಷ್ಟು ತೆರಿಗೆ ವಸೂಲಾಗ್ತಾ ಇದೆ. ತೆರಿಗೆ ಕೊಡುವುದು ತಮ್ಮ ಜವಾಬ್ದಾರಿ ಹಾಗೂ ಕರ್ತವ್ಯ ಎಂದು ಭಾವಿಸಿಕೊಂಡಿರುವ ಜನರಿರುವ ಭಾಗದ ಬಗ್ಗೆ ಮಾಹಿತಿ ಗೊತ್ತಿಲ್ಲದವರು ಪ್ರಶ್ನೆ ಕೇಳುವುದು ಸರಿಯಲ್ಲ.

ಶ್ರೀ ಬಿ.ಪಿ.ಗಂಗಾಧರ : ಶೇ. 25 ಪ್ರಮಾಣದ ತೆರಿಗೆ ಮಾನವೀಯವೆನ್ನುವಿರಾ?

ಶ್ರೀ ಆರ್.ಎಂ. ಪಾಟೀಲ ; ಮಾನವೀಯವಷ್ಟೇ ಅಲ್ಲ, ಸುಸಂಸ್ಕೃತವೂ ಆಗಿದೆ.

ಶ್ರೀ ಎಲ್. ಶ್ರೀಕಂಠಯ್ಯ : ಸ್ವಾಮಿ, ಈ ಮಹಾನಗರ ಪಾಲಿಕೆಯವರು ನೀರಿನ ತೆರಿಗೆ ಶೇ. 4, ನೈರ್ಮಲ್ಯ ತೆರಿಗೆ ಶೇ. 7 ವಸೂಲು ಮಾಡಿದ ಮೇಲೆ ಇಲ್ಲಿಯ ಜನರಿಗೆ 24 ಗಂಟೆ ಸ್ವಚ್ಛ ನೀರು ಒದಗಿಸುವುದು ಮತ್ತು ಅಂಡರ್‌ಗ್ರೌಂಡ್ ಡ್ರೈನೇಜ್ ಸಿಸ್ಟಮ್ ಒದಗಿಸುವುದಕ್ಕೆ ಆ ಬಾಕಿ ವಸೂಲು ಮಾಡಿ ಅದರಿಂದ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೇ?

ಶ್ರೀ ಆರ್.ಎಂ. ಪಾಟೀಲ : ನಾಲ್ಕು ಪರ್ಸೆಂಟ್ ಹಾಕಿರುವರಾದರೂ ಅದು ಇನ್ನೂ ಸೆಲ್ಫ್ ಸಫಿಶಿಯೆಂಟ್ ಆಗಿ ವರ್ಕ ಆಗುತ್ತಿಲ್ಲ. ಆದುದರಿಂದ ಇನ್ನೂ ಅದನ್ನು ಹೆಚ್ಚು ಮಾಡುವ ವಿಚಾರವಿದೆ. ಯಾವುದಾದರೂ ಒಂದು ಸೌಕರ್ಯ ಪಡೆಯಬೇಕಾದರೆ ಅದಕ್ಕೆ ಯಾವ ರೀತಿಯಿಂದಾದರೂ ಹಣವನ್ನು ಟ್ಯಾಕ್ಸ್ ರೂಪದಿಂದ ಒದಗಿಸಿದರೆ ಸ್ವಲ್ಪ ಖರ್ಚಿನಲ್ಲಿ ಅದನ್ನು ಮಾಡಲು ಸಾಧ್ಯವಾಗುತ್ತದೆ. ಸೌಕರ್ಯವನ್ನೂ ಕೊಡಿ, ಹಣವನ್ನು ನೀವೇ ಕೊಡಿ ಎಂದು ಹೇಳಿ ಯಾವ ಖರ್ಚನ್ನೂ ಕೊಡದೇ ಇದ್ದರೆ ಅದನ್ನು ಯಾವ ಆಡಳಿತವೂ ಒಪ್ಪುವುದಿಲ್ಲ. ಇದನ್ನು ತಾವು ತಿಳಿಯಬೇಕು.

ಶ್ರೀ ಎಸ್.ಎಸ್. ಶೆಟ್ಟರ್ : ಶೇ. 25 ನೀರಿನ ತೆರಿಗೆಯಷ್ಟೇ ಅಲ್ಲದೇ ಪ್ರತಿಯೊಂದು ನಳಕ್ಕೆ ಪ್ರತಿಸಾವಿರ ಗ್ಯಾಲನ್‌ನಿಗೆ 75 ಪೈಸೆಯಂತೆ ಮತ್ತೆ ಬೇರೆ ಶುಲ್ಕ ವಸೂಲು ಮಾಡುತ್ತಿರುವುದು ನಿಜವಲ್ಲವೇ?

ಶ್ರೀ ಆರ್.ಎಂ. ಪಾಟೀಲ : ಪ್ರತಿಯೊಂದು ಮನೆಯವರು ಪಡೆಯುತ್ತಿರುವ ಹೆಚ್ಚಿನ ಸೌಲಭ್ಯವಿದು. ವಿಶೇಷ ಸೇವೆಯೆಂದು ಈ ಸೇವಾ ಶುಲ್ಕ ವಸೂಲು ಮಾಡಲಾಗುತ್ತಿದೆ.

ಶ್ರೀ ಎಚ್. ಸಿದ್ದವೀರಪ್ಪ: ರೇಟಬಲ್ ವ್ಯಾಲ್ಯೂ ಅಂದರೆ ಬಾಡಿಗೆ ಮೌಲ್ಯ ತಾನೇ?

ಶ್ರೀ ಆರ್.ಎಂ. ಪಾಟೀಲ : ಎರಡೂ ಒಂದೇ.

ಶ್ರೀ ಎಸ್.ಎಸ್. ಶೆಟ್ಟರ್ : ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಚುನಾವಣೆ ನಡೆಸುವುದನ್ನು ಕುರಿತು ಆಯುಕ್ತರು ರಾಜ್ಯ ಸರ್ಕಾರಕ್ಕೆ ಬರೆದಿರುವರೋ? ಚುನಾವಣೆ ನಡೆಸಲು ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ? ಕ್ರಮ ತೆಗೆದುಕೊಂಡಿರುವುದಾದರೆ ಚುನಾವಣೆ ವೇಳಾಪಟ್ಟಿ ಇದೆಯೇ? ಚುನಾವಣೆ ನಡೆಸುತ್ತಿಲ್ಲವಾದರೆ ಕಾರಣಗಳೇನು?

ಶ್ರೀ ಆರ್.ಎಂ. ಪಾಟೀಲ : ಆಯುಕ್ತರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಆದರೆ ಅವರೇನೂ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ಈಗ ಚುನಾವಣೆ ವೇಳಾಪಟ್ಟಿಯನ್ನು ಸಿದ್ಧಪಡಿಸಿಲ್ಲ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಅಧಿಕಾರಾವಧಿಯನ್ನು ಮೈಸೂರು ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡಿಕೆ ಹಾಗೂ ಆಡಳಿತಾಧಿಕಾರಿಗಳ ಮುಂದುವರಿಕೆ ರದ್ದತಿ ಕಾಯ್ದೆ 1967ರ 3ನೇ ಕಲಂನಡಿ ಫೆಬ್ರುವರಿ 1968ರಂದು ಸರ್ಕಾರ ಹೊರಡಿಸಿದ ನೋಟಿಫಿಕೇಶನ್ ಮೇರೆಗೆ 31 ಮೇ, 1968ಕ್ಕೆ ಕೊನೆಗೊಳ್ಳಲಿದೆ. ಚುನಾವಣೆ ನಡೆಸುವುದಕ್ಕೆ ಆಯುಕ್ತರು ಅಗತ್ಯದ ಕ್ರಮಗಳನ್ನು ಕೈಗೊಳ್ಳಲಿದ್ದಾರೆ.

ಶ್ರೀ ಎಸ್.ಎಸ್. ಶೆಟ್ಟರ್ : ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಚುನಾವಣೆ ಕಾರ್ಯಕ್ರಮಗಳೇನಾದರೂ ತಮ್ಮ ಗಮನಕ್ಕೆ ಬಂದಿವೆಯೇ?

ಶ್ರೀ ಆರ್.ಎಂ. ಪಾಟೀಲ : 1968 ಫೆಬ್ರುವರಿ 24ರ ಸ್ಥಳೀಯ ದಿನಪತ್ರಿಕೆಯಲ್ಲಿ ಚುನಾವಣೆ ವೇಳಾಪತ್ರಿಕೆ ಪ್ರಕಟವಾಗಿದೆ.

ಶ್ರೀ ಎಸ್.ಎಸ್. ಶೆಟ್ಟರ್ : ಯಾವ ದಿವಸ ಇದು. ತಮ್ಮ ಗಮನಕ್ಕೆ ಬಂದದ್ದು.

ಶ್ರೀ ಆರ್.ಎಂ. ಪಾಟೀಲ : ಈ ಪೇಪರ್ ಓದಿದ ದಿವಸ ಅಂದರೆ ಇದೇ ತಿಂಗಳು ದಿ. 25. ನನ್ನ ಗಮನಕ್ಕೆ ಇದು ಬಂದಿದೆ. ನಾವು ಉತ್ತರ ಕೊಟ್ಟದ್ದು 22ನೇ ತಾರೀಖು. ನೀವು ಪ್ರಶ್ನೆ ಕೇಳಿದ್ದು ದಿ. 14ರಂದು. ಅದಕ್ಕಾಗಿಯೇ ನಾನು ಚುನಾವಣೆ ವೇಳಾಪತ್ರಿಕೆ ಇಲ್ಲವೆಂದು ಅಂದು ಉತ್ತರ ಕಳುಹಿಸಿದ್ದೇ.

ಶ್ರೀ ಎಸ್.ಎಸ್. ಶೆಟ್ಟರ್ : ಪೇಪರ್‌ನಲ್ಲಿ ಬಂದದ್ದು ಶುದ್ಧ ಅಧಿಕೃತ ಕಾರ್ಯಕ್ರಮವೋ ಹೇಗೆ?

ಶ್ರೀ ಆರ್.ಎಂ. ಪಾಟೀಲ : ಸ್ವಾಭಾವಿಕವಾಗಿ ಒಂದು ದೊಡ್ಡ ಸಂಸ್ಥೆಯ ಕಾರ್ಯಕ್ರಮ ಬಂದಿರುವಾಗ ಅದನ್ನು ನಿಜವೆಂದೇ ಭಾವಿಸಬಹುದು.

ಶ್ರೀ ಎಸ್.ಎಸ್. ಶೆಟ್ಟರ್ : ಚುನಾವಣೆ ನಿರ್ವಹಣಾಧಿಕಾರಿ ಕೊಟ್ಟಂಥದ್ದು ಅಧಿಕೃತ ಪ್ರಕಟಣೆಯೇ? ಅಥವಾ ಸ್ವಂತ ಪ್ರಕಟಣೆಯೇ?

ಶ್ರೀ ಆರ್.ಎಂ. ಪಾಟೀಲ : ಪೇಪರ್‌ನಲ್ಲಿ ಎರಡೂ ಇಲ್ಲ. ಅಧಿಕೃತವಾಗಿಯೂ ಇಲ್ಲ. ಕಮೀಷ್ನರ್ ಕೊಟ್ಟಂತೆಯೂ ಇಲ್ಲ. ಪೇಪರ್‌ನಲ್ಲಿ ಬಂದಿದೆ. ನೀವು ಅಲ್ಲಿಯ ಊರಿನವರು ಹೀಗೆ ತಿಳಿದುಕೊಳ್ಳುವದು ಸ್ವಾಭಾವಿಕ.

ಶ್ರೀ ಎಚ್. ಸಿದ್ದವೀರಪ್ಪ: ಮಾನ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಡುತ್ತಿರುವದನ್ನು ನೋಡಿದರೆ ಒಂದು ರೀತಿ ಹಾರಿಕೆಯ ಜವಾಬಿನಂತಿದೆ. ಇಲೆಕ್ಷನ್ ಮಾಡುತ್ತೀರಾ? ಇಲ್ಲವೇ ಎಂಬ ಪ್ರಶ್ನೆ ಇದೆ. ಪತ್ರಿಕೆಗಳನ್ನೇಕೆ ಇಲ್ಲಿ ಎಳೆಯುತ್ತಿರಿ. ಸ್ಪಷ್ಟ ಉತ್ತರ ಏಕೆ ಹೇಳಬಾರದು?

ಶ್ರೀ ಆರ್.ಎಂ.ಪಾಟೀಲ : ಸರ್ಕಾರದವರು ಉತ್ತರದಲ್ಲೇ ಹೇಳಿದಂತೆ ದಿ. 1-5-1968ರೊಳಗಾಗಿ ಚುನಾವಣೆ ಮಾಡಲೇಬೇಕು ಎಂದು ತಿಳಿಸಲಾಗಿದೆ.

ಶ್ರೀ ಎಸ್.ಎಸ್. ಶೆಟ್ಟರ್ : ಬೆಂಗಳೂರಿನಲ್ಲಿ ದಿ. 22 ಜನೇವರಿ 1968 ಹಾಗೂ ದಿ. 23 ಜನೇವರಿ 1968 ಎರಡೂ ದಿನ ನಡೆದ ಪೊಲೀಸರ ಗೋಲಿಬಾರ್‌ನಲ್ಲಿ ಕೊಲಲ್ಪಟ್ಟವರ ಮೇಲೆ ಆದಂಥ ಗಾಯಗಳನ್ನು ಗಮನಿಸಿದಾಗ ಅವರನ್ನು ಕೊಲ್ಲುವುದೇ ಪೊಲೀಸರ ಉದ್ದೇಶವಿತ್ತೆಂಬುದು ಸ್ಪಷ್ಟವಾಗುತ್ತದೆಯೇ? ಗೋಲಿಬಾರ್‌ಗೆ ಮೊದಲು ಮುನ್ನೆಚ್ಚರಿಕೆ ನೀಡಲಾಗಿತ್ತೇ? ಗೋಲಿಬಾರ್‌ಗೆ ಮೊದಲು ಲಾಠಿ ಪ್ರಹಾರ ನಡೆಸಲಾಗಿತ್ತೇ?

ಶ್ರೀ ಆರ್.ಎಂ. ಪಾಟೀಲ : ಜನೇವರಿ 22ರಂದು ಗೋಲಿಬಾರ್‌ನಿಂದ ಯಾರೂ ಸತ್ತಿಲ್ಲ. ದಿ. 23ರ ಗೋಲಿಬಾರ್‌ನಲ್ಲಿ ಸತ್ತಿದ್ದಾರೆ. ಆದರೆ ಅವರನ್ನು ಕೊಲ್ಲುವ ಉದ್ದೇಶ ಪೊಲೀಸರಿಗೆ ಇರಲಿಲ್ಲ. ಗೋಲಿಬಾರ್‌ಗೆ ಮೊದಲು ಮುನ್ನೆಚ್ಚರಿಕೆಗಳನ್ನು ಘೋಷಿಸಲಾಗಿತ್ತು. ಮೊದಲಿಗ ಲಾಠಿ ಪ್ರಹಾರ ನಡೆಯಿತು.

ಶ್ರೀ ಎಸ್.ಎಸ್. ಶೆಟ್ಟರ್ : ಜನೇವರಿ 23ರಂದು ಅಶ್ರುವಾಯು, ಲಾಠಿ ಪ್ರಹಾರ ಹಾಗೂ ನಂತರದ ಗೋಲಿಬಾರ್ ಇವುಗಳ ನಡುವಿನ ಸಮಯದ ಅಂತರ ತಿಳಿಸುವಿರಾ?

ಶ್ರೀ ಆರ್.ಎಂ. ಪಾಟೀಲ : ಜನೇವರಿ 23ರಂದು ಪೊಲೀಸರು ಅನಿಯಂತ್ರಿತ ಜನಜಂಗುಳಿಯನ್ನು ಚದುರಿಸಲು ಬೆಂಗಳೂರಿನಲ್ಲಿ ಬೇರೆ ಬೇರೆ ಮೂರು ಕಡೆಗಳಲ್ಲಿ ಗೋಲಿಬಾರ್ ಮಾಡಿದ್ದಾರೆ. ನರಸಿಂಹರಾಜ ರಸ್ತೆಯಲ್ಲಿ ಮಧ್ಯಾಹ್ನ 12ಕ್ಕೆ ಜನಜಂಗುಳಿಯನ್ನು ಚದುರಿಸಲು ಲಾಠಿ ಪ್ರಹಾರ ಹಾಗೂ ಅಶ್ರುವಾಯು ಸಿಡಿತ ಪರಿಣಾಮಕಾರಿಯಾಗದೇ ಹೋದಾಗ ಆರು ಬಾರಿ ಗೋಲಿಬಾರ್ ಮಾಡಬೇಕಾಯಿತು. ಅದರಲ್ಲಿ ಇಬ್ಬರು ಸತ್ತು ಅನೇಕರು ಗಾಯಗೊಂಡರು.ನಂತರ ಮಧ್ಯಾಹ್ನ 3ರಿಂದ 3-30 ಈ ಅವಧಿಯಲ್ಲಿ ಅವೇನ್ಯೂ ರೋಡ್‌ನಲ್ಲಿ ಐದು ಸುತ್ತು ಗೋಲಿಬಾರ್ ಆಯ್ತು. ಚಿಕ್ಕಪೇಟೆ ಪರಿಸರದ ಬಿ.ವಿ.ಕೃಷ್ಣ ಅಯ್ಯಂಗಾರ ರಸ್ತೆಯಲ್ಲಿ ನಡೆದ ಗೋಲಿಬಾರ್‌ಗಳಲ್ಲಿ ಇಬ್ಬರು ಹಾಗೂ ಓರ್ವ ಮಹಿಳೆ ಇತರ ಅನೇಕರಿಗೆ ಗಾಯಗಳಾಗಿವೆ.

ಶ್ರೀ ಎಸ್.ಎಸ್. ಶೆಟ್ಟರ್ : ಗೋಲಿಬಾರ್ ಮಾಡುವುದಕ್ಕೆ ಮ್ಯಾಜಿಸ್ಟ್ರೇಟ್‌ರಿಂದ ಅನುಮತಿ ಪಡೆಯಲಾಗಿತ್ತೆ?

ಶ್ರೀ ಆರ್.ಎಂ. ಪಾಟೀಲ : ಹಿಂಸಾಚಾರದ ಘಟನೆಗಳು ನಡೆಯುತ್ತಿದ್ದಾಗ ಮ್ಯಾಜಿಸ್ಟ್ರೇಟ್‌ರ ಪೂರ್ವಾನುಮತಿ ಪಡೆಯುವದು ಅಗತ್ಯವಿರಲಿಲ್ಲ. ಪರಿಸ್ಥಿತಿ ಕೈ ಮೀರಿ ಹೋಗುತ್ತಿದ್ದಾಗ ನಿಯಂತ್ರಿಸುತ್ತಿದ್ದ ಅಧಿಕಾರಿಗಳು ಆತ್ಮರಕ್ಷಣೆಗಾಗಿ ಹಾಗೂ ಅನೇಕರ ಖಾಸಗಿ ಆಸ್ತಿ-ಪಾಸ್ತಿ, ಸಾರ್ವಜನಿಕ ಸ್ವತ್ತುಗಳ ರಕ್ಷಣೆಗೋಸ್ಕರ ಗೋಲಿಬಾರ್ ಮಾಡಲೇಬೇಕಾಯಿತು. ಆಗ ಅವರಿಗೆ ಅನುಮತಿಗಾಗಿ ಮ್ಯಾಜಿಸ್ಟ್ರೇಟರ್‌ರ ಬಳಿಗೆ ಧಾವಿಸುವದು ಸಾಧ್ಯವಿರಲಿಲ್ಲ. ಆದರೆ ಮ್ಯಾಜಿಸ್ಟ್ರೇಟ್‌ರನ್ನೇ ಆ ಸ್ಥಳಕ್ಕೆ ಕರೆಸಲಾಗಿತ್ತು.

ಶ್ರೀ ಎಸ್.ಎಸ್. ಶೆಟ್ಟರ : ಗಾಯಗೊಳಿಸಲಾದ ಮಹಿಳೆಯನ್ನು ಕೊಲ್ಲುವುದೇ ಪೋಲೀಸರ ಉದ್ದೇಶವಾಗಿತ್ತಲ್ಲವೇ?

ಶ್ರೀ ಆರ್.ಎಂ. ಪಾಟೀಲ : ಹಾಗೆ ನಿಶ್ಚಿತವಾಗಿ ಹೇಳಲಿಕ್ಕೆ ಬಾರದು. ಮಹಿಳೆಗೆ ತೀವ್ರ ಗಾಯಗೊಳಿಸಿ ಕೊಲ್ಲಲು ಬಯಸಲಾಗಿತ್ತೆನ್ನಲು ಸಾಧ್ಯವಿಲ್ಲ.

ಶ್ರೀ ಕೆ.ಎಚ್. ಪಾಟೀಲ : ಪೋಲೀಸರ ಕ್ರಮದಲ್ಲಿ ಪೋಲೀಸರೇ ಯಾರಾದರೂ ಸತ್ತು ಗೋಲಿಬಾರ್ ಸಮರ್ಥಿಸುವಂತಿದೆಯೇ?

ಶ್ರೀ ಆರ್.ಎಂ. ಪಾಟೀಲ : ಪೋಲೀಸರ ಕ್ರಮ ಸಮರ್ಥಿಸಲು ಅವರಲ್ಲಿ ಪೋಲೀಸರೇ ಮೊದಲಿಗೆ ಸಾಯಬೇಕೆಂದೇನೂ ಇಲ್ಲ.

ಶ್ರೀ ಎಂ.ಎಸ್. ಕೃಷ್ಣನ್ : ಗಾಯಗೊಂಡವರಿಗೆ ಸರ್ಕಾರ ಪರಿಹಾರ ಕೊಡಲಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ: ಡಿ. 22 ಹಾಗೂ 23ರಂದು ಗೋಲಿಬಾರ್ ನಡೆದ ದಿವಸ ಗೃಹಮಂತ್ರಿಗಳು ಬೆಂಗಳೂರಲ್ಲಿ ಇದ್ದರೆ. ಅಥವಾ ಕೂಡಲೇ ಅವರ ಗಮನಕ್ಕಾದರೂ ತರಲಾಯಿತೆ?

ಶ್ರೀ ಆರ್.ಎಂ. ಪಾಟೀಲ : ಗೋಲಿಬಾರ್ ನಡೆದಿದ್ದು ಜನೇವರಿ 23ರಂದು ಮಾತ್ರ. ಪಾರಿಸ್ಥಿತಿ ಹೇಗಂಬುದನ್ನು ನಂತರ ತಿಳಿಸುತ್ತೇನೆ. ಮಾರ್ಚ 4ರಂದು ಜಾತೀಯತೆ ವಿಷಯದಲ್ಲಿ ಶ್ರೀ ಎಸ್.ಎಸ್. ಶೆಟ್ಟರರು ಕಾಂಗ್ರೆಸ್‌ನ ನೀತಿಯನ್ನು ಖಂಡಿಸುತ್ತ ಯಾವ ಜಾತಿಯ ಬಗ್ಗೆ ಇಲ್ಲಿ ಮಾತನಾಡಲು ಮನಸ್ಸಿಲ್ಲದಿದ್ದರೂ ಆಡಳಿತ ಪಕ್ಷದ ಒಬ್ಬ ಸದಸ್ಯರು ಪದೇ ಪದೇ ಅದನ್ನೇ ಮಾತನಾಡಿದುದರಿಂದ ನನಗೆ ಸಹ ಮಾತಾಡಬೇಕೆಂದೆನಿಸುತ್ತದೆ. ಕಾಂಗ್ರೆಸ್ಸು ಜಾತೀಯತೆಯನ್ನು ತೋರಿಸುವ ಪಕ್ಷವಲ್ಲವೆಂದು ಹೇಳುತ್ತಿದ್ದರೆ ಒಪ್ಪೋಣ. ಆದರೆ ಇವತ್ತಿನ ದಿವಸ ನಮ್ಮ ದೇಶದಲ್ಲಿ ಜಾತೀಯ ಆಧಾರದ ಮೇಲೆ ಎರಡು ರಾಷ್ಟ್ರಗಳನ್ನು ಮಾಡಿದವರು ಯಾರು? ಕಾಂಗ್ರೆಸ್ ಪಕ್ಷದವರೇ ಅಥವಾ ವಿರೋಧ ಪಕ್ಷದವರೇ? ಅವರು ಸ್ವಲ್ಪ ಅದನ್ನು ವಿಚಾರ ಮಾಡಬೇಕು. ಆಮೇಲೆ ಒಪ್ಪಿಕೊಳ್ಳೋಣ. ಇವತ್ತು ಜಾತೀಯತೆಯ ಆಧಾರದ ಮೇಲೆ ಪಾಕಿಸ್ತಾನವನ್ನು ಯಾರು ಮಾಡಿದರೆಂದು ಯೋಚಿಸಬೇಕು. ಆಮೇಲೆ

ಯಾವುದಾದರೂ ಒಂದು ಕೇಸು ಯಾವುದಾದರೂ ಒಂದು ನ್ಯಾಯ ಅದರಲ್ಲಿ ಕೋರ್ಟ್‌ಗೆ ಹೋದರೆ ಅಲ್ಲಿಯೂ ಜಾತೀಯತೆ ನಡೆಯುತ್ತದೆ. ಕೋತಿ ಮೊಸರು ತಿಂದು ಮೇಕೆ ಬಾಯಿಗೆ ಒರೆಸಿದ ಹಾಗೆ ನಡೆಯುತ್ತಿದೆ' ಎಂದರು.

ಕಾಂಗ್ರೆಸ್ ಪಕ್ಷದಂತಹ ದೊಡ್ಡ ಪಕ್ಷಕ್ಕೆ ನನ್ನ ಸೂಚನೆ ಏನೆಂದರೆ ಎಲ್ಲಿ ನೋಡಿದರೂ ಜಾತಿಯ ಗೊಂದಲ, ಗಲಭೆ ನಡೆದರೂ ಅದನ್ನು ನಮ್ಮ ಕಡೆಗೆ ತೋರಿಸುತ್ತಿದ್ದೀರಿ. ಅದಕ್ಕೆ ಪ್ರತಿಯೊಬ್ಬ ಸದಸ್ಯನೂ ಯಾವ ಯಾವ ಕ್ಷೇತ್ರದಿಂದ ಬಂದಿದ್ದಾನೋ ಅಲ್ಲಿ ಅವನ ಅಧ್ಯಕ್ಷತೆಯಲ್ಲಿ ಒಂದು ಶಾಂತಿ ವ್ಯವಸ್ಥೆಯ ಸಮಿತಿಯನ್ನು ಯಾಕೆ ಮಾಡಬಾರದು? ಪೊಲೀಸರು ಎಷ್ಟೋ ಜನರನ್ನು ದುರ್ಲಾಭ ಪಡೆದು ತೋರಿದವರಿಗೀಡು ಮಾಡುತ್ತಿದ್ದಾರೆ. ಅದನ್ನು ಎಲ್ಲ ಈ ಸಮಿತಿ ತಡೆಯುವಂತೆ ಏಕೆ ಅಧಿಕಾರ ಕೊಡಬಾರದು. ಚಿಕ್ಕಮಗಳೂರಿನ ಪ್ರಶ್ನೆ ಇದ್ದರೂ ಅಥವಾ ಬೇರೆ ಯಾವ ಊರಿನ ಪ್ರಶ್ನೆ ಇದ್ದರೂ ಎಲ್ಲ ಒಂದೇ ರೀತಿಯಲ್ಲಿ ಅಖೈರು ಆಗಿ ಕಾಣುತ್ತದೆ. ಇವತ್ತು ಅಲ್ಪಸಂಖ್ಯಾತರು ಎಂದು ತಿಳಿದುಕೊಂಡು ನಿರ್ಲಕ್ಷ್ಯಿಸುತ್ತ ನಡೆದರೆ ಕೇವಲ ಇದು ಮುಂದಕ್ಕೆ ಒಂದು ಆಘಾತ ಪ್ರವೃತ್ತಿಯನ್ನು ತಂದುಕೊಟ್ಟೀತು ಎಂದು ಹೇಳುತ್ತೇನೆ. ಯಾವ್ಯಾವ ಕೋಮಿನವರನ್ನು ತೆಗೆದುಕೊಂಡು ಅವರನ್ನು ಅಲ್ಪಸಂಖ್ಯಾತರೆಂದು ಹೇಳುತ್ತಿದ್ದಾರೋ ಅವರೇ ಈಗ ಬಹುಸಂಖ್ಯಾತರಾಗಿದ್ದಾರೆ.

ಇಂದು ದೇಶದಲ್ಲಿ ಸಮತಾವಾದವನ್ನು ತರಬೇಕು. ಸಮಾಜವಾದದ ಜಾರಿಯಾಗಬೇಕು ಎಂದು ಆ ಕಡೆಯ ಸದಸ್ಯರು ಹೇಳುತ್ತ ಇಲ್ಲಿ ಚರ್ಚೆ ಮಾಡುತ್ತಾ ಇದ್ದಾರೆ. ಇದೊಂದು ಸಂತೋಷದ ವಿಷಯ. ಆದರೆ ಇಂದು ದೇಶದಲ್ಲಿ ಸಮತಾವಾದ- ಸಮಾಜವಾದ ಬರಲಿಕ್ಕೆ ಯಾವ ರೀತಿ ಪ್ರಯತ್ನ ಮಾಡಬೇಕು. ಹೇಗೆ ಮಾಡಬೇಕೋ ಎಂಬುದನ್ನು ಯಾರೂ ಯೋಚಿಸಿದಂತಿಲ್ಲ. ಗಣೇಶನ ಮಾಡಲು ಹೋಗಿ ಮಂಗನನ್ನು ಮಾಡಿದ ಹಾಗೆ ಪ್ರತಿಯೊಂದು ಕೆಲಸವನ್ನು ಇಲ್ಲಿ ಮಾಡುತ್ತಲೇ ಇದ್ದಾರೆ. ಪ್ರತಿಯೊಂದು ವಿಷಯದಲ್ಲೂ ಇಲ್ಲಿ ಹೇಳುವ ಕಾಲಕ್ಕೆ ಎಲ್ಲರೂ ಒಂದೇ ಮನಸ್ಸಿನಿಂದ ಸಮಾನತೆಯ ವಿಷಯ ಹೇಳುತ್ತಾರೆ ಸಂತೋಷ.

ಪ್ರತಿಯೊಂದನ್ನು ಸರ್ಕಾರಕ್ಕೆ ಮಾಡಲು ಸಾಧ್ಯವಾಗದು. ಒಮ್ಮೇಲೆ ಎಲ್ಲವನ್ನೂ ಅದು ಮಾಡಲಾರದು. ಸರ್ಕಾರ ಪ್ರತಿಯೊಂದು ಪಬ್ಲಿಕ್ ಸೆಕ್ಟರ್ ಹಾಗೂ ಪ್ರೈವೇಟ್ ಸೆಕ್ಟರ್ ಎಂದು ಬೇರೆ ಬೇರೆ ರೀತಿ ಉದ್ಯಮಗಳನ್ನು ಮಾಡಲು ಹಣವನ್ನು ಹಾಕಲು ಸಾಧ್ಯವಿಲ್ಲ. ಪ್ರೈವೇಟ್ ಸೆಕ್ಟರ್‌ಗೆ ಒಂದು ಸ್ಥಾನವಿದೆ ಎಂದು ಅವುಗಳಿಗೆಯೇ ಅಧಿಕ ಅವಕಾಶ ನೀಡುತ್ತ ಹೋದರೆ ದೇಶದ ಹಿತ ಸಾಧ್ಯವೇ ಆಗದು. ಇದರಿಂದ ಮತ್ಸರಕ್ಕೆ ಅವಕಾಶವಾಗುತ್ತದೆ. ಔದ್ಯೋಗಿಕ ಪ್ರಗತಿ ನೋಡಿದರೆ ದೇಶದ ಹಿತ ಕಂಡು ಬರುತ್ತಿಲ್ಲ. ಬಂಡವಾಳಶಾಹಿ ಕಡೆಗೆ ಸರ್ಕಾರದ ಒಲವು ಹೆಚ್ಚಿರುವದು ಕಾಣುತ್ತದೆ.

ನಮ್ಮ ರಾಜ್ಯದಲ್ಲಿ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಎಲ್ಲ ಅನುಕೂಲತೆಗಳು ಇವೆ ಎಂದು ಇತ್ತೀಚಿಗೆ ಮುಂಬೈಗೆ ಇತರೆಡೆಗೆ ನಮ್ಮ ಅರ್ಥ ಮಂತ್ರಿಗಳು, ಮುಖ್ಯಮಂತ್ರಿಗಳು ಹೋಗಿ ಅಲ್ಲಿಯ ಕೈಗಾರಿಕೋದ್ಯಮಿಗಳಿಗೆ ಕೇಳಿಕೊಂಡ ಪ್ರಸಂಗಗಳು ನಮ್ಮ ಮುಂದಿವೆ.

ನಮ್ಮ ರಾಜ್ಯದಲ್ಲಿಯ ರಸ್ತೆ ಸಾರಿಗೆ ಸಂಸ್ಥೆ ಸಾರಿಗೆ ದರಗಳನ್ನು ಹೆಚ್ಚು ಮಾಡಿ ಜನರ ಮೇಲೆ ಹೆಚ್ಚಿನ ಹೊರೆ ಬೀಳುವಂತೆ ಮಾಡಿದ್ದಾರೆ. ಭಾರತೀಯ ಜನಸಂಘದವರು ದರ ಹೆಚ್ಚಿಸದಂತೆ ಆಗ್ರಹಿಸುತ್ತಲೇ ಇರುತ್ತಾರೆ. ರಾಜ್ಯ ಸರ್ಕಾರದವರೇ ರಸ್ತೆಸಾರಿಗೆ ಸಂಸ್ಥೆಯನ್ನು ತಮ್ಮ ನಿಯಂತ್ರಣದಲ್ಲಿರಿಸಿಕೊಂಡು ಜನತೆಗೆ ಹೆಚ್ಚಿನ ಸೌಕರ್ಯ, ಸೇವೆಗಳನ್ನು ಒದಗಿಸಲು ಪ್ರಯತ್ನಿಸಬೇಕು. ದರಗಳನ್ನು ಏರಿಸಿ ಬರುವ ಹೆಚ್ಚಿನ ಲಾಭದಿಂದ ಸವಲತ್ತುಗಳನ್ನು ನೀಡಲು ಸಾಧ್ಯವೆಂದರೆ ಅದು ಶುದ್ಧ ತಪ್ಪು. ದುಂದು ವೆಚ್ಚ ತಡೆಯಬೇಕು. ಮಿತವ್ಯಯ ಸಾಧಿಸಬೇಕು.

ರಸ್ತೆ ಸಾರಿಗೆ ಸಂಸ್ಥೆಯ ಆಡಳಿತ ಹೇಗೆ ಸಾಗಿದೆ ಎನ್ನುವುದಕ್ಕೆ ಇಲ್ಲಿ ಒಂದು ವಿಚಾರ ಹೇಳಬಯಸುತ್ತೇನೆ. ಈ ಸಂಸ್ಥೆಯ ಬಾಡಿ ಬಿಲ್ಡಿಂಗ್ ಆ್ಯಕ್ಟಿವಿಟೀಜ್ ಗಳ ಬಗ್ಗೆ ನೋಡೋಣ. ಮುಂಬೈಯಿಂದ ಚಸ್ಸಿಗಳನ್ನು ತರಿಸುತ್ತಾರೆ. ಮೊದಲಿಗೆ ಮುಂಬೈನಿಂದ ಬೆಂಗಳೂರಿಗೆ ತರಿಸಿ ಬೆಂಗಳೂರಿನಿಂದ ನಂತರ ಹುಬ್ಬಳ್ಳಿ ವರ್ಕ ಶಾಪ್ ಗೆ ಕಳಿಸಿ ಬಾಡಿ ಬಿಲ್ಡಿಂಗ್ ಮಾಡಿಸಲಾಗುತ್ತದೆ. ಬೆಂಗಳೂರಿನಿಂದ ಅವುಗಳನ್ನು ಹುಬ್ಬಳ್ಳಿ ವರ್ಕ ಶಾಪ್ ಗೆ ಕಳುಹಿಸಲು ಸುಮಾರು 16 ಸಾವಿರ ರೂ. ಖರ್ಚು ಆಗುತ್ತದೆ. ಹುಬ್ಬಳ್ಳಿ - ಮುಂಬೈಗೆ ಸಮೀಪ. ಮುಂಬೈಯಿಂದ ಚಸ್ಸಿಗಳನ್ನು ಹುಬ್ಬಳ್ಳಿಗೆ ತರಿಸಿ ಬಿಟ್ಟದ್ದರೆ ಬೆಂಗಳೂರಿನಿಂದ ಹುಬ್ಬಳ್ಳಿಗೆ ಅವುಗಳನ್ನು ಸಾಗಿಸುವ ವೆಚ್ಚ ಮುಂಬೈಯಿಂದ ದೂರದ ಬೆಂಗಳೂರಿಗೆ ಕಳುಹಿಸುವ ವೆಚ್ಚ ಉಳಿಸಲು ಸಾಧ್ಯವಾಗುತ್ತದೆ. ಸರ್ಕಾರ ಲಕ್ಷ ಗಟ್ಟಲೇ ಹಣವನ್ನು ರಸ್ತೆ ಸಾರಿಗೆ ಸಂಸ್ಥೆಗೆ ಕೊಟ್ಟು ಬಿಟ್ಟು ಅದರ ಸದ್ವಿನಿಯೋಗ ಹೇಗಾಗುತ್ತದೆ ಎಂಬುದನ್ನು ನೋಡುವುದಿಲ್ಲ.

ಕೆಲವು ಕಡೆ ಮಿಲ್ ಗಳನ್ನು ಬಂದ್ ಮಾಡಲು ಸರ್ಕಾರ ಹೊರಟಿದೆ. ಇದರಿಂದ ಕಾರ್ಮಿಕರಿಗೆ ಬಹಳ ಕಷ್ಟವಾಗುತ್ತಿದೆ. ಸರ್ಕಾರ ಕಾರ್ಮಿಕರ ಬಗ್ಗೆ ಸಹಾನುಭೂತಿಯಿಂದಿಲ್ಲ. ಸರಿಯಾಗಿ ನಡೆಯದಿರುವ ಮಿಲ್ ಗಳಿಗೆ ಸಾಲ, ನೆರವು ನೀಡಿ ಮಿಲ್ ಗಳು ನಡೆಯುವಂತೆ ಮಾಡಿ ಅಲ್ಲಿರುವ ಜನರ ಜೀವನ ಸುಧಾರಿಸಲು ತಕ್ಕ ಪ್ರಯತ್ನಗಳನ್ನು ಮಾಡುತ್ತಿಲ್ಲ. ಇದರಿಂದಾಗಿ ಮಿಲ್ ಗಳು ಬಂದ್ ಆಗುತ್ತಿವೆ. ಎಂ.ಎಸ್.ಕೆ. ಮಿಲ್ ಬಂದ್ ಆಗುವ ಸ್ಥಿತಿ ತಲುಪಿದಾಗ ಕಾರ್ಮಿಕರ ದುಸ್ಥಿತಿ ಹೇಗಾಗಿತ್ತು ಎಂಬುದು ಎಲ್ಲರಿಗೂ ತಿಳಿದೇ ಇರುತ್ತದೆ. ಇಂತಹ ಕೈಗಾರಿಕೋದ್ಯಮಗಳಲ್ಲಿ ಬಿಕ್ಕಟ್ಟು ಸಂಭವಿಸಿದರೆ ಮೊದಲ ಹೊಡೆತ ಬೀಳುವುದು ಕಾರ್ಮಿಕರಿಗೆಯೇ. ಕಾರ್ಮಿಕರು ತಮ್ಮ ಸಮಸ್ಯೆಗಳ ಇತ್ಯರ್ಥಕ್ಕಾಗಿ ಉಪವಾಸ ಮುಷ್ಕರ ಮೊದಲಾದ ಆಂದೋಲನಗಳನ್ನು ನಡೆಸಿದಾಗ್ಯೂ ಸರ್ಕಾರ ಗಮನ ಕೊಡದೇ ಹೋದರೆ ಅವರೇನು ಮಾಡಬೇಕು? ಅವರ ಸ್ಥಿತಿ ಸುಧಾರಿಸಲು ಸರ್ಕಾರ ಏನನ್ನೂ ಮಾಡುತ್ತಿಲ್ಲ.

ಬಡವರಾಗಿರುವವರು ಬಡವರಾಗಿಯೇ ಇರುತ್ತಾರೆ. ಕಡು ಬಡವರಾಗ ತೊಡಗಿದ್ದಾರೆ. ಶ್ರೀಮಂತರು ಹೆಚ್ಚು ಶ್ರೀಮಂತರಾಗ ತೊಡಗಿದ್ದಾರೆ. ಕೇರಾಫ್ ಫುಟ್ ಪಾತ್ ಆದವರನೇಕರು ಕೋಟಾ ಪಡೆದು ಅಪಾರ ಹಣ ಸಂಪಾದನೆ ಮಾಡಿಕೊಂಡು ಒಮ್ಮೆಲೇ ಮುಗಿಲಿಗೆ ಹಾರುವಷ್ಟು ಶ್ರೀಮಂತರೂ ಆಗುತ್ತಾರೆ. ಇದೇ ಸಮತಾವಾದವೇನು? ಇದೇನು ಸಮಾಜವಾದವೇ? ಕೋಟಾ ಪದ್ಧತಿ, ವ್ಯಾಪಾರದ ಹಾವಳಿ ಮಿತಿ ಮೀರಿ ಏರುತ್ತ ಭ್ರಷ್ಟಾಚಾರಕ್ಕೆ ಅವಕಾಶ ನೀಡುತ್ತಿದೆ. ಸಮತಾವಾದದ ಹಾಗೂ ಸಮಾಜವಾದದ ಸಾಧನೆ ಇದು!

ರಾಜ್ಯ ಸರ್ಕಾರಿ ನೌಕರರಿಗೆ ತುಟ್ಟಿ ಭತ್ಯೆ ಹೆಚ್ಚಿಸಿದ್ದೇವೆ ಎಂದು ಸರ್ಕಾರ ಭುಜ ಕಟ್ಟಿ ಅಭಿಮಾನದಿಂದ ಹೇಳುತ್ತದೆ. ಇದೇನೋ ಅಭಿನಂದನೀಯ. ಆದರೆ ಅದೇ ರೀತಿ ಸಾಮಾನ್ಯ ಬಡ ಜನರು ಖಾಸಗಿಯವರಲ್ಲಿ ಸೇವೆ ಸಲ್ಲಿಸುತ್ತ ಜೀವನ ನಡೆಸಲಿಕ್ಕೆ ಸಾಧ್ಯವಿಲ್ಲ ಎಂಬುದನ್ನು ಯಾರೂ ವಿಚಾರ ಮಾಡುತ್ತಿಲ್ಲ. ಸಾಮಾನ್ಯವಾಗಿ ಒಂದು ಕಿರಾಣಿ ಅಂಗಡಿಯಲ್ಲಿರುವ ನೌಕರನಿಗೆ ಮಾಸಿಕ ವೇತನ 60 ರೂ. ಮಾತ್ರ ಇರುತ್ತದೆ. ಅಷ್ಟರಲ್ಲಿ ಅವನು ಹೇಗೆ ಜೀವಿಸಬೇಕು. ಇಂಥ ನಿರಾಧಾರ ಬಡವರ ಕಷ್ಟ-ನಷ್ಟಗಳನ್ನು ಸರ್ಕಾರ ಗಮನಿಸುತ್ತಿಲ್ಲ.

ಸರ್ಕಾರ ಪ್ರೊಹಿಬಿಶನ್ ತೆಗೆದು ಹಾಕಿತು. ಸರ್ಕಾರಕ್ಕೆ ಇದರಿಂದ ಬೇಕಾದಷ್ಟು ಉತ್ಪನ್ನ ಬರ ತೊಡಗಿದೆ. ಇದರಿಂದ ದೊಡ್ಡ ಬಂಡವಾಳಶಾಹಿಗಳಿಗೆಯೋ ಹೆಚ್ಚು ಅನುಕೂಲವಾಗಿದೆ. ಹೆಚ್ಚು ಸಿಂದಿ-ಸರಾಯಿ ಕುಡಿಯುವ ಬಡ ಜನರಿಗೆ ತೊಂದರೆಯಾಗಿದೆ. ಹರಾಜು ಮಾಡುವಾಗ ಸಣ್ಣ ಉದ್ಯಮಿಗಳಿಗೆ ಅನುಕೂಲವಾಗುವಂತೆ ಮಾಡಿಲ್ಲ. ಹತ್ತು ಲಕ್ಷ, 20 ಲಕ್ಷ, 30 ಲಕ್ಷ ರೂ. ಹಣ ಇಟ್ಟುಕೊಂಡು ವ್ಯಾಪಾರ ಮಾಡುವ ದೊಡ್ಡ ಉದ್ಯಮಿಗಳಿಗೆ ಅನುಕೂಲವಾಗುವಂತೆ ಮದ್ಯದ ಹರಾಜು ಆಯೋಜಿಸಲಾಗುತ್ತಿದೆ. ಸರ್ಕಾರಕ್ಕೆ ಸಂಪಾದನೆ, ದೊಡ್ಡ ದೊಡ್ಡ ಶ್ರೀಮಂತರಿಗೆ ಲಾಭವಾಗುತ್ತಿದೆ.

ಸೇಂದಿ ಗಿಡಗಳೂ ಈಗಿಲ್ಲ. ಪ್ರೊಹಿಬಿಶನ್ ರದ್ದುಪಡಿಸುವಾಗ ಸಿಂದಿಯನ್ನು ಎಲ್ಲಿಂದ ತರುವದು ಎಂಬುದರ ಕಡೆಗೆ ಯಾರದೇ ಲಕ್ಷ್ಯವಿರಲಿಲ್ಲ. ಹುಬ್ಬಳ್ಳಿಯಂಥ ಒಂದೂರಿಗೆ ಒಂದು ದಿವಸಕ್ಕೆ ಸುಮಾರು 9 ಸಾವಿರ ಬಾಟಲುಗಳು ಬೇಕು. ಇದನ್ನು ಕಾಂಟ್ರ್ಯಾಕ್ಟರುಗಳು ಹೇಗೆ ತುಂಬಬೇಕು? ಕಾಂಟ್ರ್ಯಾಕ್ಟರ್‌ಗಳು ಇದಕ್ಕೆ ಬೇಕಾಗುವ ಸಿಂದಿಯನ್ನು ಎಲ್ಲಿಂದಲೋ ತಂದು ಬಾಟಲುಗಳಲ್ಲಿ ತುಂಬಿ ಮಾರುತ್ತಾರೆ. ಇದರಿಂದ ಎಷ್ಟೋ ಜನರು ಸಾಯುತ್ತಿದ್ದಾರೆ. ಕಳಪೆ ಮಾದಕ ದ್ರವ್ಯಗಳ ಸೇವನೆಯಿಂದಾಗಿ ಬಳ್ಳಾರಿಯಲ್ಲಿ 12 ಜನರು ಸತ್ತರು. ಹುಬ್ಬಳ್ಳಿಯಲ್ಲೂ ಅಕ್ರಮ ಸಿಂದಿ ಕುಡಿದು ಸಾವುಗಳಾಗಿವೆ. ಹೀಗೆ ನೀವು ಸಾರಾಯಿ ಎಂದು ಏನೇನನ್ನೂ ಕುಡಿಸಿ ಸಾಯಿಸುತ್ತಿದ್ದೀರಿ. 11 ಕೋಟಿ ರೂ. ಉತ್ಪನ್ನ ಬರುತ್ತದೆ ಎಂದು ಬೆನ್ನು ಚಪ್ಪರಿಸಿಕೊಳ್ಳುತ್ತಿರುವಿರಿ. ಜನರು ಸರಾಯಿ ಕುಡಿದು ಸಾಯುತ್ತಾರೆ. ಬಡವರು ಕಡು ಬಡತನಕ್ಕೆ ತಳಲ್ಪಡುತ್ತಾರೆ.

ಅನೇಕ ಕಡೆ ಶಾಲೆಗಳ ಪಕ್ಕದಲ್ಲೇ ಮದ್ಯದ ಅಂಗಡಿಗಳಿವೆ. ಕುಡುಕರು ಮಿತಿಮೀರಿ ಕುಡಿದು ನಿಶೆಯಲ್ಲಿ ಕೂಗಾಡುತ್ತ ಮನ ಬಂದಂತೆ ಅರಚುವುದನ್ನು ಶಾಲಾ ಮಕ್ಕಳು ನೋಡಿ ಅದು ಒಂದು ಮೋಜು ಎಂದು [illegible]ತ್ತಾರೆ. ಶಾಲಾ ಮಕ್ಕಳಿಗೆ ಮದ್ಯದ ಅಂಗಡಿಗಳು ಕಣ್ಣಿಗೆ ಬೀಳುವಂತಿರಬಾರದು. ಸನಿಹದಲ್ಲಿದ್ದರೆ ಅವರ [illegible] [illegible] ಉತ್ತಮ ಸಂಸ್ಕಾರ ಹೇಗಾಗಬೇಕು?

ಕಂಡದ ಅಂಗಡಿಗಳನ್ನು ಊರದ ಹೊರಗೆ ಸಾಗಿಸಬೇಕು. 24 ಗಂಟೆಯೂ ತೆರೆದಿಡದೇ ಕಾಲ ಮಿತಿ [illegible]ಬೇಕು.

ಕುಷ್ಟಗಿ ತಾಲೂಕಿನಲ್ಲಿ ಒಬ್ಬ ಪೊಲೀಸ್ ಅಧಿಕಾರಿಯೇ ಕುಡಿದ ನಿಶೆಯಲ್ಲಿ ಏನೇನೋ ಮಾಡಿದನು. ನೀರು ತರಲು ಹೋಗುವ ಹೆಣ್ಣು ಮಕ್ಕಳ ಮೇಲೆ ಕೈ ಮಾಡಿದನಂತೆ. ಅದು ಅವನಿಗೆ ಗೊತ್ತೆ ಆಗಲಿಲ್ಲ. ಹೀಗಾದರೆ [illegible] ಕಾಯ್ದೆ, ಶಾಂತಿ ಪಾಲನೆ ವ್ಯವಸ್ಥೆ ಹೇಗೆ ತಾನೇ ಉಳಿದೀತು?

ಕೇಂದ್ರ ಸರ್ಕಾರಿ ನೌಕರರ ಮಟ್ಟದ ತುಟ್ಟಿ ಭತ್ಯೆಯನ್ನು ರಾಜ್ಯ ಸರ್ಕಾರ ನೌಕರರಿಗೂ ಕೊಡಮಾಡಿದ್ದರಿಂದ ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ಗಂಭೀರವಾಗಿತ್ತೆಂದು ಅರ್ಥ ಮಂತ್ರಿಗಳು ಆಯವ್ಯಯ ಮಂಡನೆ ಕಾಲಕ್ಕೆ ಹೇಳಿದ್ದಾರೆ. ಆದರೆ ಬೆಲೆಗಳು ಮಿತಿ ಮೀರಿ ಆರ್ಥಿಕ ಪರಿಸ್ಥಿತಿ ಪೂರ್ಣ ಹದಗೆಟ್ಟಿರುವುದರಿಂದ ಎಷ್ಟೇ ಹೆಚ್ಚು ಹಣ ಕೈಗೆ ಬಂದರೂ ಜೀವನ ಸಾಗಿಸುವದು ಕಠಿಣವಾಗತೊಡಗಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಕ್ಷೇತ್ರದಲ್ಲಿಯ ಒಟ್ಟು ಸಹಕಾರಿ ಗೃಹನಿರ್ಮಾಣ, ಸಂಘಗಳೆಷ್ಟು? ಅವುಗಳಲ್ಲಿ ಎಷ್ಟು ನಿಷ್ಕ್ರೀಯವಾಗಿವೆ ಎಂದು ಶ್ರೀ ಎಸ್.ಎಸ್.ಶೆಟ್ಟರ್ ಪ್ರಶ್ನಿಸಿದ್ದಕ್ಕೆ ಸಹಕಾರ ಸಚಿವ ನಾಡಗೌಡರು ಒಟ್ಟು 37ರಲ್ಲಿ 4 ನಿಷ್ಕ್ರೀಯವೆಂದು ಉತ್ತರಿಸಿದರು.

ಶ್ರೀ ಎಸ್.ಎಸ್. ಶೆಟ್ಟರ : ಸರ್ಕಾರದವರು ಸೊಸೈಟಿಗಳಿಗೆ ಕೊಡಬೇಕಾದ ಹಣ ಸಹಾಯ ಹಾಗೂ ಭೂಮಿಯನ್ನು ಕೊಡದೇ ಇರುವುದರಿಂದ ಸೊಸೈಟಿಗಳು ನಿಷ್ಕ್ರೀಯವಾಗುತ್ತವೆ ಎಂದು ಸರ್ಕಾರದ ಗಮನಕ್ಕೆಬಂದಿದೆಯೇ?

ನಾಡಗೌಡ (ಸಹಕಾರ ಮಂತ್ರಿ) : ಅದು ಸರಿಯಾದ ಕಾರಣವಲ್ಲ. 36 ಸೊಸೈಟಿಗಳಲ್ಲಿ ಅನೇಕ ಸೊಸೈಟಿಗಳಿಗೆ ಸಹಾಯ ಮಾಡಿದ್ದೇವೆ. ಅವು ಕ್ರಿಯಾಶೀಲವಿವೆ.

ಶ್ರೀ ಎಸ್.ಎಸ್. ಶೆಟ್ಟರ್ : ಭೂಮಿ ಇಲ್ಲವೆಂದು ಹಣ ಕೊಟ್ಟಿಲ್ಲವಾದ್ದರಿಂದ ನಾಲ್ಕು ಸೊಸೈಟಿಗಳು ನಿಷ್ಕ್ರೀಯ ವಾದವಲ್ಲವೇ?

ನಾಡಗೌಡ : ಭೂಮಿ ಇಲ್ಲವೆಂಬ ಕಾರಣಕ್ಕಾಗಿ ಆ ಸೊಸೈಟಿಗಳಿಗೆ ಹಣ ಕೊಟ್ಟಿಲ್ಲ ನಿಜ.

ಶ್ರೀ ಎಸ್.ಎಸ್. ಶೆಟ್ಟರ : ರೊಕ್ಕ ಕೊಟ್ಟರೆ ಊರಿಗೆ ಭೂಮಿ ಕೂಡಲೇ ಸಿಕ್ಕುತ್ತೆ. ನೀವು ರೊಕ್ಕ ಕೊಟ್ಟಿಲ್ಲವಾದ್ದರಿಂದ ಅವರಿಗೆ ಭೂಮಿ ಸಿಕ್ಕಿಲ್ಲನೆಂಬುದು ನಿಜವೇ?

ನಾಡಗೌಡ : ಅವರು ಭೂಮಿ ತೋರಿಸಿದರೆ ನಾವು ಹಣ ಕೊಡಲು ಸಿದ್ಧ.

ಶ್ರೀ ಸಿದ್ದಯ್ಯ ಕಾಶೀಮಠ : ಸೊಸೈಟಿಗಳಿಂದ ಗೃಹ ನಿರ್ಮಾಣ ಸಾಧ್ಯವಾಗಿಲ್ಲವಾದ್ದರಿಂದ ಆ ಕಾರ್ಯವನ್ನು ಕಾರ್ಪೋರೇಶನ್‌ಗೆ ವಹಿಸುವಿರಾ?

ಶ್ರೀ ನಾಡಗೌಡ : ಸೊಸೈಟಿ ಆ್ಯಕ್ಟ್ ಪ್ರಕಾರ ಹೀಗೆ ಮಾಡಲಿಕ್ಕೆ ಬರುವುದಿಲ್ಲ.

ಶ್ರೀ ಎಂ.ಎಚ್. ಜಯಪ್ರಕಾಶನಾರಾಯಣ : ಹಿಂದುಳಿದ ಜನಾಂಗದವರ ಹೌಸಿಂಗ್ ಸೊಸೈಟಿಗೆ ಗೃಹ ನಿರ್ಮಾಣಕ್ಕಾಗಿ ಹಣ ಕೇಳತಕ್ಕವರು ತಲಾ ಒಂದಕ್ಕೆ 8 ರೂ. ಕೊಡಬೇಕೆಂಬ ಷರತ್ ಇರುವುದರಿಂದ ಅವು ನಿಷ್ಕ್ರೀಯವಾಗಿವೆ. ಷರತ್‌ನ್ನು ವಜಾ ಮಾಡುತ್ತೀರಾ?

ಶ್ರೀ ನಾಡಗೌಡ : ಪರಿಶೀಲಿಸುತ್ತೇನೆ.

ಶ್ರೀ ಎಸ್.ಎಸ್. ಶೆಟ್ಟರ್ : ನಿಷ್ಕ್ರೀಯ ಸೊಸೈಟಿಗಳ ಪೈಕಿ ಒಂದು ಸೊಸೈಟಿಯವರು 63 ಸಾವಿರ ರೂ.ಗಳಿಗೆ ಒಂದು ಭೂಮಿ ಪಡೆಯಲು ಮಾತುಕತೆ ಸಾಗುತ್ತಿದ್ದಾಗ ನೀವು ಹಣವನ್ನು ಕೊಡದೇ ನಿಲ್ಲಿಸಿದ್ದರಿಂದ ಭೂಮಿ ಅವರ ಕೈ ಬಿಟ್ಟು ಹೋಯಿತೆಂಬುದು ತಮ್ಮ ನಜರಿಗೆ ಬಂದಿದೆಯೇ?

ಶ್ರೀ ನಾಡಗೌಡ : ನನ್ನ ಗಮನಕ್ಕೆ ಬಂದಿಲ್ಲ ವಿಚಾರ ಮಾಡುತ್ತೇನೆ.

12 ಮಾರ್ಚ್ 1968ರಂದು ಕಂದಾಯ ಇಲಾಖೆ ಬೇಡಿಕೆಗಳ ಚರ್ಚೆಯಲ್ಲಿ ಭಾಗವಹಿಸಿದ ಶ್ರೀ ಎಸ್.ಎಸ್. ಶೆಟ್ಟರ್ ಅವರು 'ಮೈಸೂರು ಗ್ರಾಮ ಲೆಕ್ಕಾಧಿಕಾರಿಗಳ ರದ್ದತಿ ಕಾಯ್ದೆ 1961ನ್ನು ಈ ಸಭೆಯಲ್ಲಿ ಪಾಸು ಮಾಡಲಾಗಿದ್ದು, ಆದರಿಂದಾಗಿ ನಮ್ಮ ರಾಜ್ಯದಲ್ಲಿಯ ಅನುವಂಶಿಕ ಪಟೇಲ್, ಶಾನುಭೋಗ ಮತ್ತಿತರ ಸಿಬ್ಬಂದಿಯ ರದ್ಧತಿ ಮಾಡಬೇಕಾಗಿದೆ. ಹೀಗೆ ರದ್ದು ಮಾಡುವುದರ ಸಲುವಾಗಿ ಕಾನೂನಿನ ಒಂದನೇ ಕಲಂನನ್ವಯ ಗೆಜೆಟ್ ನೋಟಿಫಿಕೇಶನ್ ಹೊರಡಿಸಲಾಯಿತು. ಈನೋಟಿಫಿಕೇಶನ್ ಪ್ರಕಾರ ಅವರೆಲ್ಲರ ಸೇವೆಯನ್ನು ದಿ. 1-2-1963ಕ್ಕೆ ಕೊನೆಗೊಳಿಸುವುದಿತ್ತು. ಅವರ ಪ್ರಕರಣ ಮೊದಲಿಗೆ ಹೈಕೋರ್ಟ್ ನಂತರ ಸುಪ್ರೀಂ ಕೋರ್ಟ್‌ಗೆ ಹೋಗಿ ಅಲ್ಲಿ ವಿಚಾರಣೆಗೆ ಒಳಪಟ್ಟ ಪ್ರಯುಕ್ತ ಸರ್ಕಾರ ಒಂದು ಆಜ್ಞೆ ಹೊರಡಿಸಿ ಈ ಅನುವಂಶಿಕ ಹುದ್ದೆಗಳನ್ನು ಮತ್ತೆ ಒಂದು ವರ್ಷ ಅಂದರೆ ದಿ. 1 ಜನೇವರಿ 1966ರ ವರೆಗೆ ಅಥವಾ ಸುಪ್ರೀಂ ಕೋರ್ಟ್ ಪ್ರಕರಣ ಇತ್ಯರ್ಥಗೊಳಿಸುವ ತನಕ ಇಲ್ಲವೇ ಮುಂದಿನ ಆಜ್ಞೆ ಹೊರಡಿಸುವವರೆಗೆ ಇವುಗಳಲ್ಲಿ ಯಾವುದು ಮೊದಲಿಗೆ ಆಗುತ್ತೋ ಅಲ್ಲಿಯ ತನಕ ಮುಂದುವರೆಸಲಾಗುವುದೆಂದು ಘೋಷಿಸಿತು. ಈ ಆಜ್ಞೆಯ ಪ್ರಕಾರ ಅವರೆಲ್ಲರ ಸೇವೆ ದಿ. 1-1-1966ರ ವರೆಗೆ ಮುಂದುವರೆಯಬೇಕಿತ್ತು. ಪ್ರಕರಣ 21-1-1966ರಂದು ನಿಕಾಲಿ ಯಾಗಿದ್ದರಿಂದ ಸರ್ಕಾರ ಅವರ ಸೇವೆಯನ್ನು ಸಮಾಪ್ತಿಗೊಳಿಸಲು ದಿ. 1-2-1966ರಂದು ಆಜ್ಞೆಯನ್ನು ಹೊರಡಿಸಿದೆ. ಈ ಆಜ್ಞೆದನ್ವಯ ಸರ್ಕಾರ ರಾಜ್ಯದಲ್ಲಿಯ 22 ಸಾವಿರ ಅನುವಂಶಿಕ ಗ್ರಾಮ ಲೆಕ್ಕಾಧಿಕಾರಿಗಳ ಸೇವೆಯನ್ನು ಕೊನೆಗೊಳಿಸಿದಂತಾಗಿದೆ. ಹೀಗಿದ್ದರೂ ಅವರ ಸಂಬಳ ಸಾರಿಗೆಗೋಸ್ಕರ ಎಂದು ಸರ್ಕಾರ 22 ಲಕ್ಷ ರೂ.ಗಳ ಬೇಡಿಕೆ ಸಲ್ಲಿಸಿದೆ. ಈ ಹಣವನ್ನು ಸರ್ಕಾರಕ್ಕೆ ಕೊಡಲು ಸಾಧ್ಯವಿಲ್ಲ. ವಿಧಾನಸಭೆಯು ಅಂಗೀಕರಿಸಿದ ಕಾನೂನಿಗೆ ವಿರುದ್ಧವಾಗಿ ಅವರ ಸೇವೆ ಮುಂದುವರಿಸಿದಂತಾಗುತ್ತದೆ. ಆದ್ದರಿಂದ ವಿರೋಧಿಸುತ್ತೇನೆ.' ಎಂದು ತಿಳಿಸಿದರು.

ಮೈಸೂರು ಭೂ ಸುಧಾರಣೆ ಕಾಯ್ದೆ ಅಧ್ಯಾಯ 7ರ 102ನೇ ಕಲಂನಲ್ಲಿ ಸಹಕಾರಿ ಬೇಸಾಯ ಸಂಘಗಳಿಗೆ ಭೂ ಕಂದಾಯ ಇಳಿಕೆ, ಕೃಷಿ ಆದಾಯಕರದ ಇಳಿಕೆ ಅಥವಾ ಸೂಟ ಬಿಡುವ ರಿಯಾಯ್ತಿ ನೀಡಬೇಕೆಂದು ಹೇಳಲಾಗಿದೆ. ಈ ಕಾನೂನಿನ ಮೇರೆಗೆ ಸಂಘಗಳಿಂದ ಭೂ ಕಂದಾಯ ವಸೂಲು ಮಾಡುವುದಿಲ್ಲವೆಂದು ಸರ್ಕಾರ ಹೇಳಿದರೆ ಸಂತೋಷವಾಗುತ್ತದೆ. ಕನಿಷ್ಟಪಕ್ಷ ಎನ್‌ಕ್ರೋಚ್‌ಮೆಂಟ್ ಮಾಡಲಾದ ಭೂಮಿಗಾದರೂ ಭೂ ಕಂದಾಯ ವಿನಾಯ್ತಿ ನೀಡಿದ್ದರೆ ಎಷ್ಟೋ ಸುಧಾರಣೆಯಾಗಬಹುದಿತ್ತು.

ಇನ್ನೂ ಲ್ಯಾಂಡ್ ರೆವೆನ್ಯೂ ರೆಕಾರ್ಡ್‌ನಲ್ಲಿ ಯಾವ ಟೆನೆಂಟ್‌ನ್ನು ನೋಡಿದರೂ ಸಬ್ ಟೆನೆಂಟ್ ಇದ್ದು ಒಂದೊಂದು ಜಮೀನಿಗೆ ಒಬ್ಬ ಹಿಡುವಳಿದಾರರ ಜತೆ ಮೂರು, ನಾಲ್ಕು ಉಪ ಹಿಡುವಳಿದಾರರ ಹೆಸರುಗಳು

ಇರುವದು ಕಂಡು ಬರುತ್ತದೆ. ಭೂ ಸುಧಾರಣಾ ಕಾಯ್ದೆ ಬಂದ ನಂತರ ಅನೇಕ ಪ್ರಕರಣಗಳು ಸಿವಿಲ್ ಕೋರ್ಟ್‌ನ ಮುಂದೆ ಹೋಗಿವೆ. ಅವುಗಳನ್ನು ಸರಿಯಾದ ರೀತಿಯಲ್ಲಿ ನಿಕಾಲೆ ಮಾಡಲು ಆಸ್ಪದವಿಲ್ಲದ ಪರಿಸ್ಥಿತಿ ಉದ್ಭವಿಸಿದೆ. ಭೂ ಹಿಡುವಳಿದಾರ ಕೃಷಿಕ ಯಾರೋ ಒಬ್ಬರಿದ್ದು, ಭೂಮಿ ಉಪ ಹಿಡುವಳಿದಾರ ಕೃಷಿಕರ ವಶಕ್ಕೆ ಬಂದಿದೆ. ಹೀಗಾಗಿ ಭೂ ಸುಧಾರಣೆಯಲ್ಲಿ ಅನೇಕ ವ್ಯಾಜ್ಯಗಳು ಹುಟ್ಟಿಕೊಂಡಿವೆ. ಗೊಂದಲಗಳು ಉದ್ಭವಿಸಿವೆ. ಸುಧಾರಣೆ ಮಾತ್ರ ಏನೂ ಆಗಿಲ್ಲ. ಭೂಮಿ ಹಂಚಿಕೆ ವಿಷಯದಲ್ಲಿ ಸರ್ಕಾರ ಏನೂ ನೀತಿ ತತ್ವ ಅನುಸರಿಸುವದು ಎಂಬುದನ್ನು ನೋಡಬೇಕಾಗಿದೆ. ಪ್ರತಿಯೊಬ್ಬರಿಗೂ 18 ಸ್ಟಾಂಡರ್ಡ್ ಎಕರೆ ಭೂಮಿಯನ್ನು ಇಟ್ಟುಕೊಳ್ಳಲು ಅಧಿಕಾರವಿದೆ. 18 ಸ್ಟಾಂಡರ್ಡ್ ಎಕರೆ ಎಂದರೆ 1.6 ಎಕರೆಗಳಾಗುತ್ತವೆ. ಅಷ್ಟು ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಅಧಿಕಾರ ಕೊಟ್ಟ ಬಳಿಕ ಅವಿಭಕ್ತ ಕುಟುಂಬಗಳಲ್ಲಿ ಐದಾರು ಜನರಿದ್ದರೆ ಎಲ್ಲರಿಗೂ 6 ಸ್ಟಾಂಡರ್ಡ್ ಎಕರೆ ಜಮೀನು ಇಟ್ಟುಕೊಳ್ಳಲು ಅಧಿಕಾರ ಪ್ರಾಪ್ತವಾಗುತ್ತದೆ. ಯಾವ ವಿಧಾನವನ್ನು ಅನುಸರಿಸಿ ಭೂಮಿ ಇಲ್ಲದವರಿಗೆ ಸರ್ಕಾರ ಭೂಮಿ ಕೊಟ್ಟಿದೆಯೋ ಗೊತ್ತಿಲ್ಲ. ಇವತ್ತಿನ ದಿವಸ ಪರ್ಸನಲ್ ಕಲ್ಟಿವೇಶನ್ ಸ್ವಂತ ಬೇಸಾಯವೆಂದರೆ ಯಾರಾದರೂ ಒಬ್ಬ ಕೂಲಿ ಮನುಷ್ಯನನ್ನು ಹಚ್ಚಿ ಸ್ವಂತ ಬೇಸಾಯ ಮಾಡುವವನೆನಿಸಬಹುದಾಗಿದೆ. ವ್ಯಕ್ತಿಶಃ ಸ್ವತಃ ಬೇಸಾಯ ಮಾಡಬೇಕು ಎನ್ನುವದು ಇರಲಿಲ್ಲ. ಶಹರದಲ್ಲಿದ್ದುಕೊಂಡು ಕೂಲಿ ಜನರಿಂದ ಬೇಸಾಯ ಮಾಡಿಸಿ ಸ್ವಂತ ಸಾಗುವಳಿ ಮಾಡುವವರೆಂದು ಹೇಳಿಕೊಳ್ಳಬಹುದಾಗಿದೆ. ಭೂ ಸುಧಾರಣೆ ಸಂಬಂಧಪಟ್ಟಂತೆ ಕಾನೂನು ಹೀಗೆ ಯದ್ವಾತದ್ವಾ ಆಗಿದೆ. ಇದನ್ನೆಲ್ಲಾ ಸುಧಾರಣೆ ಮಾಡಿ ಸರಿಯಾದ ರೀತಿಯಲ್ಲಿ ಭೂ ಸುಧಾರಣೆ ಕಾನೂನನ್ನು ಜಾರಿಗೆ ತರದೇ ಹೋದರೆ ಇದರಿಂದ ಜನರ ಕಲ್ಯಾಣವಾಗಲಾರದು. ಹೀಗೆ ಭೂ ಸುಧಾರಣೆ ಕಾನೂನಿನ ಬಗ್ಗೆ ಸುಯೋಗ್ಯ ನೀತಿ - ತತ್ವ ಅನುಸರಿಸಿ ಸಂದಿಗ ಪರಿಸ್ಥಿತಿಯನ್ನು ಸರಿಪಡಿಸತಕ್ಕದ್ದು. ರಾಷ್ಟ್ರಪತಿಯವರು ಈ ಕಾಯ್ದೆಗೆ ಇನ್ನೂ ಒಪ್ಪಿಗೆ ಕೊಟ್ಟಿಲ್ಲವಾದ್ದರಿಂದ ಮತ್ತೊಮ್ಮೆ ಅವರಿಗೆ ವಿನಂತಿಸಿ ಈ ಕಾನೂನನ್ನು ಯೋಗ್ಯರೀತಿ ಜಾರಿಗೆ ತರಲು ಒಪ್ಪಿಗೆ ಪಡೆದುಕೊಳ್ಳಬೇಕು.

ಇನ್ನು ಮುಖ್ಯವಾದ ಮೂರನೇ ವಿಷಯವೆನೆಂದರೆ, ಸಹಕಾರ ಸಂಘಗಳಲ್ಲಿ ಹಾಗೂ ಬ್ಯಾಂಕ್‌ಗಳಲ್ಲಿ ಜನರು ಆಸ್ತಿಯ ಮೇಲೆ ಐದು ಸಾವಿರ ರೂ. ವರೆಗೆ ಸಾಲ ಪಡೆದುಕೊಳ್ಳಲು ಸ್ಟ್ಯಾಂಪ್ ಡ್ಯೂಟಿ ಕೊಡಬೇಕಾಗಿಲ್ಲ. ಆದರೆ ಈ ಸಾಲ ಕೊಡುವಾಗ ಭ್ರಷ್ಟಾಚಾರ ನಡೆಯುವುದಕ್ಕೆ ಅವಕಾಶ ಉಂಟಾಗಿದೆ. ಒಂದು ಸಾರಿ ಆಸ್ತಿಯ ಮೇಲೆ ಐದು ಸಾವಿರ ರೂ. ಸಾಲ ಪಡೆದು ಎರಡುಮೂರು ವರ್ಷಗಳಾದ ಬಳಿಕ ಮತ್ತೆ ಮೂರು ಸಾವಿರ ರೂ. ಸಾಲ ಪಡೆಯಲು ಹೋದರೆ ಹಿಂದಿನ ಹಾಗೂ ಇಂದಿನ ಸಾಲ ಎರಡನ್ನೂ ಸೇರಿಸಿ ಒಟ್ಟು ಎಂಟು ಸಾವಿರ ರೂ.ಗಳಿಗೆ ಸ್ಟ್ಯಾಂಪ್ ಡ್ಯೂಟಿ ಕಟ್ಟುವಂತೆ ಹೇಳಲಾಗುತ್ತದೆ. ಲಂಚವನ್ನು ಕೊಟ್ಟವರಿಗೆ ಮಾತ್ರ ಸ್ಟ್ಯಾಂಪ್ ಡ್ಯೂಟಿ ವಿನಾಯ್ತಿ ಸಿಗುತ್ತದೆ. ಪ್ರತಿಯೊಂದು ಸಬ್ ರಜಿಸ್ಟ್ರಾರ್ ಉಪ ನೋಂದಣಿ ಅಧಿಕಾರಿ ಕಚೇರಿಯಲ್ಲೂ ಈ ಭ್ರಷ್ಟಾಚಾರ ನಡೆಯುತ್ತಿದೆ. ಆದ್ದರಿಂದ ಮೊದಲಿನ ಐದು ಸಾವಿರ ರೂ. ಲೆಕ್ಕಕ್ಕೆ ಹಿಡಿಯದೇ ನಂತರ ಪಡೆದ ಮೂರು ಸಾವಿರ ರೂ. ಅಥವಾ ಬೇರೆ ಮೊತ್ತದ ಸಾಲಗಳಿಗೆಷ್ಟೇ ಸ್ಟ್ಯಾಂಪ್ ಡ್ಯೂಟಿ ಆಕರಿಸುವಂತಾಗಬೇಕು. ಸರ್ಕಾರ ಈ ಏರ್ಪಾಟು ಮಾಡಲಿ.

ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ನಕಲು ಕಾಪಿ ಬೇಕೆಂದರೆ ಎರಡು ವರ್ಷಗಳಷ್ಟು ದೀರ್ಘ ಅವಧಿ ಕಳೆದರೂ ಸಿಗದಂಥ ಸ್ಥಿತಿ ಇದೆ. ಮೊದಲು ಈ ಬಗ್ಗೆ ಫೋಟೋ ಸಿಸ್ಟಮ್ ಇತ್ತು. ಈಗ ಫೋಟೋ ಸಿಸ್ಟಮ್ ರದ್ದಾಗಿದೆ. ಕಾಗದದ ರಜಿಸ್ಟ್ರಾರ್ ಆದ ಮೇಲೆ 15 ದಿನ ಅಥವಾ ಒಂದು ತಿಂಗಳಲ್ಲಿ ನಕಲು ಕಾಪಿ ಸಿಗುವಂತೆ ವ್ಯವಸ್ಥೆ ಆಗಬೇಕು. ಒಬ್ಬ ಸಬ್ ರಜಿಸ್ಟ್ರಾರರು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದರು. ಈಗ ಅವರೇ ಮತ್ತೆ ಕೆಲಸಕ್ಕೆ ಬಂದಿದ್ದಾರೆ. ಅವರು ಯಾವ ರೀತಿ ಮತ್ತೆ ಕೆಲಸಕ್ಕೆ ಬರುವಂತಾಯ್ತು ಎಂಬುದು ಆಶ್ಚರ್ಯ ಉಂಟು ಮಾಡುತ್ತದೆ. ಸರ್ಕಾರ ಅವರಿಗೆ ಹಿಂದಿನ ಸಂಬಳವನ್ನು ಕೊಟ್ಟಿದೆಯಂತೆ. ಇದೇ ರೀತಿ ರಾಜೀನಾಮೆ ಕೊಟ್ಟ ಇನ್ನೊಬ್ಬ ಡಾಕ್ಟರ್‌ನೂ ಸಹ ಪುನಃ ಕೆಲಸಕ್ಕೆ ಸೇರಿಕೊಂಡು ಹಿಂದಿನ ಸಂಬಳ ಭತ್ಯೆ ಪಡೆದಿದ್ದಾನೆ ಎಂದು ಕೇಳಿದ್ದೇನೆ. ರಾಜೀನಾಮೆ ಕೊಟ್ಟು ಪುನಃ ಕೆಲಸಕ್ಕೆ ಸೇರಿಕೊಳ್ಳುವವರಿಗೆ ಹಿಂದಿನ ಸಂಬಳವೆಲ್ಲ ಸಂದಾಯವಾಗುತ್ತದೆ. ಆದರೆ ಯಾರು ಹೆಚ್ಚಿನ ತುಟ್ಟಿ ಭತ್ಯೆಗಾಗಿ ಚಳುವಳಿ ಮಾಡುತ್ತಾರೋ, ಸತ್ಯಾಗ್ರಹ ಮಾಡುತ್ತಾರೋ ಅಂಥವರಿಗೆ ನ್ಯಾಯ ಸಿಗುತ್ತಿಲ್ಲ. ಒಂದು ಊರಿಗೆ ಸಬ್ ರಜಿಸ್ಟ್ರಾರ್ ಎಂದು ನೇಮಕ ಮಾಡಿ ಕಳಿಸಿ ಹೋಗುತ್ತೇನೆ ಎಂದು ಅನೇಕರು ಸರ್ಕಾರಕ್ಕೆ ಕೇಳಿಕೊಳ್ಳುತ್ತಾರೆ. ಏಕೆಂದರೆ ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ಕೆಳಗಿನಿಂದ ಮೇಲಿನವರೆಗೂ ಭ್ರಷ್ಟಾಚಾರ ನಡೆಯುತ್ತದೆ. ಈ ಭ್ರಷ್ಟಾಚಾರ ನಿರ್ಮೂಲನೆ ಮಾಡದೇ ಹೋದರೆ ಸಾಮಾನ್ಯ ಜನರಿಗೆ ತುಂಬಾ ತೊಂದರೆಯಾಗುತ್ತದೆ.

ಇನ್ನು ಕೋರ್ಟ್ ಸ್ಟ್ಯಾಂಪ್ ಸಿಗುವದು ಬಹಳ ದುಸ್ತರ. ಎಷ್ಟೋ ಸಲ ಸರಿಯಾದ ಸ್ಟ್ಯಾಂಪ್ ಪೇಪರ್ ಸಿಗದೇ ಹೆಚ್ಚಿನ ಬೆಲೆಯ ಸ್ಟ್ಯಾಂಪ್ ಪೇಪರ್ ಮೇಲೆ ಕಾಗದ ಪತ್ರ ದಾಖಲೆಗಳನ್ನು ಬರೆಸಬೇಕಾಗುತ್ತದೆ. ಹೀಗೆ ಸ್ಟ್ಯಾಂಪ್‌ನ ಕೊರತೆ ಇರಕೂಡದು. ಸರ್ಕಾರಕ್ಕೆ ಇದರಿಂದ ಹೆಚ್ಚಿನ ರೊಕ್ಕ ಬರುತ್ತದೆಯಾದ್ದರಿಂದ ಸ್ಟ್ಯಾಂಪ್‌ನ ಕೊರತೆಯಾಗದಂತೆ ಮುಂಜಾಗ್ರತೆ ಕ್ರಮ ತೆಗೆದುಕೊಂಡು ಎಲ್ಲ ಬೆಲೆಯ ಸ್ಟ್ಯಾಂಪ್ ಪೇಪರುಗಳು ಸಿಗುವಂತೆ ವ್ಯವಸ್ಥೆ ಆಗಬೇಕು. ಸ್ಟ್ಯಾಂಪ್ ಪೇಪರ್ ಸಿಗದೇ ಹೋದರೆ ಬಿಳಿಯ ಕಾಗದದ ಮೇಲೆ ಬರೆಯಿಸಿ ಸಂಬಂಧಪಟ್ಟ ಆಫೀಸರರಿಂದ ಸ್ಟ್ಯಾಂಪ್ ಹೊಡೆಸಬಹುದೆಂಬು ಸರ್ಕಾರ ಹಿಂದೆ ಒಂದು ಆದೇಶ ಹೊರಡಿಸಿದ್ದುಂಟು. ಆದರೆ ಜನರು ಇದಕ್ಕೆ ಗೌರವ ಕೊಡುತ್ತಿಲ್ಲ. ಆದ್ದರಿಂದ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಸಾಕಷ್ಟು ಸ್ಟ್ಯಾಂಪ್ ಪೇಪರ್ ಲಭ್ಯವಾಗಿಸಬೇಕು.

ಆಯುರ್ವೇದ ಪದ್ಧತಿಗೆ ರಕ್ಷಣೆ

ವೈದ್ಯಕೀಯ ಇಲಾಖೆ ಬೇಡಿಕೆಗಳ ಸಂಬಂಧವಾಗಿ ಶ್ರೀ ಶೆಟ್ಟರ್‌ರು ಮಾರ್ಚ್ 15ರಂದು ಮಾತಾಡಿ ಆಯುರ್ವೇದ ವೈದ್ಯ ಪದ್ಧತಿ ಕುರಿತ ಸರ್ಕಾರದ ನಿರ್ಲಕ್ಷ್ಯವನ್ನು ಹೀಗೆ ಪ್ರಸ್ತಾಪಿಸಿ ಅವರಿಗೆ ನ್ಯಾಯ ಸಿಗಬೇಕೆಂದು ಆಗ್ರಹಿಸಿದ ಬಗೆ.

ಅನೇಕ ಹಳ್ಳಿಗಳಲ್ಲಿ ಕೆಲವರು ಆಯುರ್ವೇದ ಚಿಕಿತ್ಸೆ ಕೊಡುವ ವೈದ್ಯರಾಗಿದ್ದಾರೆ. ಅವರು ಸರ್ಕಾರದಿಂದ ರಜಿಸ್ಟರ್ ಮಾಡಿಸಿಕೊಂಡವರೋ ಅಥವಾ ಪ್ರಾವೀಣ್ಯತೆ ಪಡೆದವರೋ ತಿಳಿಯದು. ಕೆಲವರು ಪ್ರಾವೀಣ್ಯತೆ ಪಡೆದು ಸರ್ಕಾರದಲ್ಲಿ ನೋಂದಣಿ ಹೊಂದಿದವರೂ ಉಂಟು. ಇವತ್ತಿನ ದಿವಸ ಅಲೋಪತಿ ಡಾಕ್ಟರನು ಆಯುರ್ವೇದ ಚಿಕಿತ್ಸೆ ಮಾಡಿದರೆ ಆಯುರ್ವೇದದವರು ಅಲೋಪತಿ ಚಿಕಿತ್ಸೆ ಮಾಡಿದರೆ ತಪ್ಪು ಎಂದು ತಿಳಿಯಲಾಗುತ್ತಿದೆ. ಆದರೆ ಡಾಕ್ಟರನು ಎಲ್ಲ ವೈದ್ಯಕೀಯ ವಿಧಾನಗಳನ್ನು ಅಭ್ಯಸಿಸಿ ಅರಿತು ಸೇವೆ ಮಾಡುವುದು ಒಳ್ಳೆಯದು ಎಂದು ನನ್ನ ಅಭಿಮತ.

ಆಯುರ್ವೇದ ವಿದ್ಯಾರ್ಥಿಗಳು ಈಗ ಆಯುರ್ವೇದ ಹಾಗೂ ಅಲೋಪತಿ ಎರಡರಲ್ಲೂ ನವೀನತೆ ಬೇಕೆಂದು ರಾಜ್ಯ ವ್ಯಾಪಿ ಚಳುವಳಿ ನಡೆಸುತ್ತಿದ್ದಾರೆ. ಆರೋಗ್ಯ ಮಂತ್ರಿಗಳು ಅವರ ಅಭಿಪ್ರಾಯ ಹಾಗೂ ವಿಚಾರಗಳನ್ನು ಕೇಳಿಕೊಳ್ಳಬೇಕು. ಸುಮ್ಮನಿರುವದು ಸಲ್ಲದು. ಆಯುರ್ವೇದದವರಿಗೆ ಆಧುನಿಕ ಅಲೋಪತಿ ವಿಜ್ಞಾನ ಜ್ಞಾನ ಪರಿಣತಿ ದೊರೆಯುವಂತಾಗಬೇಕು.

ಎಲ್ಲ ಆಸ್ಪತ್ರೆಗಳಲ್ಲೂ ಭ್ರಷ್ಟಾಚಾರ ತುಂಬಿದೆ. ಹುಬ್ಬಳ್ಳಿಯ ಕೆಎಂಸಿ ಆಸ್ಪತ್ರೆಯಲ್ಲಿ ಒಬ್ಬ ಕ್ಷಯ ರೋಗಿ ಚಿಕಿತ್ಸೆಗೆಂದು ಅಡ್ಮಿಟ್ ಆಗಬೇಕೆಂದರೆ 50 ರೂ. ಲಂಚ ಕೇಳಲಾಗುತ್ತದೆ. ಒಬ್ಬ ಜಾಣ ರೋಗಿ ಲಂಚ ಕೊಡದೇ ಅಡ್ಮಿಟ್ ಆಗಿ ಬಿಟ್ಟು ನಂತರ ತನ್ನ ಬಳಿ ಹಣವಿಲ್ಲವೆಂದನಂತೆ. ಆದರೆ ಹಣ ಕೊಡದ ಕಾರಣಕ್ಕಾಗಿ ಆತನನ್ನು ತಕ್ಷಣ ಡಿಸ್‌ಚಾರ್ಜ್ ಮಾಡಲಾಯಿತು. ನನ್ನ ಬಳಿ ಬಂದು ತನ್ನ ಗೋಳು ತೋಡಿಕೊಂಡ. ಆ ಬಡ ರೋಗಿ ವಿಷಯದಲ್ಲಿ ನಾನು ಡೀನ್‌ರಿಗೆ ಪತ್ರ ಬರೆದು 11 ಗಂಟೆಗೆ ಆಸ್ಪತ್ರೆಯಲ್ಲಿ ಅಡ್ಮಿಟ್ ಆದ ಈ ರೋಗಿಯು 11 ಗಂಟೆ 5 ನಿಮಿಷಕ್ಕೆ ಡಿಸ್‌ಚಾರ್ಜ್ ಮಾಡಲ್ಪಟ್ಟನೆಂದರೆ ಅಷ್ಟರೊಳಗೆಯೇ ಆತನ ಸಂಪೂರ್ಣ ಚಿಕಿತ್ಸೆ ನಡೆದು ಆತನು ಗುಣ ಹೊಂದಿದ್ದಾನೆಂದು ತಿಳಿಯಬೇಕೆ ಹೇಗೆ ಎಂದು ವಿಚಾರಿಸಿದೆ. ಈ ಬಗ್ಗೆ ವಿಚಾರಣೆಯಾಯಿತೆ? ಆಗಿದ್ದರೆ ಅದರ ಪರಿಣಾಮ ಏನು ಎಂಬುದು ನನಗೆ ಈ ವರೆಗೂ ತಿಳಿಯಲಿಲ್ಲ. ಆದರೆ ನನ್ನ ಬಳಿ ಗೋಳು ತೋಡಿಕೊಂಡ ಆ ರೋಗಿಯೇ ಪರಲೋಕವಾಸಿಯಾದನೆಂದು ನಂತರ ತಿಳಿದುಬಂದಿದೆ. ಡಾಕ್ಟರುಗಳು ಹೀಗೆ ಲಂಚ ತೆಗೆದುಕೊಳ್ಳುವುದನ್ನು ಕನಿಷ್ಟ ಪಕ್ಷ ಇಂದೋ ನಾಳೆಯೋ ಸತ್ತು ಹೋಗುವಂಥವರಿಂದಲಾದರೂ ಲಂಚ ಪಡೆಯದಿರುವ ಔದಾರ್ಯ ಪ್ರದರ್ಶಿಸಿ ಉಪಚರಿಸಲಿ. ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಅವ್ಯವಸ್ಥೆ, ಭ್ರಷ್ಟತನವನ್ನು ಎಂದು ಹೋಗಲಾಡಿಸುತ್ತದೆ?

ಇನ್ನು ಮೆಡಿಕಲ್ ಜ್ಯುರಿಸ್ಪುಡೆನ್ಸ್ ಬಗ್ಗೆಯೂ ಹೇಳುತ್ತೇನೆ. ಹುಬ್ಬಳ್ಳಿಯಲ್ಲಿ ಒಮ್ಮೆ ಒಂದು ಅನಾಥ ಶಿಶುವಿನ ಯೋಗ ಕ್ಷೇಮ ನೋಡಿಕೊಳ್ಳಲೆಂದು ಮ್ಯಾಜಿಸ್ಟ್ರೇಟರು ಆಸ್ಪತ್ರೆಗೆ ಕಳಿಸಿದರಂತೆ. ದವಾಖಾನೆಗೆ ಕಳಿಸಿದ ಕೂಸು

ಏನಾಯ್ತು ಎಂಬುದು ಇವತ್ತಿನವರೆಗೂ ಯಾರಿಗೂ ಮ್ಯಾಜಿಸ್ಟ್ರೇಟರಿಗೂ ತಿಳಿಯಲೇ ಇಲ್ಲ. ಆದನ್ನು ಮ್ಯಾಜಿಸ್ಟ್ರೇಟರಿಗೂ ತಿಳಿಸದೆಯೋ ದಫನ್ ಮಾಡಲಾಗಿದೆ ಎಂದು ತಿಳಿಸಿದಾಗ ಮ್ಯಾಜಿಸ್ಟ್ರೇಟರು ತಬ್ಬಿಬ್ಬಾಗಿ ಕೂಸನ್ನು ಆಸ್ಪತ್ರೆಗೆ ಕಳಿಸಿದ ನನ್ನ ಗತಿ ಏನು? ಎಂದು ತೊಳಲಾಡಿದರಂತೆ. ಇದನ್ನು ಒಬ್ಬ ಜಿಲ್ಲಾಧಿಕಾರಿಗಳೇ ನನಗೆ ಹೇಳಿದರು. ಆಸ್ಪತ್ರೆಗೆ ಚಿಕಿತ್ಸೆಗೆಂದು ಕಳಿಸಲ್ಪಟ್ಟವರು ಸತ್ತು ದಫನ್ ಮಾಡಲ್ಪಟ್ಟರೂ ಪೊಲೀಸರಿಗೆ ಅಥವಾ ಮ್ಯಾಜಿಸ್ಟ್ರೇಟರಿಗೂ ಮಾಹಿತಿ ಇಲ್ಲದೇ ನ್ಯಾಯಾಲಯದಲ್ಲಿ ಪೊಲೀಸ್ ತನಿಖೆಯಲ್ಲಿ ಬಿಕ್ಕಟ್ಟು ಉದ್ಭವಿಸುತ್ತದೆ. ಆಸ್ಪತ್ರೆಗೆ ಕಳಿಸಲ್ಪಟ್ಟ ಕೂಸಿನ ಪ್ರಕರಣವಿನ್ನೂ ಹಾಗೆಯೇ ಇದೆ.

ಪೊಲೀಸ್ ಕಸ್ಟಡಿಯಲ್ಲಿ ಕೆಲವರು ಸತ್ತರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಇಲ್ಲದೇ ಕೆಲವರು ಸಾಯುತ್ತಾರೆ. ಇಂಥವರು ಹಾರ್ಟ್‌ಫೇಲ್‌ನಿಂದಲೋ, ಉರುಲು ಹಾಕಿಕೊಂಡೋ ಸತ್ತರೆಂದು ಹೇಳಿ ಪ್ರಕರಣ ಮುಚ್ಚಿಹಾಕುವಲ್ಲಿದೊಡ್ಡ ಆಸ್ಪತ್ರೆಗಳ ದೊಡ್ಡ ಡಾಕ್ಟರರೂ ಶಾಮೀಲಾಗ ತೊಡಗಿದರೆ ಹೇಗೆ? ಸರ್ಕಾರಿ ಆಸ್ಪತ್ರೆಗಳ ದಾಖಲೆಗಳ ಅಸಮರ್ಪಕತೆಯತ್ತ ಕಣ್ಣು ಹಾಯಿಸಿದರೆ ಯಾರಿಗಾದರೂ ಈ ದುಸ್ಥಿತಿ ಸ್ಪಷ್ಟವಾಗಿ ಕಾಣುತ್ತದೆ. ಸರ್ಕಾರ ಇದರತ್ತ ಲಕ್ಷ್ಯ ಕೊಡುವದೇ?

ಆಸ್ಪತ್ರೆಗಳಿಗೆ ಔಷಧಿಗಳನ್ನು ಪೂರೈಸುವಲ್ಲಿ ಒಂದು ಪ್ಯಾಕೇಜ್ ಸಿಸ್ಟಮ್ ಅನುಸರಿಸಲಾಗುತ್ತದೆ. ಯಾವ ಯಾವ ಔಷಧಿ ಬೇಕು ಎಂದು ಕೇಳಲಿ ಕೇಳದಿರಲಿ ಒಟ್ಟಾರೆ ಅನೇಕ ಔಷಧಿಗಳ ನಿರಂತರ ಪೂರೈಕೆ ಮಾಡಲ್ಪಡುತ್ತಿರುತ್ತದೆ. ಆದರೆ ಆಸ್ಪತ್ರೆಗಳಲ್ಲಿ ಅಂಥವುಗಳು ಸಹ ಲಭ್ಯವಿರುವುದಿಲ್ಲ. ಇನ್ನು ವಿಶೇಷ ಔಷಧಿಗಳನ್ನಂತೂ ರೋಗಿಗಳು ಡಾಕ್ಟರ ಕಡೆಯಿಂದ ಬರೆಯಿಸಿಕೊಂಡು ತಾವೇ ಕೊಂಡು ತರಬೇಕಾಗುವುದು ಮಾಮೂಲು. ಹುಲಕೋಟಿಯಲ್ಲಿ 1962ರಿಂದ ಒಂದು ಆಸ್ಪತ್ರೆ ಇದೆ. ಡಾಕ್ಟರ್ ಇದ್ದಾರೆ. ಆದರೆ ಔಷಧಿಗಳೇ ಅಲ್ಲಿ ಇಲ್ಲವಂತೆ. ಆಸ್ಪತ್ರೆಗಳಲ್ಲಿ ಔಷಧಿ ಹಾಗೂ ಆಹಾರ ವಸ್ತುಗಳ ಕಳುವು, ಪರಭಾರೆ ನಡೆಯುವುದುಂಟು. ಆಸ್ಪತ್ರೆಯಲ್ಲಿ ರೋಗಿಗಳಿಗೆ ಹರಿದ ಕೊಳಕು ಬಟ್ಟೆಗಳನ್ನೇ ಪೂರೈಸಲಾಗುತ್ತದೆ. ಹಾವೇರಿಯ ಒಂದು ಆಸ್ಪತ್ರೆಯಲ್ಲಿ ನಾನು ನೋಡಲೆಂದು ಹೋಗಿದ್ದೆ. ಅಲ್ಲಿ ರೋಗಿಯೊಬ್ಬ ತುಂಬ ರಗ್ಗು ಹೊದ್ದುಕೊಂಡು ಮಲಗಿದ್ದ. ಎಚ್ಚರವಾಗಿಯೇ ಇದ್ದ. ಅವನನ್ನು ಎಬ್ಬಿಸಿ ಕೇಳಿದಾಗ ಅವನಿಗೆ ಒದಗಿಸಲಾದ ಶರ್ಟ್‌ಗೆ ಬಟನ್‌ಗಳೇ ಇರಲಿಲ್ಲ. ಮೈ ತೆರೆದು ಕಾಣಿಸಿಕೊಳ್ಳಲು ಮುಜುಗರವೆನಿಸಿ ಆತ ಹೊದ್ದುಕೊಂಡಿದ್ದಾನೆಂದು ತಿಳಿಯಿತು. ಆಸ್ಪತ್ರೆಗಳಲ್ಲಿ ಲಂಚದ ಹಾವಳಿಯಿಂದ ಇಷ್ಟೆಲ್ಲ ಅವ್ಯವಸ್ಥೆಗಳಿವೆ. ಸರ್ಕಾರ ಲಕ್ಷ್ಯ ಕೊಡಲೇ ಬೇಕು.

ಸ್ಥಳೀಯರ ಮೇಲೆ ವಿದೇಶಿ ಸವಾರಿ

ಮೈಸೂರು ಲ್ಯಾಂಪ್ ಫ್ಯಾಕ್ಟರಿಯ ಒಟ್ಟು 1, 13, 420 ರೂ.ಗಳ ಬೆಲೆಯ 11, 372 ಶೇರುಗಳನ್ನು ಖರೀದಿಸುವ ರಾಜ್ಯ ಸರ್ಕಾರದ ಯೋಚನೆಯನ್ನು ಶ್ರೀ ಎಸ್.ಎಸ್. ಶೆಟ್ಟರು ಮಾರ್ಚ್ 18ರಂದು ಬಲವಾಗಿ ವಿರೋಧಿಸಿ ಒಳ್ಳೆಯ ಸ್ಥಿತಿಯಲ್ಲಿದ್ದ ಫ್ಯಾಕ್ಟರಿ ಅಮೆರಿಕ ಕಂಪನಿಯೊಂದರ ಸಹಯೋಗ ಪಡೆದು ತೀರ ದುಸ್ಥಿತಿಗೆ ಬಂದುದನ್ನು ಮತ್ತು ಅದರಲ್ಲಿಯ ಅಮೆರಿಕೆಯ ಕಂಪನಿಯ ಪ್ರಭುತ್ವ ಹಾಗೂ ದುರಾಡಳಿತದ ಚಿತ್ರವನ್ನು ಸದನದ ಮುಂದೆ ಮಂಡಿಸಿದ ಬಗೆ.

1936ರಲ್ಲಿ ಕೆಲವು ಖಾಸಗಿ ಉದ್ದಿಮೆದಾರರು 5 ಲಕ್ಷ ರೂ. ಅಧಿಕೃತ ಬಂಡವಾಳದಿಂದ ಮೈಸೂರು ಲ್ಯಾಂಪ್ ಫ್ಯಾಕ್ಟರಿಯನ್ನು ಆರಂಭಿಸಿದರು. 1940ರಲ್ಲಿ ಸರ್ಕಾರ ಈ ಕಂಪನಿಗೆ ಮೂರು ಸಾವಿರ ರೂ. ನೆರವು ನೀಡಿತ್ತು. 1946ರಲ್ಲಿ ಬಂಡವಾಳ ಹತ್ತು ಲಕ್ಷ ರೂ. ಗೇರಿಸಲ್ಪಟ್ಟಿತ್ತು. 1962ರಲ್ಲಿ ಅಮೆರಿಕೆಯ ಜನರಲ್ ಇಲೆಕ್ಟ್ರಿಕ್ ಕಂಪನಿಯೊಂದಿಗೆ ಫ್ಯಾಕ್ಟರಿಯು ಸಹಯೋಗ ಸ್ಥಾಪಿಸಿಕೊಂಡಿತು. ಉತ್ಪಾದನೆಗಳ ಹೆಚ್ಚಳ ಹಾಗೂ ಕೆಲವೊಂದು ವಿಶಿಷ್ಟ ಮಾದರಿಯ ಬಲ್ಬುಗಳ ಉತ್ಪಾದನೆ ಹೊಂದುವ ದೃಷ್ಟಿಯಿಂದ ಈ ಸಹಯೋಗ ಹೊಂದಲಾಯಿತು. ಈ ವಿದೇಶಿಯ ಸಹಯೋಗದ ನಂತರ ಹತ್ತು ಲಕ್ಷ ಸಾಮಾನ್ಯ ಬಲ್ಬು ಹಾಗೂ ಪ್ಲೋರೊಸೆಂಟ್ ಬಲ್ಬುಗಳನ್ನು ಉತ್ಪಾದಿಸುವ ಯೋಜನೆ ಹಮ್ಮಿಕೊಳ್ಳಲಾಯಿತು. ವಿದೇಶಿಯ ಸಹಯೋಗದ ಬಳಿಕ ಶೇ. 44ರಷ್ಟರ ಶೇರುಗಳ ಸರ್ಕಾರದ ಪ್ರಮಾಣವು ಶೇ. 17ಕ್ಕೆ ತಗ್ಗಿಸಲ್ಪಟ್ಟಿತು. ಹೀಗೇಕೆ ಸರ್ಕಾದ ಶೇರುಗಳನ್ನು ತಗ್ಗಿಸಲಾಯಿತು ಎಂದು ತಿಳಿಯದು. ಫ್ಯಾಕ್ಟರಿಯ ಆಡಳಿತ ಸೂತ್ರವೆಲ್ಲ ವಿದೇಶಿಯ ಕಂಪನಿಯ ಪಾಲಾಯಿತು. ಆಶ್ಚರ್ಯವೆಂದರೆ ಪರಿಶಿಷ್ಟ ಜಾತಿಯ ಓರ್ವ ಸೇನಾ ನಿವೃತ್ತ ಅಧಿಕಾರಿಯನ್ನು ಕಾರ್ಯದರ್ಶಿಯಂದು ನೇಮಕ ಮಾಡಿಕೊಳ್ಳಲಾಯಿತು. ಈ ಕಾರ್ಯದರ್ಶಿಯೇ ಫ್ಯಾಕ್ಟರಿಯನ್ನು ನಡೆಸುವವನಾದರೂ ಫ್ಯಾಕ್ಟರಿಯ ಸಂಪೂರ್ಣ ಆಡಳಿತ ಸೂತ್ರವು ವಿದೇಶಿಯ ಕಂಪನಿಯ ಕೈಯಲ್ಲೇ ಇದೆ. ಅವರು ಹೇಳಿದಂತೆಯೇ ಎಲ್ಲವೂ ನಡೆಯುತ್ತಿದೆ. ರಾಜ್ಯದಲ್ಲಿ ಅತಿ ಹೆಚ್ಚು ಸಂಬಳ ಪಡೆವವರೆಂದರೆ ರಾಜ್ಯಪಾಲರು. ಅವರಿಗೆ ಮಾಸಿಕ ಹತ್ತು ಸಾವಿರ ರೂ. ಪಗಾರ ದೊರೆಯುತ್ತದೆ. ಕಂಪನಿಯ ವಿದೇಶಿಯ ತಾಂತ್ರಿಕ ನಿರ್ದೇಶಕನಿಗೆ ಸಹ ಮಾಸಿಕ ಹತ್ತು ಸಾವಿರ ರೂ. ಸಂಬಳವಿದೆ. ಅವನಿಗೆ ಇರಲು ಬಾಡಿಗೆ ರಹಿತ ಐಷಾರಾಮಿ ಮನೆಯೊಂದನ್ನು ಒದಗಿಸಲಾಗಿದೆ. ವಿದೇಶಿಯ ಸಹಯೋಗಕ್ಕೆ ಮೊದಲು ಒಬ್ಬ ಕಾರ್ಯದರ್ಶಿ, ಒಬ್ಬ ವರ್ಕ್ಸ್ ಮ್ಯಾನೇಜರ್, 230 ಕೆಲಸಗಾರರು ಇದ್ದರು. ಆಗ ಒಂದೇ ಒಂದು ಶಿಫ್ಟ್‌ನಲ್ಲಿ 10 ಸಾವಿರ ಬಲ್ಬುಗಳು ಪ್ರತಿದಿನವೂ ತಯಾರಾಗುತ್ತಿದ್ದವು. ಈಗ ಒಬ್ಬ ವಿದೇಶಿಯ ಟೆಕ್ನಿಕಲ್ ಡೈರೆಕ್ಟರ್ ಮಾಸಿಕ ಒಂದು ಸಾವಿರ ರೂ. ವೇತನ ಪಡೆಯುವ 9 ಮ್ಯಾನೇಜರ್‌ರಿದ್ದಾರೆ. ಈಗ ಎರಡು ಶಿಫ್ಟ್‌ನಲ್ಲಿ ಕೆಲಸ ನಡೆಯುತ್ತಿದ್ದರೂ ಮೊದಲಿನ ಎರಡು ಪಟ್ಟು ಅಂದರೆ 20 ಸಾವಿರ ಬಲ್ಬು ಸಹ ಪ್ರತಿದಿನ ಸಿದ್ಧವಾಗುತ್ತಿಲ್ಲ. ಎರಡೂ ಶಿಫ್ಟ್ ಸೇರಿ ಉತ್ಪಾದಿಸುತ್ತಿರುವದು ಕೇವಲ 16 ಸಾವಿರ ಬಲ್ಬುಗಳು ಮಾತ್ರ! ವೆಚ್ಚದ ಭಾರವೊಂದೇ ಹೆಚ್ಚುತ್ತ ನಡೆದಿದೆ. ಉತ್ಪಾದನೆ ಹೆಚ್ಚಿಲ್ಲ. ಕಚ್ಚಾ ಮಾಲನ್ನು ಹಾಳು ಮಾಡಲಾಗುತ್ತದೆ.ವಿದೇಶಿಯ ಅಧಿಕಾರಿಗಳಿಂದ ದಬ್ಬಾಳಿಕೆ ದುರಾಡಳಿತ ನಡೆದಿದೆ. ವಿದೇಶಿಯ ಸಹಯೋಗಕ್ಕೆ ಮೊದಲು ಫ್ಯಾಕ್ಟರಿ ಸಂಪೂರ್ಣ ದೇಶಿಯವಿದ್ದಾಗ ಪ್ರತಿಯೊಂದು ವಸ್ತುವೂ ಫ್ಯಾಕ್ಟರಿಯಲ್ಲೇ

ಉತ್ಪಾದನೆಯಾಗುತ್ತಿತ್ತು. ಈಗ ಬಲ್ಬಿಗೆ ಅಳವಡಿಸುವ ಮೆಟಲ್ ಕ್ಯಾಪ್ ಗಳನ್ನು ಕಲಕತ್ತಾ ಹಾಗೂ ಬೇರೆ ಕಡೆಗಳಿಂದ ತರಿಸಲಾಗುತ್ತಿದೆ. ಬಲ್ಬಿನ ಶೆಲ್ ಗಳನ್ನು ಬೆಂಗಳೂರಿನಲ್ಲಿರುವ ಬೇರೆ ಫ್ಯಾಕ್ಟರಿಯಿಂದ ಖರೀದಿಸಲಾಗುತ್ತಿದೆ. ಈಗ ಈ ಫ್ಯಾಕ್ಟರಿಯಲ್ಲಿ ಏನನ್ನಾದರೂ ಉತ್ಪಾದಿಸಲಾಗುತ್ತದೆ ಎಂಬುದು ತಿಳಿಯುತ್ತಿಲ್ಲ. ಭಾರೀ ವೇತನ ಪಡೆವ ಅಧಿಕಾರಿ ವರ್ಗ ಎರಡು ಪಾಳೆಗಳಲ್ಲಿಯ ಕಾರ್ಮಿಕರು ಏನನ್ನು ಮಾಡುತ್ತಾರೆ. ವಿದೇಶಿಯ ಅಧಿಕಾರಿಗಳು ಭಾರೀ ವೇತನ ಪಡೆದು ಐಷಾರಾಮಿನಲ್ಲಿ ಜೀವಿಸುತ್ತಿರುವರಲ್ಲದೇ ಕ್ಷಣ ಕ್ಷಣಕ್ಕೂ ನಮ್ಮ ಕುಶಲ ಕಾರ್ಮಿಕ ವರ್ಗವನ್ನು ನಿಂದಿಸುತ್ತಾರೆ. ಕಾರ್ಮಿಕ ಸಂಘದ ಕಾರ್ಯದರ್ಶಿಯು ಈ ಫ್ಯಾಕ್ಟರಿಯ ದುಸ್ಥಿಯನ್ನೆಲ್ಲಾ ಹೊರಗೆಡವಿದ್ದಾನೆ. ಕೆಲಸಗಾರರ ಮೇಲೆ ದಬ್ಬಾಳಿಕೆ, ಕೆಲಸದಿಂದ ಬೇಕಾದಾಗ ತೆಗೆದು ಹಾಕುವದು... ಮೊದಲಾದವು ನಡೆಯುತ್ತಿವೆ. ಕಾರ್ಮಿಕ ನ್ಯಾಯಾಲಯಗಳಲ್ಲಿ ಬಹಳಷ್ಟು ವ್ಯಾಜ್ಯಗಳು ಇತ್ಯರ್ಥವಾಗದೇ ಉಳಿದಿವೆ. ಇಂತಹ ಫ್ಯಾಕ್ಟರಿಯ ಶೇರುಗಳನ್ನು ಕೊಳ್ಳುವುದಕ್ಕೆ ಮೊದಲು ಸರ್ಕಾರ ಹತ್ತಾರು ಬಾರಿ ಯೋಚಿಸಲಿ. ಮತ್ತು ಫ್ಯಾಕ್ಟರಿಯನ್ನು ಸರಿಪಡಿಸಲು ಕೂಡಲೇ ಕ್ರಮಗಳನ್ನು ಕೈಗೊಳ್ಳಲಿ.

ಜೈಲುಗಳಲ್ಲಿ ಖೈದಿಗಳಿಗೆ ಆಹಾರ ಮತ್ತಿತರರ ಸೌಲಭ್ಯ ಒದಗಿಸಲು ಐದು ಲಕ್ಷ ರೂ. ಹೆಚ್ಚಿಗೆ ಕೇಳಿದ್ದೀರಿ. ಇದೇನು ಅಗತ್ಯವಿಲ್ಲ. ಯಾಕೆಂದರೆ ಜೈಲಿನಲ್ಲಿ ಖೈದಿಗಳು ತಯಾರಿಸಿದ ಬಟ್ಟೆ, ಫರ್ನಿಚರ್ ಮೊದಲಾದವುಗಳನ್ನು ಜೈಲುಗಳ ಸಲುವಾಗಿಯೇ ಉಪಯೋಗಿಸಬಹುದಾಗಿದೆ.

ಪ್ರವಾಸಿ ಬಂಗ್ಲೆಗಳ ದುರಸ್ತಿಗಾಗಿ ಹಣ ಕೇಳಲಾಗಿದೆ. ಆದರೆ ಪ್ರತಿ ವರ್ಷ ಹಣ ಮಂಜೂರಿ ಮಾಡಿಸಿಕೊಳ್ಳುತ್ತಿರುವಿರಾದರೂ ಪ್ರವಾಸಿ ಬಂಗ್ಲೆಗಳು ಮಾತ್ರ ಮೊದಲಿನ ಹಾಗೆ ನಾದುರಸ್ತಾಗಿಯೇ ಇವೆ. ಸೌಲಭ್ಯಗಳೂ ಅಲ್ಲಿರುವುದಿಲ್ಲ.

ಮಾರ್ಚ್ 20ರಂದು ಪಿಡಬ್ಲ್ಯುಡಿ ಇಲಾಖೆಗಳ ಬೇಡಿಕೆಗಳ ವಿಷಯದಲ್ಲಿ ಶ್ರೀ ಎಸ್.ಎಸ್. ಶೆಟ್ಟರ್ ಅವರು ಮಾತಾಡಿ ವಿದ್ಯುತ್ ದರ ಏರಿಕೆಯನ್ನು ಪ್ರತಿಭಟಿಸಿದರು.

ಮದ್ರಾಸಿನವರಿಗೆ ಉದಾರನಾಗಿ ಹಾಗೂ ಕಡಿಮೆ ಬೆಲೆಯಲ್ಲಿ ವಿದ್ಯುಚ್ಛಕ್ತಿ ಒದಗಿಸುವುದಾಗಿ ವಿದ್ಯುಚ್ಛಕ್ತಿ ಇಲಾಖೆ ಮಂತ್ರಿಗಳು ಹೇಳಿದ್ದು ಪತ್ರಿಕೆಗಳಲ್ಲಿ ಬಂದಿದೆ. ಆದರೆ ನಮ್ಮ ಮೈಸೂರು ರಾಜ್ಯದಲ್ಲಿ ಮನೆ ಬಳಕೆಗೆ ವಿದ್ಯುತ್ ಉಪಯೋಗಿಸುವುದರ ದರ ಏರಿಸುತ್ತಲೇ ಇದ್ದಾರೆ. ಇದಕ್ಕೆ ಕಾರಣವೇನು? ಏಕೆ ಏರಿಸಬೇಕು? ನಮ್ಮ ಜನರು ಮಾಡಿರುವ ಪಾಪವಾದರೂ ಏನು? ಎಂದು ಪ್ರಶ್ನೆ ಮಾಡಬೇಕಾಗಿದೆ. ನೇಕಾರನ ಹೆಂಡತಿ ಬೆತ್ತಲೆ ಎಂದು ಹೇಳುವ ಹಾಗೆ ನಾವು ಉತ್ಪತ್ತಿ ಮಾಡುವ ವಿದ್ಯುತ್ ಗೆ ಹೆಚ್ಚು ದರ ಹಾಕಿ ಬೇರೆಯವರಿಗೆ ಕಡಿಮೆ ಬೆಲೆಯಲ್ಲಿ ಕೊಡುವುದರ ಔಚಿತ್ಯವೇನು? ಇದಲ್ಲದೇ ಇದರಲ್ಲಿ ಎರಡು ವಿಧಾನ ಮಾಡಿದ್ದಾರೆ. ಒಂದು ಮನೆಗೆ ಉಪಯೋಗ ಮಾಡುವುದು. ಇನ್ನೊಂದು ಹಿಟಿಂಗ್ ಸರ್ಕ್ಯೂಟ್ ವಗೈರೆಗೆ ಉಪಯೋಗಿಸುವದು. ಮನೆಯಲ್ಲಿ ಬೆಳಕಿಗೆ ಉಪಯೋಗಿಸುವುದಕ್ಕೆ ರಿಯಾಯ್ತಿ ಇಲ್ಲ. ಹೀಟಿಂಗ್ ಸರ್ಕ್ಯೂಟ್ ಇದ್ದು ಸ್ನಾನಕ್ಕೆ ನೀರು ಕಾಯಿಸುವುದು, ಅಡುಗೆ ಮೊದಲಾದವುಗಳಿಗೆ ಒದಗಿಸುವ ವಿದ್ಯುಚ್ಛಕ್ತಿಗೆ ಕಡಿಮೆ ದರ ವಿಧಿಸುತ್ತಾರೆ. ಈ ಭೇದ ಭಾವವೇಕೆ? ಒಮ್ಮೆ ಈ ಸವಲತ್ತನ್ನು ಕೊಟ್ಟ ಮೇಲೆ

ಎಲ್ಲಕ್ಕೂ ಒಂದೇ ಸಮನಾದ ದರ ಇರಬೇಕು. ಇಂದು ಎಂ.ಎಸ್.ಇ.ಬಿ. ಕೆಲಸ ಸರಿಯಾಗಿಲ್ಲ. ಬೆಲೆ ಏರಿಸುತ್ತಿರುವುದನ್ನು ಅನೇಕ ಸಲ ವಿರೋಧಿಸಲಾಗಿದೆ.

ಇನ್ನು ಹಾವೇರಿ ಡಿವಿಜನ್ನಿಗೆ ಒಬ್ಬ ಕಾಂಟ್ರ್ಯಾಕ್ಟರ್‌ನ ವಿಚಾರ ಹೇಳಬೇಕಾಗಿದೆ. ಅವನು ಒಂದು ರಸ್ತೆಯ ಕೆಲಸ ಮುಗಿಸಿದ ನಂತರ ತಾನಿಟ್ಟಿದ್ದ ಡಿಪಾಜಿಟ್‌ನ್ನು ವಾಪಸು ಕೊಡಿ ಎಂದು ಎರಡು ವರ್ಷಗಳಿಂದ ಕೇಳುತ್ತಲೇ ಇದ್ದರೂ ಏಕೆ ಕೊಡಲಿಲ್ಲ? ಆತನು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾನೆ. ಅಂದ ಮೇಲೆ ಡಿಪಾಜಿಟ್‌ನ್ನು ಏಕೆ ವಾಪಸು ಕೊಡಬಾರದು? ಸರ್ಕಾರದವರು ಕೊಡದಿರುವದಕ್ಕೆ ಕಾರಣವೇನು? ಹೀಗಾದರೆ ಪ್ರಾಮಾಣಿಕವಾಗಿ ಕೆಲಸ ಮಾಡುವವರು ಮುಂದೆ ಬಂದು ಸರ್ಕಾರದೊಂದಿಗೆ ಹೇಗೆ ತಾನೆ ಸಹಕರಿಸಬೇಕು? ಇದು ವಿಚಾರ ಮಾಡಬೇಕಾದ ಸಂಗತಿ. ಇಂದು ಕಾಂಟ್ರ್ಯಾಕ್ಟರುಗಳ ಬಗ್ಗೆ ಭ್ರಷ್ಟಾಚಾರದ ದೂರುಗಳಿವೆ. ಆದರೆ ಸರ್ಕಾರ ಮಾಡುವ ಕೆಲಸ ಹೀಗಿದೆ ಎಂಬುದನ್ನು ಗಮನಿಸಬೇಕು.

ಇನ್ನು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಕೆಲವು ಕೆಲಸಗಳನ್ನು ಮಾಡಿರುವುದನ್ನು ತಿಳಿಸಿದ್ದಾರೆ. ಆದರೆ ಕರೂರ ಹೋಬಳಿಯ ದುರಂತದ ಬಗ್ಗೆ ಒಂದು ಪತ್ರ ಬಂದಿದೆ. ಬಹಳ ದಿವಸಗಳಿಂದ ಅದರ ಬಗ್ಗೆ ಪತ್ರಗಳು ಬರುತ್ತಿವೆ. ಶರಾವತಿ ವಿದ್ಯುತ್ ಯೋಜನೆಯ ಕೆಲಸವಾದ ಬಳಿಕ ಕರೂರ ಹೋಬಳಿಯ ಹಳ್ಳಿಗಳ ಬಳಿ ನೀರು ತುಂಬಿಕೊಂಡು ಹೊರಗೆ ಹೋಗಿ ಬರುವುದಕ್ಕೆ ರಸ್ತೆ ಇಲ್ಲದಂತಾಗಿದೆ. ಜನರು ಹೇಗೆ ಅಡ್ಡಾಡಬೇಕು? ಕಳಸವಳ್ಳಿ ಮತ್ತು ಅಂಬರಗೋಡಲು ಬಳಿ ನೀರು ಸಾಗರೋಪಾದಿಯಲ್ಲಿ ನಿಂತಿದೆ. ಜನರಿಗೆ ಓಡಾಡುವುದಕ್ಕೆ ಅವಕಾಶವಿಲ್ಲ. ಒಂದು ಸ್ಟೀಮ್ ಲಾಂಚನ್ನಾದರೂ ಕೊಡಬೇಕು ಎಂದು ಜನರು ಬೇಡಿಕೊಂಡರು. ಆ ವಿಚಾರದಲ್ಲಿ ಏನು ಮಾಡಿದೀರಿ? ಎಂದು ಕೇಳುತ್ತೇನೆ. ಅದನ್ನು ಕೊಟ್ಟಿರುವುದಿಲ್ಲವೆಂದು ತಿಳಿದುಬಂದಿದೆ. ಸರ್ಕಾರದ ನೀತಿ ವಿಚಿತ್ರವಾಗಿದೆ. ಇಂದು ಅಲ್ಲಿದ್ದ ಸೇತುವೆ ಕೂಡ ನಾದುರಸ್ತಾಗಿದೆ. ಕರೂರ ಹೋಬಳಿಯಿಂದ ಸಾಗರಕ್ಕೆ ಹೋಗಲು ಮೊದಲು 25 ಮೈಲಿಯಾಗುತ್ತಿತ್ತು. ಈಗ 75 ಮೈಲಾಗುತ್ತದೆ. ಸುತ್ತಿಕೊಂಡು ಹೋಗಬೇಕು. ಈ ಪ್ರಕಾರ ಈ ಒಂದು ಯೋಜನೆಯಿಂದ ಉಂಟಾದ ಹೊಸ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರ ಸ್ವಲ್ಪಾದರೂ ಜನರ ನೆರವಿಗೆ ಧಾವಿಸಬೇಕು.

ಗದುಗಿಗೆ ಕುಡಿವ ನೀರನ್ನು ಒದಗಿಸಲು ಒಂದು ಯೋಜನೆ ಇದೆ. ಈ ಯೋಜನೆಯಾಗಿ ಬಹಳ ದಿವಸಗಳಾದವು. ಒಂದು ಹೊಳೆಯಿಂದ ಅಲ್ಲಿಗೆ ನೀರು ಸರಬರಾಜು ಆಗಬೇಕಾಗಿದೆ. ಅದನ್ನು ಬೇಗ ವಿಳಂಬ ಮಾಡದೇ ಕಾರ್ಯ ರೂಪಕ್ಕೆ ತರಬೇಕು. ನೀರಿನ ಪರಿಸ್ಥಿತಿ ಇಂದು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಉಗ್ರ ರೂಪ ತಾಳಿದೆ. ಬೆಂಗಳೂರು, ಹುಬ್ಬಳ್ಳಿಯಂಥ ಊರುಗಳಲ್ಲಿ ನೋಡಬಹುದು. ಊರಿನ ಸ್ವಚ್ಛತೆ ಹಾಗೂ ಆರೋಗ್ಯ ಉಳಿಯಬೇಕಾದರೆ ಮುಖ್ಯವಾಗಿ ನೀರು ಬೇಕು. ಇದರ ಬಗ್ಗೆ ಸಹ ಒತ್ತಾಯಿಸುತ್ತೇನೆ.

ನಮ್ಮ ಭಾಗದಲ್ಲಿ ಅನೇಕ ಹಳ್ಳಿಗಳಿಗೆ ಮಳೆಗಾಲದಲ್ಲಿ ಹೋಗಿ ಬರುವದು ಕಷ್ಟ. ಒಮ್ಮೆ ಯಾವುದಾದರೂ ಹಳ್ಳಿಗೆ ಹೋದಾಗ ಅಕಸ್ಮಾತ್ತಾಗಿ ಮಳೆಯೇನಾದರೂ ಬಂದರೆ ಎರಡುದಿವಸ ಹೊರಗೆ ಬರುವುದಕ್ಕೆ ಆಗುವುದಿಲ್ಲ. ಉದಾಹರಣೆ ಹೇಳಬೇಕೆಂದರೆ ಬೆಣ್ಣೆಹಳ್ಳ, ಬೆಣ್ಣೆಹಳ್ಳಕ್ಕೆ ಸೇತುವೆ ಕಟ್ಟುವ ಕೆಲಸ ಎರಡು ವರ್ಷಗಳಿಂದ ನಡೆಯುತ್ತಿದೆ.

ಇನ್ನೂ ಪೂರ್ಣವಾಗಿಲ್ಲ. ಏಕೆ ಈ ನಿಧಾನ? ಕಾಂಟ್ರ್ಯಾಕ್ಟರು ಏಕೆ ಹಾಗೆ ಮಾಡುತ್ತಿದ್ದಾನೋ ಗೊತ್ತಿಲ್ಲ. ಬಹುಶಃ ಅದನ್ನುಪೂರ್ಣ ಮಾಡಿ ಸಮಾರಂಭ ನಡೆಸಲು ಅಮೆರಿಕೆ ರಾಯಬಾರಿ ಚೆಸ್ಟರ್ ಬೌಲ್ಸ್ ಬರಬೇಕೋ ಏನೋ! ಇದೇ ತಿಂಗಳು 27ರಂದು ಶರಾವತಿಯ ಮೂರು ಹಾಗೂ ನಾಲ್ಕು ವಿಭಾಗಗಳನ್ನು ಉದ್ಘಾಟಿಸುವುದಕ್ಕೆ ಚೆಸ್ಟರ್ ಬೌಲ್ಸ್ ಬರುತ್ತಾರಂತೆ. ಶಾಸಕರಿಗೆ ಹೋಗಿ ಬರುವುದಕ್ಕಾಗಿ ವಿಧಾನಸಭೆಗೆ ಬಿಡುವು ಕೊಟ್ಟಿದ್ದಾರೆ. ದೇಶದ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲದಿರುವಾಗ ಜನರ ಹಣ ಖರ್ಚು ಮಾಡಿ ಸಭೆ ನಡೆಸದೇ ಸದಸ್ಯರೆಲ್ಲ ಅಲ್ಲಿಗೆ ಹೋಗುವದು ಸರಿಯೇ? ಇದಕ್ಕೆ ಕಾರಣ ಇಂದು ಅವರಿಗೆ ಶರಣು ಹೋಗುವ ಪರಿಸ್ಥಿತಿ ಇದೆ. ಹಣಕ್ಕಾಗಿ ನಾವು ಪರರಿಗೆ ಗುಲಾಮರಾಗಿದ್ದೇವೆ. ಇದು ನಿಜವಾದ ಸಂಗತಿ. ಇದು ತುಂಬಾ ಖೇದನೀಯ. ಸಾಕಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿದ ಮೇಲೆ ಅದು ರೈತರಿಗೆಲ್ಲ ದೊರೆಯಬೇಕು. ಬಳಕೆದಾರರಿಗೆ ಸರಿಯಾಗಿ ವಿನಿಯೋಗವಾಗಬೇಕು. ಬಳಕೆದಾರರಿಗೆ ಸಾಕಷ್ಟು ದೊರೆಯದೇ ಪ್ರಗತಿ ಕುಂಠಿತವಾಗಬಾರದು ಎಂಬುದರ ಬಗ್ಗೆ ಎಚ್ಚರಿಕೆ ವಹಿಸಿಲ್ಲ. ಇಂದು ಶರಾವತಿಯಲ್ಲಿ ಹೆಚ್ಚು ವಿದ್ಯುಚ್ಛಕ್ತಿಗಳನ್ನು ಉತ್ಪತ್ತಿ ಮಾಡಿ ಬೇರೆ ರಾಜ್ಯಗಳಿಗೆ ಕೊಡಲಾಗುತ್ತಿದೆ. ಹಾಗೆ ಕೊಡುವಾಗ ಕೇಂದ್ರ ಸರ್ಕಾರ ಉಳಿದ ಯೋಜನೆಗಳ ಬಗ್ಗೆ ಏನು ಹೇಳುತ್ತದೆ? ನಾವು ಇಲ್ಲಿ ಉತ್ಪತ್ತಿಯಾಗುವುದನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲ ಎಂದು ತಿಳಿದು ಕೇಂದ್ರ ಸರ್ಕಾರ ನಮ್ಮ ಯೋಜನೆಗಳಿಗೆ ಸಹಾಯ ಕಡಿಮೆ ಮಾಡಬಹುದು. ಆದುದರಿಂದ ಎಷ್ಟು ಸಾಧ್ಯವೋ ಅಷ್ಟನ್ನು ಇಲ್ಲೇ ನಮ್ಮ ರಾಜ್ಯದಲ್ಲೇ ಉಪಯೋಗಿಸಲು ಪ್ರಯತ್ನ ಮಾಡಲೇಬೇಕು.

ವಿದ್ಯುಚ್ಛಕ್ತಿ ಮಂಡಳಿಯ ಅನೇಕ ಕಾರ್ಮಿಕರ ಬಗ್ಗೆ ಒಂದು ಮಾತನ್ನು ಹೇಳಲೇಬೇಕು. ಅತೃಪ್ತ ಕಾರ್ಮಿಕರಿಂದ ಯಾವ ಕೆಲಸವೂ ಆಗದು. ಇವತ್ತು ಮುಂಬೈ ರಾಜ್ಯದಲ್ಲಿಯ ಅನೇಕ ವಿದ್ಯುಚ್ಛಕ್ತಿ ಮಂಡಳಿ ಕಾರ್ಮಿಕರು ಮೈಸೂರು ವಿದ್ಯುಚ್ಛಕ್ತಿ ಮಂಡಳಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ಇದಾದ ಮೇಲೆ ಅವರ ಬಗ್ಗೆ ಇರತಕ್ಕ ಒಂದು ಕ್ಲಾಸಿಫಿಕೇಶನ್ ಆಫ್ ಗ್ರೇಡ್ಸ್ ಇನ್ನೂವರೆಗೂ ಮಾಡಿಲ್ಲ ಎಂದು ಅವರು ಶೆಟಗೊಂಡು ಕುಳಿತಿದ್ದಾರೆ. ಸರ್ಕಾರದ ಕೆಲಸ ನನ್ನದು ಎಂಬ ಭಾವನೆ ಅವರಲ್ಲಿ ಹೋಗಿ ಇವತ್ತು ನನ್ನ ಗ್ರೇಡು ಇಕ್ವೇಟ್ ಆಗಿಲ್ಲ. ನಾನು ಪರಕೀಯ ಎಂಬ ಭಾವನೆ ಅವರಲ್ಲಿ ಉಳಿದರೆ ಕೆಲಸ ಸರಿಯಾಗಿ ಆಗಲಾರದು.

ಇವತ್ತು ಎಷ್ಟೋ ಕಡೆ ನಿರುದ್ಯೋಗ ನಿರ್ಮಾಣವಾಗುವಂಥ ಸ್ಥಿತಿಯುಂಟಾಗಿದೆ. ಬೆಂಗಳೂರಿನಲ್ಲಿ 500 ಜನರನ್ನು ತೆಗೆದು ಹಾಕುವಂಥ ಪರಿಸ್ಥಿತಿ ಉಂಟಾಗಿತ್ತು. ಸಂಧಾನ ಏರ್ಪಟ್ಟು ಹಾಗೆಯೇ ಮುಗಿಯಿತು. ಕ್ಯಾಜುಯಲ್ (ಹಂಗಾಮಿ) ಲೇಬರ್ಸ್ ಸಮಸ್ಯೆ ಉದ್ಭವವಾಗುತ್ತದೆ. ಯಾವುದಾದರೂ ಒಂದು ಯೋಜನೆಯಲ್ಲಿ ದಿನಗೂಲಿಯ ಮೇಲೆ ಅಸಂಖ್ಯಾತ ಜನರನ್ನು ಇಟ್ಟುಕೊಳ್ಳುತ್ತಾರೆ. ಅವರನ್ನು ಖಾಯಂ ಮಾಡುವುದಿಲ್ಲ. ಆ ಒಂದು ಯೋಜನೆ ಮುಗಿಯಿತೆಂದರೆ ಅವರನ್ನು ಎಲ್ಲಿಗೆ ವರ್ಗಾಯಿಸಬೇಕು ಅಥವಾ ಅವರ ಗತಿಯೇನು ಎಂಬುದು ಗೊತ್ತಾಗುವುದಿಲ್ಲ. ಇದು ಈಗ ವಿಕೋಪಕ್ಕೆ ಮುಟ್ಟುತ್ತಿದೆ. ಹೀಗೆ ಕಾರ್ಮಿಕರ ಸಮಸ್ಯೆ ನಿರುದ್ಯೋಗ ನಿರ್ಮಾಣ ಆಗದಂತೆ ನೋಡಿಕೊಳ್ಳಬೇಕು.

ಹುಬ್ಬಳ್ಳಿಗೆ ಸಮೀಪ ಆದರಗುಂಚಿ ಹತ್ತಿರ ಕ್ವಾರಿಯಿಂದ ಕಲ್ಲು, ಬಂಡೆಗಳನ್ನು ಎಬ್ಬಿಸಲಿಕ್ಕೆ ಸರ್ಕಾರದವರು ಒಂದು ವ್ಯವಸ್ಥೆಯನ್ನೇನೋ ಮಾಡಿದ್ದೀರಿ. ಆದರೆ ಯಾರು ಈ ಕಲ್ಲು ಬಂಡೆಗಳನ್ನು ಎಬ್ಬಿಸಲಿಕ್ಕೆ ಬರುತ್ತಾರೆ? ಅವರಿಗೆ

ಏನು ಅಧಿಕಾರವಿದೆ? ಎಂಬುದನ್ನು ತಿಳಿದುಕೊಳ್ಳಲಾರದ ಗೊಂದಲ ನಡೆದಿದೆ. ಯಾವನೋ ಒಬ್ಬನು ಹೋಗಿ ಸರ್ಕಾರದಿಂದ ಬಂದಿರುವುದಾಗಿ ಹೇಳಿಕೊಂಡು ಹತ್ತು ಕಲ್ಲು ಬಂಡೆಗಲ್ಲನ್ನು ಎಬ್ಬಿಸಿಕೊಂಡು ಹೋಗುತ್ತಾನೆ. ಪಿಡಬ್ಲ್ಯುಡಿ ಸಾಹೇಬರು ತನಗೆ ಕೊಟ್ಟಿದ್ದಾರೆಂದು ಹೇಳಿ ಇನ್ನೊಂದು ಹತ್ತು ಬಂಡೆಗಳನ್ನು ಸಾಗಿಸುತ್ತಾನೆ. ಹೀಗೆ ಕ್ವಾರಿ ಕೆಲಸ ನಡೆಯುತ್ತ ಇದೆ. ಕಲ್ಲುಗಳೆಲ್ಲ ಮಾಯವಾಗ್ತಾಯಿವೆ ಇದರ ಕಡೆಗೆ ಲಕ್ಷ್ಯ ಕೊಡಬೇಕು ಎಂದರು.

ಹುಬ್ಬಳ್ಳಿಯ ಇಂಡಸ್ಟ್ರೀಯಲ್ ಎಸ್ಟೇಟ್‌ನ ಶೆಡ್ಡುಗಳನ್ನು ಭಾಡಿಗೆಗೆ ಕೊಡುವುದಕ್ಕೆ ಬದಲು ಭಾಡಿಗೆ ಖರೀದಿ ಆಧಾರದ ಮೇಲೆ ಉದ್ದಿಮಿದಾರರಿಗೆ ಕೊಡಬೇಕೆಂಬ ಯೋಜನೆ ಜಾರಿಗೆ ಕ್ರಮ ತೆಗೆದುಕೊಳ್ಳಲಾಗಿಯೇ ಹೇಗೆಂಬುದನ್ನು ಶ್ರೀ ಶೆಟ್ಟರರು ಸಚಿವರಿಂದ ತಿಳಿಯಬಯಸಿದ್ದಕ್ಕೆ ಸಚಿವ ಎ.ಪಿ.ಅಪ್ಪಣ ಅವರು, ಸರ್ಕಾರ ಈ ಯೋಜನೆಯನ್ನು ಇತ್ತೀಚೆಗಷ್ಟೇ ಮಂಜೂರು ಮಾಡಿದೆ. ಪ್ರತಿಯೊಂದು ಶೆಡ್ಡಿನ ಯಾವೊಬ್ಬ ಹಣ ಪಾವತಿಯ ಕಂತು ಮೊದಲಾದ ವಿವರಗಳನ್ನು ಸಿದ್ದಪಡಿಸಲಾಗುತ್ತಿದೆ. ಒಂದು ತಿಂಗಳಲ್ಲೇ ನಾವು ಯೋಜನೆಯ ವಿವರ ಪ್ರಸಿದ್ದಿಸಲಿದ್ದೇವೆ.

ಶ್ರೀ ಎಸ್.ಎಸ್. ಶೆಟ್ಟರ : ಕೇಂದ್ರ ಸರ್ಕಾರ ಒದಗಿಸಿದ ಕಾಮನ್ ಫೌಂಡ್ರಿ ಮಶೀನ್‌ನನ್ನು ಹಾಕಬೇಕೆಂಬ ಇನ್ನೊಂದು ಬೇಡಿಕೆ ಇದ್ದು ಅದಕ್ಕಾಗಿ ಸರ್ಕಾರ ಕೆಲವು ಕಟ್ಟಡಗಳನ್ನು ನೀಡಬೇಕಿತ್ತು. ಏನಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ?

ಶ್ರೀ ಎ.ಪಿ. ಲಕ್ಷ್ಮಣ : ಈಗಾಗಲೇ ಇಂಡಸ್ಟ್ರೀಯಲ್ ಎಸ್ಟೇಟ್‌ನಲ್ಲಿಯ 'ಡಿ' ಮಾದರಿಯ ಶೆಡ್ಡುಗಳನ್ನು ಸರ್ಕಾರ ಈ ಉದ್ದೇಶಕ್ಕಾಗಿ ಚಿಕ್ಕ ಉದ್ದಿಮೆ ಸೇವಾ ಸಂಸ್ಥೆಗೆ ವರ್ಕ್‌ಶಾಪ್ ಆರಂಭಿಸಲು ನೀಡಿದೆ. ಸಂಸ್ಥೆಯು ಈ ಶೆಡ್ಡುಗಳ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ್ದು ಯಂತ್ರ ಸಹ ಬಂದಿದೆ. ಇನ್ನೇನು ಆ ಕೆಲಸ ಪ್ರಾರಂಭವಾಗಲಿದೆ.

ಶ್ರೀ ಎಸ್.ಎಸ್. ಶೆಟ್ಟರ : ನಮ್ಮ ದೇಶದ ಸಣ್ಣ ಸಣ್ಣ ಹಿಡುವಳಿದಾರರಿಗೆ ಟ್ರ್ಯಾಕ್ಟರ್ ಮತ್ತಿತರರ ಕೃಷಿ ಯಂತ್ರೋಪಕರಣಗಳಿಂದ ಲಾಭದಾಯಕವೆನಿಸಿಲ್ಲ. ಸಾಮಾನ್ಯವಾಗಿ 11 ಸಾವಿರ ಸದಸ್ಯರು ಇರತಕ್ಕ ಕೋ. ಆಪರೇಟಿವ್ ಸೊಸೈಟಿಗಳು ಕೋ. ಆಪರೇಟಿವ್ ಬೇಸಿಸ್ ಮೇಲೆ ಒಕ್ಕಲುತನ ಮಾಡಿದರೆ ಈ ಸಮಸ್ಯೆ ಬಿಡಿಸಬಹುದೆಂದು ಯೋಜನೆ ಹಾಕಲಾಯಿತು. ಇವತ್ತಿನ ದಿವಸ ಅಂತಹ 500 ಕೋ. ಆಪರೇಟಿವ್ ಸೊಸೈಟಿಗಳಿವೆ. ಅವುಗಳಲ್ಲಿ ಕೆಲವರು ದುಡ್ಡನ್ನು ತಿಂದು ಹಾಕುತ್ತಿದ್ದಾರೆ. ಇದು ನಿಷ್ಪ್ರಯೋಜಕವೆಂದು ಸರ್ಕಾರವೂ ಒಪ್ಪಿಕೊಂಡಿದೆ. ಆದ್ದರಿಂದ ಯಾಂತ್ರೀಕೃತ ಬೇಸಾಯದಿಂದ ಈ ಸಮಸ್ಯೆ ಬಿಡಿಸಬಹುದೆಂದು ನಾನು ಸೂಚಿಸುತ್ತೇನೆ.

ರೈತರಿಗೆ ಇಂದು ಬೇಕಾಗಿರುವದು ಬೀಜ, ಧನ ಸಹಾಯ ಅದನ್ನು ಸರ್ಕಾರ ಒದಗಿಸಬೇಕು. ಸರ್ಕಾರ ಈ ಹೊತ್ತು ಸರ್ಕಾರಿ ಫಾರ್ಮ್‌ಗಳಿಗೆ ಎರಡು ಲಕ್ಷ ರೂ. ಮಂಜೂರು ಮಾಡಿದೆ. ಅದನ್ನು ತೆಗೆದುಕೊಂಡು ಸರ್ಕಾರಿ ಫಾರ್ಮ್‌ಗಳು ಕೆಲಸ ಮಾಡುತ್ತಲಿವೆ. ಆದರೆ ಈ ಫಾರ್ಮ್‌ಗಳು ಏನು ಸಾಧಿಸಬಲ್ಲವು? ರೈತ ಅವುಗಳಿಂದ ಏನು ಕಲಿತುಕೊಳ್ಳಬಹುದು. ಎನ್ನುವುದನ್ನು ನಾವು ನೋಡಬೇಕು. ನಾವು ಆಗ್ರಿಕಲ್ಚರಲ್ ಎಕ್ಸ್‌ಪರ್ಟ್ ಎಂದು ಯಾರನ್ನೂ ತಯಾರು ಮಾಡುತ್ತೇವೆಯೋ ಅವರು ಆಯಾ ಎಲ್ಲ ಕಟ್ಟನಲ್ಲಿ ವಾಸವಾಗಿ ಇವುಗಳ ಭಾರ ಹೊತ್ತು ಕೆಲಸ ಮಾಡಬೇಕು.

ಅನೇಕ ರೀತಿಯ ಸಾಲಗಳನ್ನು ರೈತನಿಗೆ ಕೊಡುತ್ತಾ ಇದ್ದಾರೆ. ಹಾಗಿದ್ದರೂ ರೈತನಿಗೂ ಅವುಗಳ ಪೂರ್ಣ ಪ್ರಯೋಜನ ಲಭ್ಯವಾಗ್ತಾ ಇಲ್ಲ. ರೈತನು ಈಗ ಪೂರ್ಣವಾಗಿ ಬಟ್ಟೆಯನ್ನು ಹಾಕಿಕೊಳ್ಳದಂತಹ ಪರಿಸ್ಥಿತಿ ಇದೆ. ಈ ರೀತಿಯಾದರೆ ರೈತರಿಗೂ ಸರ್ಕಾರಕ್ಕೂ ಏನು ಸಂಬಂಧ ಉಳಿಯುತ್ತದೆ? ಬೆಂಗಳೂರಿನಿಂದ ಬೆಳಗಾಂ ವರೆಗೂ ಭೂಮಿ ಎಲ್ಲಾ ಬಂಜರಾಗಿರುವ ದೃಶ್ಯ ನೋಡುತ್ತೇವೆ. ಬಜೆಟ್‌ನಲ್ಲಿಯ ಹಣ ಯಾವ ರೀತಿ ಖರ್ಚಾಗಿದೆ ಎಂಬುದಕ್ಕೆ ಇದೇ ನಿದರ್ಶನ.

ಇವತ್ತಿನ ದಿವಸ ಸರ್ಕಾರದವರು ವ್ಯವಸಾಯದ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ಅವರು ಹಳ್ಳಿಗಳಿಗೆ ಹೋಗಿ ರೈತರ ಕಷ್ಟ ಸುಖ ವಿಚಾರಿಸುತ್ತ ಇಲ್ಲ. ಇವರಿಗೂ ರೈತರಿಗೂ ಹೊಂದಾಣಿಕೆ ಅಥವಾ ಸಂಬಂಧವಿರುವಂತೆ ಕಾಣುತ್ತಿಲ್ಲ. ರೈತರನ್ನು ತಿಳಿದುಕೊಳ್ಳುವ ಶಕ್ತಿ ಇವರಿಗಿಲ್ಲವಾಗಿದೆ. ರೈತರಿಗೆ ಬೇಕಾದಂಥ ಸಹಾಯ, ಸಾಲ ಏನೂ ಒದಗಿಸುವ ಶಕ್ತಿ ಸರ್ಕಾರಕ್ಕಿಲ್ಲ. ರೈತರ ಸಮಸ್ಯೆ ಬಿಡಿಸಲು ಸರ್ಕಾರಕ್ಕೆ ಸಾಮರ್ಥ್ಯವಿಲ್ಲ.

ದೊಡ್ಡ ಪ್ರಮಾಣದ ನೀರಾವರಿಯನ್ನು ಸರ್ಕಾರ ಬೇಕಾದಷ್ಟು ಕೈಕೊಂಡಿದೆ. ಆದರೆ ಸರ್ಕಾರ ಇಂಥ ಒಂದು ಯೋಜನೆಯಿಂದ ಎಷ್ಟು ನೀರನ್ನು ಸಂಗ್ರಹಿಸಲಾಗುತ್ತಿದೆಯೋ ಅಷ್ಟೂ ಬಳಕೆಯಾಗುತ್ತಿಲ್ಲವೆಂಬುದು ಸರ್ಕಾರದ ಪ್ರಕಟಣೆಯಿಂದಲೇ ಗೊತ್ತಾಗುತ್ತದೆ. ಸಂಗ್ರಹಿತ ನೀರನ್ನು ಬಳಸಲು ಅಷ್ಟೊಂದು ಭೂಮಿಯೂ ಅಲ್ಲಿರುವುದಿಲ್ಲ. ಮಾರ್ಚ್ ಆಫ್ ಮೈಸೂರ ಜನೇವರಿ ಸಂಚಿಕೆಯೇ ಇದರ ಮೇಲೆ ಬೆಳಕು ಕೆಡವಿದೆ.

ಸ್ವಾತಂತ್ರ್ಯ ನಂತರ ಅದೆಷ್ಟೋ ಬೃಹತ್ ನೀರಾವರಿ ಯೋಜನೆಗಳು ಪೂರ್ಣಗೊಂಡಿವೆ. ಅನೇಕ ಯೋಜನೆಗಳಲ್ಲಿ ಅವುಗಳ ರಿಝರ್ವಾಯರ್ ನಲ್ಲಿ ಸಂಗ್ರಹಿತ ನೀರಿನ ಬಳಕೆಯಾಗುತ್ತಲಿಲ್ಲ. ಮುಖ್ಯ ಕಾಲುವೆ ಅವುಗಳಿಗೆ ನೀರು ತಂದು ಭರಣ ಮಾಡುವ ವಿತಕಾಲುವೆ ಹೊಲಗಳಿಗೆ ನೀರು ಪೂರೈಸುವ ಉಪ ಕಾಲುವೆ ಇರುವಾದರೂ ಆ ನೀರನ್ನು ಉಪಯೋಗಿಸಿ ಬೇಸಾಯ ವೃದ್ಧಿಸಿಕೊಳ್ಳಲಿಲ್ಲ. ನೀರಾವರಿ ಬೇಸಾಯದ ಭೂಮಿಗಳಿಲ್ಲ. ತುಂಗಭದ್ರ ಯೋಜನೆ ಇಂಥದಕ್ಕೊಂದು ಉದಾಹರಣೆ ಎಂದು ಪತ್ರಿಕೆ ವರದಿ ಮಾಡಿದೆ. ಸರ್ಕಾರದ ಪ್ರಕಟಣೆಯಲ್ಲೇ ವ್ಯಕ್ತವಾದುದಿದೆ.

ಆದ್ದರಿಂದ ಸರ್ಕಾರದವರು ಇನ್ನು ಮುಂದಾದರೂ ಇಂತಹ ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದನ್ನು ಬಿಟ್ಟು ರೈತರಿಗೆ ಅನುಕೂಲವಾಗುವಂತಹ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದು ಉತ್ತಮ.

ಇನ್ನು ಸುಗ್ಗಿಯ ಕಾಲದಲ್ಲಿ ಕೆಲಸ ಮಾಡಲು ಬೇಕಾದಷ್ಟು ಜನ ಕೂಲಿಕಾರರು ಸಿಗುತ್ತಾರೆ. ಆದರೆ ಕೆಲವು ಸಲ ಹತ್ತಿ ಪೀಕ್ ಬಂದಾಗ ಕೂಲಿಕಾರರು ಹೆಚ್ಚಿಗೆ ಸಿಗುವುದಿಲ್ಲ. ಹಳ್ಳಿಗಳಲ್ಲಿ ಇಂದು ಕೂಲಿಕಾರರ ಕೊರತೆ ಕಂಡು ಬರುತ್ತಿದೆ. ಹಳ್ಳಿಗಳ ಕಡೆಯಿಂದ ಜನರು ಪಟ್ಟಣಗಳ ಕಡೆಗೆ ಬರುತ್ತಲಿದ್ದಾರೆ. ರೈತರ ಹಾಗೂ ಕೂಲಿಕಾರರ ಅವಶ್ಯಕತೆಗಳೇನು ಎಂಬುದು ಸರ್ಕಾರದ ಅಧಿಕಾರಿಗಳಿಗೆ ಗೊತ್ತಿದ್ದರೂ ಅವರಿಗೆ ಯಾವ ರೀತಿಯಿಂದಲೂ ಸಹಾಯ ಮಾಡಲು ಮುಂದೆ ಬರುತ್ತಿಲ್ಲ. ಈ ಒಂದು ಕಾರಣದಿಂದ ಒಕ್ಕಲುತನ ಸುಧಾರಿಸುತ್ತಿಲ್ಲ. ಹೆಚ್ಚು ಆಹಾರದ

ಉತ್ಪತ್ತಿಯಾಗುತ್ತಿಲ್ಲ. ಬೆಲೆಗಳ ಏರಿಳಿತಗಳೂ ಸಹ ರೈತರನ್ನು ನಿರುತ್ಸಾಹಗೊಳಿಸುತ್ತವೆ. ಬೆಲೆಗಳು ಹೆಚ್ಚಳವಾದರೂ ಅವುಗಳ ನಿಜ ಲಾಭ ರೈತರಿಗೆ ದಕ್ಕದಿರುವದು ರೈತನ ನಿರುತ್ಸಾಹಕ್ಕೆ ಕಾರಣವಾಗಿದೆ. ಜಮೀನುಗಳಿಗೆ ಹೋಗಿ ಎಷ್ಟು ಬೆಳೆಯಾಗಿದೆ ಎಂಬುದನ್ನು ಯಾವ ಅಧಿಕಾರಿಗಳೂ ಅಂದಾಜಿಸುತ್ತಿಲ್ಲ. ಎಲ್ಲೋ ಒಂದು ಕಡೆ ಕುಳಿತುಕೊಂಡು ಅಂಕಿ ಅಂಶಗಳನ್ನು ತಯಾರಿಸಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಬಿಡುವುದುಂಟು. ಇದರಿಂದ ಸರ್ಕಾರಕ್ಕೆ ವಾಸ್ತವಾಂಶಗಳು ಲಭ್ಯವಾಗುವುದೇ ಇಲ್ಲ. ಈ ಬಗ್ಗೆ ತಜ್ಞರ ಸಮಿತಿಯನ್ನು ರಚಿಸಿ ಅವುಗಳಿಂದ ವಾಸ್ತವಾಂಶಗಳ ತನಿಖೆ ಹಾಗೂ ನಿರ್ಧಾರವಾಗತಕ್ಕದ್ದು.

ಕಾಂಗ್ರೆಸ್ ಅಧಿಕಾರಕ್ಕೆಬಂದರೆ ಸಾಮಾನ್ಯ ಆಡಳಿತ ಸುಧಾರಿಸಬಹುದೆಂದು ಆಶೆ ಇರಿಸಿಕೊಂಡಿದ್ದೆವು. ಮಹಾತ್ಮಾ ಗಾಂಧಿಯವರು ಕಟ್ಟಿದ ಸಂಸ್ಥೆಯ ಹಿಂಬಾಲಕರು ಅಧಿಕಾರಕ್ಕೆ ಬಂದರೆ ಭ್ರಷ್ಟಾಚಾರ, ಜಾತೀಯತೆ ಹೋಗುವುದೆಂದು ನಂಬಿದ್ದೆವು. ಆದರೆ ಕಾಂಗ್ರೆಸ್ ಆಡಳಿತದಲ್ಲಿ ಅವುಗಳು ಬೆಳೆದುವು ಖಾದಿ ಮಂಡಳಿ ನಷ್ಟ, ಭ್ರಷ್ಟಾಚಾರಗಳಲ್ಲಿಯೇ ಹೆಸರು ಮಾಡಿದೆ. ಕಾರವಾರದಲ್ಲಿ ಕೆಲವು ಕ್ಲಾರ್ಕ್‌ರ ನೇಮಕ ಮಾಡುವಾಗ ಒಬ್ಬ ಶಿರಸ್ತೆದಾರನು ಲಂಚ ಪಡೆದದ್ದು ಪತ್ರಿಕೆಗಳಲ್ಲಿಯೇ ವರದಿಯಾಗಿದೆ.

ಧಾರವಾಡ ಜಿಲ್ಲೆ ಕಲಘಟಗಿಯಲ್ಲಿ ಭತ್ತದ ಗಿರಣಿಗಳು ಹೆಚ್ಚಿವೆ. ಗಿರಣಿಗಳು ಊರಿಗೆ ದೂರದಲ್ಲಿರಬೇಕು. ಮನೆಯ ಹಿತ್ತಲಲ್ಲಾಗಲಿ, ಮುಂಭಾಗದಲ್ಲಾಗಲಿ ಗಿರಣಿಗಳು ಇರಬಾರದೆಂದು ಸರ್ಕಾರದ ಆದೇಶವಿದೆಯಾದರೂ ಪುಢಾರಿಗಳು ಸರ್ಕಾರದ ಮೇಲೆ ಒತ್ತಡ ತಂದು ಊರಿನ ಮಧ್ಯೆದಲ್ಲಿಯೇ ಗಿರಣಿ ನಡೆಸುತ್ತ ಇದ್ದಾರೆ. ಪೊಲೀಸ್ ಇಲಾಖೆಯಲ್ಲಿಯ ಭ್ರಷ್ಟಾಚಾರಕ್ಕಂತೂ ಮಿತಿಯೇ ಇಲ್ಲ. ಹಾಗಾಗಿ ಕಾಯ್ದೆಗಳ ನಿಯಮಗಳಿಗೆ ಏನು ತಾನೇ ಬೆಲೆ?

ನಿಜಲಿಂಗಪ್ಪನವರ ರಾಜ್ಯದಲ್ಲಿ ಲಂಚದ ಧಾರಣಿ ನಿಗದಿಯಾಗಿದೆ. ಈಗ ಮಾನ್ವಿ ತಾಲೂಕು ಮುನ್ಸಿಪ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಧಾರಣಿ ನಿಗದಿಯಾಗಿರುವುದನ್ನು ತಿಳಿಸಿದ್ದಾರೆ. 500 ರೂ. ಕೊಟ್ಟರೆ ಜಾಮೀನು, 1000 ರೂ. ಕೊಟ್ಟರೆ ಬಿಡುಗಡೆ ಮಾಡಿಸಿಕೊಳ್ಳಬಹುದು. 1500 ರೂ. ಕೊಟ್ಟರೆ ಡಿಕ್ರಿ ಪಡೆಯಬಹುದೆಂದು ತಿಳಿಸಿದ್ದಾರೆ. ಹುಬ್ಬಳ್ಳಿ-ಧಾರವಾಡಗಳಲ್ಲಿ ಪೊಲೀಸ್ ಠಾಣೆಗಳಿಗೆ ಒಬ್ಬ ಆರೋಪಿಗಳನ್ನು ಹಿಡಿದುಕೊಂಡು ಹೋದರೆ ಅವನನ್ನು ಜಾಮೀನಿನ ಮೇಲೆ ಬಿಡಬೇಕಾದರೆ 11 ರೂ. ನಾಲ್ಕಣೆ ಕೊಡಬೇಕು. ಕೊಟ್ಟಮೇಲೆ ಬಿಡುತ್ತಾರೆ. ಬೇರೆ ಕಡೆ ಹೇಗಿದೆಯೋ ಗೊತ್ತಿಲ್ಲ? ಇದನ್ನು ಕಾಯ್ದೆ ಪ್ರಕಾರ ಕೊಡಬೇಕು ಎಂದು ನಂಬಿಗೆ ಬರುವಂತೆ ಮಾಡಲಾಗಿದೆ. ಈ ಸಂಬಂಧದಲ್ಲಿ ಒಬ್ಬ ಕಾನ್‌ಸ್ಟೇಬಲ್‌ನೇ ಹೇಳಿರುವುದಿದು ಆಕಸ್ಮಾತ್ ನಾನು ಚುನಾವಣೆಯಲ್ಲಿ ಆರಿಸಿ ಬಂದರೆ ಮೊದಲು ಈ 11 ರೂ. 4 ಆಣೆ ಕೊಡುವುದನ್ನು ತೆಗೆಯಿಸಿ ಹಾಕಿ ಎಂದು ನನ್ನನ್ನು ಪೊಲೀಸರು ಕೇಳಿಕೊಂಡಿದ್ದಾರೆ. ಈ ಹಣ ಕಾನ್‌ಸ್ಟೇಬಲ್‌ಗೆ ಸೇರುವುದಿಲ್ಲ. ಬೇರೆ ಕಡೆಗೆ ಹೋಗುತ್ತದೆ. ವಸೂಲು ಮಾಡುವವನು ಕಾನ್‌ಸ್ಟೇಬಲ್‌ನು, ತಿನ್ನುವವರೂ ಬೇರೆ. ಹೊಟ್ಟೆಯುರಿದು ಹೀಗೆ ಹೇಳಿರಬಹುದು.

ಯಾರಾದರೂ ಪೊಲೀಸ್ ಠಾಣೆಗೆ ಪಿರ್ಯಾದಿ ಕೊಡಲು ಹೋದರೆ ಸಬ್ ಇನ್ಸ್‌ಪೆಕ್ಟರ್ ಇರುವುದಿಲ್ಲ. ಕಾಯಬೇಕು. ಮೂರು ದಿವಸ ಪ್ರತಿಯೊಂದು ಚರ್ಚೆ ಮಾಡಿ ಯಾವುದನ್ನೂ ಹೇಗೆ ದಾಖಲು ಮಾಡಿಕೊಳ್ಳಬೇಕೋ ಹಾಗೆ ಮಾಡಿಕೊಂಡು ಕೇಸು ಹಾಕುತ್ತಾರೆ.

ಬಳ್ಳಾರಿಯಲ್ಲಿ ಯಾರೋ ಒಬ್ಬರ ಮನೆಗೆ ಓರ್ವ ಮೋಸಗಾರ ಹೋಗಿ ಅವರ ಮನೆಯಲ್ಲಿ ಹೆಚ್ಚು ದ್ರವ್ಯವಿದೆಂದೂ 60 ಸಾವಿರ ರೂ.ಗಳನ್ನು ಪೂಜೆಗೆ ಕೊಟ್ಟು 40 ಸಾವಿರ ರೂ. ಬಂಗಾರ ಕೊಟ್ಟರೆ ನಿಧಿಯನ್ನು ತೆಗೆದುಕೊಡುವುದಾಗಿ ಹೇಳಿ ಒಂದು ಲಕ್ಷ ರೂ. ಮೋಸ ಮಾಡಿ ಪರಾರಿಯಾದನು. ಮಾರ್ಚ್ 28ರಂದು ಈ ದೂರು ಕೊಟ್ಟರೂ ಇನ್ನೂ ದೂರಿನ ರಜಿಸ್ಟರ್ ಆಗಿಲ್ಲ. ಪೊಲೀಸರು ಯಾವುದೇ ಕ್ರಮ ಜರುಗಿಸಿಲ್ಲ.

ದೂರು ಕೊಡಲು ಹೋದವರಿಗೆ ಪೊಲೀಸ್ ಠಾಣೆಯಲ್ಲಿ ಅವಮಾನವಾಗುತ್ತದೆ. ಹೀಗಾಗಿ ಪೊಲೀಸ್ ಸ್ಟೇಶನ್‌ಗೆ ಹೋಗಬೇಕೇಕೆ ಎಂದು ಜನರು ಹಿಂದೇಟು ಹಾಕಿ ಸ್ವತಃ ಹಾನಿ. ಗೋಳು ಅನುಭವಿಸುತ್ತಾರೆ.

ಹುಬ್ಬಳ್ಳಿ ನಗರದಲ್ಲಿ ಒಂದು ಪೊಲೀಸ್ ಸ್ಟೇಶನ್ ಎದುರಿಗೆ ಒಂದು ಅಂಗಡಿ ಇದೆ. ಅಲ್ಲಿ ಪೊಲೀಸರು ಲಂಚ ತೆಗೆದುಕೊಳ್ಳುವುದು ಮೊದಲಾದ ಲೆಕ್ಕವಿರುತ್ತದೆ. ಅದಕ್ಕಾಗಿ ಅಂಗಡಿಯನ್ನು ರಾತ್ರಿ ಎರಡರವರೆಗೂ ತೆರೆದಿರುತ್ತಾರೆ. ಯಾವ ಅಂಗಡಿಯನ್ನು ಎಷ್ಟು ಹೊತ್ತಿನವರೆಗೆ ತೆರೆದಿಡಬೇಕು ಎಂಬ ನಿರ್ಬಂಧವಿದ್ದರೂ ಅದನ್ನು ಮೀರಿ ಈ ಅಂಗಡಿ ರಾತ್ರಿ ಬಹಳ ಹೊತ್ತು ತೆರೆದೇ ಇರುತ್ತದೆ. ಲಂಚ ಕೊಡುವದು ತೆಗೆದಕೊಳ್ಳುವುದು ಎಲ್ಲಾ ಇಲ್ಲಿ ನಡೆಯುತ್ತದೆ. ಇದೇ ವ್ಯವಸ್ಥೆ ಎಲ್ಲ ಕಡೆಗೂ ಸಾಮಾನ್ಯವೆಂದು ಹೇಳಬಹುದು.

ಒಂದು ಕಡೆ ಪೊಲೀಸ್ ಸುಪರಿಟೆಂಡೆಂಟ್‌ರಿಗೆ ಎರಡು ಡಬ್ಬಿ ಎಣ್ಣೆ ಬೇಕಾಗಿತ್ತು. ಅದನ್ನು ತರಲು ಯಾರನ್ನಾದರೂ ಕಳಿಸಬೇಕಿತ್ತು. ಒಬ್ಬ ಪಿ.ಸಿ.ಯನ್ನು ಡ್ಯೂಟಿಗೆ ಹಾಕಿ ಆರೋಪಿಯೊಬ್ಬನ ಹೆಸರು ಕೊಟ್ಟು ಆತನನ್ನು ಹುಡುಕಿಕೊಂಡು ಬಾ ಎಂದು ಕಳಿಸಲಾಯಿತು. ಹಾಗೆಯೇ ಡಬ್ಬಿಯನ್ನು ಆತನ ಕೈಯಲ್ಲಿ ಕೊಡಲಾಯಿತು. ಆತನು ಆರೋಪಿಯು ಸಿಕ್ಕಲಿಲ್ಲವೆಂದು ವರದಿ ಮಾಡಿ ಎಣ್ಣೆ ತುಂಬಿದ ಡಬ್ಬಿ ತಂದು ಕೊಟ್ಟನು. ಹೀಗೆ ಸ್ವಂತ ಕೆಲಸಕ್ಕಾಗಿ ಯಾರನ್ನಾದರೂ ಕಳುಹಿಸಲು ಉಪಾಯ ಮಾಡುತ್ತಾರೆ.

ಅರೆಸ್ಟ್ ಮಾಡಿರುವವರನ್ನು 24 ಗಂಟೆಯೊಳಗಾಗಿ ಕೋರ್ಟ್‌ನಲ್ಲಿ ಹಾಜರು ಮಾಡಬೇಕೆಂಬ ನಿಯಮವಿದೆ. ಆದರೆ ಪೊಲೀಸರು ಹಾಗೆ ಮಾಡದೇ ಪೊಲೀಸ್ ಠಾಣೆಯಲ್ಲೇ ನಾಲ್ಕೈದು ದಿನ ಇರಿಸಿ ನಂತರ ಹಾಜರು ಮಾಡುತ್ತಾರೆ. ಕೋರ್ಟ್‌ಗೆ ಪೊಲೀಸರ ಈ ಮೋಸ ತಿಳಿಯುವುದಿಲ್ಲ. ಯಾರಾದರೂ ಒಬ್ಬರನ್ನು ಹಿಡಿದುಕೊಂಡು ಹೋಗುವುದು, ಹೊಡೆಯುವುದು ಬೇಕಾದ ವಿವರ ದೊರೆಯದೇ ಹೋದರೆ ಬಿಟ್ಟು ಬಿಡುವುದು ಮೊದಲಾದವು ನಡೆಯುತ್ತವೆ.

ಪೊಲೀಸರಿಗೆ ತನಿಖೆ ನಡೆಸುವುದಕ್ಕೆ ಆಧುನಿಕ ಸವಲತ್ತುಗಳಿಲ್ಲದಿರುವುದರಿಂದ ಹೀಗೆಲ್ಲ ನಡೆಯುತ್ತಿದೆ. ಪೊಲೀಸ್ ಠಾಣೆಯಲ್ಲಿ ಬಡಿದು ಸಾಯಿಸಿದಂತಹ ಅನೇಕ ಪ್ರಕರಣಗಳು ಊರಿನೊಳಗೆ ಕೇಳಿ ಬಂದರೂ ಪೊಲೀಸರು ಅವನ್ನೆಲ್ಲಾ ಮುಚ್ಚಿ ಹಾಕುತ್ತಾರೆ. ಒಂದು ಊರಿನಲ್ಲಿ ಪೊಲೀಸ್ ಅಧಿಕಾರಿಗಳು, ಪಿ.ಸಿ.ಗಳು ಮೂರ್‍ನಾಲ್ಕು ವರ್ಷಗಳಷ್ಟೇ ಇರಬೇಕು. ನಂತರ ಅವರ ವರ್ಗಾವಣೆ ಆಗಬೇಕೆಂಬ ನಿಯಮವಿದ್ದರೂ ಎಂಟು - ಹತ್ತು ವರ್ಷ ಕೆಲವರು ಒಂದೇ ಕಡೆಯಲ್ಲೇ ತಳವೂರಿದ್ದನ್ನು ನಾವು ನೋಡುತ್ತೇವೆ.

ಗ್ಯಾಂಬ್ಲಿಂಗ್ ವಿರುದ್ಧ ಕಾಯ್ದೆ ಇದ್ದರೂ ಪೊಲೀಸ್ ಅಧಿಕಾರಿಗಳ ಕುಮ್ಮಕ್ಕಿನಿಂದ ಗ್ಯಾಂಬ್ಲಿಂಗ್ ಡೆನ್ ನಡೆಯುತ್ತಲೇ ಇವೆ. ವೇಶ್ಯೆಯರಿಂದಲೇ ಲಂಚ ಹೊಡೆದು ಅವರ ವೃತ್ತಿಗೆ ಕಾಯ್ದೆ ವಿರುದ್ಧ ನೆರವಾಗುತ್ತಾರೆ. ಇಂಥವರು ರಾಜಕೀಯ ಚಳುವಳಿಗಳನ್ನು ವಿದ್ಯಾರ್ಥಿಗಳ ಆಂದೋಲನಗಳನ್ನು ಹತ್ತಿಕ್ಕುತ್ತಾರೆ. ಸಿಐಡಿಯವರು ರಾಜಕೀಯ ನೇತಾರರನ್ನೇ ಪ್ರತ್ಯೇಕ್ಷ ಭೇಟಿ ಮಾಡಿ ಸಭೆಯಲ್ಲಿ ಏನು ಹೇಳಿದಿರಿ ಎಂದು ಕೇಳುತ್ತಾರೆ. ವರದಿ ಮಾಡುತ್ತಾರೆ.

ಕಳ್ಳ ಸಾಗಾಣಿಕೆ ಪ್ರತಿಬಂಧ ಕಾಯ್ದೆ ಇದೆ. ಆದರೆ ಪೊಲೀಸರು ಹಾಗೂ ವ್ಯಾಪಾರಸ್ಥರು ಕೂಡಿಯೇ ಕಳ್ಳ ಸಾಗಾಣಿಕೆ ಮಾಡುತ್ತಾರೆ. ಹೀಗೆ ಆಡಳಿತ ಶಿಥಿಲವಾಗಿದೆ.

ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಮಹಾನಗರ ಪಾಲಿಕೆಯಿಂದ ಕುಡಿಯುವ ನೀರಿನ ಪೂರೈಕೆ ಸಮರ್ಪಕವಾಗಿಲ್ಲ. ಆದರೆ ವಾಟರ್ ಲೇವಿ ವಸೂಲು ಮಾಡುತ್ತಾರೆ. ಜನರಿಗೆ ಇದು ಭಾರವಾಗಿದೆ. ಬಡವರ ವಸತಿ ಇರುವಲ್ಲಿಗಂತೂ ನೀರಿನ ಪೂರೈಕೆಯೇ ಇಲ್ಲ. ಒಳಚರಂಡಿ ಯೋಜನೆಯ 600, 700 ಬಿಲ್ಲುಗಳನ್ನು ಕಳುಹಿಸಲಾಗುತ್ತಿದೆ. ಆದರೆ ಒಳಚರಂಡಿ ಕೆಲಸವೇ ಆಗಿಲ್ಲ. ಸರ್ಕಾರದಿಂದ ಬರಬೇಕಾದ ಬಾಕಿಯೂ ನಿಂತಿದೆ.

ವಿಧಾನಸಭಾಧ್ಯಕ್ಷ ಶ್ರೀ ಬಿ. ವೈಕುಂಠ ಬಾಳಿಗಾ ನಿಧನರಾದ ಬಗ್ಗೆ 1968 ಸೆಪ್ಟೆಂಬರ್ 2ರಂದು ವಿಧಾನಸಭೆಯಲ್ಲಿ ಶೋಕ ವ್ಯಕ್ತಪಡಿಸುತ್ತ ಶ್ರೀ ಎಸ್.ಎಸ್.ಶೆಟ್ಟರ ಅವರು 'ಇಂದು ಈ ಸಭೆಯ ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಳ್ಳಬೇಕಾದಂತವರು ಇಂದು ಪ್ರತಿಯೊಬ್ಬರ ನಾಲಿಗೆ ಮೇಲೆ ಕುಳಿತಿದ್ದಾರೆ. ಅವರ ಅನುಭವ ಜನರಲ್ಲಿ ಅವರಿಟ್ಟಂತಹ ವಿಶ್ವಾಸ ಅಪೂರ್ವವಾದದು. ಇವತ್ತಿನ ದಿವಸ ಹೊಸದಾಗಿ ಬಂದಂತಹ ಮಂತ್ರಿ ಮಂಡಳವನ್ನು ಬಾಳಿಗರಿದ್ದರೆ ಅಭಿನಂದಿಸುತ್ತಿದ್ದರು. ಆದರೆ ಇದರ ಬದಲಾಗಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರೇ ಶ್ರೀ ಬಾಳಿಗಾರ ಬಗ್ಗೆ ಸಂತಾಪ ಸೂಚಕ ನಿರ್ಣಯ ಸೂಚಿಸಬೇಕಾದ ದುರ್ದೈವಿಗಳಾಗಬೇಕಾಗಿದೆ' ಎಂದರು.

ನಿಷ್ಠಾವಂತ ಹಾಗೂ ಮೇಧಾವಿ ಅಧ್ಯಕ್ಷರನ್ನು ನಾವು ಕಳೆದುಕೊಂಡಿದ್ದೇವೆ. ಅವರು ಇಂದು ನಮ್ಮನ್ನು ಅಗಲಿ ಹೋದರು. ಅವರ ನೆನಪು ನಮ್ಮೆಲ್ಲರ ಮನಸ್ಸಿನಲ್ಲಿಯೂ ಸಂಪೂರ್ಣ ಇದೆ. ಅವರಲ್ಲಿ ಆಳವಾದ ಅಗಾಧವಾದ ಪಾಂಡಿತ್ಯವಿತ್ತು. ಇಂಥ ಮಹಾನ್ ವ್ಯಕ್ತಿಯನ್ನು ಕಳೆದುಕೊಂಡಿದ್ದಕ್ಕೆ ದುಃಖಿಸುತ್ತೇನೆ.

ಹುಬ್ಬಳ್ಳಿಗೆ ಅವರು ಒಂದು ಸಾರಿ ಬಂದಾಗ ಅವರೊಡನಿದ್ದೆ. ಅನುಭವ ಪೂರ್ಣವಾದ ಮಾತುಗಳನ್ನು ಆಗಾಗ ಹೇಳುತ್ತಿದ್ದರು. ಹೆಚ್ಚು ಹೆಚ್ಚು ಓದಬೇಕು. ನಾಡಿಗೆ ಹಿತವಾಗುವಂತೆ ಅಧ್ಯಯನ ಅನುಭವದ ಫಲ ನೀಡಬೇಕು ಎಂಬ ಹಂಬಲ ಅವರದು. ಅದನ್ನೇ ನನಗೂ ಹೇಳಿದರು. ಅದು ಅಲ್ಲದೇ ಶುದ್ಧ ರಾಜಕಾರಣದ ಬಗ್ಗೆ ಅವರ ಉತ್ಕಟ ಇಚ್ಛೆ ಕಳಕಳಿ ಎಲ್ಲರಿಗೂ ಅನುಕರಣೀಯವೆಂದರು.



ಒಳ್ಳೆಯ ಇಳುವರಿಯ ಬೀಜ ಬಿತ್ತದೇನೆ
ಒಳ್ಳೆಯ ಫಸಲು ಬಂದಿತೆಂಬಾಸೆಯಲ್ಲಿದೇನೆ
ಬಾರದಿದ್ದರೆ ಬರವನೆದುರಿಸುವ ಬಲದ ವರವಕೂಡು.
ಸದಾಶಿವಗುರು

– **ಎಸ್.ವಿ. ಪರಮೇಶ್ವರಭಟ್ಟ**

ಭಾಗ-೩

ಸದಾಶಿವ.ಎಸ್. ಶೆಟ್ಟರ್ ರವರ
ನೆನಪುಗಳು ಮರುಕಳಿಸಿದಾಗ

ನಾನು ನಿನ್ನನು ಕೈಹಿಡಿದು ನಡೆಸು ಎಂದು
ಬೇಡುವುದಿಲ್ಲ
ನಾನು ನಡು ನೀರು ದಾಟಿಯಾಗಿದೆ
ಇನ್ನುಳಿದಿರುವುದು ಆಚೆ ದಡದ ತೆಳ್ಳೆ ನೀರು
ಬೇಗ ಬರುತ್ತೇನೆ, ನೀನಲ್ಲಿಯೆ ನಿಂತಿರು, ಸದಾಶಿವಗುರು

– ಎಸ್.ವಿ. ಪರಮೇಶ್ವರಭಟ್ಟ

ಅನುಭವಿ ಮುಖಂಡ

ಆರು ದಶಕಗಳ ಕರ್ನಾಟಕ ರಾಜಕಾರಣ ಇತಿಹಾಸದಲ್ಲಿ ತತ್ವ ಸಿದ್ಧಾಂತಗಳಿಗಾಗಿ ಶ್ರಮಿಸಿದ ಜನಮುಖಂಡರಲ್ಲಿ ದಿವಂಗತ ಸದಾಶಿವ ಶೆಟ್ಟರ್ ಅವರು ಪ್ರಮುಖರು. ಗಂಡು ಮೆಟ್ಟಿದ ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಬಡವರ, ಕಾರ್ಮಿಕರ, ದೀನ ದಲಿತರ ಪ್ರತಿನಿಧಿಯಾಗಿ ಕೊನೆಯವರೆಗೂ ಉಳಿದುಕೊಂಡ ಸದಾಶಿವ ಶೆಟ್ಟರ್ ಜನ ಸಂಘದ ತತ್ವನಿಷ್ಠ ಶಾಸಕರಾಗಿ ದುಡಿದವರು.

ಜನರ ನೋವು-ನಲಿವುಗಳೊಡನೆ ಸದಾ ಸ್ಪಂದಿಸುತ್ತಿದ್ದ ಸದಾಶಿವ ಶೆಟ್ಟರ್ ಅವರು ಶಾಸನ ಸಭೆಗೆ ಆಯ್ಕೆಯಾಗಿದ್ದು, ವಿಧಾನಸಭೆಯಲ್ಲಿ ತಾವಿದ್ದ ಅಲ್ಪಾವಧಿಯಲ್ಲಿ ಸಕ್ರಿಯವಾಗಿ ಕಾರ್ಯಕಲಾಪಗಳನ್ನು ಸದಾಶಿವಶೆಟ್ಟರ್ ಅವರು ಭಾಗವಹಿಸಿ ದಾಖಲೆ ಉಳಿಸಿ ಹೋಗಿದ್ದಾರೆ.

ಕರ್ನಾಟಕ ಜನ ಸಂಘದ ಆಧಾರಸ್ತಂಭಗಳಲ್ಲಿ ಒಬ್ಬರಾಗಿದ್ದ ಸದಾಶಿವ ಶೆಟ್ಟರ್ ತಮ್ಮ ಭಾವನಾತ್ಮಕ ಮಾತುಗಳ ಮೂಲಕ ಎಲ್ಲರ ಮನಗೆಲ್ಲಬಲ್ಲವರಾಗಿದ್ದರು. ತಾವು ನಂಬಿದ ತತ್ವ ಸಿದ್ಧಾಂತಗಳನ್ನು ಕೇವಲ ಭಾಷಣಗಳ ಮೂಲಕ ಕೇಳದೆ ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ ಅನುಷ್ಠಾನಗೊಳಿಸಿದ್ದು ಸದಾಶಿವ ಶೆಟ್ಟರ್ ಅವರ ಹೆಚ್ಚುಗಾರಿಕೆ.

ಶಾಸನ ಸಭೆಯಲ್ಲಿ ಕೇವಲ ಕೆಲವೇ ಶಾಸಕರು ಆಗಿನ ಜನ ಸಂಘಕ್ಕೆ ಸೇರಿದವರಾಗಿದ್ದರೂ ಸಭೆಯ ಕಲಾಪಗಳನ್ನು ಸಕ್ರಿಯವಾಗಿ ಪಾಲ್ಗೊಳ್ಳುತ್ತಾ ಜನರ ದುಃಖ-ದುಮ್ಮಾನಗಳನ್ನು ದೃಢವಾದ ಮಾತುಗಳಿಂದ ಸಭೆಯ ಮುಂದಿಡುತ್ತಿದ್ದರು.

ಭಾರತೀಯ ಜನತಾಪಕ್ಷದ ಇಂದಿನ ಸ್ಥಿತಿಗೆ ಸೋಪಾನಗಳನ್ನು ನಿರ್ಮಿಸಿದ ಹಿರಿಯರಲ್ಲಿ ಸದಾಶಿವ ಶೆಟ್ಟರ್ ಅವರು ಒಬ್ಬರು. ಜನಪ್ರತಿಯಾಗಿ ಅವರ ಸೇವೆ ಬಹುಕಾಲ ನೆನಪಿನಲ್ಲಿ ಉಳಿಯುವಂತದ್ದು.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಸದಾಶಿವ ಶೆಟ್ಟರ ಸ್ಮರಣೆಯೇ ಸ್ಫೂರ್ತಿ

ನಾವು ಶ್ರೀ ಮೂರುಸಾವಿರಮಠದ ಶ್ರೀ ಕುಮಾರೇಶ್ವರ ಸಂಘದ ಸದಸ್ಯರಾಗಿ, ವಟು ಸಾಧಕರಾಗಿ ವಿದ್ಯಾರ್ಥಿಗಳಾಗಿದ್ದೆವು. ಆಗ ಇನ್ನೂ ವಿಧಾನಸಭಾ ಸದಸ್ಯರಾಗಿರದೇ ಕಾಂಗ್ರೆಸ್ಸಿನ, ನಂತರ ಭಾರತೀಯ ಜನಸಂಘದ ಒಬ್ಬ ರಾಜಕಾರಣಿಯಾಗಿ, ಮಠದ ಭಕ್ತರಾಗಿ ಬರುತ್ತಿದ್ದ ಸದಾಶಿವ ಶೆಟ್ಟರು ಸದುವಿನಯದ ಸಾಕಾರಮೂರ್ತಿಯಾಗಿ ನಮಗೆ ಅಚ್ಚು ಮೆಚ್ಚಿನವರೆನಿಸಿದ್ದರು. ಶರಣ ಸಂಸ್ಕೃತಿಯು ಅವರ ಮನೆತನದ ಪರಂಪರೆಯಾದ್ದರಿಂದ ಅದನ್ನು ಪೂರ್ಣವಾಗಿ ಅಳವಡಿಸಿಕೊಂಡ ಶೆಟ್ಟರು ಎಲ್ಲ ಆಧುನಿಕ ತತ್ವ ಸಿದ್ಧಾಂತಗಳನ್ನು ಅರಿತುಕೊಂಡು ಶರಣ ಧರ್ಮದ ತತ್ವಗಳೊಡನೆ ಅವುಗಳನ್ನು ಹೊಂದಾಣಿಕೆ ಮಾಡಿ ನಮಗೆ ಹೇಳುತ್ತಿದ್ದರು. ಬಿನ್ನಾಯಕ್ಕೆ ಮನೆಗೆ ಕರೆಸಿಕೊಂಡಾಗ ವಿಶೇಷವಾಗಿ ಚರ್ಚೆ ನಡೆಸಿ ಸ್ವಾಮಿಗಳಾಗುವವರು ಎಲ್ಲ ಧರ್ಮಗಳ ಎಲ್ಲ ವಿಚಾರಗಳ ಸಾಹಿತ್ಯವನ್ನು ಓದಿ ಮನನ ಮಾಡುತ್ತಿದ್ದರೆ, ಸಮಾಜಕ್ಕೆ ಯೋಗ್ಯ ಮಾರ್ಗದರ್ಶನ ಮಾಡಲು ಶಕ್ತರಾಗುತ್ತಾರೆಂದು ಅವರು ಹೇಳಿದ ಮಾತುಗಳು ನಮಗೆ ಆಗಾಗ ನೆನಪಿಗೆ ಬಂದು ಸ್ಫೂರ್ತಿ ನೀಡುತ್ತಿವೆ. ಈ ಮಠಕ್ಕೆ ಜಗದ್ಗುರುವಾಗಿ ಪೀಠಾರೋಹಣ ಮಾಡಿದ ಬಳಿಕ ಈ ಮಠವನ್ನು ಉನ್ನತ ಸ್ಥಿತಿಗೆ ತರುವಲ್ಲಿ ಎದುರಾದ ಆಹ್ವಾನಗಳನ್ನು ಎದುರಿಸಿ ಮುನ್ನಡೆಯಲು ಅವರ ಸ್ಮರಣೆಯಿಂದ ಸ್ಫೂರ್ತಿಪಡೆದಿದ್ದೇನೆ. ಹೊಸ ಹುಬ್ಬಳ್ಳಿಯ ನಿರ್ಮಾಪಕ ಲಿಂಗೈಕ್ಯ ಬಸಪ್ಪ ಶೆಟ್ಟರರ ದಿವ್ಯ ಚೇತನವೇ ಅವರಲ್ಲಿನ ಕ್ರಿಯಾಶೀಲತೆಯಲ್ಲಿ ಎದ್ದು ಕಾಣುತ್ತಿತ್ತು.

- ಜಗದ್ಗುರು ಡಾ. ಸಿದ್ದಲಿಂಗ ಮಹಾಸ್ವಾಮಿಗಳು,

- ಜಗದ್ಗುರು ತೋಂಟದಾರ್ಯ ಮಠ, ಗದಗ-ಡಂಬಳ

ಅನನ್ಯ ಜನಸೇವಕ ಶೆಟ್ಟರು

ದಿವಂಗತ ಸದಾಶಿವ ಶೆಟ್ಟರು ಹಾಗೂ ನಾನು ಬೆಳಗಾಂವಿ ಲಾ ಕಾಲೇಜ್‌ನಲ್ಲಿ ಸಹಾಧ್ಯಾಯಿಗಳು. ಹುಬ್ಬಳ್ಳಿಯಲ್ಲಿ ನಾವಿಬ್ಬರೂ ವಕೀಲಿ ವೃತ್ತಿಯನ್ನು, ರಾಜಕಾರಣವನ್ನೂ ಒಟ್ಟಿಗೆಯೇ ಆರಂಭಿಸಿ 1967ರಲ್ಲಿ ವಿರೋಧಿ ಸದಸ್ಯರಾಗಿ ವಿಧಾನಸಭೆಯಲ್ಲಿ ಒಟ್ಟಿಗೆಯೇ ಪ್ರವೇಶಿಸಿದೆವು. ನಮ್ಮಿಬ್ಬರ ಸ್ನೇಹ ಅತ್ಯಂತ ಗಾಢವಾಗಿತ್ತು.

ಹೊಸ ಹುಬ್ಬಳ್ಳಿಯ ನಿರ್ಮಾಪಕ ಲಿಂಗೈಕ್ಯ ಬಸಪ್ಪ ಶೆಟ್ಟರ ಮನೆತನದವರಾಗಿದ್ದ ಅವರಲ್ಲಿ ಸಮಾಜೋನ್ನತಿಯ ಬಗ್ಗೆ ಚಿಂತನೆ, ಬಡವರ, ಮಧ್ಯಮ ವರ್ಗೀಯರ ಕುರಿತ ಕಳಕಳಿ, ತಾರತಮ್ಯವೆಣಿಸದ ಸಮಭಾವ ಇವು ಆನುವಂಶಿಕವಾಗಿ ಮೈಗೂಡಿವೆಯೆನ್ನುವಂತೆ ಅವರ ಸಮಾಜ ಸೇವೆ ಹಾಗೂ ರಾಜಕೀಯ ಚಟುವಟಿಕೆಗಳಲ್ಲಿ ಸ್ಪಷ್ಟವಾಗಿ ಎದ್ದು ಕಾಣುತ್ತಿದ್ದುವು. ಹೊರ ನೋಟಕ್ಕೆ ತುಂಬಾ ಮೃದು ಹಾಗೂ ಆಕರ್ಷಕ ಮಾತುಗಾರರಾದ ಅವರು ತಾವು ಆಳವಾಗಿ ಚಿಂತಿಸಿ ಅಂಗೀಕರಿಸಿದ ತತ್ತ್ವ ಸಿದ್ಧಾಂತಗಳಿಗೆ, ಕಾರ್ಯತಂತ್ರಕ್ಕೆ ಬಲವಾಗಿ ಅಂಟಿಕೊಳ್ಳುವ ಗಟ್ಟಿಮುಟ್ಟಾದ ತತ್ತ್ವ ನಿಷ್ಠರಾಗಿದ್ದರು. ಅನ್ಯಾಯದ ವಿರುದ್ಧ ಸಿಡಿದೇಳುವಾಗ ಅವರ ಮೃದುತನ ರುದ್ರರೂಪ ತಾಳುತ್ತಿದ್ದರು. ಹೀಗಾಗಿ ಅವರು ಸದಾಶಿವರು ಹೇಗೋ ಹಾಗೆಯೇ ರುದ್ರ ಗಂಭೀರರೆನಿಸುತ್ತಿದ್ದರು. ವಜ್ರಕ್ಕಿಂತ ಕಠಿಣ ಕುಸುಮಕ್ಕಿಂತ ಕೋಮಲ ಎಂಬ ಭವಭೂತಿಯ ಉಕ್ತಿ ಅವರ ವ್ಯಕ್ತಿತ್ವದ ರೀತಿಯೆನಿಸಿತ್ತು.

ತಮ್ಮ ಮರಣದ ಪೂರ್ವದಲ್ಲಿ ಕೇವಲ ಒಂದೂವರೆ ವರ್ಷದ ಶಾಸಕತ್ವದಲ್ಲಿ ತಮ್ಮ ವಿಷಯ ಮಂಡನೆಯ ಪ್ರತಿಪಾದನೆಯ ರೀತಿಯಿಂದ ಹಿರಿಯ ಮುತ್ಸದ್ದಿ, ಜನನಾಯಕ ಸಿದ್ದವನಹಳ್ಳಿ ನಿಜಲಿಂಗಪ್ಪರಾದಿಯಾಗಿ ಎಲ್ಲರ ಮೇಲೆ ಪ್ರಭಾವ ಬೀರಿ ಮೆಚ್ಚುಗೆ ಗಳಿಸಿದ್ದರು. ಸ್ವಲ್ಪಕಾಲವಷ್ಟೇ ಲೋಕಸಭಾ ಸದಸ್ಯರಾಗಿದ್ದರೂ ಉಚ್ಚಕೋಟಿಯ ಸಂಸದೀಯ ಪಟುವಾಗಿ ತಮ್ಮ ಪ್ರಭಾವ ಮೂಡಿಸಿದ ಹಿರಿಯ ಸಮಾಜವಾದೀ ನೇತಾರ ಡಾ. ರಾಮ ಮನೋಹರ ಲೋಹಿಯಾರಂತೆ ಶೆಟ್ಟರು ವಿಧಾನಸಭೆ ಕಲಾಪಗಳಲ್ಲಿ, ರಾಜಕೀಯ ಕ್ಷೇತ್ರ, ಸಮಾಜ ಸೇವೆಯಲ್ಲಿ ಮೂಡಿಸಿದ ಛಾಪು ಅನನ್ಯವೆನಿಸಿತ್ತು.

ಶೆಟ್ಟರು ಆರ್ ಎಸ್ ಎಸ್ ಪ್ರಭಾವಕ್ಕೊಳಗಾಗಿ ಜನಸಂಘದ ನಾಯಕರಾಗಿ ಬೆಳೆದರೆ ನಾನು ಮೊದಲಿನಿಂದ ನವಮಾನವತಾವಾದ ದ್ರಷ್ಟಾರ ಮಾನವೇಂದ್ರನಾಥ ರಾಯರ ತತ್ತ್ವಗಳಲ್ಲಿ ಶ್ರದ್ಧೆ ಹೊಂದಿದವ. ಸೈದ್ಧಾಂತಿಕ ಭಿನ್ನಾಭಿಪ್ರಾಯ ನಮ್ಮಿಬ್ಬರ ಸ್ನೇಹ ಆತ್ಮೀಯತೆಗಳಿಗೆಂದೂ ಅಡ್ಡಗೋಡೆಯೆನಿಸಲಿಲ್ಲ. ವಿಧಾನಸಭೆ ಚುನಾವಣೆಯಲ್ಲಿ ಅವರೊಂದಿಗೆ ನಾನೂ ಮೊದಲಿಗೆ ಸೋಲಿನ ರುಚಿಯುಂಡು ನಂತರ ಗೆದ್ದು ಬಂದವನು. ನಾನು ಚುನಾವಣೆಯಲ್ಲಿ ಜಯಶಾಲಿಯಾದಾಗ ಅವರ ಸಂತಸ ಇಮ್ಮಡಿಯಾಗಿತ್ತು. ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಸಿನೆಟ್ ಸದಸ್ಯತ್ವಕ್ಕೆ ಮೊದಲ ಬಾರಿ ಆಯ್ಕೆಯಾಗಲು ಶೆಟ್ಟರು ನನಗೆ ನೇರವಾಗಿ ಕಾರಣೀಭೂತರಾದುದನ್ನು ನಾನೆಂದೂ ಮರೆಯಲಾರೆ.

ಶೆಟ್ಟರು ತಾವೆಷ್ಟು ಘನ ವ್ಯಕ್ತಿತ್ವ ಹೊಂದಿದ್ದರೆಂಬುದನ್ನು ತಮ್ಮ ಮರಣದ ನಂತರ ನಡೆದ ಹುಬ್ಬಳ್ಳಿಯ ಇತಿಹಾಸದಲ್ಲೇ ಅಭೂತಪೂರ್ವವೆನಿಸಿದ ಅಂತ್ಯಯಾತ್ರೆಯಲ್ಲಿ ತೋರಿಸಿಕೊಟ್ಟದ್ದನ್ನು ಮರೆಯಲು ಯಾರಿಗೂ ಸಾಧ್ಯವಿಲ್ಲ. ಜೀವನದುದ್ದಕ್ಕೂ ಮಲ್ಲಿಗೆಯ ಹೂವಿನಂತೆ ತಮ್ಮ ಕಂಪನ್ನು ಬೀರಿದ ಶೆಟ್ಟರ ಅಂತ್ಯಯಾತ್ರೆಯು ಮಲ್ಲಿಗೆ ಹೂವುಗಳಿಂದಲೇ ಸಿದ್ಧಪಡಿಸಲಾದ ತೇರಿನಲ್ಲಿ ನಡೆದುದು ಔಚಿತ್ಯಪೂರ್ಣವಿತ್ತು. ಹುಬ್ಬಳ್ಳಿಯು ಆಗ ಎರಡು ದಿನ ದುಃಖದ ಕಡಲಲ್ಲಿ ಮುಳುಗಿದಂತೆ ತೋರಿತ್ತು. ಹಿರಿಯ ವಕೀಲ ಹಾಜಿ ಆರ್.ಎಚ್.ಗೂಡವಾಲಾರಂಥವರು ಸಹ ಆಗ ಬಿಕ್ಕಿ ಬಿಕ್ಕಿ ಅತ್ತಿದ್ದು ನನಗೆ ನೆನಪಾಗುತ್ತದೆ. ಶರಣರ ಮಹಿಮೆ ಮರಣದಲ್ಲಿ ನೋಡಬೇಕೆಂಬುದನ್ನು ನಾನಾಗ ಅನುಭವಿಸಿದ್ದೆ.

- ಶ್ರೀ ಎಸ್.ಆರ್. ಬೊಮ್ಮಾಯಿ

ಮಾಜಿ ಮುಖ್ಯಮಂತ್ರಿಗಳು ಹಾಗೂ

ಕೇಂದ್ರಮಂತ್ರಿಗಳು

ನನಗವರು ಸ್ಫೂರ್ತಿ ಕಾರಂಜಿ

ಶೆಟ್ಟರ ಮಠವೆಂದೇ ಕರೆಯಲ್ಪಡುತ್ತಿರುವ ಹುಬ್ಬಳ್ಳಿ ಅಕ್ಕಿಹೊಂಡದ ಶ್ರೀ ಹೊಸಮಠಕ್ಕೆ ನಾವು ಉತ್ತರಾಧಿಕಾರಿ ಎಂದು ನಮ್ಮ ಗುರುಗಳಾದ ಶ್ರೀ ಶಿವಬಸವ ಮಹಾಸ್ವಾಮಿಗಳಿಂದ ನೇಮಕಗೊಂಡು ಈಗ ಜಗದ್ಗುರು ತೋಂಟದಾರ್ಯ ಪೀಠ ಅಲಂಕರಿಸಿರುವ ಇಳಕಲ್ ಮಠದ ಸಿದ್ಧಲಿಂಗ ಪಟ್ಟದ ದೇವರೊಂದಿಗೆ ಶಿಕ್ಷಣ ಪಡೆಯುತ್ತಿದ್ದೇವು. ಆಗ ನಮ್ಮ ಮಠದ ಪರಮ ಭಕ್ತರಾದ ಸದಾಶಿವ ಶೆಟ್ಟರು ನಮಗೆ ಆಗಾಗ ಚೆನ್ನಾಗಿ ಅಧ್ಯಯನ ಮಾಡಿ ಸಕಲ ಧರ್ಮಗಳ ತಿರುಳನ್ನು ಅರಿತು ಮಠದ ಭಕ್ತರಿಗೆ ಶಿವ ಧರ್ಮದ ಮಹತ್ವ ತಿಳಿಸಿ ಸರ್ವ ಧರ್ಮ ಸಮಾನತೆ ಪ್ರೋತ್ಸಾಹಿಸಲು ಪ್ರಭಾವಿ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕೆಂದು ಹೇಳುತ್ತಿದ್ದರು. ಅವರ ಮಾರ್ಗದರ್ಶನ ನಮಗೆ ಈಗಲೂ ವಿವಿಧ ಜಾಗತಿಕ ವೇದಿಕೆಗಳಲ್ಲಿ ಬೋಧನೆ ಮಾಡುವ ಸಂದರ್ಭದಲ್ಲಿ ಸ್ಫೂರ್ತಿಯ ಕಾರಂಜಿಯಂತೆ ಅನುಭವಕ್ಕೆ ಬರುತ್ತದೆ. ದಲಾಯಿಲಾಮಾ ಅವರಿಗೆ ನಮ್ಮ ಕರ್ನಾಟಕ ಸಂಸ್ಕೃತಿ ಹಾಗೂ ಶಿವ ಧರ್ಮವನ್ನು ಮನಗಾಣಿಸಿಕೊಟ್ಟ ಸಂದರ್ಭ ನನ್ನ ಮನಸ್ಸಿನಲ್ಲಿ ಇನ್ನೂ ಹಸಿರಾಗಿದೆ.

- ಶ್ರೀ ಚಂದ್ರಶೇಖರ ಸ್ವಾಮೀಜಿ

ಹೊಸಮಠ, ಅಕ್ಕಿಹೊಂಡ.ಹುಬ್ಬಳ್ಳಿ

ಶ್ರೀ ವಿ.ಜಿ. ಪಾಟೀಲ, ಹಿರಿಯ ನ್ಯಾಯವಾದಿಗಳು

ನನ್ನ ತಂದೆ ಶ್ರೀ ಜಿ.ಸಿ. ಪಾಟೀಲ, ಶ್ರೀ ಅಂದಾನಪ್ಪ ಕಂಬಳಿ, ಶ್ರೀ ಶಂಕ್ರಪ್ಪ ಕಂಬಳಿ, ಶ್ರೀ ಈಶ್ವರಪ್ಪ ಕಂಬಳಿ ಹಾಗೂ ಸದಾಶಿವ ಶೆಟ್ಟರ ತಂದೆ ಶಂಕ್ರಪ್ಪನವರು ಆತ್ಮೀಯ ಸ್ನೇಹಿತರಾಗಿದ್ದರು. ಶಂಕ್ರಪ್ಪನವರು ಬೇಗನೆ ವಿಧಿವಶವಾಗಿದ್ದರಿಂದ ಸದಾಶಿವ ಶೆಟ್ಟರ ವಿಷಯದಲ್ಲಿ ನಮ್ಮ ತಂದೆಯವರು ಪಿತೃವತ್ ಪ್ರೇಮ ಹೊಂದಿದ್ದರು. ಸದಾಶಿವ ಶೆಟ್ಟರು ವಕೀಲರಾದ ಬಳಿಕ ಅವರು ನನ್ನನ್ನು ಅತ್ಯಂತ ಆತ್ಮೀಯತೆಯಿಂದ ಕಂಡು ಪ್ರೋತ್ಸಾಹಿಸಿದ್ದರು.

ಬ್ರಹ್ಮಶಕ್ತಿಯ ಸೋಲು!

ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ।
ನ ಕರ್ಮ ಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥
-ಶ್ರೀಮದ್ಭಗವದ್ಗೀತಾ 5-14.

'ಆತ್ಮನು ಜನರಿಗೆ ಕರ್ತೃತ್ವವನ್ನಾಗಲಿ, ಕರ್ಮವನ್ನಾಗಲಿ, ಕರ್ಮ ಫಲದ ಸಂಬಂಧವನ್ನಾಗಲಿ ಸೃಷ್ಟಿಸಿರುವುದಿಲ್ಲ; ಸ್ವಭಾವವೇ ಆ ಕೆಲಸ ಮಾಡುತ್ತದೆ' ಕರ್ತೃತ್ವ, ಕರ್ಮ, ಫಲ ಇವೆಲ್ಲವುಗಳಿಗೆ ಮಾನವನಲ್ಲಿರುವ ಸ್ವಭಾವ ಸ್ವರೂಪಿ ಬ್ರಹ್ಮನೇ ಪ್ರೇರಕ ಮತ್ತು ನಿಯಂತ್ರಕ ಶಕ್ತಿ. ಈ ಬ್ರಹ್ಮ ಶಕ್ತಿಯೇ ವ್ಯಕ್ತಿಯ ಎಲ್ಲ ವಿಚಾರ, ಆಚಾರ, ವ್ಯವಹಾರಗಳನ್ನು ಸುಸೂತ್ರವಾಗಿ ನಡೆಸುತ್ತಿರುತ್ತಿದ್ದು ಜ್ಞಾನಿಗಳಲ್ಲಿ ಸತ್ಕರ್ಮವನ್ನೇ ನಿರಂತರವಾಗಿ, ನಿಷ್ಕಾಮವಾಗಿ ಮಾಡುವ ಅಭ್ಯಾಸವನ್ನುಂಟು ಮಾಡುತ್ತದೆ. ಆತನನ್ನೇ ಶ್ರೀಕೃಷ್ಣನು 'ನನ್ನ ಭಕ್ತ' ಎಂದು ಹೇಳಿದ್ದಾನೆ. ವಾಸ್ತವಿಕವಾಗಿ ಇಂತಹ ಅಪೂರ್ವ 'ಸ್ವಭಾವಸ್ತು ಪ್ರವರ್ತತೆ' ಶಕ್ತಿಯ ವ್ಯಕ್ತಿಯ ಸೇವಾ ಕಾರ್ಯ ಪ್ರವೃತ್ತಿ ಸ್ವಭಾವಜನ್ಯವಾಗಿ ಜನಪ್ರಿಯನಾಗುತ್ತಾನೆ. ದೇವಪ್ರಿಯ, ಜನಪ್ರಿಯನಾದ ವ್ಯಕ್ತಿ ನಿಜವಾಗಿಯೂ ಇಹ-ಪರ ಎರಡೂ ಸಿದ್ಧಿಗಳನ್ನು ಪಡೆದು ಅಮರನೆನಿಸುತ್ತಾನೆ.

ನಮ್ಮ ಆತ್ಮೀಯ ಶ್ರೀ ಶೆಟ್ಟರ್ ವಕೀಲರು ಈ ರೀತಿ ನಿಷ್ಕಾಮ ಕರ್ಮರತ ಜ್ಞಾನಿಯಾಗಿ ಅಮರರಾಗಿದ್ದಾರೆ. ಶಾಸನಸಭಾ ಸದಸ್ಯರಾಗಿ ಬೆಂಗಳೂರಿನಲ್ಲಿರಲಿ ಅಥವಾ ತಮ್ಮ ವಸತಿ ಇರುವ ಹುಬ್ಬಳ್ಳಿ ನಗರದಲ್ಲಿರಲಿ ಅವರು ಏಳುವ ಮೊದಲೇ ಅವರ ಸಾರ್ವಜನಿಕ ಕಾರ್ಯ ಅವರಿಗೆ ಕಾದಿರುತ್ತಿತ್ತು. ಜನರು ಬಂದು ಎಬ್ಬಿಸಿ ಕೆಲಸ ಕೊಡುತ್ತಿದ್ದರು. ಊಟ, ನಿದ್ರೆಗೂ ಅವಕಾಶವಿಲ್ಲದ ಈ ಸಾರ್ವಜನಿಕ ಸೇವೆ ಅವರ ಸ್ವಭಾವವೇ ಆಗಿತ್ತು. 'ಶೆಟ್ರೇ ನೀವು ನೇರವಾಗಿ ನಮ್ಮಲ್ಲಿಗೆ ಬನ್ನಿ. ಹೀಗೇ ಮಾಡಿದರೆ ಮುಂದಕ್ಕೆ ಬಹಳ ಕಷ್ಟ. ನಿಮ್ಮ ಕರ್ತೃತ್ವ ಪೂರ್ಣ ಸೇವೆ ಸಮಾಜಕ್ಕೆ, ದೇಶಕ್ಕೆ ಬಹುಕಾಲ ಬೇಕಾಗಿದೆ. ಒಂದು ಕ್ರಮದಿಂದ ನಿಮ್ಮ ಚಟುವಟಿಕೆಗಳು ನಡೆಯುವಂತಾಗಬೇಕು' ಎಂದು ಹಲವು ಬಾರಿ ನಾವು ಹೇಳಿದಾಗ 'ಹ್ಯಾಂಗಾಗ್ತದ್ರೀ ಮಲ್ಕ್ಯಾಗೇ, ಮುಂದಿ ಬಂದಾಗ ಬೇಡಾಂತ ಹೇಳೋಣವೇ. ನಾವು ಇರೋದಾದ್ರೂ ಯಾಕಾಗಿ? ಇರೋತನಕ ಹೀಂಗೇ ನಡೆಯೋವ್ರ ನ್ಯಾ' ಎಂದು ಊಟವನ್ನು ಮಾಡದೇ, ಅದಕ್ಕೆ ಬಿಡುವಿಲ್ಲದೇ ಶಾಸನ ಸಭೆಗೆ ಹೋಗುವದು ಅವರ ವಾಡಿಕೆಯಾಗಿತ್ತು. ಯಾವಾಗ ನೋಡಿದರೂ ಅವರ ಕೊಠಡಿಯಲ್ಲಿ ಎಲ್ಲೆಲ್ಲಿಂದಲೋ, ಯಾವುದೋ ಕೆಲಸಗಳಿಗಾಗಿ ಬಂದವರ ವಸತಿ ಅವರ ಕೆಲಸಗಳನ್ನು ಮಾಡಿ ಕೊಡುವುದರ ಜೊತೆಗೆ ಅವರ ಖರ್ಚಿನ ಹೊರೆಯನ್ನೂ ಹೊರಬೇಕಾಗಿತ್ತು. ಇಷ್ಟಾದರೂ ಯಾರಿಗೂ 'ಇಲ್ಲ' ಎನಲಿಲ್ಲ. ತೀರ ಅಸ್ವಸ್ಥರಾದಾಗಲೂ 'ನಾಳೆ ಒಮ್ಮೆ ಬಂದು ಬಿಡ್ತೀರಾ' ಎಂದು ಹೇಳುವರೇ ಹೊರತು 'ಇಂದು ಆಗೋದಿಲ್ಲ' ಎನ್ನುವ ಮಾತುಗಳು ಅವರ ಬಾಯಿಂದ ಹೊರಡುತ್ತಿರಲಿಲ್ಲ. ಸಾರ್ವಜನಿಕ ಕಾರ್ಯ ಅವರ ಸ್ವಭಾವವಾಗಿತ್ತು. ಅದೇ ಅವರ ಉಸಿರು. ತಮ್ಮ ಶರೀರದ ಕಡೆಗೆ ಎಳ್ಳಷ್ಟೂ ಗಮನ ಕೊಡದೇ ನಿತ್ಯ ನಿರಂತರ ಈ ರೀತಿ ನಿಷ್ಕಾಮ

ಕರ್ಮನಿರತರಾದುದರಿಂದಲೇ ಕಳೆದ ಮಾರ್ಚ್ ತಿಂಗಳಿನಲ್ಲಿ ಬಜೆಟ್ ಅಧಿವೇಶನದ ಕಾಲದಲ್ಲಿ ಮೊದಲ ಬಾರಿ ಅವರು 'ಇನ್ನು ಆಗದು' ಎಂದು ಕುಸಿದರು. ಆಗ ಚೇತರಿಸಿ ವಿಶ್ರಾಂತಿ ಕಾಲ ಮುಗಿಯುವ ಮೊದಲೇ ಬೆಂಗಳೂರಿಗೆ ಬಂದಾಗ ಪುನಃ ನಾವು ಎಚ್ಚರಿಕೆ ಕೊಡುತ್ತ 'ಶೆಟ್ರೇ ಇನ್ನಾದರೂ ನೀವು ಕ್ರಮವಾಗಿ, ಆಹಾರ, ವಿಶ್ರಾಂತಿಗಳನ್ನು ಪಡೆದು ನಿಮ್ಮ ಚಟುವಟಿಕೆಗಳನ್ನು ನಡೆಸಬೇಕು. ನಿಮ್ಮ ಮೇಲೆ ತುಂಬ ಹೊಣೆ ಇದೆ. ಈ ಸಾರ್ವಜನಿಕ ಕೆಲಸಕ್ಕೆ ಕೊನೆ ಇದೆಯೇ? ಅದಕ್ಕಾಗಿಯಾದರೂ ನೀವು ದೃಢಕಾಯರಾಗಿ, ಉತ್ತಮ ಆರೋಗ್ಯಗಳಿಸಿಕೊಂಡಿರಬೇಕಲ್ಲವೇ?' ಎಂದು ಹೇಳಿದ್ದೆವು. ಆದರೆ ಒಳಗಿರುವ 'ಬ್ರಹ್ಮಶಕ್ತಿ' ಬಿಟ್ಟೀತೇ? 'ಅದೆಲ್ಲಾ ಸರಿ. ಆದ್ರೆ ಮಂದಿ ಬಂದಾಗ ಅವ್ರ ಕೆಲಸ ಮಾಡದಿದ್ರೆ ಹ್ಯಾಂಗ್ರೀ' ಎಂದು ಪುನಃ ಕೇಳುವರು. ಎಷ್ಟೋ ದಿನ ಊಟವೇ ಮಾಡುತ್ತಿರಲಿಲ್ಲ. ಜನರೊಡನೆ ತಿರುಗಾಡಿ, ಕೂತು, ಅವರ ಕೆಲಸಗಳನ್ನೆಲ್ಲಾ ಮಾಡಿಕೊಟ್ಟನಂತರ, ಎಲ್ಲರೂ ಮಲಗಿದ ನಂತರ ನಾಳೆಯ ಶಾಸನ ಸಭಾ ಕಾರ್ಯಕಲಾಪಗಳ ಬಗ್ಗೆ ವಿಚಾರ ; ಅದಕ್ಕೆ ವಿಷಯ ಸಂಗ್ರಹ, ಓದು, ಸಿದ್ಧತೆ ಎಲ್ಲವೂ ಆರಂಭ.

ಒಂದೆರಡು ದಿನ ಕಡ್ಡಾಯವಾಗಿ ಸಂಜೆ 'ವಾಕಿಂಗ್' ಎಂದು ತಮ್ಮ ಕಾರ್ಯಕ್ಕಾಗಿ ಅವರನ್ನು ಘೇರಾವೊ ಮಾಡಿದ ಜನರಿಂದ ಬಿಡಿಸಿ ದೂರಕ್ಕೆ ಕರೆದುಕೊಂಡು ಹೋದದ್ದಾಯಿತು. ಆದರೆ ಇದಕ್ಕೆ ಬಹಳ ಬಲವಂತ ಮಾಡಬೇಕಾಗುತ್ತಿತ್ತು. 'ಬಂದವರನ್ನು ಬಿಟ್ಟು ಹೇಗೆ ಬರಲಿ? ಅವರನ್ನು ಕಾಯಿಸುವುದೇ?' ಎಂದು ಹೇಳಿ ಕೆಳಗಿಳಿದರೂ (ಅವರ ಕೊಠಡಿ ಕ್ರ. 39, ಜನರಲ್ ಹಾಸ್ಟೆಲ್ ಮಹಡಿಯಲ್ಲಿ) ಹಿಂತಿರುಗಿ ತಮ್ಮ ಕೊಠಡಿಗೆ ಹೋಗುವರು. ಸಾರ್ವಜನಿಕ ಕಾರ್ಯದಲ್ಲೇ ಮಗ್ನವಾಗಿರುವುದು ಅವರ ಸ್ವಭಾವವಾಗಿ ಬಿಟ್ಟಿತ್ತು!

ಆದರೆ ಇದು ಬಹಳ ದಿನ ನಡೆಯದೆಂದು ಅವರಿಗೂ ತಿಳಿದಿತ್ತೋ ಏನೋ! ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ವಿಧಾನ ಮಂಡಲದ ಅಧಿವೇಶನದ ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳು ಶಾಸನ ಸಭೆಯ ವಿವಿಧ ಪಕ್ಷಗಳ ಮುಖಂಡರನ್ನು ಭೇಟಿ ಮಾಡಲು ಬಂದಿದ್ದರು. ಜನಸಂಘದ ಗುಂಪಿನ ನಾಯಕರಾಗಿ ಶ್ರೀ ಶೆಟ್ಟರ್‌ರವರನ್ನೂ ಅವರು ಭೇಟಿ ಮಾಡಿದರು. ವಿದ್ಯಾರ್ಥಿಗಳು ಶ್ರೀ ಶೆಟ್ಟರ್‌ರವರ ಆತ್ಮೀಯ ಸ್ವಭಾವದಿಂದ ಆಕರ್ಷಿತರಾಗಿ ಅವರೊಡನೆ ಬಹಳ ಹೊತ್ತು ಕಳೆದರು. ಕೊನೆಗೆ ಕೆಳಗಿಳಿದಾಗ ಅವರನ್ನು ಕಾರ್ಯಕ್ರಮವೊಂದಕ್ಕೆ ಕರಕೊಂಡು ಹೋಗಲು ಬಂದ ಕಾರಿನಲ್ಲಿ ಕುಳಿತರು. ಕಾರು ತಡೆದು ಮಾತುಕತೆ ನಡೆದೇ ಇತ್ತು. 'ನೀವು ಅವರನ್ನು ನಾಳೆ ನೋಡಿ ಈಗ ಬೇರೊಂದು ಕಡೆಗೆ ಹೋಗಬೇಕಾಗಿದೆ' ಎಂದು ನಾವು ಆ ವಿದ್ಯಾರ್ಥಿಗಳನ್ನು ಸಮಾಧಾನಪಡಿಸಿ ಕಳುಹಿಸಿದಾಗ 'ಮಲ್ಯರೇ ತುಂಬ ಸೋತಿದ್ದೇನೆ' ಎಂದು ಮಾತು ಮುಂದುವರಿಸದೆ ಸೀಟಿನಲ್ಲಿ ಹಿಂದಕ್ಕೆ ಒರಗಿದರು. ಸುಮಾರು ಒಂದು ಘಂಟೆ ಕಾಲ ವಿಶ್ರಾಂತಿಯ ನಂತರ ಕಾರ್ಯಕ್ರಮಕ್ಕೆ ಹೊರಟಿದ್ದು ಆಯಿತು. ಆಗ 'ಈಗ ಯಾಕೋ ಬೇಗ ಸೋತು ಹೋಗ್ತೇನ್ರಪ್ಪಾ. ಇನ್ನು ನೀವು ಹೇಳಿದ ಹ್ಹಾಂಗೇ ಮಾಡ್ಬೇಕನಿಸ್ತದೆ' ಅಂದರು. ಆದರೆ ಈ ಮಾತು ಕೇವಲ ಕ್ಷಣಿಕ ವೈರಾಗ್ಯದಷ್ಟೇ ಆಗಿ ಉಳಿಯಿತು. ಮರುದಿನ ಶಾಸನ ಸಭೆಗೆ ಹೋಗುವ ಮುನ್ನ ಅವರ ಕೊಠಡಿಗೆ ಹೋದಾಗ 'ಬರ್ರೀ ಮಲ್ಯರೆ ಊಟ ಬಂದಿದೆ. ನೀವು ಮಾಡ್ರಿ. ನಾನು ಅರಿವೆ ಹಾಕ್ಕೊಂಡು ಹೊರಡ್ತೇನಿ. ಜೊತೇಲಿ ಹೋಗೋಣವಂತೆ' ಅಂದರು. ಅವರಿಗೆ ಊಟಕ್ಕೂ ಬಿಡುವಿರಲಿಲ್ಲ. ನಮ್ಮ ಊಟ ಆಗಿತ್ತು. ಇಬ್ಬರೂ ಜೊತೆಯಲ್ಲಿ ಹೊರಟೆವು. 'ಈಗ ಹೇಗಿದೆ ಶೆಟ್ರೇ ಪ್ರಕೃತಿ' ಎಂದು ಕೇಳಿದಾಗ 'ಹಂಗೇ ನಡ್ಯೋದ್ರಿ ಅದು' ಅಂದರು. ಸ್ವಭಾವಸ್ತು ಪ್ರವರ್ತತೇ!

ಅಧಿವೇಶನ ಮುಗಿದಾಗ ಅವರಿಗೆ ಮಂಗಳೂರಿಗೆ ನಗರಸಭಾ ಚುನಾವಣಾ ಪ್ರಚಾರಕ್ಕೆ ಬರಬೇಕೆಂದು ಕರೆ ಬಂದಿತ್ತು. ಆದರೆ ಹುಬ್ಬಳ್ಳಿಯಿಂದಲೂ ಅಲ್ಲಿ ಕಾರ್ಮಿಕರದ್ದೇನೋ ಗಡಿಬಿಡಿಯಾಗಿದೆ ಎಂದು ರಾತ್ರಿ ದೂರಧ್ವನಿಯಿಂದ ತಕ್ಷಣ ಬರಬೇಕೆಂದು ಕರೆ. ಮರುದಿನ ಅಂದರೆ ಸೆಪ್ಟೆಂಬರ್ 15ರಂದು ಬೆಳಿಗ್ಗೆ 4 ಘಂಟೆಗೆ ದೂರಧ್ವನಿ ಗಂಟೆ ಬಾರಿಸಿತು. 'ಯಾರು?' ಎಂದಾಗ 'ನಾನು ಶೆಟ್ಟರ್‌ರೀ ಮಲ್ಲ್ಯಾರೇ. ಒಂದು ಪೇಚಿಗೆ ಸಿಕ್ಕೇನಿ. ರಾತ್ರಿ ಹುಬ್ಬಳ್ಳಿಯಿಂದ ಫೋನ್ ಬಂದಿತ್ತು. ಕರ್ನಾಟಕ ಮಿಲ್ಲಿನದೇನೋ ಗಡಿಬಿಡಿ ಅಂತ. ತುರ್ತು ಬರಬೇಕು ಎಂದು ಹೇಳ್ಯಾರ. ಅಲ್ಲಿಗೆ ಹೋಗಲೋ, ಅಥವಾ ಮಂಗಳೂರಿಗೆ ಹೋಗಲೋ ಎಂದು ರಾತ್ರಿ ಇಡೀ ವಿಚಾರ ಮಾಡಿದೆ. ಕೊನೆ ಮುಟ್ಟಲ್ಲ ನೋಡ್ರಿ. ಈಗ ಹ್ಯಾಂಗ ಮಾಡ್ಲಿ ಅಂತೀರಿ?' ಎಂದು ಕೇಳಿದರು. 'ಈ ಕಾರ್ಯಕ್ರಮ ಮೊದಲೇ ನಿಶ್ಚಯವಾಗಿದೆಯಲ್ಲವೇ? ಅಲ್ಲಿಯ ಕಾರ್ಯಕರ್ತರೆಲ್ಲ ನಿಮ್ಮ ದಾರಿ ನೋಡುತ್ತಿದ್ದಾರೆ. ನೀವು ಮಂಗಳೂರಿಗೇ ಹೋಗುವುದೇ ಒಳ್ಳೆಯದು' ಎಂದಾಗ 'ಸರಿ ಹಾಂಗಾದ್ರೆ ರಘುರಾಮ ಶೆಟ್ಟರ ಸಂಗಡ ಹೋಗ್ತೀನಿ. ನಾವೊಬ್ಬನೇ ಈಗ ಎಲ್ಲೂ ಹೋಗೋಲ್ಲಪ್ಪ' ಅಂದರು. ಆದರಂತೆ ಮಂಗಳೂರಿಗೆ ಹೋಗಿ ಕಾರ್ಯಕ್ರಮ ಮುಗಿಸಿದರು.

ಅಕ್ಟೋಬರ್ 27ರಂದು ಹರಿಹರ ಮಂಡಲ ಅಧಿವೇಶನಕ್ಕೆ ಬಂದಾಗ ಜೊತೆಯಲ್ಲಿ ಹುಬ್ಬಳ್ಳಿಯ ಓರ್ವ ಕಾರ್ಯಕರ್ತರನ್ನು ಕರಕೊಂಡು ಬಂದಿದ್ದರು. 'ಇವರ್‍ಯಾರು?' ಎಂದು ಕೇಳಿದಾಗ 'ಮಲ್ಯಾರೇ ನಾವೊಬ್ಬನೇ ಈಗ ಎಲ್ಲೂ ಹೋಗೋ ಹಾಗಿಲ್ಲ. ಧೈರ್ಯವೇ ಬರವೊಲ್ಲದಪ್ಪಾ. ಅದ್ಕೇ ಇವ್ರನ್ನು ಕರಕೊಂಡು ಬಂದೀನಿ' ಅಂದರು. ಬಿಡುವಿಲ್ಲದ ಚಟುವಟಿಕೆಯ ದಿನ ಅದು. 'ರಾತ್ರಿ ಪಂಚಂ ಬಸ್ಸಿನಲ್ಲಿ ಜೊತೆಗೇ ಬೆಂಗಳೂರಿಗೆ ಹೋಗೋಣ' ಎಂದರು. ಆದರೆ ಅವರಿಗೆ ಬಸ್ಸಿನಲ್ಲಿ ಮಲಗಲು ಸೌಕರ್ಯವಿಲ್ಲವೆಂದು ನಾವೇ 'ರಾತ್ರಿ ರೈಲಿನಲ್ಲಿ ಆರಾಮಾಗಿ ಮಲಗಿ ಹೋಗಬಹುದು' ಅಂದೆವು. 'ನೀವು ಜತೆಗಿದ್ದರೆ ಸರಿ. ಇಲ್ದಿದ್ರೆ ಇವರನ್ನು ಕರ್‍ಕೊಂಡು ಬೆಂಗಳೂರಿಗೆ ಬಸ್ಸಿನಲ್ಲೇ ಹೋಗ್ಬೇಕೂಂತ ಇದ್ದೆ. ಈಗ ನಾವೊಬ್ಬನೇ ಹೋಗೋ ಹಾಂಗಿಲ್ಲ' ಎಂದರು. ರಾತ್ರಿ ರೈಲಿನಲ್ಲಿ ಎಷ್ಟು ಪ್ರಯತ್ನ ಮಾಡಿದರೂ ಮಲಗಲು ಜಾಗ ಸಿಗಲಿಲ್ಲ. ದಾವಣಗೆರೆ ದಾಟಿದ ನಂತರ ಸ್ವಲ್ಪ ಜಾಗ ಸಿಕ್ಕಿತು. 'ನೀವು ಮಲಗ್ರಿ. ನಾ ಹಂಗೇ ಕೂಂತಿರ್ತೇನೆ' ಅಂದರು. ಅಂತೂ ಸ್ವಲ್ಪ ದೂರ ಹೋದ ನಂತರ ಮಲಗಲು ಸ್ವಲ್ಪ ಜಾಗ ಸಿಕ್ಕಿತು. ಮರುದಿನ ಇಲ್ಲಿ ಶಾಸನಸಭೆಯ ಹಕ್ಕು ಬಾಧ್ಯತಾ ಸಮಿತಿ ಸಭೆ ಇತ್ತು. ಅದನ್ನು ಮುಗಿಸಿ ಹುಬ್ಬಳ್ಳಿಗೆ ಹೊರಡುವ ಮುನ್ನ ಮಾತನಾಡುತ್ತ 'ಬೆಳ್ತಂಗಡಿಗೆ ಒಟ್ಟಿಗೆ ಹೋಗೋಣ. ಹುಬ್ಬಳ್ಳಿಯಿಂದ ಇಲ್ಲಿವರೆಗೆ ಯಾರನ್ನಾದ್ರೂ ಜೊತೆ ಮಾಡ್ಕೊಂಡು ಬರ್ತೀನಿ. ಇಲ್ಲಿಂದ ನೀವು ಜೊತೆಗಿರಬೇಕು. ಒಬ್ಬನೇ ಹೋಗಲು ನಾವೊಲ್ಲೆ' ಅಂದರು. 'ಆದೀತು ನೋಡೋಣ' ಎಂದು ಉತ್ತರಿಸಿದ್ದಾಯಿತು.

'ಶೆಟ್ರು ಹೋದ್ರೀ'- ಹುಬ್ಬಳ್ಳಿಯಿಂದ ನಮ್ಮ ಪ್ರತಿನಿಧಿ ದೂರಧ್ವನಿಯಲ್ಲಿ ಮಾತನಾಡಿದಾಗ ನಂಬಲಾಗಲಿಲ್ಲ. 'ಹಾರ್ಟ್ ಅಟ್ಯಾಕ್ ಆಗಿತ್ತು. ಇದೀಗ ಆಸ್ಪತ್ರೆಯಲ್ಲಿ ಹೋದ್ರು' ಎಂದಾಗ ಮುಂದುವರಿಯದ ಧ್ವನಿ ಅಲ್ಲಿಗೇ ನಿಂತಿತು! ಶೆಟ್ರು ಒಬ್ಬರೇ ಎಂದೂ ಹೋಗುವವರಲ್ಲ. ಆದರೆ ಈ ಪ್ರವಾಸ ಅಸಾಮಾನ್ಯವಾಗಿತ್ತು. ಹಾಗೆಂದೇ ಯಾರಿಗೂ ಹೇಳದೆ, ಯಾರನ್ನೂ ಕರೆಯದೇ ಹೊರಟು ಹೋದರು!

ಸುದ್ದಿ ಕೇಳಿ ಸಿಡಿಲೆರಗಿದಂತಾಗಿದೆ. ನಿರಂತರ ಸಾರ್ವಜನಿಕ ಕಾರ್ಯದಲ್ಲಿ ತಮ್ಮ ಶರೀರವನ್ನು ಗಂಧದಂತೆ ತೇಯ್ದು ತೇಯ್ದು ಆ ಆತ್ಮೀಯ ಬಂಧು ಅತ್ಯಲ್ಪ ವಯಸ್ಸಿನಲ್ಲಿ ಆಕಸ್ಮಾತ್ ಏಕಾಂಗಿಯಾಗಿ ಅಗಲಿದ್ದಾರೆ. ಸ್ವಜನ, ಸ್ವರಾಷ್ಟ್ರಪ್ರೇಮದ ಪ್ರೇರಣೆಯಿಂದ ದುಡಿದು ದೇವಪ್ರಿಯ, ಜನಪ್ರಿಯರಾಗಿ ಜನಲೋಕದಲ್ಲಿ ಬಹುವೇಗದಿಂದ ಮೇಲೇರಿ ಮಿಂಚುತ್ತ, ಮಿನುಗುತ್ತ ಜೊತೆಗಾರರೊಡಗೂಡಿ ಅವರಿಗೆ ಉತ್ಸಾಹ, ಮಾರ್ಗದರ್ಶನ ನೀಡುತ್ತಿದ್ದ ಉಜ್ವಲ ತಾರೆ ಅನಿರೀಕ್ಷಿತವಾಗಿ ಕಣ್ಮರೆಯಾಗಿದೆ. 'ದೇವಪ್ರಿಯರು ತಾರುಣ್ಯದಲ್ಲೇ ಇಹಲೋಕ ಯಾತ್ರೆ ಮುಗಿಸುತ್ತಾರೆ' ಎಂಬ ಆಂಗ್ಲ ನುಡಿಯೂ ನೆನಪಾಗುತ್ತಿದೆ. ಹೀಗೆ 'ಇದು ಹಿಂಗೇ ನಡ್ಯೋದ್ರೀ' ಎಂದು ಹೇಳುತ್ತಿದ್ದ 'ಸ್ವಭಾವಸ್ತು ಪ್ರವರ್ತತೇ' - 'ಬ್ರಹ್ಮಶಕ್ತಿ' ಶ್ರೀ ಶೆಟ್ಟರ್ ವಕೀಲರನ್ನು ಅಮರಗೊಳಿಸಿ ತನ್ನ ಕರ್ತವ್ಯ, ಕರ್ಮವನ್ನು ಮುಗಿಸಿದೆ. ಈ ಕೊರಡು ತೇಯ್ದು ತೇಯ್ದು ಮಾಯವಾದರೂ ಅದರ ಸುಗಂಧ ಅಮರವಾಗಿದೆ. ಅದು ನಿತ್ಯ ನಿರಂತರ ದೇಶ, ಧರ್ಮ, ಬಂಧುಗಳ ನಿಷ್ಕಾಮ ಸೇವೆಯ ಪ್ರೇರಣೆಯಿಂದಿ ನಿಶ್ಚಿತವಾಗಿಯೂ ನೀಡುವದು.

ಈ ದೇವ ಪ್ರಿಯ, ಜನಪ್ರಿಯ ನಿಷ್ಕಾಮ ಕರ್ಮಯೋಗಿಗೆ ನಮ್ಮ ಅಂತಿಮ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತ ಅವರ ಆತ್ಮಕ್ಕೆ ಚಿರ ಸದ್ಗತಿಯನ್ನು ಕೋರುವೆವು. ಅವರ ಪತ್ನಿ, ಮಕ್ಕಳು, ಕುಟುಂಬ ವಿಶಾಲ ಪರಿವಾರ ಮತ್ತು ಸಹಸ್ರಾರು ಸಹ ಕಾರ್ಯಕರ್ತರಿಗೆ ಅವರ ಆಕಸ್ಮಾತ್ ನಿಧನದಿಂದುಂಟಾಗಿರುವ ದುಃಖವನ್ನು ಭರಿಸಿಕೊಳ್ಳುವ ಶಕ್ತಿಯನ್ನು ದಯಪಾಲಿಸು ಎಂದು ಪರಮಕೃಪಾಳು ಭಗವಂತನಲ್ಲಿ ನಮ್ಮ ಪ್ರಾರ್ಥನೆ.

-ಸು.ನಾ. ಮಲ್ಯ,

ವಿಕ್ರಮದ ಸಂಸ್ಥಾಪಕ ಸಂಪಾದಕರು

ಸದಾಶಿವರ ಸೇವೆ ಸಂಚಿತ ನಿಧಿ

ದಿವಂಗತ ಸದಾಶಿವ ಶೆಟ್ಟರು ಯಾವಾಗಲೂ ಜನತೆಯ, ಬಡವರ ಮಧ್ಯಮ ವರ್ಗದವರ, ಕಾರ್ಮಿಕರ, ದೀನ ದಲಿತರ ಹಿತ ಏಳ್ಗೆಯನ್ನೇ ಚಿಂತಿಸುವವರಾಗಿ ನಿಜವಾದ ಓರ್ವ ಆದರ್ಶ ಶಾಸಕನಂತೆ ಬಾಳಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿನ್ನೆಲೆಯಿಂದ ಬಂದವರಾಗಿರಲಿಲ್ಲವಾದರೂ ತತ್ತ್ವ ನಿಷ್ಠ ಜನಸಂಘದ ಶಾಸಕರಾಗಿ ಬಾಳಿದರು. ತಮ್ಮೊಂದಿಗೆ ಜನಸಂಘವನ್ನೂ ಬೆಳೆಸಿದರು.

ಕರ್ನಾಟಕದಲ್ಲಿ ಅಧಿಕಾರಾರೂಢ ಕಾಂಗ್ರೆಸ್ ಪಕ್ಷ ಬಿಟ್ಟರೆ ಪ್ರಬಲ ವಿರೋಧಿ ಪಕ್ಷವಾಗಿ ಪ್ರಜಾ ಸಮಾಜವಾದಿ ಪಕ್ಷವೊಂದು ಮಾತ್ರವಿತ್ತು. ಚುನಾವಣೆಗಳಲ್ಲಿ ಜನಸಂಘದ ಅಭ್ಯರ್ಥಿಯಾಗಲು ಯಾರೂ ಮುಂದೆ ಬರುತ್ತಿರಲಿಲ್ಲ. ಕಾರ್ಯಕರ್ತರಾಗಿ ದುಡಿಯಲು ಸಹ ಜನರು ಅಷ್ಟೊಂದು ಆಸಕ್ತಿ ತೋರುತ್ತಿರಲಿಲ್ಲ. ಬೇರೆ ಪಕ್ಷಗಳಲ್ಲಿಯಂತೆ ಜನಸಂಘದಲ್ಲಿ ದುಡಿಯಲು ಬಂದವರಿಗೆ ಪ್ರಾಪ್ತಿಯೆಂಬುದೇನೂ ಇರಲಿಲ್ಲ. ಕಾರ್ಯಕರ್ತರು ನೇತಾರರು ತನು ಮನ ಧನಗಳನ್ನು ಧಾರೆಯೆರೆದು ಸೇವೆ ಸಲ್ಲಿಸಬೇಕಾಗುತ್ತಿತ್ತು. ಇಷ್ಟಾದರೂ ಜಯದ ನಿರೀಕ್ಷೆ ಇರುತ್ತಿರಲಿಲ್ಲ. ಇಂಥದರಲ್ಲಿ ಧಾರವಾಡದ ಶ್ರೀ ವಾಯ್.ಎಸ್. ಪಾಟೀಲರು ವಿಧಾನ ಪರಿಷತ್‌ನಲ್ಲಿ ಮೊದಲ ಜನಸಂಘದ ಸದಸ್ಯರಾಗಿದ್ದರು. ಸದಾಶಿವ ಶೆಟ್ಟರು ಹುಬ್ಬಳ್ಳಿ ನಗರದಿಂದ ಒಂದು ಸಾರ್ವತ್ರಿಕ ಚುನಾವಣೆ, ಧಾರವಾಡ ನಗರದಿಂದ ಒಂದು ಉಪಚುನಾವಣೆ ಸೋತರೂ ಎದೆಗುಂದದೇ, ತತ್ತ್ವ ಸಿದ್ಧಾಂತಗಳಲ್ಲಿಯ ಅಚಲ ಶ್ರದ್ಧೆ ತಮ್ಮಲ್ಲಿ ಸ್ಥಿರವಾಗಿ ನೆಲೆಗೊಳಿಸಿದ ಛಲದಿಂದ ಮೂರನೇ ಸಲ ಹುಬ್ಬಳ್ಳಿ ನಗರದಿಂದ ಸ್ಪರ್ಧಿಸಿ ಜನಸಂಘದ ವಿಜಯ ದುಂದುಭಿ ಮೊಳಗಿಸಿದರು. ದಕ್ಷಿಣ ಕನ್ನಡದ ಕಾರ್ಕಳದಿಂದ ಶ್ರೀ ಬೋಳ ರಘುರಾಮ ಶೆಟ್ಟಿ ಕೊಡಗಿನಿಂದ ಲೋಕಯ್ಯ ನಾಯಕ ಹಾಗೂ ಬೀದರನಿಂದ ಜಿ. ಚಂದ್ರಕಾಂತ ಸಿಂಧೋರೆಯವರು ಆಯ್ಕೆಗೊಂಡಿದ್ದರಿಂದ ವಿಧಾನ ಸಭೆಯಲ್ಲಿ ಒಟ್ಟು ನಾಲ್ವರ ಬಲ ಹೊಂದಿದ ಜನಸಂಘದ ಗುಂಪಿಗೆ ಶೆಟ್ಟರೇ ಧುರೀಣರಾದುದು ಸಹಜವಾಗಿತ್ತು.

ಶೆಟ್ಟರು ತಾವು ಸ್ಪರ್ಧಿಸಿದ ಚುನಾವಣೆ ಪ್ರಚಾರಕ್ಕೆ ನನ್ನನ್ನು ಒಂದು ಹಳ್ಳಿಗೆ ಕರೆದುಕೊಂಡು ಹೋಗಿದ್ದು ನೆನಪಿಗೆ ಬರುತ್ತದೆ. ಆ ಹಳ್ಳಿಯ ಜನರ ಸಮಸ್ಯೆ, ತೊಂದರೆ, ಬೇಡಿಕೆಗಳನ್ನೇ ಪಟ್ಟಿ ಮಾಡಿ ಜನಸಂಘದ ಗೆಲುವಾದರೆ ಎಲ್ಲವನ್ನೂ ಬಗೆಹರಿಸುವುದಾಗಿ ಘೋಷಿಸಿದ್ದರು. ಅವರು ಶಾಸಕರಾದ ಬಳಿಕ ನನ್ನನ್ನು ಅವರು ಪುನಃ ಅದೇ ಹಳ್ಳಿಗೆ ಕರೆದುಕೊಂಡು ಹೋಗಿ ಅಲ್ಲಿಯ ಜನತೆಯ ಬೇಡಿಕೆಗಳನ್ನೆಲ್ಲ ಈಡೇರಿಸಿಕೊಟ್ಟಿರುವುದಾಗಿ ವಿವರಿಸಿದ್ದರು. ಹೀಗೆ ಅವರು ಜನತೆಯ ಪ್ರಶ್ನೆಗಳಿಗೆ ನಿರಂತರ ಸ್ಪಂದಿಸುವ ಸ್ವಭಾವ ಹೊಂದಿದ್ದರು. ಅವರ ಇಂಥ ಸಾಧನೆಗಳ ಪರಿಣಾಮವಾಗಿಯೇ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ 1968ರಲ್ಲಿ ನಡೆದ ಚುನಾವಣೆಯಲ್ಲಿ ಜನಸಂಘವು ಹನ್ನೆರಡು ಸ್ಥಾನ ಗಳಿಸಿ ಪ್ರಮುಖ ವಿರೋಧಿ ಪಕ್ಷವಾಗಿತ್ತು. ಅವರ ಅಣ್ಣ ಶಿವಪ್ಪ ಶೆಟ್ಟರರಿಗೆ ಕೆಲ ಕಾಲ ಮಹಾಪೌರರಾಗುವ ಸುಯೋಗವೂ ಒದಗಿತ್ತು. ಕರ್ನಾಟಕದಲ್ಲಿ ಜನಸಂಘದ ಹಾಗೂ ನಂತರದ ಭಾರತೀಯ ಜನತಾ ಪಕ್ಷದ ಯಶಸ್ವಿಗೆ ಶೆಟ್ಟರು ಆಗ ತಮ್ಮ ಏಳೆಂಟು ವರ್ಷಗಳ ರಾಜಕೀಯ ಜೀವನದಲ್ಲಿ ಹಾಗೂ ಕೇವಲ ಒಂದೂವರೆ ವರ್ಷದ ಶಾಸಕತ್ವದ ಅವಧಿಯಲ್ಲಿ ಸಲ್ಲಿಸಿದ ಸೇವೆಯು ಸಂಚಿತ ನಿಧಿ ಸ್ವರೂಪದಲ್ಲಿದೆ.

-ಡಿ.ಎಚ್. ಶಂಕರಮೂರ್ತಿ
ಉಚ್ಚ ಶಿಕ್ಷಣ ಸಚಿವರು
ಕರ್ನಾಟಕ ಸರಕಾರ, ಬೆಂಗಳೂರು

ಪ್ರಬಲ ವ್ಯಕ್ತಿತ್ವದ ಶೆಟ್ಟರು

ಕರ್ನಾಟಕದ ಜನಸಂಘದ ಬೆಳವಣಿಗೆಯಲ್ಲಿ ದಿವಂಗತ ಸದಾಶಿವ ಶೆಟ್ಟರ ಪಾತ್ರ ಬಹಳ ಮಹತ್ವದ್ದು. 1967ರ ವಿಧಾನಸಭಾ ಚುನಾವಣೆಯಲ್ಲಿ ನಾಲ್ಕು ಸ್ಥಾನ ಗಳಿಸಿ, ಕರ್ನಾಟಕ ಮೊಟ್ಟ ಮೊದಲ ಸಲ ಗಣನೀಯ ಯಶಸ್ಸು ಸಾಧಿಸಿ ದಕ್ಷಿಣ ಭಾರತದಲ್ಲಿ ಜನಸಂಘದ ಯಶಸ್ವಿಗೆ ನಾಂದಿ ಹಾಡಿತು. ಇಂದಿನ ಕರ್ನಾಟಕ ರಾಜ್ಯದ ಸಮ್ಮಿಶ್ರ ಸರ್ಕಾರದ ಅಡಿಪಾಯವನ್ನು 1967 ರಲ್ಲಿ ಹಾಕಲಾಗಿತ್ತೆಂದರೆ ಅದೇನೂ ಅತಿಶಯೋಕ್ತಿಯಲ್ಲ. ಶ್ರೀ ಸದಾಶಿವ ಶೆಟ್ಟರು ಆಗ ಜನಸಂಘದ ವಿಧಾನಸಭಾ ಸದಸ್ಯರ ಗುಂಪಿನ ನಾಯಕರಾಗಿ ಚುನಾಯಿತರಾದದ್ದು ಸ್ವಾಭಾವಿಕವೇ.

ಹುಬ್ಬಳ್ಳಿಯಲ್ಲಿ ಜನಸಂಘದ ಈ ಯಶಸ್ಸಿನ ಹಿಂದೆ ಎರಡು ಶಕ್ತಿಗಳಿದ್ದುವು. ಒಂದು ಜನಸಂಘದ ಸಂಘಟನೆಯ ಬಲ. ಮತ್ತೊಂದು ಶ್ರೀ ಸದಾಶಿವ ಶೆಟ್ಟರ ವ್ಯಕ್ತಿತ್ವದ ಬಲ.

ಮುಂದೆ ಎರಡೇ ವರ್ಷಗಳಲ್ಲಿ ಅವರ ಅಕಾಲಿಕ ನಿಧನದಿಂದ ನಡೆದ ಉಪಚುನಾವಣೆಯಲ್ಲಿ ಜನಸಂಘವು ಈ ಸ್ಥಾನವನ್ನು ಉಳಿಸಿಕೊಂಡು ದಿ. ಶೆಟ್ಟರ ವಕೀಲರ ನೇತೃತ್ವ ಹಾಗೂ ವ್ಯಕ್ತಿತ್ವಗಳ ಮಹತ್ವವನ್ನು ಎತ್ತಿ ತೋರಿಸಿತು.

ಅವರಿಗೆ ತಮ್ಮ ಆಯುಷ್ಯದ ಎಂಟು ವರ್ಷಗಳ ಸ್ವಲ್ಪ ಕಾಲಾವಧಿಯಲ್ಲಿ ಮಾತ್ರ ಸಕ್ರೀಯ ರಾಜಕೀಯ ರಂಗದಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತು. ಅಷ್ಟರಲ್ಲಿ ಅವರು ಜನಸಂಘದ ಅಭ್ಯರ್ಥಿಯಾಗಿ ಮೂರು ಚುನಾವಣೆಗಳನ್ನು ಎದುರಿಸಿದರು. 1960ರಲ್ಲಿ ಕರ್ನಾಟಕ ಜನಸಂಘದ ವಾರ್ಷಿಕಾಧಿವೇಶನ ಹುಬ್ಬಳ್ಳಿಯಲ್ಲಿ ಜರುಗಿತು. ಆಗ ಅವರು ಅದರ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಜನಸಂಘದ ನಿಕಟ ಸಂಪರ್ಕಕ್ಕೆ ಬಂದು ಪಕ್ಷವನ್ನು ಪ್ರವೇಶಿಸಿದರು. ಮುಂದೆ 1962 ಹಾಗೂ 1967ರ ಮಹಾಚುನಾವಣೆಗಳೆರಡರಲ್ಲೂ ಅವರು ಹುಬ್ಬಳ್ಳಿ ನಗರ ಮತಕ್ಷೇತ್ರದಿಂದಲೇ ಸ್ಪರ್ಧಿಸಿದರು. 1962ರ ಮೊದಲನೇ ಪ್ರಯತ್ನದಲ್ಲಿ ಅವರು ತಮ್ಮ ಶಕ್ತಿಯ ಪರಿಚಯ ಮಾಡಿಕೊಟ್ಟರಾದರೂ ವಿಜಯ ಗಳಿಸಲು ಸಾಧ್ಯವಾಗಲಿಲ್ಲ. 1964ರಲ್ಲಿ ಧಾರವಾಡ ನಗರ ಮತದಾರ ಕ್ಷೇತ್ರದಿಂದ ಉಪ ಚುನಾವಣೆಯಲ್ಲಿ ಸಹ ಜನಸಂಘದ ಉಮೇದುವಾರರಾಗಿ ಸ್ಪರ್ಧಿಸಿ ಮತ್ತೆ ವಿಫಲಗೊಂಡರೂ ಜನಸಂಘದ ಬಲ ಹೆಚ್ಚಿಸಿ ಮುಂದೆ ಅಲ್ಲಿ ಜನಸಂಘದ ವತಿಯಿಂದ ಡಾ. ಭಾವೂರಾವ ದೇಶಪಾಂಡೆ ಗೆಲ್ಲುವುದಕ್ಕೆ ರಂಗ ಸಿದ್ಧ ಪಡಿಸಿದರು. ನಂತರ ಅವರು ತಮ್ಮ ನೇತೃತ್ವದ ಗುಣವನ್ನು ಜನರಿಗೆ ಪರಿಚಯಿಸುತ್ತಲೇ ಜನ ಮೆಚ್ಚುಗೆ ಹೆಚ್ಚಿಸಿಕೊಳ್ಳುತ್ತ 1967ರ ಮಹಾ ಚುನಾವಣೆಯಲ್ಲಿ ವಿಧಾನಸಭೆಗೆ ಜನಸಂಘದ ಸದಸ್ಯರಾಗಿ ವಿಜಯಶ್ರೀ ಪಡೆದು ಆಯ್ಕೆಯಾದರು. ಆಗ ರಾಜ್ಯ ಜನಸಂಘದ ಪ್ರಧಾನ ಕಾರ್ಯದರ್ಶಿ ಸ್ಥಾನದಲ್ಲಿದ್ದ ನಾನು ಈ ಮೂರು ಚುನಾವಣೆಗಳ ಕಾಲದಲ್ಲಿ ಅವರೊಡನೆ ಚುನಾವಣೆ ಪ್ರಚಾರ ಅಭಿಯಾನದಲ್ಲಿ ಪಾಲ್ಗೊಳ್ಳುವ ಅವಕಾಶ ಪಡೆದಿದ್ದೆ.

ಈ ಮೂರೂ ಚುನಾವಣೆಗಳ ಕಾಲದಲ್ಲಿ ಅವರೊಡನೆ ಹುಬ್ಬಳ್ಳಿಯ ವಿವಿಧ ವಸತಿಗಳಲ್ಲಿ ಜನರನ್ನು ಸಂಪರ್ಕಿಸುವ ಸಂದರ್ಭದಲ್ಲಿ ಸಮಾಜದ ಉಪೇಕ್ಷಿತ ಹಾಗೂ ಕೆಳ ವರ್ಗದ ಸಾಮಾನ್ಯ ಜನರೊಂದಿಗೆ ಬೆಳೆಸಿಕೊಂಡಿದ್ದ ಆತ್ಮೀಯತೆಯನ್ನೂ ಆ ವಸತಿಯ ಮುಂದಾಳುಗಳು ತೋರುತ್ತಿದ್ದ ಆತ್ಮೀಯತೆ ಆದರವನ್ನು ಕಂಡು ನನಗೆ ಅತೀವ ಆನಂದ ಆಶ್ಚರ್ಯವುಂಟಾಗಿ ಜನನಾಯಕನೆಂದರೆ ಹೀಗೆಯೇ ಇರಬೇಕೆಂದು ನನ್ನ ಮನಸ್ಸು ಹೇಳುತ್ತಿತ್ತು.

ಸದಾಶಿವ ಶೆಟ್ಟರಿಗೆ ಬಹಳಷ್ಟು ಜನರ ಸಂಪರ್ಕ ಅವರ ವೃತ್ತಿಯ ಭಾಗವಾಗಿಯೇ ಬಂದಿತ್ತು. ಹುಬ್ಬಳ್ಳಿಯ ಕಮರಿಪೇಟೆ, ರೇಲ್ವೆ ಡೌನ್ ಚಾಳ, ಸೆಟ್ಲಮೆಂಟ್ ಭಾಗಗಳು ಸಣ್ಣ ಪುಟ್ಟ ಅಪರಾಧಗಳ ತಾಣವೆನಿಸಿದ್ದುವು. ಪೊಲೀಸರು ಆ ಅಪರಾಧಿಗಳನ್ನು ಹುಡುಕುವಾಗ ಹಾಗೂ ತನಿಖೆ ನಡೆಸುವಾಗ ಅವರೊಡನೆ ಸುತ್ತಲಿನ ಹತ್ತಾರು ಜನರಿಗೂ ತೊಂದರೆಯಾಗುತ್ತಿತ್ತು. ಅಂಥ ಪ್ರಸಂಗಗಳಲ್ಲೆಲ್ಲ ಆ ನಿರಪರಾಧಿಗಳ ದುಃಖ ದುಮ್ಮಾನಗಳನ್ನು ಕೇಳಿ ಅವರಿಗೆ ಅನುಕಂಪ ತೋರಿ ಅವರಿಗೆ ತಾನು ಬೆಂಬಲವಾಗಿದ್ದೇನೆ ಎಂದು ಧೈರ್ಯ ಕೊಟ್ಟು, ಪೊಲೀಸ್ ಅಧಿಕಾರಿಗಳೊಡನೆ ವಾದಿಸಿ, ಸೆಣಸಿ ಪ್ರಸಂಗ ಬಂದಾಗ ನ್ಯಾಯಾಲಯದ ಕಟ್ಟೆ ಹತ್ತುವ ಸಂದರ್ಭಗಳಲ್ಲಿ ಅವರ ವಕೀಲರಾಗಿ ಸದಾಶಿವ ಶೆಟ್ಟರು ಅವರಿಗೆ ಆಸರೆಯಾಗಿರುತ್ತಿದ್ದರು. ಹೀಗಾಗಿ ಆ ಬಡವರೆಲ್ಲರೂ ವಕೀಲರಿಂದ ತಾವು ಉಪಕೃತರಾಗಿದ್ದ ಭಾವನೆಯನ್ನು ಬೆಳೆಸಿಕೊಂಡಿದ್ದರು. ಅವರು ಆ ವಸತಿಗಳಲ್ಲಿಯ ಬಹಳಷ್ಟು ಬಡ ಹೆಣ್ಣು ಮಕ್ಕಳ, ಮುದುಕರ, ಹುಡುಗರ ಹೃದಯದಲ್ಲಿ ಮನೆ ಮಾಡಿಕೊಂಡಿದ್ದರು.

ಸದಾಶಿವ ಶೆಟ್ಟರ ಅಭಿಮಾನಿಗಳು ಎಲ್ಲ ಜಾತಿಮತಗಳಿಗೆ ಸೇರಿದವರಾಗಿದ್ದರು. ಸೋ.ಸ. ಕ್ಷತ್ರಿಯ ಸಮಾಜದವರು, ಮುಸಲ್ಮಾನರು, ದಲಿತರೂ ಮುಕ್ತ ಜನಾಂಗ (ಡಿನೋಟಿಫೈಡ್ ಸಮುದಾಯ) ಹೀಗೆ ಎಲ್ಲ ಬಡವರೂ ಅವರಲ್ಲಿ ಸಮ್ಮಿಲಿತರಾಗಿದ್ದರು. ಮುಸಲ್ಮಾನ ಸಮಾಜದವರು ಅವರ ಬಗ್ಗೆ ಇಟ್ಟುಕೊಂಡಿದ್ದ ಗೌರವ ಭಾವನೆಯ ದ್ಯೋತಕವಾಗಿ ಹುಬ್ಬಳ್ಳಿಯಲ್ಲಿ ನಡೆದ ಒಂದು ಘಟನೆ ಉಲ್ಲೇಖನೀಯ.

ದಸರೆಯ ದಿನ ಬೆಳಿಗ್ಗೆ ಹುಬ್ಬಳ್ಳಿಯ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕರ ಪಥ ಸಂಚಲನ ನಡೆದಿತ್ತು. ಸದಾಶಿವ ಶೆಟ್ಟರೂ ಆ ವರ್ಷ ಗಣವೇಷಧಾರಿಗಳಾಗಿ ಅದರಲ್ಲಿ ಭಾಗವಹಿಸಿದ್ದರು. ಅವರ ಸ್ವಭಾವದಿಂದ ಪರಿವರ್ತನೆ ಹೊಂದಿದ ಮುಸಲ್ಮಾನ ಧುರೀಣರು ಭಂಡಿವಾಡ ಅಗಸಿಯಲ್ಲಿಯ ತಮ್ಮ ವಸತಿಗೆ ಸಮೀಪದಲ್ಲಿ ಪಥ ಸಂಚಲನ ಆಗಮಿಸಿದಾಗ ಭಗವಾ ಧ್ವಜಕ್ಕೆ ಹಾರ ಹಾಕಿ ವಂದನೆ ಸಲ್ಲಿಸಿ ಗೌರವ ತೋರಿಸಿದ್ದರು. ಈ ಘಟನೆಯನ್ನು ರಾಜ್ಯ ಸ್ಥರದ, ರಾಷ್ಟ್ರಮಟ್ಟದ ಪತ್ರಿಕೆಗಳ ಸುದ್ದಿಗಾರರು ಸುದ್ದಿ ಸಂಸ್ಥೆಗಳವರು ವರದಿ ಮಾಡಲೇ ಇಲ್ಲ. ಸಂಘದ ವಾರ ಪತ್ರಿಕೆ ವಿಕ್ರಮದಲ್ಲಿ ಮಾತ್ರ ಫೋಟೋ ಸಹಿತ ಈ ಸುದ್ದಿ ಪ್ರಕಟವಾಗಿತ್ತು.

ನನ್ನ ಹಾಗೂ ಅವರ ನಡುವೆ ವೈಯಕ್ತಿಕ ಸಂಬಂಧ ನಿಕಟವಾಗಿ ಬೆಳೆಯುತ್ತ ನಡೆದಿತ್ತು. ಹುಬ್ಬಳ್ಳಿಯಲ್ಲಿ ನಡೆಯುತ್ತಿದ್ದ ಸಭೆಗಳಲ್ಲಿ ಭಾಗವಹಿಸಿ ನಂತರ ರಾತ್ರಿ ಊಟವನ್ನು ಅವರ ಮನೆಯಲ್ಲೇ ಮುಗಿಸಿ ಅನೌಪಚಾರಿಕ ಮಾತುಕತೆ, ವಿಚಾರ ವಿನಿಮಯ, ಹರಟೆ ಹೊಡೆದು ರಾತ್ರಿ ಅವರ ಮನೆಯಲ್ಲೇ ಮಲಗಿ ಮುಂಜಾನೆ ನಸುಕಿನಲ್ಲಿ ಎದ್ದು ನೇರವಾಗಿ ಬಸ್‌ಸ್ಟ್ಯಾಂಡಿಗೆ ಬರುವುದೇ ನನ್ನ ಕ್ರಮವಾಗಿತ್ತು.

• ಕೇಂದ್ರ ಗೃಹ ರಾಜ್ಯಮಂತ್ರಿ ಹಾಗೂ ಬೆಳಗಾವಿಯಲ್ಲಿ ಕನ್ನಡಿಗರ ಮುಂದಾಳಾಗಿದ್ದ ಶ್ರೀ ದಾತಾರ ಬಳವಂತರಾಯರ ನಿಧನದಿಂದ ತೆರವಾದ ಬೆಳಗಾವಿ ಲೋಕಸಭಾ ಸ್ಥಳದ ಉಪಚುನಾವಣೆಯಲ್ಲಿ ಕರ್ನಾಟಕ ಕೇಸರಿ ಶ್ರೀ ಜಗನ್ನಾಥರಾವ ಜೋಶಿಯವರು ಜನಸಂಘದ ಹುರಿಯಾಳಾಗಿದ್ದರು. ಆಗ ರಾಜ್ಯದ ಎಲ್ಲ ಭಾಗಗಳಿಂದಲೂ ಪಕ್ಷದ ಕಾರ್ಯಕರ್ತರು ಬಂದು ಪ್ರಚಾರ ಮಾಡಿದರು. ರಾಮದುರ್ಗ ತಾಲೂಕಿನಲ್ಲಿ ನಾನೂ ಶೆಟ್ಟರ ವಕೀಲರೂ ಒಟ್ಟುಗೂಡಿ ಎರಡು, ಮೂರು ದಿನ ಕೆಲಸ ಮಾಡಿದೆವು. ಆಗ ನಮ್ಮಿಬ್ಬರಲ್ಲಿ ಬಹಳ ವಿಚಾರ ವಿನಿಮಯ ನಡೆಯುತ್ತಿತ್ತು.

ಸ್ವಾತಂತ್ರ್ಯದೊಡನೆ ದೇಶದ ವಿಭಜನೆಯೂ ಆಗಿ ಪಾಕಿಸ್ತಾನದಲ್ಲಿಂದ ಕೋಟ್ಯಾವಧಿ ಸಂಖ್ಯೆ ಹಿಂದೂಗಳು ಉಟ್ಟು ಬಟ್ಟೆಯ ಮೇಲೆ ತಮ್ಮ ವಿತ್ತದ, ಪ್ರಾಣದ ಹಾಗೂ ಸ್ತ್ರೀಯರ ಮಾನರಕ್ಷಣೆಗಾಗಿ ನಿರಾಶ್ರಿತರಾಗಿ ಭಾರತಕ್ಕೆ ಬರಬೇಕಾಯಿತು. ಈ ಬಗ್ಗೆ ಚರ್ಚೆ ನಡೆಯುತ್ತಿದ್ದ ಹಾಗೆಯೇ ಗಾಂಧೀ ಹತ್ಯೆಯಲ್ಲಿ ಆರ್ ಎಸ್ ಎಸ್‌ನ ಪಾತ್ರವೇನೂ ಇಲ್ಲವೆಂಬುದು ಖಚಿತವಿದ್ದರೂ ಶೆಟ್ಟರು ಗಾಂಧಿ ಹಂತಕ ಗೋಡ್ಸೆ ಹಾಗೂ ಸಂಘದ ಜೊತೆಗಿನ ಸಂಬಂಧ ಕುರಿತು ವಾಸ್ತವಾಂಶ ಅರಿಯುವ ದೃಷ್ಟಿಯಿಂದ ನನ್ನ ಬಳಿ ಪ್ರಸ್ತಾಪಿಸಿದ್ದರು. ಆಗ ನಾನು 'ವಕೀಲರೇ, ನಾನು ಹುಟ್ಟಿ ಬೆಳೆದದ್ದು ಕಾಂಗ್ರೆಸ್‌ನ ಉನ್ನತ ನಾಯಕನ ಮನೆಯಲ್ಲಿ. ನಮ್ಮ ತಂದೆ (ಜಾಲಿಹಾಳ ಅನಂತರಾಯರು) ಕಟ್ಟಾ ಗಾಂಧೀವಾದಿ. ಹೀಗಾಗಿ ನನ್ನಲ್ಲಿ ಹಿಂದೆಯೂ ಇಂದಿಗೂ ಯಾವಾಗಲೂ ಗಾಂಧೀಜಿಯವರ ಬಗ್ಗೆ ಪೂಜ್ಯ ಭಾವನೆ ದೃಢವಾಗಿದೆ. 1941ರಿಂದ ನಾನು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕನು. 1930ರಿಂದ ಮುಂದೆ ನಡೆದ ಎಲ್ಲ ಕಾಂಗ್ರೆಸ್ ಆಂದೋಲನಗಳನ್ನು ಕಂಡವನಾಗಿದ್ದೇನೆ. 1942ರ 'ಚಲೇಜಾವ' ಚಳುವಳಿಯಲ್ಲಿ 17ರ ಹದಿಹರಯದ ಕಾಲೇಜ ವಿದ್ಯಾರ್ಥಿಯಾಗಿದ್ದ ನಾನು ಆಗಸ್ಟ 7-8-9ರಂದು ಮುಂಬೈಯಲ್ಲಿ ನಡೆದ ಕಾಂಗ್ರೆಸ್ ಕಾರ್ಯ ಸಮಿತಿಯ ಕಾರ್ಯಕಲಾಪಗಳನ್ನು ಪ್ರೇಕ್ಷಕನಾಗಿ ಸಮೀಪದಿಂದ ನೋಡಿದವನು. ನಂತರ ದಿ. 9ರಂದು ಮುಂಜಾನೆ ಮುಂಬೈ ಗೋವಾಲಿಯಾ ಟ್ಯಾಂಕ್ ಮೈದಾನ, ಸಂಜೆ ಶಿವಾಜಿ ಪಾರ್ಕ್‌ಗಳಲ್ಲಿ ನಡೆದ ಎರಡು ಧ್ವಜಾರೋಹಣ ಪ್ರಯತ್ನಗಳನ್ನು ನೋಡಲು ಹೋಗಿ ಪೊಲೀಸರಿಂದ ಬೆತ್ತದ ಹೊಡೆತ ತಿಂದು ಅಶ್ರುವಾಯುವಿನಿಂದ ಕಣ್ಣುರಿಯನ್ನು ಅನುಭವಿಸಿದವನು. ನಾನು ಸಂಘದ ಸಹಕಾರ್ಯವಾಹರಾಗಿದ್ದ ಬಾಳಾ ಸಾಹೇಬ ದೇವರಸ ಅವರ ಹತ್ತು ದಿನಗಳ ಚರ್ಚಾ ಸತ್ರದಲ್ಲಿ ಭಾಗವಹಿಸಿ ಗಾಂಧೀಜಿ ವಿಚಾರ ಹಾಗೂ ಗಾಂಧೀಜಿಯವರ ಬಗ್ಗೆ ಇದ್ದ ಸಂಘದ ಅಧಿಕೃತ ನಿಲುಮೆಯನ್ನು ಬಲ್ಲವನಾಗಿದ್ದೇನೆ. ಅದೇ ಸತ್ರದಲ್ಲಿ ಕಟ್ಟಾ ಹಿಂದು ಮಹಾಸಭಾ ವಿಚಾರಗಳನ್ನು ಪುನರುಚ್ಚಿಸುವವರು 'ಸಂಘವು ಗಾಂಧೀ ಅನುಯಾಯಿ' ಎಂದು ಉಲ್ಲೇಖಿಸಿದುದನ್ನು ಪ್ರತ್ಯಕ್ಷ ನೋಡಿದವನಾಗಿದ್ದೇನೆ ಎಂಬ ನನ್ನ ಹಿನ್ನೆಲೆಯನ್ನು ವಿಸ್ತಾರವಾಗಿ ಹೇಳಿ ಅವರ ಮನದಾಳದಲ್ಲಿದ್ದ ಸಂಘದ ಬಗೆಗಿನ ಸಂಶಯವನ್ನು ಬೇರು ಸಹಿತ ಕಿತ್ತೆಸೆಯುವುದರಲ್ಲಿ ಯಶಸ್ವಿಯಾಗಿದ್ದೆ. ಇದರಿಂದ ನಮ್ಮಿಬ್ಬರಿಗೂ ಸಮಾಧಾನವಾಗಿತ್ತು.

ಆತ್ಮವಿಶ್ವಾಸ ಹೊರ ಹೊಮ್ಮುತ್ತಿದ್ದ ಅವರು ಹುಬ್ಬಳ್ಳಿಯ ಹಾಗೂ ರಾಜ್ಯಸ್ತರದ ಪ್ರಭಾವೀ ಕಾಂಗ್ರೆಸ್ ಧುರೀಣರನ್ನು ಸಮಾನಸ್ತರದಲ್ಲಿ ನಿಂತು ಎದುರಿಸಿ ಜನಸಂಘದ ತತ್ತ್ವ ಸಿದ್ಧಾಂತಗಳಿಗೆ ಜನಬೆಂಬಲ ದೊರಕಿಸಲು ಸಮರ್ಥರಾಗಿದ್ದರು. ಈ ಹಿನ್ನೆಲೆಯಲ್ಲಿ ಅವರಲ್ಲಿ ರಾಜಕೀಯ ಮಹತ್ವಾಕಾಂಕ್ಷೆ ಸಹಜವಾಗಿಯೇ ಪ್ರಕಟವಾಗುತ್ತಿತ್ತು.

ಕರ್ನಾಟಕ ಜನಸಂಘದ ಶಿಲ್ಪಿ ದಿವಂಗತ ಭಾವೂರಾವ್ ದೇಶಪಾಂಡೆಯವರು ಒಮ್ಮೆ ನನ್ನೊಡನೆ ಈ ವಿಷಯದಲ್ಲಿ ಚರ್ಚಿಸುತ್ತ 'ಡಾಕ್ಟರರೇ ಮಹತ್ವಾಕಾಂಕ್ಷೆಯುಳ್ಳವರೇ ಜನನಾಯಕರಾಗಬಲ್ಲರು. ಮಹತ್ವಾಕಾಂಕ್ಷೆಯಿಲ್ಲದವರು ಎಷ್ಟೇ ಬುದ್ಧಿವಂತರಾಗಿರಲೀ, ಎಷ್ಟೇ ನಿಷ್ಠಾವಂತರಿರಲಿ, ಕೆಲಸಗಳನ್ನು ಎಷ್ಟೇ ಮಾಡುತ್ತಿರಲಿ ಅಂಥವರು ಕೊನೆಯವರೆಗೂ ಕಾರ್ಯಕರ್ತರಾಗಿಯೇ ಉಳಿಯುತ್ತಾರೆ' ಎಂದು ಶೆಟ್ಟರರ ಮಹತ್ವಾಕಾಂಕ್ಷೆಯನ್ನು ಮನದುಂಬಿ ಸ್ವಾಗತಿಸಿದ್ದರು.

ಶ್ರೀ ಸದಾಶಿವ ಶೆಟ್ಟರ ಮೇಲೆ ಕರ್ನಾಟಕದ ಜನಸಂಘದವರು ಬಹಳಷ್ಟು ಭರವಸೆಯಿಟ್ಟುಕೊಂಡಿದ್ದರು. ಅವರನ್ನು ರಾಜ್ಯದ ನಾಯಕರನ್ನಾಗಿ ರೂಪಿಸುವ ದೃಷ್ಟಿಯಿಂದ ಬಹಳಷ್ಟು ಕಾರ್ಯಕ್ರಮಗಳು ಯೋಜಿಸಲ್ಪಟ್ಟಿದ್ದುವು. ಶ್ರೀ ಭಾವೂರಾವ್ ದೇಶಪಾಂಡೆಯವರು ಅವರನ್ನು ಕರೆದುಕೊಂಡು ಬೆಳಗಾವಿ ಜಿಲ್ಲೆಯ ಎಲ್ಲ ತಾಲೂಕು, ನಗರಗಳಿಗೆ ಭೇಟಿ ನೀಡಿ ಆ ಸ್ಥಳಗಳಲ್ಲಿಯ ಪಕ್ಷದ ಕಾರ್ಯಕರ್ತರನ್ನು ಪರಿಚಯಿಸಿದ್ದರು. ಶೆಟ್ಟರ ವಕೀಲರ ಪ್ರಭಾವಿ ಭಾಷಣ ವಿಷಯ ಮಂಡನೆ ರೀತಿ, ಮೆಚ್ಚಿಕೊಂಡ ಕಾರ್ಯಕರ್ತರು ಶೆಟ್ಟರಲ್ಲಿ ತಮ್ಮ ನೆಚ್ಚಿನ ನೇತಾರನನ್ನು ಕಂಡುಕೊಂಡು ಅವರೊಂದಿಗೆ ಕೆಲಸ ಮಾಡುವ ಉತ್ಸಾಹ ತೋರುತ್ತಿದ್ದರು. ತಮ್ಮನ್ನು ಬೆಳಗಾವಿ ಜಿಲ್ಲೆಯ ಪ್ರವಾಸದಲ್ಲಿ ಶ್ರೀ ಭಾವೂರಾವ್ ದೇಶಪಾಂಡೆಯವರು ತಾಯಿ, ಮಗುವನ್ನು ಪ್ರೀತಿಸುವ ರೀತಿಯಲ್ಲಿ ನೋಡಿಕೊಂಡರೆಂದು ಶ್ರೀ ಶೆಟ್ಟರು ನಂತರ ನನ್ನೆದುರು ಅನುಭವ ಕಥನ ಮಾಡುವಾಗ ಅವರ ಕಂಠ ತುಂಬಿ ಬಂದುದನ್ನು ಕಂಗಳು ಹನಿಗೂಡಿದುದನ್ನು ನಾನೆಂದೂ ಮರೆಯಲಾರೆ.

ಶ್ರೀ ಶೆಟ್ಟರು 1968ರಲ್ಲಿ ಅಕಾಲ ಮೃತ್ಯುವಿಗೀಡಾಗಿ ಕರ್ನಾಟಕದ ಜನಸಂಘ ಅವರ ಬಗ್ಗೆ ಇರಿಸಿಕೊಂಡಿದ್ದ ಭರವಸೆ ಹುಸಿಯಾದಂತಾಗಿತ್ತು. ಭಾರತೀಯ ಜನಸಂಘ ತನ್ನ ಪ್ರಾರಂಭದ ದಿನಗಳಿಂದಲೂ ಆಘಾತಗಳನ್ನೇ ಎದುರಿಸುತ್ತ ಬಂದಿತ್ತು. ಕೇವಲ ಎರಡೇ ವರ್ಷಗಳ ಅವಧಿಯಲ್ಲಿ ಅದರ ಸಂಸ್ಥಾಪಕ ಅಧ್ಯಕ್ಷ ಶ್ರೀ ಶ್ಯಾಮಪ್ರಸಾದ ಮುಖರ್ಜಿ ತಮ್ಮ 50ನೇ ವರ್ಷ ವಯಸ್ಸಿನಲ್ಲೇ ಕಾಶ್ಮೀರದ ಜೈಲಿನಲ್ಲಿ ಅಕಾಲಿಕ ವೀರ ಮರಣ ಪಡೆದರು. 1965-66ರಲ್ಲಿ ವಿವಿಧ ಉಪ ಚುನಾವಣೆಗಳಲ್ಲಿ ಸ್ಪರ್ಧಿಸಿದ ವಿರುದ್ಧ ಪಕ್ಷಗಳ ಅಭ್ಯರ್ಥಿ ಜೆ.ಬಿ. ಕೃಪಲಾನಿ, ಶ್ರೀ ದೀನದಯಾಳ ಉಪಾಧ್ಯಾಯ, ಡಾ. ರಾಮ ಮನೋಹರ ಲೋಹಿಯಾ, ಶ್ರೀ ಮೀನು ಮಸಾನಿ ಇವರ ಪರವಾಗಿ ಚುನಾವಣೆ ಪ್ರಚಾರಕ್ಕೆ ಹೋದ ಜನಸಂಘದ ಅಧ್ಯಕ್ಷ ಶ್ರೀ ರಘುವೀರಜೀ ನಿಧನ ಹೊಂದಿದ ಬಳಿಕ ನಂತರ 1968 ಫೆಬ್ರುವರಿಯಲ್ಲಿ ಶ್ರೀ ದೀನದಯಾಳ ಉಪಾಧ್ಯಾಯರು ರೈಲು ಅಪಘಾತಕ್ಕೆ ಈಡಾಗಿದ್ದರು. ಶ್ರೀ ಶೆಟ್ಟರ ನಿಧನ ಜನಸಂಘಕ್ಕೆ ಇನ್ನೊಂದು ಪ್ರಹಾರವಾಗಿತ್ತು.

ಶ್ರೀ ಸದಾಶಿವ ಶೆಟ್ಟರು ತಮ್ಮ ತಂದೆ ಶ್ರೀ ಶಂಕರಪ್ಪ ಶೆಟ್ಟರರಷ್ಟೇ ವಯಸ್ಸಿಗೆ ಅವರಂತೆಯೇ ಹೃದಯಾಘಾತಕ್ಕೆ ಬಲಿಯಾದುದು ದುರದೃಷ್ಟಕರ ಯೋಗಾಯೋಗವೇ ಸರಿ. ಸದಾಶಿವ ಶೆಟ್ಟರು ಮೊದಲ ಸಲ ಹೃದಯಾಘಾತವಾದಾಗ ಅದನ್ನು ಎದುರಿಸಿ ಚೇತರಿಸಿಕೊಂಡು ಮತ್ತೆ ಪಕ್ಷದ ಹಾಗೂ ವಿಧಾನಸಭೆಯ ಚಟುವಟಿಕೆಗಳಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡಿದ್ದರು. ಮುಂದೆ ಕೆಲವೇ ತಿಂಗಳ ಅವಧಿಯಲ್ಲಿ ಎರಗಿದ ಎರಡನೇ ಆಘಾತ ಅವರನ್ನು ಬಲಿ ತಗೆದುಕೊಂಡಿತ್ತು. ಮೊದಲನೇ ಆಘಾತದ ಬಳಿಕ ಬೆಂಗಳೂರಿನ ತಜ್ಞ ಡಾಕ್ಟರರು, ಹಿತೈಷಿಗಳಾದ ನಾವೆಲ್ಲರೂ ಸೂಚಿಸಿದ ಮುಂಜಾಗ್ರತಾ ಕ್ರಮಗಳನ್ನು ಸದಾಶಿವ ಶೆಟ್ಟರು ಅನುಸರಿಸದೇ ಸಮಾಜ ಸೇವೆ ಹಾಗೂ ಪಕ್ಷದ ಚಟುವಟಿಕೆಗಳಲ್ಲಿ ಎಡೆಬಿಡದೇ ತೊಡಗಿ ಕೆಲಸ ಮಾಡ ಹತ್ತಿದರು. ಹೀಗಾಗಿ ಎರಡನೇ ಆಘಾತ ಕೂಡಲೇ ಸಂಭವಿಸಿ ಅವರನ್ನು ಬಲಿ ತೆಗೆದುಕೊಂಡಿತು. ಸದಾಶಿವ ಶೆಟ್ಟರರಿಗೆ ಆದ ಈ ಹೃದಯಾಘಾತವು ಕರ್ನಾಟಕದ ಜನಸಂಘಕ್ಕೆ ಸಹ ಹೃದಯಾಘಾತವೇ ಎನಿಸಿತೆಂಬುದು ಸಹ ವಾಸ್ತವವೇ ಸರಿ.

ಸದಾಶಿವ ಶೆಟ್ಟರು ರಾಜಕೀಯ ವಾತಾವರಣದ ತ ಕಲ್ಪನೆಯನ್ನು ಸರಿಯಾಗಿ ಮಾಡಿ ಮುಂದಿನ ಪರಿಣಾಮ ಫಲಿತಾಂಶವನ್ನು ಊಹಿಸಬಲ್ಲ ನಿಷ್ಣಾತ ರಾಜಕೀಯ, ಸಮೀಕ್ಷಕ, ರಾಜಕಾರಣ ಪಟು ಎನಿಸಿದ್ದರು. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮುಂದೆ ಬರಲಿರುವ ಚುನಾವಣೆಯಲ್ಲಿ ಭಾರತೀಯ ಜನಸಂಘ ಬಲಾಧಿಕ್ಯ ಪಡೆದು ಅಧಿಕಾರಕ್ಕೆ ಬರುವುದೆಂಬ ಅವರ ಭವಿಷ್ಯ ನಂತರ ನಿಜವೇ ಆಗಿ ಪರಿಣಮಿಸಿತ್ತು. ಶ್ರೀ ಶಿವಪ್ಪ ಶಿವಮೂರ್ತೆಪ್ಪ ಶೆಟ್ಟರ (ಈಗಿನ ಕಂದಾಯ ಮಂತ್ರಿ ಶ್ರೀ ಜಗದೀಶ ಶೆಟ್ಟರರ ತಂದೆ). ಹುಬ್ಬಳ್ಳಿ-ಧಾರವಾಡ ಮಹಾನಗರದ ಮಹಾಪೌರರೆಂದು ಆಯ್ಕೆಗೊಂಡು ದಕ್ಷಿಣ ಭಾರತದಲ್ಲಿಯ ಪ್ರಪ್ರಥಮ ಜನಸಂಘದ ಮಹಾಪೌರರೆಂಬ ಕೀರ್ತಿ ಪಡೆದರು. ಆದರೆ ಸದಾಶಿವ ಶೆಟ್ಟರು ತಾನು ನುಡಿದ ಭವಿಷ್ಯವನ್ನು ಪ್ರತ್ಯಕ್ಷ ಕಾಣಲಿರಲಿಲ್ಲ ವೆಂಬುದೇ ದುಃಖದ ಸಂಗತಿ.

ಭಾರತೀಯ ಜನತಾ ಪಕ್ಷ ಎಂದು ಹೊಸ ರೂಪು ಪಡೆದ ನಂತರ ಹಿಂದೂತ್ವದ ಸಾಂಸ್ಕೃತಿಕ ರಾಷ್ಟ್ರೀಯತೆ. ಸಿದ್ಧಾಂತ ಕರ್ನಾಟಕದಲ್ಲಿ ಈಗ ಅಧಿಕಾರ ಗಳಿಸಿರುವುದರ ಯಶಸ್ವಿನ ಬೀಜಾರೋಪಣ ಸದಾಶಿವ ಶೆಟ್ಟರ ಪ್ರಯತ್ನಗಳಲ್ಲಿಯೇ ಆಗಿತ್ತು ಎಂದರೆ ಅತಿಶಯೋಕ್ತಿ ಎನಿಸದು.

-ಡಾ. ರಾಮಚಂದ್ರ ಅನಂತರಾವ್ ಜಾಲಿಹಾಳ, ಗದಗ

ಮಾದರಿಯ ನಾಯಕ

ಭಾವೂರಾವ್ ದೇಶಪಾಂಡೆಯವರ ಶಿಷ್ಯರೇ ಆಗಿದ್ದ ಸದಾಶಿವ ಶೆಟ್ಟರು ಜನಸಂಘದ ನೀತಿ, ಕಾರ್ಯತಂತ್ರಗಳನ್ನು ಎಲ್ಲರ ಮನಸ್ಸಿಗೆ ಒಪ್ಪುವಂತೆ ತಿಳಿಸಿ ಹೇಳುವ ಪ್ರಭಾವೀ ವಕ್ತಾರರಾಗಿ ಕಾರ್ಯಕರ್ತರಲ್ಲಿ, ಯುವ ಜನಾಂಗದಲ್ಲಿ ಉತ್ಸಾಹ ತುಂಬುತ್ತಿದ್ದರು. ಕೂಡಲೇ ರಾಜ್ಯಮಟ್ಟದ ನಾಯಕತ್ವಕ್ಕೇರಿದ ಅವರ ಸಂಪರ್ಕವೂ ಉಡುಪಿ ಜಿಲ್ಲೆ ಜನಸಂಘ ಅಧ್ಯಕ್ಷನಾಗಿ ನಾನು ಕಾರ್ಯಕಾರಿ ಸಮಿತಿಯ ಸಭೆಗಳಲ್ಲಿ ಭಾಗವಹಿಸ ಹತ್ತಿದ್ದಾಗಿನಿಂದ ದೃಢವಾಗುತ್ತ ನಡೆಯಿತು.

ಅವರು ಹೋದೆಡೆಯಲ್ಲೆಲ್ಲವೂ ತಮ್ಮ ಭಾವನಾತ್ಮಕ ಭಾಷಣಗಳನ್ನು ಮಾಡಿ ಯುವ ಜನಾಂಗವನ್ನು ಜಾಗೃತಗೊಳಿಸುತ್ತಿದ್ದರು. ಅವರ ಪ್ರತಿಯೊಂದು ಭೇಟಿಯೂ ವಿದ್ಯಾರ್ಥಿ, ಯುವ ಜನರು, ಕಾರ್ಮಿಕರು, ರೈತರು ವರ್ತಕರು, ಉದ್ಯಮಿಗಳು ಹೀಗೆ ಎಲ್ಲ ಬಗೆಯ ಜನರ ಕಾರ್ಯ ಪಡೆ ತಯಾರಿಸುತ್ತಿತ್ತು. ನನಗೆ ಹಾಗೂ ನನ್ನಂಥವರಿಗೆ ಆಗ ಅವರ 'ರೋಲ್ ಮಾಡೆಲ್' ಮಾದರಿಯ ನಾಯಕರೆಂಬ ಅಭಿಮಾನ ಮೂಡುತ್ತಿತ್ತು.

ಭಿನ್ನ ರಾಜಕೀಯ ವಿಚಾರದವರನ್ನು ಅವರ ವಿಚಾರಗಳ ಪರಿಪೂರ್ಣ ಜ್ಞಾನ ಪಡೆದು ಅವರದೇ ಮಾತು, ಅವರದೇ ವೈಚಾರಿಕ ಪದ್ಧತಿಯಂತೆ ಸಾಗಿ ನಂತರ ತಮ್ಮ ಸಿದ್ಧಾಂತಗಳನ್ನು ಒಪ್ಪುವಂತೆ ಮಾಡುತ್ತಿದ್ದರು. ಅವರು ಅಕಾಲ ಮೃತ್ಯು ಸೆಳೆದೊಯ್ಯದಿದ್ದರೆ ರಾಷ್ಟ್ರೀಯ ರಂಗದಲ್ಲಿ ನಿಸ್ಸಂದೇಹವಾಗಿ ಉನ್ನತಕ್ಕೇರುವದು ಸಾಧ್ಯವಿತ್ತು.

ಕರ್ನಾಟಕದಲ್ಲಿ ಜನಸಂಘದ ನಂತರದಲ್ಲಿ ಭಾರತೀಯ ಜನತಾ ಪಕ್ಷದ ಉತ್ಕರ್ಷ ಹಾಗೂ ಈಗ ಅಧಿಕಾರಕ್ಕೆಬಂದುದನ್ನು ಕಾಣುತ್ತಿರುವಂತೆಯೇ ಅವರು 1967 -68ರಷ್ಟು ಹಿಂದೆಯೇ 'ನಮ್ಮ ಪಕ್ಷ ಅಧಿಕಾರಕ್ಕೆ ಬಂದೇ ತಿರುವದು' ಎಂದು ಆತ್ಮವಿಶ್ವಾಸಪೂರ್ವಕ ಹೇಳುತ್ತಿದ್ದುದು ನೆನಪಿಗೆ ಬರುತ್ತದೆ. ಇಂದಿನ ಸಾಧನೆಗಳ ಶ್ರೀಗಣೇಶ ಅವರಿಂದಲೇ ಆದುದು ಎಂದೆನ್ನಲು ಅಭಿಮಾನವೆನಿಸುತ್ತದೆ.

- ಡಾ. ವ್ಹಿ.ಎಸ್. ಆಚಾರ್ಯ

ವೈದ್ಯಕೀಯ, ಶಿಕ್ಷಣ ಸಚಿವರು

(ಕರ್ನಾಟಕ ಸರಕಾರ)

ಮನಃಪರಿವರ್ತಕ

ನಾನು ಹುಬ್ಬಳ್ಳಿಯಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಚಾರಕನಾಗಿದ್ದೆ. ದಸರಾ ಉತ್ಸವಕ್ಕೆ ಮುಖ್ಯ ಅತಿಥಿಗಳೆಂದು ಸದಾಶಿವ ಶೆಟ್ಟರನ್ನು ಆಮಂತ್ರಿಸಲು ನಂತರ ಅವರನ್ನು ಕರೆದೊಯ್ಯಲು ತೆರಳಿದಾಗ ಅವರೊಂದಿಗೆ ಕುದುರಿದ ಸ್ನೇಹ ದಿನದಿನಕ್ಕೆ ಗಟ್ಟಿಯಾಗುತ್ತಲೇ ನಡೆಯಿತು. ಸಂಘದ ಕಾರ್ಯ ಜನಸಂಘದ ತತ್ತ್ವ ಸಿದ್ಧಾಂತಗಳನ್ನು ಬಿಚ್ಚು ಮನಸ್ಸಿನಿಂದ ನನ್ನೊಡನೆ ಚರ್ಚಿಸುತ್ತಿದ್ದ ಅವರು ಜನಸಂಘದಲ್ಲಿ ಸೇರಿದ ಬಳಿಕ ಇನ್ನೂ ನಿಕಟವಾದರು.

ಯಾವುದನ್ನೂ ಹೇಳಿದ ತಕ್ಷಣ ಒಪ್ಪಿಕೊಳ್ಳದೇ ಕುತೂಹಲದಿಂದ ಹಲವಾರು ಸಂದೇಹಗಳನ್ನೆತ್ತಿ ಪ್ರಶ್ನೆ ಹಾಕಿ ಉತ್ತರ ಪಡೆದುಕೊಳ್ಳುವವರಾಗಿದ್ದ ಅವರು ಸಂಘದ ಹಾಗೂ ಜನಸಂಘದ ಬಗ್ಗೆ ಪೂರ್ಣ ತಿಳಿದುಕೊಂಡ ಬಳಿಕ ಪಕ್ಷಕ್ಕೆ ತಮ್ಮ ಸರ್ವ ಸಮರ್ಪಣ ಮಾಡಿ ಸೇವೆಗೈ ತೊಡಗಿದರು. ಬೇರೆಯವರದೇ ತತ್ತ್ವ, ವಿಚಾರಗಳವರೊಂದಿಗೆ ಸ್ನೇಹದಿಂದ ಬೆರೆತರೂ ತಮ್ಮ ಶ್ರದ್ಧೆ ಹಾಗೂ ಕಾರ್ಯತಂತ್ರವನ್ನು ಎಂದೂ ಬದಲಿಸಿಕೊಳ್ಳದ ಜನಸಂಘದವರೆನಿಸಿದರು. ಬೇರೆಯವರನ್ನು ತಾಳ್ಮೆಯಿಂದ ಕೇಳಿಕೊಳ್ಳುವ ನಂತರ ತಮ್ಮ ವಿಚಾರಗಳನ್ನು ತರ್ಕ ಶುದ್ಧವಾಗಿ ಮನಂಬುಗುವಂತೆ ಬಿಂಬಿಸುವ ಸಾಮರ್ಥ್ಯ ಅವರಿಗಿತ್ತು. ಅನೇಕರು ಅವರ ಈ ಮಾತಿನ ಮೋಡಿಗೆ ವಶರಾಗಿ ಜನಸಂಘ ಸೇರಿ ಬಲ ಹೆಚ್ಚಿಸಿದರೆ ಅವರ ಕೆಲ ವಿರೋಧಿಗಳು ಸಹ ಮಾನಸಿಕವಾಗಿ ಜನಸಂಘಿಯೆನ್ನುವಂತೆ ಪರಿವರ್ತಿತರಾಗುತ್ತಿದ್ದರು.

-ಡಾ. ಸೂರ್ಯನಾಥ ಕಾಮತ್

ಇತಿಹಾಸಕಾರರು

MEMBER
MYSORE LEGISLATIVE ASSEMBLY

ಸದಾಶಿವ ಶೆಟ್ಟರ್
[illegible]
[illegible] 1967

[illegible]

[illegible]

ನನ್ನ ಸಾಧನೆಯ ಹಿಂದಿನ ಶಕ್ತಿ

ದಿವಂಗತ ಸದಾಶಿವ ಶೆಟ್ಟರು ನನ್ನ ಚಿಕ್ಕಪ್ಪನವರು. ಅವರ ಹಿರಿಯ ಮಗ ಶಂಕರಪ್ಪ ಹಾಗೂ ನಾನು ಒಂದೇ ವಯಸ್ಸಿನವರು ಓರಿಗೆಯವರು. ನಮ್ಮಿಬ್ಬರನ್ನೂ ಅಕ್ಕರೆಯಿಂದ ಎತ್ತಿ ಮುದ್ದಾಡಿ, ಕೈ ಹಿಡಿದು ನಡೆಸುತ್ತ ತಿರುಗಾಡಿದುದು ನನಗೆ ನೆನಪಿದೆ. ಹೀಗೆ ತಿರುಗಾಡುವಾಗ ಅವರು ನಮಗೆ ಪ್ರಚಲಿತ ಸಮಸ್ಯೆ ಸಾಮಾಜಿಕ ಹಾಗೂ ರಾಜಕೀಯದ ತಿಳುವಳಿಕೆ ನೀಡುತ್ತ ಹೊಸ ಹೊಸ ವಿಚಾರ ಹಾಗೂ ದೃಷ್ಟಿಕೋನಗಳ ಪರಿಚಯ ಮಾಡಿಕೊಡುತ್ತಿದ್ದರು. ನನಗೆ ನಮ್ಮ ತಂದೆಯವರಿಗಿಂತ ಅವರಲ್ಲೇ ಹೆಚ್ಚು ಸಲಿಗೆ, ಸಖ್ಯವಿರುತ್ತಿತ್ತು. ನಾನು ಅವರಂತೆಯೇ ವಿಚಾರ ಮಾಡುತ್ತ ಜಿಜ್ಞಾಸೆಯಿಂದ ಪ್ರಶ್ನೆ ಹಾಕುತ್ತಿದ್ದರಿಂದ ನನಗೆ ವಿವರಣೆ ನೀಡುವಾಗ ಅವರ ಉತ್ಸಾಹ ಹೆಚ್ಚುತ್ತಿತ್ತು.

ಅವರು ವಿಧಾನಸಭೆ ಸದಸ್ಯರಾದ ಬಳಿಕ ವಿಧಾನ ಸಭೆಯಲ್ಲಿಯ ಕಲಾಪಗಳಲ್ಲಿ ತಾವು ಮಾತಾಡಿದುದನ್ನು ಹಾಗೂ ತಮ್ಮ ಇತರ ಸಾರ್ವಜನಿಕ ಚಟುವಟಿಕೆಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಿ ಇಡಲು ನನಗೆ ತಿಳಿಸಿದ್ದರು. ನಾನು ಈ ಕೆಲಸ ಮಾಡಿ ತೋರಿಸುತ್ತಿದ್ದಂತೆಯೇ ಅವರು ತುಂಬಾ ಹರ್ಷ ವ್ಯಕ್ತಪಡಿಸಿ ಹೊಸ ಪುಸ್ತಕಗಳನ್ನು ಮೆಚ್ಚುಗೆ ರೂಪದಲ್ಲಿ ನೀಡಿ ಆಶೀರ್ವದಿಸುತ್ತಿದ್ದರು.

ನನಗೆ ಮುಂದೆ ಭಾರತೀಯ ಜನತಾ ಪಕ್ಷದ ಕಾರ್ಯಕರ್ತನಾಗಿ, ಯುವ ಮೋರ್ಚಾ ವಿದ್ಯಾರ್ಥಿ ಪರಿಷತ್ ನೇತಾರನಾಗಿ ನಂತರ ವಿರೋಧ ಪಕ್ಷದ ಧುರೀಣ ಈಗ ಮಂತ್ರಿಯಾಗಿ ಸೇವೆ ಸಲ್ಲಿಸುವುದಕ್ಕೆ ಅವರೇ ನನಗೆ ಆವಾಗಲೇ ತರಬೇತಿ ನೀಡಲಾರಂಭಿಸಿದರೇನೋ ಎಂದು ಹಿಂದಿನ ದಿನಗಳನ್ನು ನೆನೆದಾಗ ಅನಿಸುತ್ತಿದೆ. ನನ್ನ ಈಗಿನ ಹಾಗೂ ಮುಂದಿನ ಎಲ್ಲ ಉತ್ಕರ್ಷದ ಹಿಂದೆ ಅವರ ಸ್ಮರಣೆಯ ಬಲ, ಬೆಂಬಲವಿದ್ದೇ ಇದೆ.

- ಶ್ರೀ ಜಗದೀಶ ಶೆಟ್ಟರ
ವಿಧಾನ ಸಭಾಧ್ಯಕ್ಷರು
(ಕರ್ನಾಟಕ ಸರಕಾರ)

ದಕ್ಷಿಣ ಭಾರತದ ನೇತಾರರಲ್ಲಿ ಅಗ್ರಗಣ್ಯರು

ನಾನು ವಿಧಾನಪರಿಷತ್‌ನಲ್ಲಿ ಜನಸಂಘದ ಮೊದಲ ಸದಸ್ಯನಾಗಿ ಪ್ರವೇಶಿಸಿದಂತೆಯೇ ಸ್ವಲ್ಪ ಅವಧಿಯ ನಂತರ ಸದಾಶಿವ ಶೆಟ್ಟರು ಇತರ ಮೂವರೊಂದಿಗೆ ವಿಧಾನಸಭೆಯಲ್ಲಿ ಜನಸಂಘಕ್ಕೆ ಪ್ರವೇಶ ದೊರಕಿಸಿಕೊಟ್ಟಿದ್ದರು. ಪ್ರಾರಂಭದಿಂದಲೂ ಆರ್‌ಎಸ್‌ಎಸ್‌ನ ಸಂಪರ್ಕದೊಂದಿಗೆ ಬೆಳೆದು ಬಂದ ನಾನು ರಾಜ್ಯಾಧ್ಯಕ್ಷನಾಗಿ ಅವರನ್ನು ಜನಸಂಘದಲ್ಲಿ ಬರಮಾಡಿಕೊಂಡು ಅವರು ಸ್ಪರ್ಧಿಸಿದ ಮೂರೂ ಚುನಾವಣೆಗಳಲ್ಲಿ ಅವರಿಗಾಗಿ ಕೆಲಸ ಮಾಡಿದ್ದೆ.

ಶೆಟ್ಟರ ಸರ್ವಜನಾಕರ್ಷಕ ವ್ಯಕ್ತಿತ್ವ, ಮಾತುಗಾರಿಕೆ ಅವರನ್ನು ಕೂಡಲೇ ಓರ್ವ ಪ್ರಭಾವಿ ಜನಸಂಘಿಯಾಗಿಸಿದ್ದವು. ಬೇರೆ ಪಕ್ಷಗಳವರೊಡನೆ, ಕಾಂಗ್ರೆಸ್‌ನೊಡನೆ ನಿಕಟ ಸ್ನೇಹ ಹೊಂದಿದವರಾಗಿದ್ದರೂ ಆರ್‌ಎಸ್‌ಎಸ್,ಜನಸಂಘಗಳ ತತ್ತ್ವಗಳಲ್ಲಿಯ ಅವರ ಶ್ರದ್ಧೆ ಅಚಲವಾಗಿತ್ತು. ಹೀಗಾಗಿ ಬಹಳಷ್ಟು ಮಂದಿಯನ್ನು, ನೇತಾರರನ್ನು ತಮ್ಮತ್ತ ವಾಲುವಂತೆ ಮಾಡಿ ಜನಸಂಘ ಬೆಳೆಯುವುದಕ್ಕೆ ಕಾರಣರಾಗಿದ್ದರು. ಜನಸಂಘದ ಹೆಸರಿನಲ್ಲಿ ನೆಲೆಗೊಂಡಿದ್ದ ಭಾರತೀಯ ಸಂಸ್ಕೃತಿ, ಪರಂಪರೆ ಆಧಾರಿತ ಉಜ್ವಲ ರಾಷ್ಟ್ರಾಭಿಮಾನ ಕೇಂದ್ರಿತ ರಾಜಕೀಯ ಸಿದ್ಧಾಂತದ ಶೀಘ್ರ ಪ್ರವರ್ಧಮಾನಕ್ಕೆ ಕಾರಣರಾದ ದಕ್ಷಿಣ ಭಾರತೀಯ ನೇತಾರರಲ್ಲಿ ಸದಾಶಿವ ಶೆಟ್ಟರು ಅಗ್ರಗಣ್ಯರು.

-ವಾಯ್.ಎಸ್.ಪಾಟೀಲ
ಮಾಜಿ ವಿಧಾನ ಪರಿಷತ್ ಸದಸ್ಯರು

ಜ್ಯೋತಿಯಂತೆ ಬೆಳಗಿದ ಜೀವನ

ತರುಣರೂ ಉತ್ಸಾಹಿ ಕಾರ್ಯಕರ್ತರೂ ವಿಧಾನಸಭೆಯ ದಕ್ಷ ಪ್ರತಿನಿಧಿಗಳೂ ಜನಸಂಘದ ಮುಂದಾಳುಗಳೂ ಆಗಿದ್ದ ಶ್ರೀ ಸದಾಶಿವ ಶೆಟ್ಟರ ಇವರ ಆಕಸ್ಮಿಕ ನಿಧನ ಹುಬ್ಬಳ್ಳಿ ನಗರದ ಮೇಲೆ ವಜ್ರಾಘಾತ ಸಿಡಿಲಿನಂತೆರಗಿರುತ್ತದೆ. ಮೊಳಕೆ ಇನ್ನೂ ಚಿಗುರಿನಲ್ಲಿರುವಾಗ ಕಡಿದು ಬೀಳುವದೆಂಥು ನಂಬುವದಾದರೂ ಹೇಗೆ? ಕೇವಲ ಮೂವತ್ತಾರು ವಯಸ್ಸಿನ ಶ್ರೀ ಶೆಟ್ಟರ ವಕೀಲರು ನಮ್ಮನ್ನಗಲಿ ದೂರ ನಿರ್ಗಮಿಸಿರುವರೆಂದು ನಂಬುವುದೂ ಕಠಿಣವಾಗಿದೆ. ಅವರ ಸರಳ ವ್ಯಕ್ತಿತ್ವ, ನಿರಾಡಂಬರ ಜೀವನ, ಬಡವರೊಡನೆ ಸಮರಸವಾಗಿ ನಡೆದುಕೊಳ್ಳುವ ಅವರ ರೀತಿ-ನೀತಿ, ರಾಜಕೀಯ, ಭಿನ್ನಾಭಿಪ್ರಾಯವಿದ್ದರೂ ಸ್ನೇಹಕ್ಕೆ ಆತಂಕವಾಗದಂತೆ ನಾಗರಿಕರಲ್ಲಿ ಬೆರೆದುಕೊಳ್ಳುವ ಅವರ ಪ್ರಕೃತಿ ಕಣ್ಮುಂದೆ ಕಟ್ಟಿದಂತಿದೆ. ಅವರ ಮಾತು ಕಡಿಮೆ. ಹಾಗೂ ಅಷ್ಟೇ ಮೃದು. ಆದರೆ ಅನ್ಯಾಯ ಎದುರಿಸುವಾಗ ಅವರ ಮೃದುತ್ವ ವಜ್ರಕಠಿಣವಾಗಿ ಪರಿಣಮಿಸುತ್ತಿತ್ತು. ನುರಿತ ವಕೀಲರಾದ ಅವರ ನರ-ನಾಡಿಗಳಲ್ಲಿ ವೃತ್ತಿ ಪ್ರೌಢಿಮೆಯ ಜೊತೆಗೆ ರಾಜಕೀಯದ ಉತ್ಸುಕತೆ ಕೂಡ ಹರಿಯುತ್ತಿತ್ತು. ರಾಜಕೀಯಕ್ಕೆ ಬೇಕಾಗುವ ಜಿಗುಟುತನವೂ ಅವರಲ್ಲಿದ್ದಿತು. ಎರಡು ಸಲ ವಿಧಾನಸಭೆಯ ಚುನಾವಣೆಯಲ್ಲಿ ಪರಾಭವ ಹೊಂದಿದರೂ ಧೃತಿಗೆಡಲಿಲ್ಲ ಮೂರನೆಯ ಸಲ ಜಯ ಸಂಪಾದಿಸಿ, ತಾವು ಪ್ರತಿನಿಧಿಯಾಗಿರುವ ಜನಸಂಘಕ್ಕೆ ಕೀರ್ತಿ ತಂದಿದ್ದರು. ಸುದೀರ್ಘ ಹಾಗೂ ಫಲಪ್ರದ ರಾಜಕೀಯ ಜೀವನ ಅವರಿಗಾಗಿ ಕಾದಿದ್ದಿತು. ಎರಡೇ ವರುಷಗಳಲ್ಲಿ ಅವರು ಲೋಕಪ್ರಿಯರಾಗಿದ್ದರು. ಬಡ ನಾಗರಿಕರ ಹಾಗೂ ಕಾರ್ಮಿಕರ ಕೈವಾರಿಗಳಾಗಿದ್ದರು. ಭವ್ಯ ಭವಿಷ್ಯ ಅವರ ಎದುರಿನಲ್ಲಿಯೇ ಇದ್ದಿತು. ಆದರೆ ವಿಧಿ ಲಿಖಿತ ಅದನ್ನೆಲ್ಲ ಅಳಿಸಿ ಹಾಕಿರುತ್ತದೆ. ಉದಯೋನ್ಮುಖ ಈ ಯುವಕ ರಾಜಕಾರಣಿಯನ್ನು ನಮ್ಮ ಮಧ್ಯದಿಂದ ಕಟ್ಟಿಕೊಂಡು ಹೋಗಿ ನಾಗರಿಕರನ್ನು ದುಃಖಸಾಗರದಲ್ಲಿ ಮುಳುಗಿಸಿರುತ್ತದೆ. ಅವರ ನಿಧನ ನಿಮಿತ್ತ ಹುಬ್ಬಳ್ಳಿ ನಗರದಲ್ಲಿ ನಿನ್ನೆ ಜರುಗಿದ ಅಪೂರ್ವ ಹರತಾಳ ಹಾಗೂ ಅಂತ್ಯಯಾತ್ರೆಯ ಅದ್ಭುತ ಮೆರವಣಿಗೆ, ಅವರ ಲೋಕಪ್ರಿಯತೆಯ ದ್ಯೋತಕಗಳಾಗಿವೆ. ಅವರಿಗಾಗಿ ಕಂಬನಿ ಸುರಿಸದಿರುವ ನಾಗರಿಕರಿಲ್ಲ. ಅವರ ಜೀವನ ಜ್ಯೋತಿಯಂತೆ ಬೆಳಗಿ ದಿಗಂತದಲ್ಲಿ ಲೀನವಾಗಿರುತ್ತದೆ. ಅವರ ನಿಧನದಿಂದ ರಾಜ್ಯದ ಜನಸಂಘ ಮತ್ತು ರಾಜಕೀಯ ಜೀವನ ಬಡವಾಗಿರುತ್ತದೆ. ಆ ಕೊರತೆ ತುಂಬಿಕೊಳ್ಳುವುದು ಕಠಿಣ. ದಿವಂಗತರ ಆತ್ಮ ಚಿರಶಾಂತಿ ಹೊಂದಲಿ, ಆತ್ಮಜ್ಯೋತಿ ಸದಾ ಬೆಳಗಲಿ.

-ಸಂಯುಕ್ತ ಕರ್ನಾಟಕ

11-12-1968 ಸಂಪಾದಕೀಯ ಲೇಖನ

ಸೌರಭ ಬೀರುವ ಮೊದಲೇ ಬಾಡಿದ ಹೂವು

ಸ್ವಪ್ನ, ಸುಷುಪ್ತ, ಜಾಗೃತಾವಸ್ಥೆಗಳೆಲ್ಲವುಗಳಲ್ಲೂ ಸದಾ ಸೇವೆ ಎನ್ನುತ್ತಿದ್ದ ಶ್ರೀ ಸದಾಶಿವ ಶೆಟ್ಟರರನ್ನು ಕಳೆದುಕೊಂಡು ಹುಬ್ಬಳ್ಳಿಯು ಅವರ ಆ ಉತ್ಸಾಹದ ಉಪಕಾರಿ ಸೇವೆಗೆ ಎರವಾಗಿದೆ. ತನ್ನ ಸೇವಾ ಸ್ಫೂರ್ತಿಯಿಂದ ಎಲ್ಲರಿಗೂ ಬೆಲ್ಲವಾಗಿದ್ದ, ಇದೀಗ ಮೂವತ್ತಾರರಲ್ಲಿದ್ದ ಈ ತರುಣನನ್ನು ಪರಮಾತ್ಮನು ತನ್ನ ಸೇವೆಗೆ ಎತ್ತಿಕೊಂಡೊಯ್ದಂತೆ ಶ್ರೀ ಶೆಟ್ಟರರು. ಅಕಲ್ಪಿತವಾಗಿ ಕೈಲಾಸವಾಸಿಗಳಾದರು. ಅವರ ನಿಧನದಲ್ಲಿ ಒಬ್ಬ ಪ್ರಾಮಾಣಿಕ, ನಿಷ್ಠಾವಂತ ಹಾಗೂ ಜನಸೇವೆಯಲ್ಲಿ ದಣಿವನ್ನೇ ಅರಿಯದ ಕಾರ್ಯಕರ್ತನನ್ನು ಕನ್ನಡ ಕುಲಕೋಟಿಯು ಕಳೆದುಕೊಂಡಿತು. ಈ ನಾಡಿನ ರಾಜಕೀಯ ರಂಗದಲ್ಲಿ ಇದೀಗ ಶುಕ್ರದೆಸೆ ಕಂಡಿದ್ದ ಶ್ರೀ ಶೆಟ್ಟರರ ಸ್ನೇಹಶೀಲ ನಡುವಳಿಕೆಯಿಂದ ಈ ಭಾಗದ ಜನರಿಗೆ ಶ್ರೀ ಶೆಟ್ಟರರ ಪಕ್ಷವಾದ ಭಾರತೀಯ ಜನ ಸಂಘದ ಬಗೆಗೂ ಆದರ ಹೆಚ್ಚತೊಡಗಿತ್ತು. ಇದೇ ಸಲ ವಿಧಾನಸಭೆಗೆ ಆಯ್ಕೆಯಾಗಿದ್ದ ಅವರು ಅಲ್ಪಾವಧಿಯಲ್ಲೇ ಪ್ರಜಾಪ್ರಭುತ್ವದ ಧ್ವಜವನ್ನು ಎತ್ತಿ ಹಿಡಿದ ಮುಂಚೂಣಿಯವರ ಸಾಲಿನಲ್ಲಿಗಣಿಸಲ್ಪಟ್ಟಿದ್ದಾರೆ. ದೀನ ದಲಿತರನ್ನೂ, ಬಡಬಗ್ಗರನ್ನೂ ಆತ್ಮೀಯರನ್ನಾಗಿ ಕಂಡು ಅವರ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುವುದರಲ್ಲಿ ಆನಂದಪಡುತ್ತಿದ್ದ ಶ್ರೀ ಶೆಟ್ಟರರು ಬಡವರ ಬಂಧುವೆನಿಸಿದ್ದರು. ಕರ್ನಾಟಕದಲ್ಲಿ ವಿರೋಧಿ ಪಕ್ಷಗಳ ಅಗತ್ಯವನ್ನು ಎತ್ತಿತೋರಿಸುವಲ್ಲಿ ಶ್ರೀ ಶೆಟ್ಟರರು ಆಡಿದ ಪಾತ್ರವು ಸಣ್ಣದಲ್ಲ. ಅವರಿಂದ ಈ ನಾಡಿಗೆ ಬಹಳಷ್ಟು ಕಾರ್ಯವಾಗಬೇಕೆಂದು ಜನರು ಆಶಿಸುತ್ತಿದ್ದಾಗ, ರಾಜಕೀಯ ರಂಗದ ಈ ನವಸುಮವನ್ನು ಜನರಿಗೆ ಸೌರಭವು ಸಿಗುವ ಮೊದಲೇ ವಿಧಾತನು ಕಿತ್ತುಕೊಂಡುದು ಘೋರ ಆಘಾತವೇ ಸರಿ. ಈ ನಾಡಿನಲ್ಲಿ ಪ್ರಜಾಪ್ರಭುತ್ವ ಪ್ರತಿಷ್ಠಾಪನೆಯ ಕಾರ್ಯಕ್ಕಂತೂ ಇದು ದೊಡ್ಡ ಪೆಟ್ಟಾಗಿದ್ದು, ದೇವರು ಈ ಹಿಂದೆ ಶಾಸಕ ಶ್ರೀ ಬಿ.ಆರ್. ಪಾಟೀಲರನ್ನೂ ಶ್ರೀ ಶೆಟ್ಟರರನ್ನೂ ಅವರ ಎಳೆ ವಯಸ್ಸಿನಲ್ಲೇ ಕರೆದು ಕೊಂಡು ಕನ್ನಡಿಗರ ಪರೀಕ್ಷೆ ನಡೆಸಿದಂತೆ ಕಾಣುತ್ತಿದೆ. ಈ ಪರೀಕ್ಷೆಯಲ್ಲಿ ಯಶಸ್ವಿಯಾಗಿ ಪಾರಾಗುವುದಕ್ಕೆ ಶ್ರೀ ಶೆಟ್ಟರರ ಆದರ್ಶಗಳನ್ನು ಆಧರಿಸುವುದೊಂದೇ ಮಾರ್ಗವಾಗಿದ್ದು, ಅಧಿಕಾರ ದಾಹಿಗಳನ್ನೂ ಭ್ರಷ್ಟಾಚಾರನಿರತರನ್ನೂ ಮನೆ ಹಿಡಿಸುವ ಮೂಲಕವೇ ಶ್ರೀ ಶೆಟ್ಟರರಿಗೆ ಶ್ರದ್ಧಾಂಜಲಿ ಅರ್ಪಿಸಬೇಕಾಗಿದೆ. ಶ್ರೀ ಶೆಟ್ಟರರ ಆತ್ಮಕ್ಕೆ ಚಿರಶಾಂತಿ ಸಿಗಲಿ.

-ವಿಶಾಲ ಕರ್ನಾಟಕ


11-12-1968 ಸಂಪಾದಕೀಯ ಲೇಖನ

ಭಾಗ-೪

ಸದಾಶಿವ .ಎಸ್. ಶೆಟ್ಟರ್‌ರವರ
ಜೀವನ ಚಿತ್ರಮಾಲೆ

ನಮ್ಮ ಬಾಳ್ವೆಗು ಘನತೆ ಬರಲಪ್ಪುದೆಂದು
ಘನವಂತರಾ ಬಾಳ್ವೆ ನೆನಪು ಕೊಡುತಿಹುದು.
ಬೀಳ್ಕೊಂಡ ಅವರು ಬಿಟ್ಟಿಹರು ಹಿಂದೆ ಇಲ್ಲ.
ಹೆಜ್ಜೆ ಗುರುತುಗಳ ಕಾಲವೆಂಬಾ ಮಳಲಿನಲ್ಲಿ

– ಎಚ್.ಡಬ್ಲ್ಯೂ. ಲಾಂಗ್‌ಫೆಲೊ



ಹೊಸ ಹುಬ್ಬಳ್ಳಿ ಸಂಸ್ಥಾಪಕಲಿಂಗೈಕ್ಯ ಬಸಪ್ಪ ಶೆಟ್ಟರ್‌ರ ಹಾಗೂ ಅವರ ಅಣ್ಣ ಲಿಂಗೈಕ್ಯ ಮುದಿಯಪ್ಪ ಶೆಟ್ಟರ್ ಅವರ ಗದ್ದುಗೆಗಳು. ಹುಬ್ಬಳ್ಳಿ ಅಕ್ಕಿಹೊಂಡದ ಹೊಸಮಠ ಅಥವಾ ಶೆಟ್ಟರ್ ಮಠದಲ್ಲಿ ಈ ಗದ್ದುಗೆಗಳಿದ್ದು ಬಹಸಪ್ಪಶೆಟ್ಟರ ಗದ್ದುಗೆ ಮೇಲೆ ಕುಮಾರ ಸಮಯ ಸ್ಥಾಪನಿಕೃತ ಎಂಬ ಉಲ್ಲೇಖವಿದೆ. ಆಧಾರ:ಲಿಂಗೈಕ್ಯ ಬಸಪ್ಪಶೆಟ್ಟರ ಚರಿತ್ರೆ ಲೇಖಕರು : ಪ್ರೊ.ಕೆ.ಎಸ್. ರೂಢಗಿ



ಸದಾಶಿವಶೆಟ್ಟರ ತಂದೆಯವರಾದ
ಶಂಕ್ರಪ್ಪ ಶಿವಪ್ಪಶೆಟ್ಟರ ವಕೀಲರು



ಹೊಸ ಹುಬ್ಬಳ್ಳಿ ಹಿರೇಪೇಟ ಚೌಕಕ್ಕೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಬಸಪ್ಪಶೆಟ್ಟರ ಚೌಕ ಎಂದು ನಾಮಕರಣ ಮಾಡಿದೆ.



ದಿ. ಸದಾಶಿವ ಶೆಟ್ಟರು

ಧರ್ಮಪತ್ನಿ ಶ್ರೀಮತಿ ಪುರದವ್ವ (ಗಂಗಮ್ಮ) ಸದಾಶಿವಶೆಟ್ಟರ



ಬೆಲೆ ಏರಿಕೆ ವಿರುದ್ಧ ಹಾಗೂ ಪಡಿತರ ವಿತರಣೆ ತಾರತಮ್ಯ ಅನ್ಯಾಯ ವಿರುದ್ಧ ಸದಾಶಿವಶೆಟ್ಟರು ಮತಪ್ರದರ್ಶನ ಸಂಘಟಿಸಿದ ಚಿತ್ರ. ಅವರ ಮುಂದೆ ಕುಳಿತಿರುವವರು ಅವರ ದ್ವಿತೀಯ ಸುಪುತ್ರ ಗಂಗಾಧರಶೆಟ್ಟರು. ಈಗವರು ಸುಪ್ರಸಿದ್ಧ ಇಂಜಿನಿಯರ್



ಗೋಹತ್ಯೆ ಪ್ರತಿಬಂಧಕ್ಕೆ ಒತ್ತಾಯಿಸಲು ಶೆಟ್ಟರು ಹಾಗೂ ಜನಸಂಘದಲ್ಲಿ ಸೇರಿದ
ಮುಸ್ಲೀಂ ಧುರೀಣ ಡಾ. ಅಬ್ದುಲ್ ಕರೀಂ ಬಾಷಿ ಅವರನ್ನು ಅಭಿನಂದಿಸಿ
ಪ್ರೋತ್ಸಾಹಿಸಿದ ಶ್ರೀ ಜಗನ್ನಾಥರಾವ್ ಜೋಶಿ.



1964–ಶಿವಮೊಗ್ಗೆಯಲ್ಲಿ ಜನಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ
ರಾಮಜೋಯಿಸ್. ಎ.ಕೆ. ಸುಬ್ಬಯ್ಯ, ಬಾಬುರಾವ್ ದೇಶಪಾಂಡೆ, ಜಗನ್ನಾಥ್ ಜೋಶಿ,
ವೈ.ಎಸ್. ಪಾಟೀಲ್ ಹಾಗೂ ಇತರ ಧುರೀಣರೊಂದಿಗೆ ಶ್ರೀ ಸದಾಶಿವ ಶೆಟ್ಟರು.



ಸದಾಶಿವ ಶೆಟ್ಟರ ವಿಜಯೋತ್ಸವದ ಮೆರವಣಿಗೆಯ ದೃಶ್ಯ.



ಹುಬ್ಬಳ್ಳಿ ನಗರ ಮತಕ್ಷೇತ್ರದಿಂದ ದಿವಂಗತ ಸದಾಶಿವ ಶೆಟ್ಟರು ವಿಧಾನಸಭೆಗೆ
ಆಯ್ಕೆಯಾದಾಗ ಅಭಿಮಾನಿಗಳಿಂದ ಅಭಿನಂದನೆ ಸ್ವೀಕರಿಸಿದಾಗಿನ ಚಿತ್ರ.



ಸದಾಶಿವ ಶೆಟ್ಟರನ್ನು ಅಭಿನಂದಿಸಲು ಸೇರಿದ್ದ ಜನಜಂಗುಳಿ.



ಸದಾಶಿವ ಶೆಟ್ಟರು ಕರ್ತೃ ಜಗದ್ಗುರು ಶ್ರೀ ಗುರುಸಿದ್ಧೇಶ್ವರರ ಸಮಾಧಿಗೆ ಕರ್ಪೂರದ ಆರತಿ ಬೆಳಗುವಾಗಿನ ಚಿತ್ರ.



ಸದಾಶಿವ ಶೆಟ್ಟರು ಶ್ರೀ ಮೂರುಸಾವಿರಮಠದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳಿಗೆ ನಮಸ್ಕರಿಸಿ ಆಶೀರ್ವಾದ ಸ್ವೀಕರಿಸಿದ ಚಿತ್ರ.



ಸದಾಶಿವ ಶೆಟ್ಟರು ವಿಜಯಿಯಾದ ಸಂದರ್ಭದಲ್ಲಿ ಸನ್ಮಾನಿತರಾದ ಒಂದು ಪ್ರಸಂಗ. ಅವರ ಬಳಿಯಲ್ಲಿ ಶ್ರೀ ಜಗನ್ನಾಥರಾವ್ ಜೋಶಿಯವರನ್ನೂ ಕಾಣಬಹುದು.



ವಿಧಾನಸಭೆಯಲ್ಲಿ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಲು ತೆರಳುತ್ತಿದ್ದ ಸದಾಶಿವಶೆಟ್ಟರನ್ನು ಹುಬ್ಬಳ್ಳಿಯ ರೈಲು ನಿಲ್ದಾಣದಲ್ಲಿ ಸತ್ಕರಿಸಿ ಕಳುಹಿಸಿ ಕೊಟ್ಟ ಅಭಿಮಾನಿಗಳು. ವಿಧಾನಸಭೆಯ ಸಭಾಧ್ಯಕ್ಷರಾದ ಶ್ರೀ ಜಗದೀಶ ಶೆಟ್ಟರ್ ಅವರನ್ನು ಚಿತ್ರದಲ್ಲಿ ಕಾಣಬಹುದು.



ಸದಾಶಿವ ಶೆಟ್ಟರು ಹುಬ್ಬಳ್ಳಿಯ ಶ್ರೀ ಮೂರುಸಾವಿರಮಠದ ಕರ್ತೃ ಜಗದ್ಗುರು ಗುರುಸಿದ್ಧೇಶ್ವರರ ಸಮಾಧಿಗೆ ವಂದನೆ ಸಲ್ಲಿಸುತ್ತಿರುವದು.



ಮೂರುಸಾವಿರಮಠದ ಜಗದ್ಗುರುಗಳೊಂದಿಗೆ ಸದಾಶಿವ ಶೆಟ್ಟರು
ಸಮಾಲೋಚಿಸುತ್ತಿರುವಾಗಿನ ಚಿತ್ರ.



ಸಾರ್ವಜನಿಕ ಸಭೆಯೊಂದರಲ್ಲಿ ಸದಾಶಿವ ಶೆಟ್ಟರನ್ನು ಅಭಿನಂದಿಸಿ
ಶ್ರೀ ಜಗನ್ನಾಥರಾವ್ ಜೋಶಿಯವರು ಮಾತನಾಡುತ್ತಿರುವದು. ಶೆಟ್ಟರಿಗೆ ರಾಜಕೀಯ
ಗುರುವಾಗಿದ್ದರು. ಭಾವುರಾವ್ ದೇಶಪಾಂಡೆ ಅವರನ್ನು ಚಿತ್ರದಲ್ಲಿ ಕಾಣಬಹುದು.



ಶ್ರೀ ಜಗದ್ಗುರುಗಳಿಗೆ ಸದಾಶಿವ ಶೆಟ್ಟರು ಭಕ್ತಿಯಿಂದ ಪ್ರಣಾಮ ಸಲ್ಲಿಸುವ ಚಿತ್ರ



ಚುನಾವಣೆಯಲ್ಲಿ ಗೆದ್ದ ನಂತರ ಶ್ರೀ ಶೆಟ್ಟರು ಅಭಿಮಾನಿಗಳತ್ತ ಕೈ ಬೀಸಿ ಸಂತಸ ಹಂಚಿಕೊಳ್ಳುತ್ತಿರುವುದು. ವಾಯ್.ಎಸ್. ಪಾಟೀಲ ಚಿತ್ರದಲ್ಲಿ ಕಾಣಬಹುದು.

[illegible] ಚಿತ್ರ.

ಶ್ರೀ ಸದಾಶಿವ ಶೆಟ್ಟರ ಸ್ಮರಣೆಯಲ್ಲಿ ಅಭಿಮಾನಿಗಳು ಹಳೇಹುಬ್ಬಳ್ಳಿಯ ಸದಾಶಿವನಗರವನ್ನು ನಿರ್ಮಿಸಿ ಉದ್ಘಾಟಿಸಿದಾಗ ತೆಗೆದ ಚಿತ್ರ. ಉದ್ಘಾಟಕ ಶ್ರೀ ಎಸ್.ಆರ್. ಬೊಮ್ಮಾಯಿ ಅಧ್ಯಕ್ಷತೆ ವಹಿಸದಿದ ಶ್ರೀ ರಾಮಣ್ಣ ಕಾಪಸೆ, ಶ್ರೀ ಈರಣ್ಣವಾಣಿ ಇವರನ್ನು ಕಾಣಬಹುದು.



ದಿ. ಸದಾಶಿವ ಶೆಟ್ಟರ 25ನೇ ಪುಣ್ಯತಿಥಿಯ ಉತ್ಸವವನ್ನು ಶ್ರೀ ಜಗದೀಶ ಶೆಟ್ಟರು ಉದ್ಘಾಟಿಸಿದ ಚಿತ್ರ.



ಸಾರ್ವಜನಿಕ ಸಭೆಯೊಂದಕ್ಕೆ ಜಗನ್ನಾಥ್ ಜೋಶಿ, ಗೋವಿಂದ್‌ಸಾ ಮಿಸ್ಕಿನ್ ಕೆಂಪಣ್ಣ ಎಸ್.ಆರ್. ಬಾಬುರಾವ್ ದೇಶಪಾಡೆ ಜನನಾಯಕ ಶ್ರೀ ಸದಾಶಿವ .ಎಸ್.ಶೆಟ್ಟರ್ ಅವರ ನೇತೃತ್ವದಲ್ಲಿ ಸಾಗುತ್ತಿರುವುದು.



ಹುಬ್ಬಳ್ಳಿಯ ನ್ಯಾಯಾಲಯದ ಮುಂದಿನ ಚೌಕದಲ್ಲಿ ದಿ. ಸದಾಶಿವ ಶೆಟ್ಟರ ಮುತ್ಥಳಿ ಉದ್ಘಾಟನೆ ಕಾಲಕ್ಕೆ ತೆಗೆದ ಚಿತ್ರ. ಚಿತ್ರದಲ್ಲಿ ಶ್ರೀ ವೆಂಕಯ್ಯ ನಾಯ್ಡು, ಅನಂತಕುಮಾರ, ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ, ಎ.ಎಂ.ಹಿಡಸಗೇರಿ, ಬಸವರಾಜ ಹೊರಟ್ಟಿ ಮೊದಲಾದವರನ್ನು ಕಾಣಬಹುದು.

ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

ಪ್ರಕಟಗೊಂಡ ಪುಸ್ತಕಗಳು

ಕ್ರ.ಸಂ.	ಪುಸ್ತಕದ ಹೆಸರು	ಲೇಖಕರ ಹೆಸರು	ದರ
1.	ಕೆ. ಹನುಮಂತಯ್ಯ	ಪ್ರೊ॥ ಎನ್.ಬಿ. ಪಂಗಣ್ಣಾಯ್ಯ ಹಾಗೂ ಇತರರು	20–00
2.	ಎಸ್. ನಿಜಲಿಂಗಪ್ಪ	ಡಾ॥ ಸಂದೀಪ್ ಶಾಸ್ತ್ರಿ	15–00
3.	ಶಾಂತವೇರಿ ಗೋಪಾಲಗೌಡ	ಪ್ರೊ॥ ಎನ್.ಬಿ. ಪಂಗಣ್ಣಾಯ್ಯ	15–00
4.	ವೈಕುಂಠ ಬಾಳಿಗಾ	ಡಾ॥ ಪಿ. ಜೀವನ್ ಕುಮಾರ್	20–00
5.	ವೀರೇಂದ್ರ ಪಾಟೀಲ್	ಡಾ॥ ಎಸ್.ಹೆಚ್. ಕವಂಟೆ ಹಾಗೂ ಇತರರು	20–00
6.	ಕಡಿದಾಳ್ ಮಂಜಪ್ಪ	ಡಾ॥ ಎಸ್.ಹೆಚ್. ಕವಂಟೆ ಹಾಗೂ ಇತರರು	15–00
7.	ಜಿ.ವಿ. ಹಳ್ಳಿಕೇರಿ	ಡಾ. ಆರ್.ಎಂ.ಎಲ್. ಪಾಟೀಲ್	15–00
8.	ಕೆ.ಎಸ್. ನಾಗರತ್ನಮ್ಮ	ಪ್ರೊ॥ ಎಸ್.ಬಿ. ಪಂಗಣ್ಣಾಯ್ಯ ಹಾಗೂ ಇತರರು	15–00
9.	ಡಿ. ದೇವರಾಜ ಅರಸು	ಜೆ.ಎಸ್. ಸದಾನಂದ	15–00
10.	ಕೆ.ಟಿ. ಭಾಷ್ಯಂ	ಡಾ. ವಿಘ್ನೇಶ್ ಎನ್. ಭಟ್	15–00
11.	ಕೆ. ಪುಟ್ಟಸ್ವಾಮಿ	ಜಿ. ದಕ್ಷಿಣಾ ಮೂರ್ತಿ	15–00
12.	ಟಿ. ಸಿದ್ದಲಿಂಗಯ್ಯ	ಜಿ. ದಕ್ಷಿಣಾ ಮೂರ್ತಿ	20–00
13.	ಜಗಳೂರು ಇಮಾಂ	ಜೆ.ಎಸ್. ಸದಾನಂದ	15–00

1744-13

14.	ಕೆ.ಸಿ. ರೆಡ್ಡಿ	ಡಾ. ಸಂಧ್ಯಾರೆಡ್ಡಿ	20–00
15.	ಬಿ.ವಿ. ಕಕ್ಕಿಲ್ಲಾಯ	ಎಂ.ಕೆ. ಭಂಡಿ	20–00
16.	ಹೆಚ್.ಎಂ. ಚೆನ್ನಬಸಪ್ಪ	ಪ್ರೊ॥ ಬಿ.ಎನ್. ಚಂದ್ರಯ್ಯ	20–00
17.	ಬಿ. ರಾಚಯ್ಯ	ನಂಜಯ್ಯ ಹೊಂಗನೂರ್	20–00
18.	ಎಂ. ನಾಗಪ್ಪ	ಡಾ. ಎಂ.ಎಸ್. ಪಾಟೀಲ್	15–00
19.	ಜೆ.ಬಿ. ಮಲ್ಲಾರಾಧ್ಯ	ಡಾ. ಹೆಚ್.ಎಂ.ಪಂಚಾಕ್ಷರಯ್ಯ	15–00
20.	ಗಂಗಾಧರ್ ನಮೋಶಿ	ಡಾ. ಕವಂಟೆ ಹಾಗೂ ಇತರರು	15–00
21.	ಬಿ.ಡಿ. ಜತ್ತಿ	ಕೃಷ್ಣ ಕೊಲ್ಹಾರ ಕುಲಕರ್ಣಿ	15–00
22.	ಆರ್. ಗುಂಡೂರಾವ್	ಈಶ್ವರ ದೈತೋಟ	20–00
23.	ಕೆ.ಎಚ್. ಪಾಟೀಲ್	ಎಂ.ಕೆ. ಭಂಡಿ	15–00
24.	ಅಜೀಜ್ ಸೇಠ್	ಹೆಚ್.ಕೆ. ಬಾಲಸೂರಿ	15–00
25.	ಸಿ.ಎಂ. ಆರ್ಮುಗಂ	ಹೆಚ್.ಕೆ. ಬಾಲಸೂರಿ	15–00
26.	ಜೆ.ಹೆಚ್. ಪಟೇಲ್	ಶೇಷಚಂದ್ರಿಕ	30–00
27.	ಜಿ.ಎಲ್. ಸುಬ್ಬಮ್ಮ	ಡಾ. ಡಿ.ಎಸ್. ಜಯಪ್ಪಗೌಡ	15–00
28.	ಟಿ.ಆರ್. ಶಾಮಣ್ಣ	ಎಲ್.ಎನ್. ಮುಕುಂದರಾಜ್	20–00
29.	ಎಸ್.ಡಿ. ಗಾಂವಕರ್	ಮೋಹನ್ ವೆರ್ಣೇಕರ್	20–00
30.	ಎಂ.ಪಿ.ಎಲ್. ಶಾಸ್ತ್ರಿ	ಹಾರೋಗದ್ದೆ ಉಷಾ ರಮೇಶ್ ನಾಯಕ್	20–00
31.	ಎಸ್. ಶಿವಪ್ಪ	ಕೂಡ್ಲಿಗೆರೆ ಮಲ್ಲಿಕಾರ್ಜುನ	30–00
32.	ಕಾಗೋಡು ಚಳವಳಿ	ಕೂಡ್ಲಿಗೆರೆ ಮಲ್ಲಿಕಾರ್ಜುನ	15–00
33.	ಕೆ.ವಿ. ಶಂಕರಗೌಡ	ಜಗದೀಶ ಕೊಪ್ಪ	20–00
34.	ಟಿ.ಎನ್. ನರಸಿಂಹಮೂರ್ತಿ	ಕೆ.ಜೆ. ಸುರೇಶ್	25–00
35.	ಎಸ್.ಆರ್. ಕಂಠಿ	ಮನು ಬಳಿಗಾರ್	30–00

36.	ಎಸ್.ಸಿ. ಮಲ್ಲಯ್ಯ	ಡಾ. ಟಿ.ಸಿ. ಪೂರ್ಣಿಮ	20–00
37.	ಅಬ್ದುಲ್ ನಜೀರ್‌ಸಾಬ್	ಮನು ಬಳಿಗಾರ್	30–00
38.	ಪಿ.ಎಂ. ನಾಡಗೌಡ	ಗಂಗಾಧರಯ್ಯ ಹಿರೇಮಠ	30–00
39.	ಕೆ. ಪಟ್ಟಾಭಿರಾಮನ್	ಸಂಜಯ್ ದೊರೆ	20–00
40.	ಎಂ.ಎಸ್.ಕೃಷ್ಣನ್	ಹೆಚ್.ಕೆ. ಬಾಲಸೂರಿ	20–00
41.	ಎಂ.ವಿ. ಕೃಷ್ಣಪ್ಪ	ಜೆ.ಜಿ. ನಾಗರಾಜ್	15–00
42.	ಕೆ.ಎಚ್. ರಂಗನಾಥ್	ಎಲ್.ಎನ್. ಮುಕುಂದರಾಜ್	20–00
43.	ರಾಮಕೃಷ್ಣ ಹೆಗಡೆ	ಶೂದ್ರ ಶ್ರೀನಿವಾಸ್	20–00
44.	ಸಿ. ಬೈರೇಗೌಡ	ಪ್ರಹ್ಲಾದರಾವ್	20–00
45.	ಎಸ್.ಎಂ. ಯಾಹ್ಯಾ	ಬಿ.ಎಂ. ಹನೀಫ್	20–00
46.	ಬಾಪುಗೌಡ ದರ್ಶನಾಪುರ	ಗಂಗಾಧರಯ್ಯ ಹಿರೇಮಠ	20–00
47.	ಡಾ॥ ಎಚ್. ನರಸಿಂಹಯ್ಯ	ಪ್ರೊ॥ ಗಂಗಾಧರ ಮೂರ್ತಿ	20–00
48.	ಕರ್ನಾಟಕ ಏಕೀಕರಣ ಮತ್ತು ನಾಮಕರಣ	ಡಾ. ಸಿ.ಆರ್. ಗೋವಿಂದರಾಜ್	15–00
49.	ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು ಸಂಪುಟ–1	ಡಾ. ಎಂ.ಜಿ. ನಾಗರಾಜ್	15–00
50.	ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು ಸಂಪುಟ–2	ಡಾ. ಎಂ.ಜಿ. ನಾಗರಾಜ್	25–00
51.	ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು ಸಂಪುಟ–3	ಡಾ. ಎಂ.ಜಿ. ನಾಗರಾಜ್	25–00
52.	ಬಿ.ಎಂ. ಹೊರಕೇರಿ	ಡಾ. ಎಂ.ಎಸ್. ಪಾಟೀಲ	20–00
53.	ಕೆ. ಕೆಂಚಪ್ಪ	ಚಂದ್ರಶೇಖರ ತಾಳ್ಯ	20–00

54.	ಕೇಶವರಾವ ನಿಟ್ಟೂರಕರ್	ಡಾ. ಜಿ.ಬಿ. ವಿಸಾಜಿ	20–00
55.	ಸರದಾರ ಶರಣಗೌಡ ಇನಾಂದಾರ	ಡಾ. ಬಿ.ವ್ಹಿ. ಮಲ್ಲಾಪುರ	20–00
56.	ಬಸವರಾಜೇಶ್ವರಿ	ಪ್ರಹ್ಲಾದ ಬೆಟಗೇರಿ	20–00
57.	ಕೊಲೂರು ಮಲ್ಲಪ್ಪ	ಗಂಗಾಧರಯ್ಯ ಹಿರೇಮಠ, ಡಾ. ದೇ.ಮಾ. ಪಾಟೀಲ	20–00
58.	ದೇವೇಂದ್ರಪ್ಪ ಘಾಳಪ್ಪ ಜಮಾದಾರ	ಡಾ. ನಾಗಬಾಯಿ ಬಿ.ಬುಳ್ಳಾ	20–00
59.	ಮೊಹಮ್ಮದ್ ಅಲಿ	ಪ್ರೊ॥ ಶಿವರಾಜ ಪಾಟೀಲ	20–00
60.	ಬಿ. ಶ್ಯಾಮಸುಂದರ್	ಗಂಧರ್ವ ಸೇನಾ	20–00
61.	ಶಂಕರಶೆಟ್ಟಿ ಪಾಟೀಲ	ಡಾ. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ	20–00

ಭಾಷಾಂತರ ಪುಸ್ತಕಗಳು

ಕ್ರಸಂ.	ಪುಸ್ತಕದ ಹೆಸರು	ಲೇಖಕರ ಹೆಸರು	ದರ
1.	ಡಾ॥ ಬಿ.ಆರ್. ಅಂಬೇಡ್ಕರ್	ಭಾಷಾಂತರ ನಿರ್ದೇಶನಾಲಯ	20-00
2.	ಡಾ॥ ರಾಂ ಮನೋಹರ ಲೋಹಿಯಾ	ಭಾಷಾಂತರ ನಿರ್ದೇಶನಾಲಯ	15-00
3.	ವಿ.ಕೆ. ಕೃಷ್ಣಮೆನನ್	ರಾಜ್ಯ ಭಾಷಾ ಆಯೋಗದ ಅಧ್ಯಕ್ಷರು	20-00
4.	ಡಾ॥ ಶ್ಯಾಂಪ್ರಸಾದ್ ಮುಖರ್ಜಿ	ಭಾಷಾಂತರ ನಿರ್ದೇಶನಾಲಯ	20-00
5.	ಶೇಕ್ ಮಹಮದ್ ಅಬ್ದುಲ್ಲಾ	ಭಾಷಾಂತರ ನಿರ್ದೇಶನಾಲಯ	15-00
6.	ಡಾ॥ ರಾಜೇಂದ್ರ ಪ್ರಸಾದ್	ಆರ್.ಕೆ. ಹುಡುಗಿ	20-00
7.	ಭೂಪೇಶ್ ಗುಪ್ತ	ಆರ್.ಕೆ. ಹುಡುಗಿ	20-00
8.	ಅನಂತಶಯನಂ ಅಯ್ಯಂಗಾರ್	ಭಾಷಾಂತರ ನಿರ್ದೇಶನಾಲಯ	15-00
9.	ರಾಜಕುಮಾರಿ ಅಮೃತ್‌ಕೌರ್	ಕೆ.ಹೆಚ್. ಸಾವಿತ್ರಿ	20-00
10.	ಡಾ॥ ಚಿಂತಾಮನ್ ಡಿ. ದೇಶಮುಖ್	ಬೇಲೂರು ಸುದರ್ಶನ್	20-00
11.	ಪನಂಪಿಲ್ಲಿ ಗೋವಿಂದ ಮೆನನ್	ಭಾಷಾಂತರ ನಿರ್ದೇಶನಾಲಯ	15-00
12.	ಜೈ ಸುಖಲಾಲ್ ಹಾಥಿ	ಎಸ್. ಸುಮಿತ್ರ	15-00
13.	ಎಸ್.ಎಂ. ಜೋಷಿ	ಕೆ.ಹೆಚ್. ಸಾವಿತ್ರಿ	15-00
14.	ಡಾ॥ ಲಂಕಾ ಸುಂದರಂ	ಜವರಯ್ಯ	15-00

ಸರ್ಕಾರಿ ಮುದ್ರಣಾಲಯ, ಕೆಂಗೇರಿ, ಬೆಂಗಳೂರು-59.